
ಕರ್ನಾಟಕ

ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಸಂಪುಟ : ೩೨, ಸಂಚಿಕೆ : ೦೧

ಜನವರಿ-ಜೂನ್ ೨೦೧೮



ಬಿ.ಎಂ.ಶ್ರೀ ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ ಕಲಾಭವನ (ರಿ.)
೩ನೇ ಮುಖ್ಯ ರಸ್ತೆ, ನರಸಿಂಹರಾಜ ಕಾಲೋನಿ
ಬೆಂಗಳೂರು ೫೬೦೦೧೯

ಕರ್ನಾಟಕ

ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಬಿ.ಎಂ.ಶ್ರೀ. ಪ್ರತಿಷ್ಠಾನದ ಪದಾಧಿಕಾರಿಗಳು

ಕರ್ನಾಟಕ

ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಸಂಪುಟ : ೩೨, ಸಂಚಿಕೆ : ೦೧
ಜನವರಿ–ಜೂನ್ ೨೦೧೮

ಸಂಪಾದಕ
ಡಾ. ಎಚ್.ಎನ್. ಮುರಳೀಧರ

ಬಿ.ಎಂ.ಶ್ರೀ. ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ. ಕಲಾಭವನ (ರಿ)
೩ನೆಯ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ
ಬೆಂಗಳೂರು–೫೬೦೦೧೯.
ದೂರವಾಣಿ : ೨೬೬೧೫೮೭೭, ೨೬೬೭೬೭೭೩
ವಿ–ಅಂಚೆ : bmsritrust@gmail.com bmsrilochana@gmail.com

KARNATAKA LOCHANA
Half yearly Research Journal
Edited by Dr. H.N. Muralidhara and
Published by B.M.Sri. Prathistana
M.V.Si. P.G Research Centre
B.M.Sri. Kalabhavana(R)
3rd Main Road
Narasimharaja Colony, Bangalore 560 019.
Ph.No. 080-26615877, 26676773
e-mail
bmsritrust@gmail.com
bmsrilochana@gmail.com

Jan-June 2018 (Vol. 32, No. 1)

Pages: viii + 136

Subscription Details :

Annual : Rs. 100/-

Life : Rs. 1500/-

ಚಂದಾ ವಿವರ:
ವಾರ್ಷಿಕ : ರೂ. ೧೦೦/-
ಆಜೀವ : ರೂ. ೧೫೦೦/-

Published with Financial Assistance from the Central Institute of Indian Languages (Department of Higher Education, Ministry of Human Resource Development, Government of India)- Manasagangotri, Mysuru-570006 sanctioned vide letter No. 53-4(1)2014-15/KAN/LM/GRNT dated 5th December 2016 under the Little Magazine scheme of Grant-in-Aid.

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ISO 9001-2000
ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೨೬೬೧ ೩೧೨೩, ೨೬೬೧ ೮೬೫೨

ಸಂಪಾದಕರ ನುಡಿ...

'ಕರ್ನಾಟಕ ಲೋಚನ'ದ ಮತ್ತೊಂದು ಸಂಚಿಕೆಯನ್ನು ತಮ್ಮ ಮುಂದಿಡುತ್ತಿದ್ದೇವೆ.

ಸಾಹಿತ್ಯದೊಂದಿಗಿನ ಅನುಸಂಧಾನವೆನ್ನುವಂಥದು ಸ್ಥಾವರವಾದುದಲ್ಲ. ಮತ್ತೆ ಮತ್ತೆ ಜಂಗಮಶೀಲವಾಗುತ್ತಲೇ ಅದು ತನ್ನನ್ನು ತಾನು ಜೀವಂತಗೊಳಿಸಿಕೊಳ್ಳಬೇಕಾಗುತ್ತದೆ. ಹಾಗೆ ನೋಡಿದರೆ ಸಾಹಿತ್ಯವೂ ಸ್ಥಾವರವಾದುದಲ್ಲ. ಹಲವು ಸಾಂದರ್ಭಿಕತೆಗಳಲ್ಲಿ ಹಲವು ಬಗೆಯ ಪರಿಶೀಲನೆಗಳಿಗೆ, ಸ್ಫೂರ್ತಿಗೆ ಅದು ತನ್ನನ್ನು ತಾನು ತೆರೆದುಕೊಳ್ಳುತ್ತದೆ. ಹೀಗೆ ತೆರೆದುಕೊಳ್ಳುವ ಸಾಧ್ಯತೆಯೇ ಅದನ್ನು ಸಾಹಿತ್ಯವಾಗಿಸಿರುವುದು. ಸಾಹಿತ್ಯಕ್ಕೆ ಬಹಿರಂಗದ ರೂಪವೊಂದಿದೆ. ಅದು ಭಾಷಾರೂಪವಾಗಿರಬಹುದು, ಛಂದೋರೂಪವಾಗಿರಬಹುದು, ಇನ್ನೇನೂ ಆಗಿರಬಹುದು. ಈ ದೃಷ್ಟಿಯಿಂದ ಅದನ್ನು ಕಾಲಕ್ಕೋ ಪ್ರಕಾರಕ್ಕೋ ಹೊಂದಿಸಿ ವಿವೇಚಿಸುವುದುಂಟು. ಆದರೆ ಸಾಹಿತ್ಯದ ಅಂತರಂಗದ ಮೂಲಧಾತು ಅದರ ಬಹಿರಂಗದ ಚಹರೆಗಳನ್ನು ದಾಟುವ ತುಡಿತಗಳನ್ನು ಸದಾ ಪ್ರಕಟಿಸುತ್ತಿರುತ್ತದೆ. ಹೀಗಾಗಿಯೇ ಅದನ್ನು ಯಾವ ಚೌಕಟ್ಟಿನೊಳಕ್ಕೆ ಹಾಕಿಟ್ಟರೂ, ಯಾವ ವಾದದೊಳಗೆ ಹುಗಿಸಿಟ್ಟರೂ ಅದನ್ನು ಮೀರಿ ಬೆಳೆಯುವ ಜೈವಿಕತೆಯ ಗುಣವೊಂದನ್ನು ಅದು ಸದಾ ಪ್ರದರ್ಶಿಸುತ್ತಿರುತ್ತದೆ.

ಈ ದೃಷ್ಟಿಯಿಂದ ನೋಡಿದಾಗ ಸಾಹಿತ್ಯದ ಅನುಸಂಧಾನವೆನ್ನುವುದು ಒಂದು ಕಡೆಯಿಂದ ಶಿಸ್ತು, ವೈಧಾನಿಕತೆಗಳಾದರೆ ಇನ್ನೊಂದು ಕಡೆಯಿಂದ ಸೃಷ್ಟಿಕಾರ್ಯವೂ ಆಗಿದೆ. ಸಂಪಾದನೆ, ದಾಖಲೀಕರಣಗಳು ಅದರ ಒಂದು ಮಗ್ಗುಲಾದರೆ ಸಮಕಾಲೀನವಾದ ಓದಿಗೆ ಅಗತ್ಯವಾದ ಪರಿಕರಗಳನ್ನು ರೂಪಿಸಿಕೊಳ್ಳುವುದು ಅದರ ಇನ್ನೊಂದು ಮುಖ್ಯವಾದ ಮಗ್ಗುಲಾಗಿದೆ.

ಪ್ರಸ್ತುತ ಸಂಚಿಕೆಯಲ್ಲಿರುವ ಬರಹಗಳು ಹಲವು ನೆಲೆಗಳಲ್ಲಿ ಈ ಬಗೆಯ ನಿಯೋಗವನ್ನು ನಿರ್ವಹಿಸುತ್ತಿವೆಯೆಂದು ಭಾವಿಸಲಾಗಿದೆ. ಲೇಖನಗಳನ್ನು ನೀಡಿದವರಿಗೂ, ಸಂಚಿಕೆಯ ಪ್ರಕಟಣೆಯಲ್ಲಿ ಸಹಕರಿಸಿದ ಬಿ.ಎಂ.ಶ್ರೀ ಪ್ರತಿಷ್ಠಾನದ ಪದಾಧಿಕಾರಿಗಳು ಹಾಗೂ ಸಿಬ್ಬಂದಿಗೂ, ಶ್ರಮವಹಿಸಿ ಸಂಚಿಕೆಯನ್ನು ರೂಪಿಸಿದ ಲಕ್ಷ್ಮೀ ಮುದ್ರಣಾಲಯದವರಿಗೂ ಧನ್ಯವಾದಗಳು.

–ಎಚ್.ಎನ್. ಮುರಳೀಧರ

ಲೇಖಕರಿಗೆ ಸೂಚನೆಗಳು...

೧. ಸಾಹಿತ್ಯ-ಸಂಸ್ಕೃತಿಗಳಿಗೆ ಸಂಬಂಧಿಸಿದ ಸಂಶೋಧನೆ ವಿಮರ್ಶೆಗಳ ಅಪ್ರಕಟಿತ ಬರಹಗಳನ್ನು 'ಕರ್ನಾಟಕ ಲೋಚನ' ಪತ್ರಿಕೆಯಲ್ಲಿ ಪ್ರಕಟಣೆಗಾಗಿ ಸ್ವೀಕರಿಸಲಾಗುವುದು.

೨. ಲೇಖನಗಳು ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಬೆರಳಚ್ಚು ಮಾಡಿದವಾಗಿರಬೇಕು ಅಥವಾ ಸ್ಫುಟವಾದ ಕೈಬರಹದಲ್ಲಿರಬೇಕು. ಜೆರಾಕ್ಸ್ ಪ್ರತಿಗಳನ್ನು ಸ್ವೀಕರಿಸಲಾಗುವುದಿಲ್ಲ.

೩. ಲೇಖನಗಳು ಒಪ್ಪಿತವಾದ ಮಾದರಿಯಲ್ಲಿ ಸೂಕ್ತ ಉಲ್ಲೇಖಗಳು ಮತ್ತು ಟಿಪ್ಪಣಿಗಳಿಂದ ಕೂಡಿರಬೇಕು.

೪. ಚಿತ್ರಗಳು, ನಕ್ಷೆಗಳು ಮೊದಲಾದುವನ್ನು ಸ್ಕ್ಯಾನ್ ಮಾಡಿದ ತಂತ್ರಾಂಶದಲ್ಲಿ ನೀಡಬೇಕು.

೫. ಲೇಖಕರು ತಮ್ಮ ವಿಳಾಸ, ದೂರವಾಣಿ ಸಂಖ್ಯೆ ಮತ್ತು ವಿ-ಅಂಚೆಗಳನ್ನು ತಪ್ಪದೆ ನೀಡಬೇಕು.

೬ ಅಸ್ವೀಕೃತ ಬರಹಗಳನ್ನು ಹಿಂದಿರುಗಿಸಲಾಗುವುದಿಲ್ಲ ಮತ್ತು ಈ ಬಗೆಗೆ ಪತ್ರವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

೭ ಲೇಖನಗಳನ್ನು ಪ್ರತಿಷ್ಠಾನದ ಅಂಚೆವಿಳಾಸಕ್ಕೆ ಅಥವಾ bmsrilochana@gmail.com ಈ ವಿ-ಅಂಚೆಗೆ ಕಳುಹಿಸಬಹುದು.

೮. ಪ್ರಕಟವಾದ ಬರಹಗಳಿಗೆ ಪ್ರತಿಷ್ಠಾನವು ಸಾಂಕೇತಿಕ ಗೌರವ ಸಂಭಾವನೆಯನ್ನು ನೀಡುತ್ತದೆ.

೯. ಲೇಖನದಲ್ಲಿನ ಅಭಿಪ್ರಾಯಗಳು ಲೇಖಕರದೇ ಆಗಿದ್ದು ಪ್ರತಿಷ್ಠಾನದ ನಿಲುವುಗಳನ್ನು ಪ್ರತಿನಿಧಿಸುವುದಿಲ್ಲ.

ಈ ಸಂಚಿಕೆಯಲ್ಲಿ...

೧. ಕನ್ನಡ ಸಂಶೋಧನೆ : ಕೆಲವು ಅನಿಸಿಕೆಗಳು ೧
–ಡಾ. ಸಿ. ನಾಗಭೂಷಣ

೨. ಪ್ರಾಚೀನ ಗದ್ಯಕೃತಿಗಳು–ವಡ್ಡಾರಾಧನೆ ಮತ್ತು ಚಾವುಂಡರಾಯ ಪುರಾಣ ೧೩
–ಡಾ. ಎಸ್.ಹೆಚ್. ಭುವನೇಶ್ವರ

೩. ನಾಗವರ್ಮನ ಕರ್ಣಾಟಕ ಕಾದಂಬರಿಯ ಒಂದು ಅನುಸಂಧಾನ ೧೯
–ಡಾ. ಎನ್.ಆರ್. ಲಲಿತಾಂಬ

೪. ಹರಿಹರನ ರಗಳೆಗಳ ಗದ್ಯ ೩೨
–ಡಾ. ಆರ್. ಲಕ್ಷ್ಮೀನಾರಾಯಣ

೫. ಕನ್ನಡ ಗ್ರಂಥಸಂಪಾದನಾ ಶಾಸ್ತ್ರಕ್ಕೆ ಡಿ.ಎಲ್.ಎನ್. ಅವರ ಕೊಡುಗೆ ೪೪
–ಎಸ್. ಬಿಳಿಗಿರಿವಾಸನ್

೬. ವಚನ ಸಂಪಾದನೆ : ಪ್ರಮುಖ ಹೆಜ್ಜೆಗಳು ೫೭
–ಡಾ. ಪಿ.ವಿ. ನಾರಾಯಣ

೭. ಜ್ಞಾನನಿಧಿ ಪ್ರಾಚೀನ ಹಸ್ತಪ್ರತಿಗಳು ಹಾಗೂ ದುರವಸ್ಥೆ ೬೫
–ಡಾ. ಕೆಳದಿ ಗುಂಡಾ ಜೋಯಿಸ್

೮. ರಂಗಪ್ರಯೋಗದ ದೃಷ್ಟಿಯಿಂದ ಪು.ತಿ.ನ. ಅವರ ಗೀತನಾಟಕಗಳು ೭೫
–ಕ.ವೆಂ. ರಾಜಗೋಪಾಲ್

೯. 'ಗಡಿಯಾರದಂಗಡಿಯ ಮುಂದೆ'–ಒಂದು ಹೊಸ ಓದು ೯೬
–ಡಾ. ಟಿ. ಯಲ್ಲಪ್ಪ

೧೦. ತಾಯ್ಮಾತಿನಲ್ಲಿ ಶಿಕ್ಷಣ ೧೦೫
–ಬಸವರಾಜ ಕೋಡಗಂಟಿ

೧೧. ಧಾರವಾಡ ತಾಲ್ಲೂಕಿನ ಶಾಸನೋಕ್ತ ಶೈವ ಮುನಿಗಳು ೧೧೪
–ಮಂಗಲಾ ಎಂ. ಗೌಡ

೧೨. ಕನ್ನಡ ಕಡತಗಳಲ್ಲಿ ಜಾತಿ ವಿಚಾರ – ಒಂದು ಅವಲೋಕನ ೧೨೩
–ಮೋಹನಕುಮಾರ್.ಕೆ.

೧೩. 'ರಕ್ತವದನಂ' ವಿಮರ್ಶೆ – ಪುನರಾವಲೋಕನ ೧೨೯
–ಸೀತಾರಾಮ ಜಾಗೀರ್‌ದಾರ್

೧೪. ವಿಜಯನಗರ ಕಾಲದ ಹರ್ತಿಕೋಟೆಯ
ವೆಂಕಟರಮಣ ದೇವಾಲಯ ೧೩೩
–ಜಗದೀಶ.ಡಿ.

ಈ ಸಂಚಿಕೆಯ ಲೇಖಕರು ೧೩೬

ಕನ್ನಡ ಸಂಶೋಧನೆ : ಕೆಲವು ಅನಿಸಿಕೆಗಳು

◆

ಡಾ. ಸಿ. ನಾಗಭೂಷಣ

ಕನ್ನಡ ಸಂಶೋಧನೆಯು ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಕನ್ನಡ ನಾಡನ್ನು ಪ್ರವೇಶಿಸಿದ ಒಂದು ಶೈಕ್ಷಣಿಕ ಶಿಸ್ತು. ಇಪ್ಪತ್ತನೇ ಶತಮಾನದಲ್ಲಂತೂ ಕನ್ನಡ ಸಂಶೋಧನೆ ಅನೇಕ ಮಹತ್ವದ ನೆಲೆಗಳನ್ನು ಪ್ರವೇಶಿಸಿದೆ. ಇಂದು ಸಂಶೋಧನೆಯ ಪರಿಕಲ್ಪನೆ ವ್ಯಾಪಕವಾಗಿದೆ. 'Research' ಎಂಬ ಚಟುವಟಿಕೆಗ ಸಮಾನಾಂತರವಾಗಿ ನಾವು ನಡೆಸುತ್ತಿರುವ ಬೌದ್ಧಿಕ ಕ್ರಿಯೆಯಾಗಿದೆ. ಆಂಗ್ಲ ಭಾಷೆಯಲ್ಲಿಯ 'Research' ಪದವನ್ನು ಒಡೆದು ಅದರ ಅರ್ಥವಿಶೇಷವನ್ನು ಮತ್ತು ಅದರ ಮೂಲ ಅರ್ಥವನ್ನು ಗ್ರಹಿಸಬಹುದು. 'Research' ಎಂದರೆ ಪುನರ್ ಹುಡುಕು, search ಎಂದರೆ ಹುಡುಕು, ಅದಕ್ಕೆ ವಿಶೇಷಣವಾಗಿ Re ಎನ್ನುವುದು ಬಳಕೆಯಾಗಿದೆ. ಅಂದರೆ ಒಮ್ಮೆ ಹುಡುಕಿದರೆ ಸಾಲದು ಪುನಃ ಹುಡಕಬೇಕು ಎನ್ನುವುದು ಇದರ ಭಾವಾರ್ಥ. ಕನ್ನಡದಲ್ಲಿಯೂ ಸಂಶೋಧನೆಯು ಸಮಗ್ರವಾಗಿ ಹುಡುಕುವುದು ಎಂಬುದನ್ನು ಸೂಚಿಸುತ್ತದೆ. ಸಂಶೋಧನೆಯೆಂಬುದು ಇತ್ತೀಚೆಗೆ ಕೇವಲ ಬೌದ್ಧಿಕ ಚಟುವಟಿಕೆಯಾಗಿ ಉಳಿಯದೆ ಹಲವರ ಶ್ರಮ ಹಾಗೂ ಸಹಯೋಗವನ್ನು ಬಯಸುವ ಹಾಗೂ ಎಲ್ಲರನ್ನೂ ಒಂದಲ್ಲ ಒಂದು ವಿಧದಲ್ಲಿ ಪ್ರಭಾವಿಸುವ ಸಾಮಾಜಿಕ ಕ್ರಿಯೆಯಾಗಿದೆ. ಈ ಸಂಶೋಧನೆ ಶುದ್ಧಾಂಗವಾಗಿ ಜ್ಞಾನಸಂಬಂಧಿಯಾದ ಚಟುವಟಿಕೆ ಎಂದು ಪರಿಗಣಿಸಬಹುದು. ಸಂಶೋಧನೆಯ ಪರಿಕಲ್ಪನೆಯನ್ನು ಬಹುಮುಖಿ ರೀತಿಯಲ್ಲಿಯೂ ಅರ್ಥೈಸಬಹುದು.

೧. ಹೊಸ ಹೊಸ ಸಂಗತಿಗಳನ್ನು ಶೋಧಿಸಿ ತೋರಿಸಬಲ್ಲುದು.

೨. ಸತ್ಯವನ್ನು ಹೊರಗೆಡಬಲ್ಲುದು. ಅಸ್ಪಷ್ಟವಾಗಿರುವ ಸಂಗತಿಗಳನ್ನು ಹೆಚ್ಚು ಹೆಚ್ಚು ಸ್ಪಷ್ಟಗೊಳಿಸುವುದು.

೩. ಶೋಧಿತ ಸಂಗತಿಗಳನ್ನು ಹೊಸ ದೃಷ್ಟಿಯಿಂದ ಪರಿಶೀಲಿಸಬಹುದು. ವಿಶ್ಲೇಷಿಸಬಹುದು.

೪. ಊಹಾಪೋಹಗಳಿಗೆ ಕೊನೆಯ ತೆರೆಯನ್ನೆಳೆಯಬಹುದು.

೫. ವ್ಯವಸ್ಥಿತ ಆಲೋಚನಾ ಕ್ರಮವನ್ನು ಬೆಳೆಸಬಲ್ಲುದು.

ಕನ್ನಡ ನಾಡಿನ ಚರಿತ್ರೆ, ಸಂಸ್ಕೃತಿ, ಸಾಹಿತ್ಯ, ಜಾನಪದ ಇತ್ಯಾದಿ ಕ್ಷೇತ್ರಗಳಲ್ಲಿ ನಡೆದಿರುವ ಸಂಶೋಧನೆಯ ಸ್ವರೂಪ ಹಲವಾರು ಗ್ರಹಿಕೆಗಳಲ್ಲಿ ರೂಪು ತಾಳಿದೆ.

೧. ಸಂಶೋಧಕ ತಾನು ತಲುಪಬೇಕಾದ ನಿಜದ ನೆಲೆಯನ್ನು ಮೊದಲೇ ಅರಿತುಕೊಂಡು ಅದಕ್ಕೆ ಅಗತ್ಯವಾದ ಆಂತರಿಕ ಹಾಗೂ ಬಾಹ್ಯ ಆಧಾರಗಳನ್ನು ಹುಡುಕುವುದರ ಮೂಲಕ ಸಂಶೋಧನೆಯನ್ನು ಕೈಗೊಂಡಿರುವುದು.

೨. ಇರುವ ಆಧಾರಗಳನ್ನು ಕಲೆ ಹಾಕಿ, ಪರಸ್ಪರ ಸಂಬಂಧಗಳನ್ನು ಹೊಂದಿಸಿ ಅವುಗಳಿಂದ ಕೊನೆಯ ನಿರ್ಣಯವನ್ನು, ಸತ್ಯವನ್ನು ರೂಪಿಸುವುದು.

೩. ಒಂದೇ ಸತ್ಯವನ್ನು ಶೋಧಿಸುವ ಗುರಿಯನ್ನಿಟ್ಟುಕೊಂಡು ಹೊರಟು ಹಲವು ಸತ್ಯಗಳ ಶೋಧನೆ ನಡೆಸಿರುವುದು.

೪. ಸಿದ್ಧ ಮಾದರಿಯ ಬೆಳಕಿನಲ್ಲಿ ಅನ್ವಯಿಕವಾಗಿ ಸಂಶೋಧನೆ ಮಾಡಿರುವುದು.

೫. ನೂತನ ಮಾದರಿಯನ್ನು ರೂಪಿಸಿಕೊಂಡು ಸಂಶೋಧನೆಯನ್ನು ಕೈಗೊಂಡಿರುವುದು.

೬. ಹಿಂದಿನವರು ಆಗಲೇ ಕೈಗೊಂಡಿದ್ದ ಸಂಶೋಧನೆಯು ಪೂರ್ಣಗೊಂಡಿರದಿದ್ದ ಸಂದರ್ಭದಲ್ಲಿ ಆ ನೆಲೆಯಲ್ಲಿಯೇ ಮುಂದುವರಿದು ಪೂರ್ಣಗೊಳಿಸಿರುವುದು.

೭. ಹೆಚ್ಚಿನ ಸಂಶೋಧನೆಗೆ ಪೂರಕವಾಗಬಲ್ಲ ಚಿಕ್ಕ ಚಿಕ್ಕ ಸಂಶೋಧನೆಗಳನ್ನು ಕೈಗೊಂಡಿರುವುದು.

ಸಂಶೋಧಕರು ಸತ್ಯವನ್ನು ಹುಡುಕುವುದೇ ಪ್ರಮುಖ ಉದ್ದೇಶ್ಯವಾಗಿರಿಸಿಕೊಂಡು ತಮ್ಮ ಶೋಧನೆಯ ಫಲಿತಗಳನ್ನು ಸತ್ಯವೆಂದೇ ತಿಳಿದಿರುತ್ತಾರೆ. ಆದರೆ ಈ ಸಂಶೋಧನೆಗಳು ಪೂರ್ಣ ಸತ್ಯವಲ್ಲ. ಅವರಿಗೆ ಲಭ್ಯವಿರುವ ಮಾಹಿತಿ ವಿಶ್ಲೇಷಣಾ ಪರಿಕರ, ಅವಲಂಬೆಯ ಆಧಾರದ ಮೇಲೆ ಸದ್ಯಕ್ಕೆ ಸತ್ಯವೆಂದು ತಿಳಿಯಬಹುದಾದುದ್ದನ್ನು ಈ ಸಂಶೋಧಕರು ಹೇಳಿರುತ್ತಾರೆ. ಹೊಸ ಮಾಹಿತಿ, ಹೊಸ ವಿಶ್ಲೇಷಣಾ ಪರಿಕರಗಳು ದೊರೆತ ಹಾಗೆಲ್ಲ ಈ ಸಂಶೋಧನೆ ಪರಿಷ್ಕೃತಗೊಳ್ಳುತ್ತದೆ.

ಕನ್ನಡದಲ್ಲಿ ಸಂಶೋಧನೆಯನ್ನು ಗುರುತಿಸುವಾಗ ಹತ್ತೊಂಭತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಸಂಶೋಧನೆಯ ಆರಂಭವನ್ನು ಗುರುತಿಸುತ್ತೇವೆ. ಈ ಕಾಲದಲ್ಲಾದ ಸಂಶೋಧನೆಯ ಬಗೆಗೆ ಗುರುತಿಸುವುದಾದರೆ ಸಂಶೋಧನೆಯ ಚಟುವಟಿಕೆಗಳು ಪ್ರಮಾಣದಲ್ಲಿ ಹೆಚ್ಚಾದವು ಮತ್ತು ಸಾಮಗ್ರಿ ಸಂಕಲನದ ವ್ಯಾಪಕತೆ ಹೆಚ್ಚಾಯಿತು. ಸಂಶೋಧಕನಾದವನು ಶೋಧಿಸಬೇಕಾಗಿದ್ದ ಆಕರಗಳು ನಾಲ್ಕು ಬಗೆಯವುಗಳಾಗಿದ್ದವು.

೧. ವಸ್ತು ಸಾಮಗ್ರಿ, ೨. ಭಾಷಾ ಸಾಮಗ್ರಿ, ೩. ಕ್ರಿಯಾ ಸಾಮಗ್ರಿ, ೪. ಜ್ಞಾನ ಸಾಮಗ್ರಿ ವಸ್ತು ಸಾಮಗ್ರಿ ಭೂಮಿಯ ಮೇಲೆ ಹಾಗೂ ಒಳಗೆ ಸಿಗುವಂತಹದ್ದಾಗಿದ್ದರೆ, ಭಾಷಾ ಸಾಮಗ್ರಿಗಳು ಲಿಖಿತ ರೂಪದಲ್ಲಿದ್ದವು. ಜನರ ದೈನಂದಿನ ಕ್ರಿಯೆ, ಆಚರಣಾತ್ಮಕ ಕ್ರಿಯೆಗಳು ಕ್ರಿಯಾ ಸಾಮಗ್ರಿಗಳಾಗಿದ್ದವು.

ಸಂಶೋಧನಾ ಚಟುವಟಿಕೆಯ ಸ್ವರೂಪದಲ್ಲಿ ಆದ ಮುಖ್ಯ ವ್ಯತ್ಯಾಸ ಎಂದರೆ, ಸಾಮಗ್ರಿಗಳು, ಆಕರಗಳು ಆಧುನಿಕ ರೀತಿಗೆ ಪರಿವರ್ತನೆಗೊಂಡವು. ಮೌಖಿಕವಾದದ್ದು ಲಿಖಿತ ರೂಪ ಪಡೆದುಕೊಂಡಿತು. ಇಲ್ಲಿಯವರೆಗೂ ಕನ್ನಡದಲ್ಲಿ ಈ ಪ್ರಕ್ರಿಯೆ ಮುಗಿದಿಲ್ಲ. ಶಾಸನಗಳನ್ನು, ಹಸ್ತಪ್ರತಿಗಳನ್ನು, ಮೌಖಿಕ ವಿವರಗಳನ್ನು ಮುದ್ರಿತ ರೂಪಕ್ಕೆ ತರುವ ಕ್ರಿಯೆ ನಡೆಯುತ್ತಿದ್ದು ಪರಿಪೂರ್ಣಗೊಂಡಿಲ್ಲ. ಈ ಪರಿವರ್ತನೆಯ ಕೆಲಸವನ್ನೇ ಒಂದು ಬಗೆಯ ಸಂಶೋಧನಾ ಚಟುವಟಿಕೆ ಎಂದು ಕರೆಯುವುದು.

ಸಂಶೋಧನಾ ಪದದ ವ್ಯಾಪ್ತಿಯನ್ನು ಸಮಕಾಲೀನ ಸಾಹಿತ್ಯಕ ಸಂದರ್ಭದಲ್ಲಿ ಮರು ಪರಿಶೀಲನೆಗೆ ಒಳಪಡಿಸುವ ಆವಶ್ಯಕತೆ ಇದೆ. ಈ ಕಾಲದಲ್ಲಿ ಕನ್ನಡ ಸಂಶೋಧನೆಯು, ಕೃತಿ ಸಂಶೋಧನೆಯಿಂದ ಗ್ರಂಥ ಸಂಪಾದನೆಗೆ, ಕವಿ ಚರಿತ್ರೆಯಿಂದ ಸಾಹಿತ್ಯ ಚರಿತ್ರೆಗೆ, ಛಂದ : ಸೂತ್ರಗಳಿಂದ ಛಂದ : ಶಾಸ್ತ್ರದ ಸ್ವರೂಪ ಭೇದನಕ್ಕೆ, ವ್ಯಾಕರಣದಿಂದ ಭಾಷಾ ಚರಿತ್ರೆಗೆ, ಅಲಂಕಾರ ಶಾಸ್ತ್ರದಿಂದ ಕಾವ್ಯ ಮೀಮಾಂಸೆಗೆ, ತೊಡಗಿಸಿಕೊಂಡಿತು. ಸಾಮಗ್ರಿ ಸಂಗ್ರಹ ಪ್ರಕಟನೆಯ ಜೊತೆಗೆ ಕನ್ನಡ ಸಂಶೋಧನೆ ತೀವ್ರವಾಗಿ ಸಾಮಗ್ರಿ ವಿಶ್ಲೇಷಣೆಯತ್ತ ಮುಖ ಮಾಡಿತು. ಸಾಂಸ್ಕೃತಿಕ ಶೋಧನೆಗೆ ಸಂಬಂಧಿಸಿದ ಅಧ್ಯಯನಗಳು ಸಾಂಸ್ಕೃತಿಕ ಚರಿತ್ರೆಯಲ್ಲಿ ಹೊಸ ನೋಟವನ್ನು ಬೀರಿದೆ. ಈ ರೀತಿಯ ಸಂಶೋಧನೆಯಲ್ಲಿ ಮಾಹಿತಿ ಸಂಗ್ರಹ, ಅದರ ಸಂಯೋಜನೆ, ಅದರ ವಿಶ್ಲೇಷಣೆ ಇವೆಲ್ಲವೂ ಅತ್ಯಂತ ವ್ಯವಸ್ಥಿತವಾಗಿ ನಡೆದಿವೆ. ದಾಖಲೆ ಆಧಾರಿತ ಸಂಶೋಧನೆಯಲ್ಲಿ ವ್ಯಾಖ್ಯಾನಮುಖಿ ಸಂಶೋಧನೆಯು ಮಹತ್ತರ ಪಾತ್ರ ಪಡೆದಿವೆ. ಇಲ್ಲಿ ಒಂದೊಂದು ಕೃತಿಯನ್ನು, ಕೃತಿಯ ಭಾಗವನ್ನು, ಪಾತ್ರವನ್ನು ಒಂದೊಂದು ಬಗೆಯಿಂದ ವ್ಯಾಖ್ಯಾನಿಸುವ ದೃಷ್ಟಿ ಪ್ರಮುಖ ಪಾತ್ರ ಪಡೆದಿದೆ. ಲಭ್ಯವಾದ ದಾಖಲೆಗಳನ್ನು ಬೇರೆ ಬೇರೆ ಸಿದ್ಧಾಂತಗಳ ಹಿನ್ನಲೆ ದೃಷ್ಟಿಕೋನಗಳಿಂದ ನೋಡುವುದು ಪ್ರಮುಖವಾಗಿದೆ. ಸಂಶೋಧನೆಯು ವಸ್ತುನಿಷ್ಠ ವ್ಯಕ್ತಿನಿರಪೇಕ್ಷವಾದ ಚಟುವಟಿಕೆಯಾಗಿರುವುದರಿಂದ ಸಂಶೋಧನಾ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವುದು ವೈಯಕ್ತಿಕ ರಾಗ ದ್ವೇಷಗಳಿಂದ ಮುಕ್ತರಾಗಿರಬೇಕಾಗಿರುವುದನ್ನು, ಸ್ವಂತ ಹಿತಾಸಕ್ತಿಯ ಬಗೆಗೆ ಒಲುಮೆ ಇಲ್ಲದ್ದನ್ನು ನಿರೀಕ್ಷಿಸುತ್ತದೆ.

ಸಂಸ್ಕೃತಿಗೆ ಸಂಬಂಧಿಸಿದ ಅಧ್ಯಯನಗಳು ಶುದ್ಧ ವೈಜ್ಞಾನಿಕ ನೆಲೆಗಟ್ಟಿಗೆ ಸೇರಲು ಸಾಧ್ಯವಿಲ್ಲ. ಸಂಸ್ಕೃತಿಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸುವುದಾಗಲೀ, ವಿವರಿಸುವುದಾಗಲೀ, ವ್ಯಾಖ್ಯಾನಿಸುವುದಾಗಲೀ ತನಗೆ ತಾನೆ ಪೂರ್ಣರೂಪಿಯಾದ ಕಾಲ ದೇಶ ವಿಮುಕ್ತವಾದ ಸಂಗತಿಯಲ್ಲ. ಸಂಸ್ಕೃತಿಗೆ ಸಂಬಂಧಿಸಿದ ಹಿಂದಿನ ಸಿದ್ಧಾಂತ

ಇಂದಿನ ನಮ್ಮ ಸಾಂಸ್ಕೃತಿಕ ವೈರುದ್ಧ್ಯಗಳ ಫಲಿತವಾಗಿ ತೋರುತ್ತವೆ. ನಿದರ್ಶನಕ್ಕೆ ವಿಜಯನಗರ ಸಾಮ್ರಾಜ್ಯದ ಅವನತಿಯ ಕಾಲದಲ್ಲಿ ದೇವಾಲಯಗಳು ನಾಶಗೊಂಡವು. ಈ ಪ್ರಕ್ರಿಯೆಯಲ್ಲಿ ಮುಸ್ಲಿಂ ಪ್ರಮುಖ ಪಾತ್ರವನ್ನು ವಿವರಿಸುವ ಚಾರಿತ್ರಿಕ ಪುನಾರಚನೆಯ ವಿಶ್ಲೇಷಣೆಯು ವಿಜಯನಗರದ ಶೈವ ಮತ್ತು ವೈಷ್ಣವ ದೇವಾಲಯಗಳಲ್ಲಿ ಅಧಿಕ ವೈಷ್ಣವ ದೇವಾಲಯಗಳೇ ವಿನಾಶವಾಗಿ ಸಾಕಷ್ಟು ಶೈವ ದೇವಾಲಯಗಳು ನಾಶವಾಗದೆ ಉಳಿದುದರ ಹಿನ್ನಲೆಗೆ ಸಾಕಾಗದು. ಇನ್ನು ಹೆಚ್ಚಿನ ಮಾಹಿತಿ ಮತ್ತು ವಿವರಣೆಗಳು ಅವಶ್ಯಕವಾಗಿ ಬೇಕಾಗುತ್ತವೆ. ಇದು ಸಾಂಸ್ಕೃತಿಕ ಅಧ್ಯಯನಗಳನ್ನು ರೂಪಿಸುವ ಸಿದ್ಧಾಂತಗಳು ಸದ್ಯದ ಒತ್ತಡಗಳಿಂದ ನಿರ್ದೇಶಿತವಾಗಿರುತ್ತವೆಂಬ ಅನಿಸಿಕೆಯನ್ನು ವ್ಯಕ್ತಪಡಿಸುತ್ತವೆ. ಹೀಗಾಗಿ ಮಾಹಿತಿಯಾಗಲೀ, ವರ್ಣನೆಯಾಗಲೀ ವಸ್ತುನಿಷ್ಠವಾಗಿ ಉಳಿಯಲು ಸಾಧ್ಯವಿಲ್ಲ.

ಕನ್ನಡ ಸಂಶೋಧನೆಯ ಅಧ್ಯಯನದ ವ್ಯಾಪ್ತಿ: ಕನ್ನಡದಲ್ಲಿ ಸಂಶೋಧನೆಯು ಕನ್ನಡ ನಾಡಿನ ಸಮಾಜದಿಂದ, ಜನತೆಯಿಂದ ದೊರೆತ ಸಾಮಗ್ರಿಯನ್ನು ಆಧರಿಸಿದ ಸಂಶೋಧನೆ. ವ್ಯಾಪಕಾರ್ಥದಲ್ಲಿ ಈ ನಾಡಿನ ಜೊತೆಗೆ ಭೂ ಪ್ರದೇಶದ ಆಚಗೂ ದೊರಕುವ ಸಾಮಗ್ರಿಯನ್ನು ಕೆಲವೆಡೆ ಸಂಶೋಧನೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಅಲ್ಲದೆ ಸಂಶೋಧನೆಯು ಪುನರ್ ಮೌಲ್ಯೀಕರಣಕ್ಕೆ ಒಳಗಾಗುತ್ತಲೇ ಪುನರ್ ಮೌಲ್ಯೀಕರಣದ ಸಾಧನವೂ ಆಗುತ್ತದೆ. ಸಂಶೋಧನೆಯ ಮೂಲಕ ಪರಂಪರೆಯಲ್ಲಿ ಕಳಚಿಕೊಂಡ ಕೊಂಡಿಗಳು ಕಾಣಿಸತೊಡಗುತ್ತವೆ. ಹಿನ್ನಲೆಗೆ ಸರಿಸಲ್ಪಟ್ಟ ಸಂಗತಿಗಳು ಮುನ್ನೆಲೆಗೆ ಬಂದು ಮಾತುಕತೆ ಆರಂಭಿಸುತ್ತವೆ. ಕನ್ನಡದಲ್ಲಿ ನಡೆದಿರುವ, ನಡೆಯುತ್ತಿರುವ, ನಡೆಯಬೇಕಾದ ಸಂಶೋಧನಾ ಕ್ಷೇತ್ರಗಳ ವ್ಯಾಪ್ತಿಯನ್ನು ಗುರುತಿಸುವುದಾದರೆ,

೧. ಕವಿ ಕೇಂದ್ರಿತ ಮೂಲ ಅಧ್ಯಯನಗಳು (ಜೀವನ ಸಾಧನೆ, ಕೃತಿ ಮೌಲ್ಯ ಇತ್ಯಾದಿ).

೨. ಕೃತಿ ಕೇಂದ್ರಿತ ಅಧ್ಯಯನ (ಒಂದು ಅಥವಾ ಹಲವು ಕೃತಿಗಳನ್ನು ವಿಶ್ಲೇಷಿಸುವುದು).

೩. ಸಾಹಿತ್ಯ ಪ್ರೇರಣೆ–ಧೋರಣೆ ಮೂಲ ಅಧ್ಯಯನಗಳು.

೪. ಸಾಹಿತ್ಯ ಪ್ರಕಾರದ ಮೂಲ ಅಧ್ಯಯನಗಳು.

೫. ಸಾಹಿತ್ಯ ಕೃತಿ ವಸ್ತು ಪಾತ್ರ ಮೂಲ ಅಧ್ಯಯನಗಳು.

೬. ಕವಿಯ ಕೃತಿಯ ತೌಲನಿಕ ಅಧ್ಯಯನ.

೭. ಭಿನ್ನ ಕವಿಕೃತಿಗಳ ತೌಲನಿಕ ಅಧ್ಯಯನ.

೮. ಅನ್ಯಭಾಷಾ ಕವಿ ಕೃತಿಗಳೊಡನೆ ತೌಲನಿಕ ಅಧ್ಯಯನ.

೯. ಕೃತಿಗಳ ಸಾಂಸ್ಕೃತಿಕ ಮೂಲ ಅಧ್ಯಯನಗಳು.

೧೦. ಕವಿಕೃತಿಗಳ ಘಟಕ ಮೂಲ ಅಧ್ಯಯನಗಳು.

೧೧. ಛಂದೋ ಮೂಲ ಅಧ್ಯಯನಗಳು.

೧೨. ವ್ಯಾಕರಣ ಮೂಲ ಅಧ್ಯಯನಗಳು.

೧೩. ಭಾಷಾ ಶಾಸ್ತ್ರೀಯ ನೆಲೆಯ ಅಧ್ಯಯನಗಳು (ವರ್ಣನಾತ್ಮಕ, ಐತಿಹಾಸಿಕ, ತೌಲನಿಕ, ಸ್ಥಳನಾಮ, ಸಮಾಜ ಭಾಷಾ ವೈಜ್ಞಾನಿಕ, ಉಪಭಾಷೆ, ದ್ವಿಭಾಷಿಕತೆ ಇತ್ಯಾದಿ).

೧೪. ಶಾಸನಗಳ ಮೂಲ ಅಧ್ಯಯನ (ಇತಿಹಾಸ, ಸಂಸ್ಕೃತಿ, ಭಾಷಾವಿಜ್ಞಾನ).

೧೫. ಭೌಗೋಳಿಕ ಪ್ರದೇಶ ಮೂಲ ಅಧ್ಯಯನ.

೧೬. ಜನಾಂಗ ಮೂಲ ಅಧ್ಯಯನ.

೧೭. ಕಲಾ ಮೂಲ ಅಧ್ಯಯನಗಳು (ಚಿತ್ರ, ಶಿಲ್ಪ, ಸಂಗೀತ, ನೃತ್ಯ ಇತ್ಯಾದಿ ಕಲೆಗಳು ಹಾಗೂ ಕಲಾವಿದರು).

೧೮. ಜಾನಪದ ಮೂಲ ಅಧ್ಯಯನ.

೧೯. ಇತಿಹಾಸ ಮೂಲ ಅಧ್ಯಯನ (ಅರಸರು, ಸಾಮಂತರು, ಸ್ಥಳೀಯ ಅರಸರು)

೨೦. ಅಂತರ್‌ಶಿಸ್ತು ಮೂಲ ಅಧ್ಯಯನಗಳು.

೨೧. ಅನ್ವಯ ಮೂಲ ಅಧ್ಯಯನಗಳು (ಅನ್ಯಭಾಷೆ, ವಿವಿಧ ಶಾಸ್ತ್ರ ಹಾಗೂ ವಿವಿಧ ಕ್ಷೇತ್ರಗಳ ತಾತ್ವಿಕಾಂಶಗಳನ್ನು ಅನ್ವಯಿಸುವುದು)

೨೨. ಪ್ರಕರಣ ಮೂಲ ಅಧ್ಯಯನ (case study) ಗಳು (ನಿರ್ದಿಷ್ಟ ಪ್ರಕರಣಗಳು

೨೩. ಸಂಪಾದನಾ ಮೂಲ ಅಧ್ಯಯನಗಳು.

೨೪. ಸಂಖ್ಯಾನಿಷ್ಠ ಸಂಶೋಧನಾ ಅಧ್ಯಯನ (ಅಧ್ಯಯನಕ್ಕೆ ಆಯ್ದುಕೊಂಡ ಘಟಕವೊಂದರ ಪ್ರಸಾರದ ವಿರಳತೆ-ಸಾಂದ್ರತೆ, ಐತಿಹಾಸಿಕ ಬೆಳವಣಿಗೆಯ ವಿರಳತೆ-ಸಾಂದ್ರತೆಗಳನ್ನು ನಿರ್ದಿಷ್ಟವಾಗಿ ತಿಳಿದುಕೊಳ್ಳುವ ಅಧ್ಯಯನ).

ಈ ವೈವಿಧ್ಯಮಯ ನೆಲೆಗಳಲ್ಲಿ ಸಂಶೋಧನಾ ಚಟುವಟಿಕೆಗಳು ರೂಪುಗೊಂಡಿದೆ.

ಸಮಕಾಲೀನ ಸಾಹಿತ್ಯಕ ಅಧ್ಯಯನವನ್ನೊಳಗೊಂಡ ವಿಮರ್ಶೆಯ ಚೌಕಟ್ಟಿನಲ್ಲಿ ನಡೆಯುತ್ತಿರುವ ವಿವಿಧ ಪ್ರಕ್ರಿಯೆಗಳಾದ ೧. ಕೃತಿಕಾರನ ಕೃತಿಗಳ ಸಮಗ್ರ ವಿಮರ್ಶೆ, ೨. ಕೃತಿಗಳ ತೌಲನಿಕ ಅಧ್ಯಯನ, ೩. ಕೃತಿಕಾರರನ ತೌಲನಿಕ ಅಧ್ಯಯನ, ೪. ಅನ್ಯಭಾಷಾ ಸಾಹಿತ್ಯ ಸಂದರ್ಭಗಳೊಡನೆ ತೌಲನಿಕ ಅಧ್ಯಯನ, ೫. ಸಾಹಿತ್ಯ ಸಂದರ್ಭಗಳ ಬಗೆಗಿನ ಅಧ್ಯಯನ, ೬. ಸಾಹಿತ್ಯ-ಸಂಸ್ಕೃತಿಗಳ ಸಂಬಂಧಗಳ ಅಧ್ಯಯನ, ೭. ಸಾಹಿತ್ಯ

ಪ್ರಕಾರಗಳನ್ನು ಕುರಿತ ಅಧ್ಯಯನ, ೮. ಸಾಹಿತ್ಯ ತತ್ವ ಪರಿಕಲ್ಪನೆಗಳ ಚರ್ಚೆ. ಈ ಪ್ರತಿಯೊಂದು ಸಂದರ್ಭದಲ್ಲೂ ಎದುರಿಗೆ ಇರುವ ಸಾಮಗ್ರಿಯನ್ನೆಲ್ಲಾ ಸಂಯೋಜಿಸುವ, ವಿಶ್ಲೇಷಿಸುವ ಕ್ರಿಯೆ ನಡೆದಿದೆ. ಇರುವುದರ ಮೂಲಕ ಸಾಧ್ಯವಿರುವ ನೆಲೆಗಳನ್ನು ಕಂಡುಕೊಳ್ಳುವ ಪ್ರಯತ್ನ ನಡೆದಿರುತ್ತದೆ. ಬಿಡಿಯಿಂದ ಇಡಿಯ ಕಡೆಗೆ ನಡೆಯುವ ಈ ಕ್ರಿಯೆ ಒಂದರ್ಥದಲ್ಲಿ ಸಂಶೋಧನೆಯೇ. ಸಮಕಾಲೀನ ಸಾಹಿತ್ಯದ ಸಂಶೋಧನೆಯಲ್ಲಿ ಅಧ್ಯಯನಕಾರ ಹಾಗೂ ಸಾಹಿತ್ಯ ಕೃತಿ ಸಮುದಾಯ ಈ ಎರಡೂ ಅಂಗಗಳು ಪರಸ್ಪರ ಪ್ರಭಾವಕ್ಕೆ ಒಳಗಾಗುತ್ತಿರುತ್ತವೆ. ಅಧ್ಯಯನಕಾರನ ತಾತ್ವಿಕ ಚೌಕಟ್ಟು ಕೃತಿಗಳ ಸಾಧ್ಯತೆಯನ್ನೇ ಮಿತಿಗೊಳಿಸುತ್ತಿದ್ದರೆ, ಕೃತಿಗಳ ಸ್ವರೂಪ ಅಧ್ಯಯನದ ವ್ಯಾಪ್ತಿಯನ್ನು ನಿಯಂತ್ರಿಸಿರುತ್ತದೆ. ಸಂಶೋಧಕನ ವಿಮರ್ಶಾ ಪ್ರಜ್ಞೆಯನ್ನು ಸಮಕಾಲೀನ ಸಾಹಿತ್ಯದ ಅಧ್ಯಯನದಲ್ಲಿ ಗುರುತಿಸಬಹುದಾಗಿದೆ. ಸಂಶೋಧಕನ ವಿಮರ್ಶಾ ಪ್ರಜ್ಞೆಯು ತಾನು ಅಧ್ಯಯನ ಮಾಡುತ್ತಿರುವ ನಿರ್ದಿಷ್ಟ ವಲಯವನ್ನು ಆವರಿಸಿರುವ ಸಮಗ್ರ ಸನ್ನಿವೇಶದ ಬಗೆಗೆ ಆಲೋಚಿಸಬಲ್ಲ ಬಹುಮುಖಿ ಪ್ರಜ್ಞೆಯನ್ನು ಹೊಂದಿರುತ್ತದೆ. ಒಂದೇ ಸನ್ನಿವೇಶವನ್ನು ಹಲವು ದೃಷ್ಟಿಕೋನಗಳಿಂದ ನೋಡುವ ಅಂಶ ವ್ಯಕ್ತವಾಗುತ್ತದೆ. ಸಂಶೋಧನೆಯಲ್ಲಿ ಮೂಡಿಬರುವ ಸತ್ಯವು ಸಂಶೋಧಕನ ಮೂಡಿಬರುವ ಸತ್ಯವು ಸಂಶೋಧಕನ ಕಾಲ, ದೇಶ, ಸಂದರ್ಭ, ಹಿನ್ನೆಲೆ ಮತ್ತು ದೃಷ್ಟಿಕೋನಗಳೆಂಬ ಮಾನದಂಡಗಳಿಂದ ಹುಟ್ಟುವ ರಚನೆ ಎಂಬ ನೆಲೆ ಇಲ್ಲಿ ವ್ಯಕ್ತವಾಗಿದೆ.

ಕನ್ನಡ ಸಂಶೋಧನೆಯ ಇತಿಹಾಸ: ಪಾಶ್ಚಿಮಾತ್ಯರ ಬರುವಿಕೆಯಿಂದ ಹದಿನೆಂಟನೆಯ ಶತಮಾನದ ವೇಳೆಗಾಗಲೇ ಕನ್ನಡ ನಾಡಿನಲ್ಲಿ ಹೊಸ ಜ್ಞಾನಶಾಖೆಗಳು ಅಸ್ತಿತ್ವಕ್ಕೆ ಬಂದವು. ಅವುಗಳಲ್ಲಿ ಸಂಶೋಧನಾ ಶಾಖೆಯೂ ಒಂದು. ಕನ್ನಡ ಸಂಶೋಧನೆಯು ಪಾಶ್ಚಾತ್ಯ ವಿದ್ವಾಂಸರಿಂದಲೇ ಅಂಕುರಾರ್ಪಣೆಯಾಯಿತು. ಸಂಶೋಧನೆಯು ಇಪ್ಪತ್ತನೇ ಶತಮಾನದಲ್ಲಂತೂ ಅನೇಕ ಮಹತ್ವದ ನೆಲೆಗಳನ್ನು ಪ್ರವೇಶಿಸಿದೆ. ಕನ್ನಡ ಭಾಷೆ ಸಾಹಿತ್ಯದಲ್ಲಿಯ ಸಂಶೋಧನೆಯು ಎರಡು ಶತಮಾನಗಳಷ್ಟು ಹಳೆಯದು. ವಿದೇಶೀಯರಿಂದ ಮೊದಲುಗೊಂಡು ದೇಶೀಯ ವಿದ್ವಾಂಸರ (ಇಂದಿನ) ಕಾಲದವರೆಗೆ ನಿರಂತರವಾಗಿ ಮುನ್ನಡೆಯುತ್ತ ಬಂದ ಸಂಶೋಧನೆಯಲ್ಲಿ ಸಂಗ್ರಹ, ಸಂಕಲನ, ವಿಶ್ಲೇಷಣೆ, ವಿವೇಚನೆ ರೂಪದಲ್ಲಿ ಶಾಸನ, ಹಸ್ತಪ್ರತಿ, ಪ್ರಾಚೀನ ಕೃತಿಗಳ ಪರಿಷ್ಕರಣ, ಜಾನಪದ, ಭಾಷೆ, ಛಂದಸ್ಸು, ವ್ಯಾಕರಣ, ಸಂಸ್ಕೃತಿ, ಚರಿತ್ರೆ ಮುಂತಾದ ಕ್ಷೇತ್ರಗಳ ಹರವನ್ನು ಪಡೆಯಿತು. ಕನ್ನಡ ಸಂಶೋಧನೆಯ ಸುದೀರ್ಘ ಇತಿಹಾಸವನ್ನು ವಿದ್ವಾಂಸರು ವಿವಿಧ ಘಟ್ಟಗಳಲ್ಲಿ ಗುರುತಿಸಿದ್ದಾರೆ.

೧. ಆಕರ ಶೋಧ ಅಥವಾ ಸಾಮಗ್ರಿ ಸಂಗ್ರಹ ಕಾಲ, ಪರಿಚಯದ ಕಾಲ.

೨. ಆಕರಗಳ ನಿರ್ಮಾಣ ಕಾಲ.

೩. ಆಕರಗಳ ರೂಪ ನಿಷ್ಠ ಶೋಧ.

೪. ಆರರಗಳ ಗುಣನಿಷ್ಠ ಶೋಧ, ಸಾಮಗ್ರಿ ವಿಶ್ಲೇಷಣ ಕಾಲ.

೫. ದಾಖಲೆ ಆಧಾರಿತ ಸಂಶೋಧನೆ.

೬. ಸಂಖ್ಯಾನಿಷ್ಠ ಶೋಧ.

೭. ಅಂತಯ ಅಧ್ಯಯನ (ಬಹು ಶಿಸ್ತೀಯ ಅಧ್ಯಯನ)

೮. ಸಂಸ್ಕೃತಿ ಸಂಶೋಧನಾ ಕಾಲ ಇತ್ಯಾದಿಯಾಗಿ ಸಂಶೋಧನೆಯ ವ್ಯಾಪ್ತಿಯನ್ನು ಗುರುತಿಸಬಹುದಾಗಿದೆ.

ಕನ್ನಡದಲ್ಲಿ ಸಂಶೋಧನೆಯ ಅಡಿಪಾಯ ಹಾಕಿದವರು ಪಾಶ್ಚಾತ್ಯ ವಿದ್ವಾಂಸರು. ಈ ಮಾರ್ಗ ಪರಂಪರೆಯಲ್ಲಿ ನಡೆದು ಬಂದ ಕನ್ನಡದ ದೇಶಿ ಸಂಶೋಧನೆಯನ್ನು ಸಂಶೋಧನೆಯು ಒಂದು ಕರ್ತವ್ಯ ಆಹ್ವಾನ, ರಕ್ತಗತ ಗುಣ ಜೀವನ ವಿಧಾನವಾಗಿಸಿಕೊಂಡವರು. ಅವರಿಗೆ ಸಂಶೋಧನೆ ಜೀವನೋಪಾಯಗಿರದೆ ಸಂಶೋಧನ ವ್ರತವಾಗಿತ್ತು. ಹಲವರದು ಕನ್ನೆ ನೆಲದ ಸಂಶೋಧನೆ. ಶೋಧನೆ ಎಂದರೇನೆಂದು ಗೊತ್ತಿರದ ಕಾಲದಲ್ಲಿ ಆಕರಗಳನ್ನು ಸ್ವಯಂ ಶೋಧಿಸಿಕೊಂಡವರು ಅವರು. ಕತ್ತಲೆಯಲ್ಲಿದ್ದ ಸಮಸ್ಯೆಗಳನ್ನು ಬೆಳಕಿನ ತಂದವರು. ಸ್ವತಂತ್ರ ಚಿಂತನೆಗೈದವರು. ಆದರೆ ಹಲವಾರು ಸಂಶೋಧನಾ ನಿಲುವುಗಳು ಇಂದು ಸ್ವೀಕಾರರ್ಹವಲ್ಲವಾದರೂ ಮುಂದಿನ ಸಂಶೋಧನೆಗೆ ಬುನಾದಿಯಾಗಿವೆ. ಅವರಿಂದ ಸ್ಫೂರ್ತಿ ಪ್ರೇರಣೆ ಪಡೆದು ಇಂದಿನ ಸಂಶೋಧಕರು ಮುಂದಿನ ದಾರಿ ಕಂಡುಕೊಳ್ಳಬೇಕಿದೆ. ಅಂತಹ ಹಿರಿಯ ಸಂಶೋಧಕರಲ್ಲಿ ಮತ್ತು ಅವರು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುತ್ತ ಕನ್ನಡ ಸಂಶೋಧನ ಪರಂಪರೆಯನ್ನು ತನ್ಮೂಲಕ ಸಾಹಿತ್ಯ, ಇತಿಹಾಸ, ಭಾಷೆ, ವ್ಯಾಕರಣ ಛಂದಸ್ಸು, ಶಾಸನ, ಜಾನಪದ ಸಮಾಜ ವಿಜ್ಞಾನ ಮೊದಲಾದ ಕನ್ನಡ ಸಂಸ್ಕೃತಿ ಹಾಗೂ ಮಾನವಿಕ ಕ್ಷೇತ್ರಗಳಲ್ಲಿ ಮುಂದುವರೆಯಲು ಸಾಧ್ಯವಾಗಿದೆ.

ಮೊದಮೊದಲು ಕವಿ–ಕಾವ್ಯ ಪರಂಪರೆಗೆ ಸೀಮಿತಗೊಂಡಿದ್ದ ಕನ್ನಡ ಸಂಶೋಧನ ಕ್ಷೇತ್ರ ಇಂದು ವಿಶಿಷ್ಟ ಶೈಕ್ಷಣಿಕ ಶಿಸ್ತಾಗಿ ಬೆಳೆಯುತ್ತಿದೆ. ಸಂತಿಶೋಧಕ್ಕೆ ಸಾಧನವಾಗುತ್ತಿದೆ. ಈ ಶತಮಾನದ ಮಧ್ಯಕಾಲಕ್ಕೆ ಸಾಂಸ್ಕೃತಿಕ ಅಧ್ಯಯನದೊಂದಿಗೆ ಗ್ರಂಥ ಸಂಪಾದನಾ ಶಾಸ್ತ್ರ ವ್ಯಾಕರಣ, ಛಂದಸ್ಸು, ಭಾಷಾಶಾಸ್ತ್ರ, ಜಾನಪದಶಾಸ್ತ್ರ, ನಾಮಶಾಸ್ತ್ರಗಳಂತಹ ಹತ್ತು ಹಲವು ಹೊಸ ಕ್ಷೇತ್ರಗಳು ತೆರೆದುಕೊಂಡವು ಇದರ ಫಲಿತವೆಂಬಂತೆ ಕನ್ನಡ ಸಂಶೋಧನ ವಿಸ್ತೃತಗೊಂಡು ಅಂತರಶಿಸ್ತೀಯ ಅಧ್ಯಯನಕ್ಕೆ ನಾಂದಿ ಹಾಡಿದೆ.

ಆಧುನಿಕ ಪೂರ್ವ ಕಾಲದ ಹಸ್ತಪ್ರತಿಗಳು ನಾಡಿನ ಸಂಸ್ಕೃತಿಯ ಭಂಡಾರಗಳು. ಸಾಹಿತ್ಯ ಸಂಸ್ಕೃತಿಯ ಸೃಷ್ಟಿಶೀಲ ಉತ್ಪನ್ನಗಳು. ಪ್ರಾಚೀನ ಕನ್ನಡಿಗರ ಬದುಕಿನ ಒಲವುಗಳನ್ನು, ವಿದ್ಯಾಭಿಮಾನ ಮತ್ತು ಧರ್ಮಾಭಿಮಾನಗಳನ್ನು ಅರಿತುಕೊಳ್ಳಬಹುದು. ಕನ್ನಡ ಹಸ್ತಪ್ರತಿಗಳನ್ನು ಯಾವುದೇ ಕಾಲದ ಪಳೆಯುಳಿಕೆಗಳೆನ್ನದೆ ಹಾಗೂ ನಮ್ಮ ಕಾಲಕ್ಕೆ ಅಗತ್ಯವಲ್ಲದ ಪರಿಕರಗಳೂ ಎಂದು ಭಾವಿಸದೇ ಅವುಗಳನ್ನು ಕನ್ನಡ ನಾಡಿನ

ಸಮಾಜ ಹಾಗೂ ಸಂಸ್ಕೃತಿಗಳ ಕ್ರಿಯಾಶೀಲ ನಡವಳಿಕೆಗಳು ಎಂದು ಅರಿವಿನ ವಿಸ್ತಾರಗಳ ಪರಿಧಿಯಲ್ಲಿ ಗುರುತಿಸಬೇಕು. ಆಧುನಿಕ ಪೂರ್ವದ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ, ಸಂಪಾದನೆಯಂತಹ ಪಾರಂಪರಿಕ ಕೆಲಸಗಳ ಮೂಲಕ ಬಹುಪಾಲು ಪಠ್ಯ ಕೇಂದ್ರಿತ ಸಂಪಾದನೆಯ ಪ್ರಕ್ರಿಯೆಗಳೇ ಹೆಚ್ಚಾಗಿ ನಡೆದಿರುವುದು. ಇಂದು ಈ ಪ್ರಕ್ರಿಯೆಯ ಜೊತೆಗೆ ಹಸ್ತಪ್ರತಿಗಳನ್ನು ಸಾಮಾಜಿಕ, ಸಾಂಸ್ಕೃತಿಕ ನೆಲೆಗಟ್ಟುಗಳ ಮೂಲಕವೂ ಅಧ್ಯಯನ ಕೈಗೊಳ್ಳಬೇಕಾಗಿದೆ. ಇತ್ತೀಚಿನ ಆಧುನೀಕರಣದ ಸಂದರ್ಭದಲ್ಲಿ ಅಧ್ಯಯನಗಳು ಹೊಸತನದ ಸ್ವರೂಪಕ್ಕೆ ಒಗ್ಗಿಕೊಳ್ಳುತ್ತಿರುವ ಸಂದರ್ಭದಲ್ಲಿ ಹಸ್ತಪ್ರತಿಗಳ ಅಧ್ಯಯನವೂ ಸಹ ಹೊಸತನವನ್ನು ಅಳವಡಿಸಿಕೊಳ್ಳಬೇಕಾಗಿದೆ.

ಇಂದು ಉಪೇಕ್ಷಿ ಅಥವಾ ಅಲಕ್ಷಿತ ಹಸ್ತಪ್ರತಿಗಳು ಎಂದು ಹಣೆಪಟ್ಟಿ ಅಂಟಿಸಿಕೊಂಡಿರುವ ಹಸ್ತಪ್ರತಿಗಳಲ್ಲಿರುವ ಮಾಹಿತಿಯನ್ನು ನಾವು ಪ್ರಾಯೋಗಿಕವಾಗಿ ಆಚರಣೆಗೆ ತರಬೇಕಾಗಿದೆ. ಇಂದು ಭೂಗರ್ಭ ಶಾಸ್ತ್ರಜ್ಞರು (ಜಿಯೊಲಾಜಿಸ್ಟ್) ನೀರನ್ನು ನೋಡುವ ಪದ್ಧತಿಯಂತಹ ವಿವರವು ಹತ್ತನೇ ಶತಮಾನದ ಲೋಕೋಪಕಾರ ಕೃತಿಯಲ್ಲಿದೆ. ಆ ಕೃತಿಯಲ್ಲಿರುವ ಮಾಹಿತಿಯನ್ನು ಪರೀಕ್ಷಿಸಿ ಫಲಿತಾಂಶ ತಿಳಿದುಕೊಳ್ಳಬೇಕಾಗಿದೆ. ವೈದ್ಯಶಾಸ್ತ್ರ ಕೃತಿಗಳಲ್ಲಿ ಚಿಕಿತ್ಸೆಗೆ ಸಂಬಂಧಿಸಿದಂತೆ ಮಾಹಿತಿಗಳು ಲಭ್ಯ ಇವೆ. ಅದೇ ರೀತಿ ಗಜಶಾಸ್ತ್ರ, ಪಾಕಶಾಸ್ತ್ರ, ಹಯಶಾಸ್ತ್ರ ಇತ್ಯಾದಿ ವಿವರಗಳು ಉಪೇಕ್ಷಿತ ಹಸ್ತಪ್ರತಿಗಳಲ್ಲಿ ಲಭ್ಯ ಇದೆ. ಪಂಚಮಹಾಭೂತಗಳ ರಹಸ್ಯವನ್ನು ಬೇಧಿಸಿ, ನಕ್ಷತ್ರ, ಗ್ರಹ, ಸೂರ್ಯ, ಭೂಮಿ, ಚಂದ್ರಾದಿಗಳ ಚಲನವಲನಗಳನ್ನು ಗುರುತಿಸಿ ಮಳೆ ಬೆಳೆಗಳ ಶುಭಾಶುಭಗಳನ್ನು ತಿಳಿಸುವಂತಹ ಹರಟ್ಟಮತದಂತಹ ಶಾಸ್ತ್ರ ಕೃತಿಯಲ್ಲಿಯ ವಿವರಗಳನ್ನು ಪರೀಕ್ಷಿಸಿ ಜನತೆಯ ಕಲ್ಯಾಣಕ್ಕೆ ಅನ್ವಯಿಸಿಕೊಳ್ಳಬೇಕಾಗಿದೆ. ಉಪೇಕ್ಷೆಗೆ ಒಳಗಾಗಿರುವ ಇಂತಹ ಶಾಸ್ತ್ರ ಕೃತಿಗಳು ಕನ್ನಡನಾಡಿನ ನೆಲ-ಜಲ, ಜನಮನಗಳ ಪ್ರತಿನಿಧಿಯಾಗಿ ನಿಲ್ಲುವಂಥಹವುಗಳು. ಮಳೆ ಬೆಳೆ, ಸೂರ್ಯ-ಚಂದ್ರ, ಫಲ-ಶಕುನಿ, ಜ್ಯೋತಿಷ್ಯ, ಫಲ-ಪುಷ್ಪ, ಗ್ರಹಣ ಇತ್ಯಾದಿ ಪ್ರಾಕೃತಿಕ ಸಸ್ಯಗಳು, ಮನುಷ್ಯ ಪ್ರಾಣಿ-ಪಕ್ಷಿಗಳ ಬದುಕಿನ ಕ್ರಮವನ್ನು ಆಗುಹೋಗುಗಳನ್ನು ವ್ಯಾಖ್ಯಾನಿಸುವ ಮತ್ತು ಬದುಕಿನ ಕ್ರಮವನ್ನು ಆ ಸಂಕಷ್ಟಗಳಿಗೆ ಹೊಂದಿಕೊಳ್ಳುವ ನೆಲೆಗಳನ್ನು ತಿಳಿಸಿಕೊಡುವ ಉಪೇಕ್ಷೆಗೆ ಒಳಗಾಗಿರುವ ರಟ್ಟಕವಿಯ ರಟ್ಟಮತ ಕೃತಿಯು ೧೨ ಅಧ್ಯಾಯಗಳನ್ನು ಒಳಗೊಂಡಿದ್ದು ಎಚ್. ಶೇಷಯ್ಯಂಗಾರ್ ಅವರು ಸಂಪಾದಿಸಿದ್ದಾರೆ. ಈ ಕೃತಿಯ ಎಂಟನೆಯ ಅಧ್ಯಾಯದಲ್ಲಿಯ ಮಳೆಯ ನೀರು ಹೇಗೆ ಬೀಳಬೇಕು ಎಂಬ ಕ್ರಮವನ್ನು ತಿಳಿಸುತ್ತ, ಭೂಮಿಯಲ್ಲಿ ಭಾವಿಯನ್ನು ತೋಡಿದರೆ ನೀರು ಬರುವುದು, ಬರದಿರುವುದು, ಒಂದು ವೇಳೆ ನೀರು ಬರುವಂತೆ ಇದ್ದರೆ ಅದರ ಪ್ರಮಾಣವನ್ನು ಹೇಳುವುದರೊಂದಿಗೆ, ಹತ್ತು ವರಗಳ ವಿಸ್ಮಯ, ಹುಲ್ಲು ಹಸಲೆ ಇವುಗಳ ವಿಶೇಷದಿಂದ ಬಾವಿಯ ನೀರು ಅರ್ಧಾಳುದ್ದ, ಮೊದಲ ಅಯ್ದಾಳುದ್ದ ಪ್ರಮಾಣದಲ್ಲಿ ನೀರಧಾರೆ ಹುಟ್ಟುವ ಕ್ರಮವನ್ನು ಹೇಳಿ, ಬಾವಿ ತೋಡುವಾಗ ಸಿಕ್ಕುವ ಕಲ್ಲುಬಂಡೆಗಳನ್ನು ಮಿದು ಮಾಡಿ ಒಡೆದು ತೆಗೆಯುವ ಕ್ರಮ, ಕಲ್ಲು ಒಡೆಯುವ ಉಳಿ ಹಾಕಿ ಇವುಗಳ ಬಾಯನ್ನು ವಜ್ರದಂತೆ ಗಟ್ಟಿ ಮಾಡಲು

ನೀರುಣಿಸುವ ಕ್ರಮಗಳನ್ನು ಹೇಳಿ, ತೋಡಿದ ಬಾವಿಯನ್ನು ಉತ್ತಮ ರೀತಿಯಲ್ಲಿ ಅಂದರೆ ನೀರು ಕೆಡದಂತೆ ಇರಲು ಮಾಡಬೇಕಾದ ಕ್ರಮ, ಬಾವಿಯನ್ನು ತೋಡುವ ದಿಕ್ಕಿನ ಫಲ, ಬಾವಿಯನ್ನು ತೋಡುವಾಗ ಮತ್ತು ಮೊದಲು ನೀರಿನ ಧಾರೆ ತೋರಿದಾಗ ಮಾಡಬೇಕಾದ ಪೂಜಾ ಕ್ರಮಗಳನ್ನು ವಿವರಿಸಿದೆ. ಇಂತಹ ವಿಷಯಗಳನ್ನು ಪ್ರಾಯೋಗಿಕವಾಗಿ ಪರಿಶೀಲಿಸಬೇಕಾಗಿದೆ. ಉಪೇಕ್ಷಿತ ಹಸ್ತಪ್ರತಿಗಳಲ್ಲಿಯ ವಿವರಗಳನ್ನು ಒಪ್ಪಿಕೊಳ್ಳುವುದು ಬಿಡುವುದು ಬೇರೆ ಪ್ರಶ್ನೆ. ಅವರು ಏನೇಳಿದ್ದಾರೆ ಅದನ್ನು ಮೊದಲು ಆಚರಣೆಗೆ ತರಲು ಪ್ರಯತ್ನಿಸಬೇಕು. ಅದು ದೇಸಿ ಪದ್ಧತಿಯೇ ಇರಬಹುದು. ಅದನ್ನು ಪರೀಕ್ಷಾರ್ಥವಾಗಿಯಾದರೂ ಅನುಸರಿಸಬೇಕಾಗಿದೆ. ಆ ಹಿನ್ನಲೆಯಲ್ಲಿ ನಾವು ಉಪೇಕ್ಷಿತ ಹಸ್ತಪ್ರತಿಗಳಲ್ಲಿರುವ ಮಾಹಿತಿ ಸಂಪತ್ತನ್ನು ಒಂದು ರೀತಿ ಜನತೆಯ ಕಲ್ಯಾಣದ ಹಿನ್ನಲೆಯಲ್ಲಿ ಬಳಸಿಕೊಳ್ಳುವತ್ತ ಗಮನಹರಿಸಬೇಕಾಗಿದೆ. ನಮ್ಮ ದೇಸಿ ಜ್ಞಾನ ಪರಂಪರೆಯನ್ನು ಮರು ಶೋಧಿಸಿ ಆ ಮೂಲಕ ನಮ್ಮ ಸಂಸ್ಕೃತಿಯ ಅಸ್ತಿತ್ವವನ್ನು ಸದೃಢಪಡಿಸದಬೇಕಾಗಿದೆ. ಹಸ್ತಪ್ರತಿಗಳಲ್ಲಿಯ ಮಾಹಿತಿ ಸಂಪತ್ತನ್ನು ಸಮಕಾಲೀನ ಮೌಲ್ಯಗಳೊಂದಿಗೆ ಸಮೀಕರಿಸುವುದು, ಪ್ರಾಚೀನ ನಂಬಿಕೆ, ವಿಚಾರ, ಮೌಲ್ಯಗಳನ್ನು ಸಂವಾದಕ್ಕೆ ಪ್ರೇರೇಪಿಸುವುದು, ಆಯಾ ಜ್ಞಾನಶಾಸ್ತ್ರಗಳ ಪಾರಂಪರಿಕ ಹಾಗೂ ಸಮಕಾಲೀನ ಕ್ಷೇತ್ರಗಳ ಮೌಲ್ಯ ವಿವೇಚನೆ ಮಾಡುವುದು, ಹಸ್ತಪ್ರತಿ ಸಂಪತ್ತನ್ನು ಇಂದಿನ ಬದುಕಿಗೆ ಉಪಯೋಗವಾಗುವ ರೀತಿಯಲ್ಲಿ ಅನ್ವಯಿಸುವುದು. ಆಧುನಿಕ ವೈಜ್ಞಾನಿಕ–ವೈಚಾರಿಕ ಚಿಂತನೆಗಳ ನೆಲೆಯಲ್ಲಿ ಪಾರಂಪರಿಕ ಮೌಲ್ಯಗಳನ್ನು ಅದ್ದಿ ತೆಗೆದು ಅವುಗಳ ಸಾರ್ವತ್ರಿಕ ಮಹತ್ವಗಳನ್ನು ದಾಖಲಿಸುವುದರ ಮೂಲಕ ಅವುಗಳ ಪರಿಚಯವಿಲ್ಲದ ಆಧುನಿಕ ಸಮಾಜಕ್ಕೆ ಹಸ್ತಪ್ರತಿಗಳ ಮಹತ್ವದ ಬಗೆಗೆ ಅರಿವು ಮೂಡಿಸುವತ್ತ ಸಂಶೋಧನೆಯನ್ನು ಕೇಂದ್ರೀಕರಿಸಬೇಕಾಗಿದೆ. ಹಸ್ತಪ್ರತಿಗಳಲ್ಲಿ ಅಡಗಿರುವ ಮಾಹಿತಿ ಕಣಜವನ್ನು ಹಾಗೂ ಸಾಂಸ್ಕೃತಿಕ ಸಂಪತ್ತನ್ನು ವಿವಿಧ ಮಗ್ಗುಲಗಳಿಂದ ಅಧ್ಯಯನ ಮಾಡಿ ಅವುಗಳಖ ಶಾಸ್ತ್ರೀಯ ಜ್ಞಾನಕ್ಷೇತ್ರದ ಮಹತ್ವವನ್ನು ಆಧುನಿಕ ಜಗತ್ತಿಗೆ ಪರಿಚಯಿಸುವ ಕೆಲಸವನ್ನು ಸಂಶೋಧನೆಯು ಮಾಡಬೇಕಾಗಿದೆ.

ಆಧುನಿಕ ಪೂರ್ವದಲ್ಲಿ ಹಸ್ತಪ್ರತಿ ಲಿಪೀಕರಣ ಕಾರ್ಯವು ಸ್ತ್ರೀಯರ ಶಿಕ್ಷಣದ ಹಿನ್ನಲೆಯಲ್ಲಿಯೂ ನಡೆದಿರುವ ಈ ವಿವರಗಳು ಇಲ್ಲಿಯ ಹಸ್ತಪ್ರತಿಗಳ ಪುಷ್ಪಿಕೆಯಲ್ಲಿ ದೊರೆಯುತ್ತಿದ್ದು ಸಾಂಸ್ಕೃತಿಕ ದೃಷ್ಟಿಯಿಂದ ಮಹತ್ವವೆನಿಸಿದೆ. ಲಿಪೀಕರಣ ಕ್ರಿಯೆಯಲ್ಲಿ ಗಮನಿಸತಕ್ಕ ಸಂಗತಿ ಹಸ್ತಪ್ರತಿಗಳು ಆದಿ ಅಂತ್ಯದಲ್ಲಿನ ಅವರ ಪ್ರಶಸ್ತಿ ವಾಕ್ಯಗಳಿಂದ ಆ ಕಾಲದ ಸ್ತ್ರೀಯರ ಶಿಕ್ಷಣದ ಬಗೆಗೆ ಮಾಹಿತಿ ವ್ಯಕ್ತವಾಗುತ್ತದೆ. 'ಕೆಸ್ತೂರು ಉಪಾಧ್ಯಾಯರ ಮಗ ರಂಗಪ್ಪ ಬರೆದು ಕೊಟ್ಟಿದು ತಳಕಾಡು ನಾಯಿಕಶ್ಯಾನಿ ಕೆಂಪಿ ಮಗಳು ನಂಜಿಗೆ' ಎಂಬ ಹಸ್ತಪ್ರತಿಯ ಪುಷ್ಪಿಕೆಯಲ್ಲಿಯ ಉಲ್ಲೇಖವು 'ಗಣಿಕೆ ಕುಲದಲ್ಲಿ ಹುಟ್ಟಿದ ನಾಯಿಕ ಶ್ಯಾನಿ ಸ್ತ್ರೀಯೊಬ್ಬಳು ತನ್ನ ಮಗಳು ನಂಜಿಗೆ ಭಾಮಿನಿ ಷಟ್ಪದಿ ರೂಪದ ಐರಾವತ ಕೃತಿಯನ್ನು ಪ್ರತಿ ಮಾಡಿಸಿಕೊಟ್ಟಿರುವುದು. ಆ ಕಾಲದ ಒಂದು ಸಾಂಸ್ಕೃತಿಕ ದಾಖಲೆಯೇ ಸರಿ. ನಂಜಿಯಂತಹ ದೇವದಾಸಿ ಕುಲದಸ್ತ್ರೀಯು ಓದು ಬರೆಹದ ಅವಕಾಶ ಪಡೆದಿದ್ದು

ಮಹತ್ತರವಾದ ಸಂಗತಿಯಾಗಿದೆ. ಆಯಾ ಕಾಲಘಟ್ಟದ ಹಿನ್ನಲೆಯಲ್ಲಿ ಹಸ್ತಪ್ರತಿಗಳಲ್ಲಿ ಸಿಗುವಂತಹ ಇಂಥ ಮಾಹಿತಿಯನ್ನು ನಾವು ಹೆಕ್ಕಿ ತೆಗೆದು ವಿವಿಧ ದೃಷ್ಟಿಕೋನಗಳಿಂದ ಅಧ್ಯಯನ ಮಾಡಬೇಕಾಗಿದೆ.'

ಕನ್ನಡ ಸಂಶೋಧನೆಯಲ್ಲಿ ಸಾಂಸ್ಕೃತಿಕ ಅಧ್ಯಯನದ ಕ್ರಮಪದ್ಧತಿಯಲ್ಲಿ ಇಲ್ಲಿಯವರೆಗೂ ಬಹುಪಾಲು ಆಕರ ಸಾಮಗ್ರಿಯನ್ನು ವಿಶ್ಲೇಷಣಾತ್ಮಕವಾಗಿ ಅಭ್ಯಸಿಸಿ ಒಂದು ವಿಷಯದ ಅಥವಾ ಸಮಗ್ರ ಬದುಕಿನ ರೂಪನಿಷ್ಠ ಶೋಧವನ್ನು ಮಾತ್ರ ನಡೆಸಲಾಗಿದೆ. ಅಂದರೆ ಘಟನಾ ಪ್ರಧಾನ ಮತ್ತು ದಾಖಲೆ ಪ್ರಧಾನ ಸಂಶೋಧನೆಯನ್ನು ಮಾತ್ರ ಕೈಗೊಳ್ಳಲಾಗಿದೆ. ಅವುಗಳನ್ನು ಇನ್ನು ವ್ಯಾಪಕವಾಗಿ ಅಂದರೆ ವ್ಯಾಖ್ಯಾನಾತ್ಮಕವಾಗಿ ಅಧ್ಯಯನ ಮಾಡಿ ಬದುಕಿನ ಗುಣನಿಷ್ಠಶೋಧವಾಗಿ ಮಾಡಬೇಕಾಗಿದೆ ಎಂಬ ನಿಲುವು ಇತ್ತೀಚಿನ ಕೆಲವು ಸಂಶೋಧಕರಲ್ಲಿ ವ್ಯಕ್ತವಾಗಿದೆ.

ವೀರಜೀವನ ಹಾಗೂ ಆತ್ಮಬಲಿ ಕುರಿತ ಸಾಂಸ್ಕೃತಿಕ ಅಧ್ಯಯನದಲ್ಲಿ ಶಾಸನಗಳು ಹಾಗೂ ಇನ್ನಿತರ ಅನುಷಂಗಿಕ ಆಕರಗಳು ನೀಡುವ ಮಾಹಿತಿಗಳು ಪ್ರಾಚೀನ ಕಾಲದಲ್ಲಿ ಸತಿಪದ್ಧತಿ, ವೀರಮರಣ, ಪ್ರಕಾರಗಳು ಪ್ರಚಲಿವಿದ್ದವು ಎಂಬುದನ್ನು ತೋರಿಸಿಕೊಟ್ಟಿವೆ. ಜೊತೆಗೆ ಅವುಗಳ ಆಚರಣೆಯ ವಿಧಾನ ಐತಿಹಾಸಿಕ ಬೆಳವಣಿಗೆ, ಪ್ರಾದೇಶಿಕ ಪ್ರಸಾರಗಳನ್ನು ಗ್ರಹಿಸುವ ಅಧ್ಯಯನವು ನಡೆದಿದೆ. ಆದರೆ ಇನ್ನೊಂದು ನಿಟ್ಟಿನಿಂದಲೂ ಇವುಗಳನ್ನು ಅಭ್ಯಸಿಸಬೇಕಾಗಿದೆ. ಈ ಪದ್ಧತಿಗಳು ಅಸ್ತಿತ್ವಕ್ಕೆ ಬರಲು ಇದ್ದ ಒತ್ತಡಗಳು, ಜನರು ಅವುಗಳಿಗೆ ತೋರಿಸುತ್ತಲಿದ್ದ ನಿಜವಾದ ಪ್ರತಿಕ್ರಿಯೆಗಳು, ಅವುಗಳ ಒಳಿತು-ಕೆಡುಕುಗಳು ಇತ್ಯಾದಿ ಅಂಶಗಳನ್ನು ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸಬೇಕಾಗುತ್ತದೆ. ಆತ್ಮಬಲಿಯ ಕುರಿತಾದ ಶಾಸನಗಳು ಹಾಗೂ ಶಿಲ್ಪಗಳಲ್ಲಿಯ ವಿವರಗಳು ಆತ್ಮಬಲಿಯ ಬಗೆಗೆ ಗೌರವ ಮೂಡಿಸುತ್ತವೆಯೇ ಹೊರತು ಅವುಗಳ ಹಿಂದೆ ಇದ್ದ ಒತ್ತಡಗಳೇನು ಎಂಬುದನ್ನು ಗ್ರಹಿಸಬೇಕಾಗಿದೆ ರಾಜತ್ವವು ಜನಸಾಮಾನ್ಯರಿಗೆ ವೀರಮರಣದ ಸ್ವರ್ಗ ಪ್ರಾಪ್ತಿ ಎನ್ನುವ ನಂಬಿಕೆಯನ್ನು ಹೇಳುವುದರ ಮೂಲಕ ರಾಜನಿಗೆ ಮನಪೂರ್ವಕವಾಗಿ ದುಡಿಯುವ ತ್ಯಾಗ ಮಾಡುವ ರೀತಿಯಲ್ಲಿ ಯಾವ ರೀತಿ ಪ್ರಚೋದಿಸಲಾಗಿತ್ತು ಎಂಬ ಅಂಶಗಳ ಕಡೆಗೂ ಸಂಶೋಧನವನ್ನು ಮಾಡಬೇಕಾಗಿದೆ. ರಾಜತ್ವದ ಮೌಲ್ಯಗಳನ್ನೇ ಸಾಂಸ್ಕೃತಿಕ ಮೌಲ್ಯಗಳೆಂದು ಭಾವಿಸುವದು ಎಷ್ಟರಮಟ್ಟಿಗೆ ಸರಿ? ಸಂಸ್ಕೃತಿಯನ್ನು ಚರಿತ್ರೆಯ ಒಂದು ಭಾಗವೆಂದು ಪರಿಗಣಿಸಿದರೆ ಅದು ಕೇವಲ ರಾಜರ ಚರಿತ್ರೆಯಷ್ಟೇ ಅಲ್ಲವೇ. ಇದರಿಂದಾಗಿ ಸಂಸ್ಕೃತಿಯ ಪರಿಪೂರ್ಣ ಅಧ್ಯಯನ ಆಯಿತೇ? ಎಂಬ ಪ್ರಶ್ನೆಯು ಇಂದಿನ ಸಂಶೋಧನೆಯಲ್ಲಿ ಪ್ರಮುಖ ಪಾತ್ರವಹಿಸಬೇಕಾಗಿದೆ. ಜನಸಾಮಾನ್ಯರ ಸಂಸ್ಕೃತಿ ನಿಜವಾದ ಸಂಸ್ಕೃತಿಯಾಗುವುದರಿಂದ ಶಾಸನಗಳತಂಹ ಆಕರಗಳನ್ನು ಕುರಿತ ಸಾಂಸ್ಕೃತಿಕ ಅಧ್ಯಯನದಲ್ಲಿ ಮಾಹಿತಿಗಳನ್ನು ಯಜಮಾನ್ಯ ದೃಷ್ಟಿಯಿಂದ ಪರಿಗಣಿಸದೆ ಜನಪರ ದೃಷ್ಟಿಯಿಂದ ಪರಿಗಣಿಸದೆ ಜನಪರ ದೃಷ್ಟಿಯಿಂದ ಗ್ರಹಿಸುವ, ಆ ಘಟನೆಗಳ ಹಿಂದೆ ಅಡಗಿರುವ ನೋವಿನ ನೆಲೆಗಳನ್ನು ಅರಸುವ ಇತ್ಯಾದಿ ಹೊಸ ದೃಷ್ಟಿಕೋನಗಳತ್ತ ಸಂಶೋಧನೆಯು ಕೇಂದ್ರೀಕರಿಸಬೇಕಾಗಿದೆ ಸಾಂಸ್ಕೃತಿಕ ಸಂಶೋಧನೆಗೆ

ಅಧಿಕೃತವಾದಂತಹ ಶಾಸನಗಳಂತಹ ಆಕರಗಳನ್ನು ಲಭ್ಯವಿರುವ ವೈಜ್ಞಾನಿಕ ವಿಧಾನಗಳನ್ನು ಅಳವಡಿಸಿಕೊಳ್ಳುವುದರ ಮೂಲಕ, ದ್ರಾವಿಡ ನೆಲೆಯ ದೇಸಿವಾದದ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ಇತಿಹಾಸವನ್ನು ಪುನರ್ ರಚಿಸುವ ಪ್ರಯತ್ನಗಳು ನಡೆಯಬೇಕಾಗಿದೆ.

ಕನ್ನಡ ಸಂಶೋಧನಾ ಕ್ಷೇತ್ರದಲ್ಲಿ ವಿವಿಧ ನೆಲೆಗಟ್ಟುಗಳಲ್ಲಿ ಸಾಕಷ್ಟು ಕೆಲಸ ನಡೆದಿದ್ದರೂ ಇನ್ನೂ ಆಗಬೇಕಾದ ಕೆಲಸ ಬಹಳಷ್ಟಿದೆ. ಕನ್ನಡ ನಾಡಿಗೆ ಸಂಬಂಧಿಸಿದ ಆಕರಗಳ ರಕ್ಷಣೆ, ಸಂಗ್ರಹ, ಪರಿಶೀಲನೆ, ಪ್ರಕಟನೆಗಳಿಗೆ ಹೆಚ್ಚಿನ ಆದ್ಯತೆ ಕೊಡಬೇಕಾಗಿದೆ. ಸಮಗ್ರ ಆಕರಶೋಧ ಹಾಗೂ ಸಂಗ್ರಹ ಕಾರ್ಯ ನಡೆಯಬೇಕಾಗಿದೆ. ಅಲಕ್ಷಿತ ವಿಷಯಗಳಲ್ಲಿಯೂ ಸಂಶೋಧನೆ ಕೈಗೊಳ್ಳಬೇಕಾಗಿದೆ. ಸಂಶೋಧನೆಯ ಫಲಿತಾಂಶಗಳು ವಿದ್ವತ್ವಲಯಕ್ಕೆ ಮಾತ್ರ ಸೀಮಿತವಾಗದೆ ಜನಮುಖಿಯಾಗಬೇಕಾಗಿದೆ. ಸಂಶೋಧನೆಯ ಫಲಿತಗಳು ಸಾಹಿತ್ಯಾಸಕ್ತ ಜನತೆಗೆ ತಲುಪದಿದ್ದರೆ ಸಂಶೋಧನೆಗಳಿಗೆ ಮಹತ್ವವೇ ಇಲ್ಲವಾಗುತ್ತದೆ. ಸಂಶೋಧನೆಗಳು ಕನ್ನಡದಲ್ಲಿ ಅಧಿಕವಾಗಿ ನಡೆದಿದ್ದರೂ ಕನ್ನಡ ಸಾಹಿತ್ಯದಲ್ಲಿ ಇನ್ನೂ ಸಮಸ್ಯೆಗಳು ಸಮಸ್ಯೆಗಳಾಗಿಯೇ ಉಳಿದಿವೆ. ಪ್ರಾಚೀನ ಕೃತಿಗಳು ಕೆಲವು ಇನ್ನೂ ಲಭ್ಯವಿಲ್ಲ. ಹರಿಹರನ ಬಸವರಾಜದೇವರ ರಗಳೆಯಂತಹ ಮಹತ್ವಪೂರ್ಣ ಕೃತಿ ಪೂರ್ಣ ಪ್ರಮಾಣದಲ್ಲಿ ದೊರೆತಿಲ್ಲ. ವಚನ ಹಾಗೂ ದಾಸಸಾಹಿತ್ಯ ರಾಶಿಯಲ್ಲಿ ಬಹಳಷ್ಟು ಹಸ್ತಪ್ರತಿಗಳಲ್ಲಿಯೇ ಅಡಗಿ ಕುಳಿತಿದೆ. ಜಾನಪದದ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಸಮಶೋಧನೆ ಆಗಬೇಕಾಗಿದೆ.

ಅಲಕ್ಷಿತ ಸಾಹಿತ್ಯ ಕೃತಿಗಳು, ಗೀತ ಸಾಹಿತ್ಯ ಸಂಪುಟಗಳು, ಟೀಕೆ–ವ್ಯಾಖ್ಯಾನ ಸಾಹಿತ್ಯ ಸಂಪುಟಗಳು, ಸಾಹಿತ್ಯೇತರ ಶಾಸ್ತ್ರ ಸಂಪುಟಗಳು ಇತ್ಯಾದಿ ವರ್ಗೀಕರಣದಡಿಯಲ್ಲಿ ಸಾಹಿತ್ಯ ಪ್ರಕಟವಾಗಬೇಕಾಗಿದೆ. ಕರ್ನಾಟಕದ ಜನಾಂಗಗಳ ಕೋಶ, ಉಪಭಾಷಾ ಪರಿವೀಕ್ಷಣೇ, ಕ್ಷೇತ್ರ ಕಾರ್ಯ ಇತ್ಯಾದಿ ಪ್ರಾಥಮಿಕ ನೆಲೆಯಲ್ಲಿ ಹೆಚ್ಚಿನ ಕೆಲಸ ಆಗಬೇಕಾಗಿದೆ. ಈ ನಿಟ್ಟಿನಲ್ಲಿ ಹಂಪೆಯ ಕನ್ನಡ ವಿಶ್ವವಿದ್ಯಾಲಯವು ಕಾರ್ಯೋನ್ಮುಖವಾಗಿರುವ ಆಧಾದಾಯಕ ಬೆಳವಣಿಗೆಯಾಗಿದೆ. ಕನ್ನಡ ಕವಿಗಳನ್ನು ಪ್ರಸ್ತಾಪಿಸಿರುವ ಶಾಸನಗಳ ಅನ್ವೇಷಣೆ ಆಗಬೇಕು. ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಕನ್ನಡ ಕವಿಗಳ ಸಾಹಿತ್ಯ ಕೃತಿಗಳನ್ನು ಶೋಧಿಸಬೇಕಾಗಿದೆ. ವಾಚಿಕ ಗಾಯಕರನ್ನು ಸಂದರ್ಶಿಸಿ ಅವರಿಂದ ಹಾಡುಗಳನ್ನು ಸಂಗ್ರಹಿಸುವ ಕೆಲಸ ಜರೂರಾಗಿ ಆಗಬೇಕಾಗುತ್ತದೆ ಇದರಿಂದ ಹೊಸ ವಚನ ಕೀರ್ತನೆಗಳು ಲಭ್ಯವಾಗುವುದರ ಜೊತೆಗೆ ಪಾಠಾಂತರವಿರುವ ಕೀರ್ತನೆ, ವಚನಗಳು ಲಭ್ಯವಾಗಬಲ್ಲವು. ಸಮಗ್ರ ತತ್ವಪದಗಳನ್ನು ಹಾಡುಗಾರರ ಮೂಲಕ ಸಂಗ್ರಹಿಸಬೇಕಾಗಿದೆ. ಅದೇ ರೀತಿ ನಮ್ಮ ಸಂಸ್ಕೃತಿಯ ಪರಂಪರೆಯ ಪ್ರಸಾರಕರಾದ ನೀಲಗಾರರೋ, ಚೌಡಿಕೆಯುವರೋ, ಗೊರವರೋ, ದೊಂಬಿಸಾಸರೋ ಇತ್ಯಾದಿಯವರು ತಮ್ಮ ಸಮುದಾಯಕ್ಕನುಗುಣವಾಗಿ ತಮ್ಮ ಸಂಸ್ಕೃತಿಯನ್ನು ಪ್ರಸಾರ ಮಾಡುತ್ತಲೇ ತಮ್ಮ ಜೀವಿತದ ಬಹುಭಾಗವನ್ನು ದೇಶೀಪರಂಪರೆಗಾಗಿ ಮೀಸಲಿಟ್ಟವರು. ಆದರೆ ಜನಪದ ಪರಂಪರೆಗಳ ವಾರಸುದಾರರಂತೆ ಇರುವ ಸಂಸ್ಕೃತಿಯ ನಿರ್ವಹಣಕಾರರಾದ ಇವರನ್ನು ನಮ್ಮ ಸಂಶೋಧನೆಯ ಅಂತರಾಳಕ್ಕೆ ತೆಗೆದುಕೊಳ್ಳದಿದ್ದರೆ

ಇವರನ್ನು ನಮ್ಮ ಸಂಶೋಧನೆಯ ಅಂತರಾಳಕ್ಕೆ ತೆಗೆದುಕೊಳ್ಳದಿದ್ದರೆ ನಮ್ಮ ಸಂಶೋಧನೆಯು ಪರಿಪೂರ್ಣ ಎನ್ನಿಸುವುದಿಲ್ಲ. ಇಂತಹವರನ್ನು ಸಂಶೋಧನೆಗೆ ಆಯ್ದುಕೊಳ್ಳುವುದು ಕೀಳು ಎಂಬ ಭಾವನೆ ಕೆಲವರಿಗಿರುವುದು ಸಂಶೋಧನಾ ಕ್ಷೇತ್ರದ ದೌರ್ಭಾಗ್ಯವೇ ಸರಿ.

ಕನ್ನಡ ಸಂಶೋಧನೆಯಲ್ಲಿ ಈಗಿರುವ ವಿಧಾನಗಳ ಜೊತೆಗೆ ಹೊಸ ದೃಷ್ಟಿಕೋನ ವಿಧಾನಗಳನ್ನು ಅಳವಡಿಸಿಕೊಳ್ಳಬೇಕಾಗಿದೆ. ಸಂಶೋಧನೆಯು ಘಟನೆ ಮತ್ತು ಸಂಸ್ಕೃತಿಗಳ ರೂಪನಿಷ್ಠ ಸಂಶೋಧನೆಯಿಂದ ಗುಣನಿಷ್ಠ ಸಂಶೋಧನೆಗೆ ಹೊರಳಿದ ಹಾಗೆ ವ್ಯಾಖ್ಯಾನಮುಖಿಯತ್ತ ಸಾಗಬೇಕೆಂಬುದು ಇತ್ತೀಚಿನ ಸಂಶೋಧಕರ ಆಶಯವಾಗಿದೆ. ಸಂಶೋಧನೆಯಲ್ಲಿ ವಿಷಯದ ರೂಪ ಶೋಧಕ್ಕಿಂತ ಅರ್ಥಶೋಧಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕಾಗಿದೆ. ಸಂಸ್ಕೃತಿಗಳ ಹಿಂದಿರುವ ಕಾರಣಗಳನ್ನು ಅವುಗಳ ಪ್ರಭಾವಗಳನ್ನು ಕಂಡುಹಿಡಿಯಬೇಕಾಗಿದೆ. ಜನಪರ ಧೋರಣೆಗಳನ್ನು ಅನುಸರಿಸಿರುವುದರ ಮೂಲಕ ಇಡೀ ಸಂಸ್ಕೃತಿಯ ಮನಸ್ಸನ್ನೇ ಚಿತ್ರಿಸಬಹುದಾಗಿದೆ. ಶಂಬಾಜೋಶಿಯವರ ತರ ಸಂಶೋಧನೆಯಲ್ಲಿ ಜನಾಂಗ, ಐತಿಹ್ಯ, ಪುರಾಣ, ಭಾಷಿಕ, ಸಂಕೇತಗಳನ್ನು ಆಕರ ಸಾಮಗ್ರಿಯಾಗಿ ಬಳಸಿಕೊಂಡು ಸಾಮಾಜಿಕ ಸಂಸ್ಕೃತಿ ಅದರ ಆಚೆಗಿನ ಮಾನವ ಸಂಸ್ಕೃತಿಗಳ ಶೋಧಗಳನ್ನು ಕುರಿತು ಅನ್ವೇಷಿಸಬೇಕಾಗಿದೆ. ಆಕರಗಳು ದೊರೆಯುತ್ತ ಹೋದಂತೆ ಹಳೆಯ ಶೋಧನೆಗಳನ್ನು ಮರು ವ್ಯಾಖ್ಯಾನಕ್ಕೆ ಒಳಪಡಿಸಬೇಕಾಗಿದೆ. ಸಂಶೋಧನೆಯನ್ನು ಕೈಗೊಳ್ಳುವಲ್ಲಿ ಅತ್ಯಾಧುನಿಕ ಪರಿಕರಗಳನ್ನು ತಕ್ಕಂತೆ ಅನುಸರಿಸಬೇಕಾಗಿದೆ. ಒಟ್ಟಾರೆ ಕನ್ನಡ ಪ್ರಜ್ಞೆ ಜಾಗೃತವಾಗುತ್ತಲಿರುವ ಇಂದಿನ ಸಂದರ್ಭದಲ್ಲಿ ನಮ್ಮ ಪರಂಪರೆಯನ್ನು ಕುರಿತ ಸಂಶೋಧನೆ ಎಲ್ಲಾ ನೆಲೆಗಟ್ಟುಗಳಲ್ಲಿಯೂ ನಡೆಯಬೇಕಾಗಿದೆ.

"ಸಂಶೋಧನೆಗಾಗಿ ಸಂಶೋಧನೆಯಾಗಿರಬಾರದು ಸಾಮಾಜಿಕ ಪರಿವರ್ತನೆಗಾಗಿ ಸಂಶೋಧನೆ" ಎಂಬ ನಿಲುವಿನಿಂದ ಈ ಕ್ಷೇತ್ರವನ್ನು ಸತ್ವಶಾಲಿಯಾಗುವಂತೆ ನೋಡಿಕೊಳ್ಳಬೇಕಾಗಿದೆ. ಕನ್ನಡ ಸಂಶೋಧನೆಗೆ ಆಕರ ಸಂಶೋಧನೆ, ವಿಶ್ಲೇಷಣಾತ್ಮಕ ಸಂಶೋಧನೆ ಮತ್ತು ವ್ಯಾಖ್ಯಾನಾತ್ಮಕ ಸಂಶೋಧನೆ, ದಾಖಲೆ ಆಧಾರಿತ ಸಂಶೋಧನೆ, ಸಂಖ್ಯಾನಿಷ್ಠ ಸಂಶೋಧನೆ, ಆಕರಗಳ ರೂಪ ನಿಷ್ಠ, ಗುಣನಿಷ್ಠ, ಸಂಶೋಧನೆ ಇತ್ಯಾದಿ ವೈವಿಧ್ಯಗಳು ಇದ್ದು ಅವುಗಳ ಸೂಕ್ಷ್ಮ ಸ್ತರದ ಅಧ್ಯಯನವನ್ನು ಇಂದು ಹೆಚ್ಚಿನ ಮಟ್ಟದಲ್ಲಿ ಕೈಗೊಳ್ಳಬೇಕಾಗಿದೆ. ಸಂಶೋಧನೆಯು ಸತ್ಯವನ್ನು ಹುಡುಕಲು ಮಾಡಿಕೊಂಡ ಪ್ರತಿಜ್ಞೆ ಎಂಬ ನಿಲುವನ್ನು, ಹೊಂದಿ ಅದೇ ದಾರಿಯಲ್ಲಿ ನಡೆದು, ತಮ್ಮ ಸಂಶೋಧನೆಯಲ್ಲಿ ಕಂಡುಕೊಂಡ ಸತ್ಯವನ್ನು ದಾಖಲಿಸುವುದರಲ್ಲಿ ಹಿಂದು ಮುಂದು ನೋಡದೆ ಧರ್ಮ, ಜಾತಿ ಮತ್ತು ಪ್ರಾದೇಶಿಕತೆಗಳನ್ನು ಮೀರಿ ಸತ್ಯದ ನೆಲೆಗಟ್ಟಿನಲ್ಲಿರುವಂತಹ ಸಂಶೋಧನೆಗಳು ಇಂದು ಹೆಚ್ಚು ಅಪೇಕ್ಷಣೀಯವಾಗಿದೆ.

■

ಪ್ರಾಚೀನ ಗದ್ಯಕೃತಿಗಳು
ವಡ್ಡಾರಾಧನೆ ಮತ್ತು ಚಾವುಂಡರಾಯ ಪುರಾಣ

◆

ಡಾ. ಎಸ್.ಹೆಚ್. ಭುವನೇಶ್ವರ

ಕನ್ನಡ ಸಾಹಿತ್ಯ ಅತ್ಯಂತ ಪ್ರಾಚೀನವಾದುದು. ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿರುವ ಈ ಸಾಹಿತ್ಯದಲ್ಲಿ ಪದ್ಯ ಪ್ರಕಾರದಷ್ಟು ಗದ್ಯ ಪ್ರಕಾರ ಬೆಳೆಯದಿದ್ದರೂ ಗದ್ಯವೂ ಒಂದು ಪ್ರಕಾರವಾಗಿ ಬೆಳೆದಿದೆ. ಪ್ರಪಂಚದ ಎಲ್ಲಾ ಸಾಹಿತ್ಯವೂ ಆರಂಭವಾಗಿರುವುದು ಪದ್ಯ ಪ್ರಕಾರದಲ್ಲಿಯೇ. ಆದರೆ ಕನ್ನಡ ಸಾಹಿತ್ಯ ನಮಗೆ ದೊರೆತಿರುವ ಮೊದಲ ಶಾಸನ ಹಲ್ಮಿಡಿ ಶಾಸನವಾದ್ದರಿಂದ, ಗದ್ಯದಿಂದ ಪ್ರಾರಂಭವಾಗಿದೆ. ಪ್ರಾಚೀನ ಕಾವ್ಯ ಮೀಮಾಂಸಕರು ಶ್ರವ್ಯಕಾವ್ಯಗಳನ್ನು ಗದ್ಯಕಾವ್ಯ ಪದ್ಯಕಾವ್ಯ ಎಂದು ಎರಡು ಭಾಗವಾಗಿ ವಿಂಗಡಿಸಿದ್ದಾರೆ. ಛಂದಸ್ಸು ಇಲ್ಲದ್ದು ಗದ್ಯವೆಂದೂ ಛಂದಸ್ಸು ಉಳ್ಳದ್ದು ಪದ್ಯವೆಂದೂ ಹೇಳುವುದು ರೂಢಿ. ಆದರೆ ಲಯ, ರಸ, ಧ್ವನಿ, ಅಲಂಕಾರಗಳು ಗದ್ಯ ಪದ್ಯಗಳೆರಡರಲ್ಲಿಯೂ ಆವಶ್ಯಕ. ಗದ್ಯ ಆಲೋಚನಾಪರವಾದರೆ, ಪದ್ಯ ಭಾವನಾ ಪ್ರಧಾನ. ಗದ್ಯ ಮಾಡಿದ್ದು, ಪದ್ಯ ಮೂಡಿದ್ದು. ಗದ್ಯದಲ್ಲಿ ಸ್ಪಷ್ಟತೆ, ಸರಳತೆ, ಸುಲಭತೆಗೆ ಪ್ರಾಮುಖ್ಯತೆಯಿದೆ. ಪ್ರಾಚೀನ ಗದ್ಯವನ್ನು ಶಾಸನಗದ್ಯ, ಚಂಪುಗದ್ಯ, ವಚನಗದ್ಯ ಹಾಗೂ ಗದ್ಯ ಗ್ರಂಥಗಳ ಗದ್ಯ ಎಂದು ವಿಂಗಡಿಸಬಹುದು. ಶ್ರೀವಿಜಯ ಕವಿರಾಜಮಾರ್ಗದಲ್ಲಿ ಗದ್ಯ ಲಕ್ಷಣವನ್ನು ಹೀಗೆ ಹೇಳಿದ್ದಾರೆ.

ಪದ ಪಾದವಿಯುತ ನಿಯಮಾ
ಸ್ಪದಮಲ್ಲದಳಂಕೃತಂ ಕ್ರಿಯಾ ಕಾರಕದೊಳ್
ಪುದಿದರ್ಥವ್ಯಕ್ತಿಯನೀ
ವುದು ಗದ್ಯಮನೇಕ ರೂಪಭೇದವಿಯುಕ್ತಂ

ಕವಿರಾಜಮಾರ್ಗಕ್ಕೆ ಮೊದಲು ಯಾವುದೇ ಗದ್ಯಗ್ರಂಥ ದೊರೆತಿಲ್ಲದಿದ್ದರೂ, ಅವರು ಹೇಳಿರುವ ಗದ್ಯಕವಿಗಳ ಪಟ್ಟಿಯನ್ನು ಕಾಣಬಹುದು.

ವಿಮಲೋದಯ ನಾಗಾರ್ಜುನ
ಸಮೇತ ಜಯಬಂಧು ದುರ್ವಿನೀತಾದಿಗಳೀ
ಕ್ರಮದೊಳ್ ನೆಗಟ್ಟೆ ಗದ್ಯಾ
ಶ್ರಮಪದ ಗುರುತಾ ಪ್ರತೀತಿಯಂ ಕೆಯ್ಕೊಂಡರ್

ಎಂದು ಉಲ್ಲೇಖಿಸಿದ್ದಾರೆ. ಆ ಕಾಲಕ್ಕೆ ಕನ್ನಡ ಗದ್ಯ ಪ್ರೌಢವಾಗಿ, ಪಕ್ವವಾಗಿ, ಸಮರ್ಪಕವಾಗಿ ಬೆಳೆದಿತ್ತೆಂಬುದನ್ನು ಸೂಚಿಸುತ್ತದೆ.

ಪ್ರಾಚೀನ ಕವಿಗಳ ಕಾವ್ಯಗಳಲ್ಲಿ ಗದ್ಯ ಬಳಕೆಯಾಗಿದ್ದರೂ ಪೂರ್ಣಗದ್ಯ ಕೃತಿಗಳು ಬಹಳ ಕಡಿಮೆ. ಗದ್ಯವು ಬೆಳೆಯದಿರುವುದಕ್ಕೆ ಅನೇಕ ಕಾರಣಗಳಿವೆ. ರಾಜಾಸ್ಥಾನದಲ್ಲಾಗಲಿ, ಪಂಡಿತಮಂಡಲಿಯಲ್ಲಾಗಲಿ, ಜನಸಾಮಾನ್ಯರಲ್ಲಾಗಲಿ, ಅಷ್ಟಾಗಿ ಘನತೆ ಗೌರವಗಳು ದೊರೆಯುತ್ತಿರಲಿಲ್ಲ ಎಂದು ಊಹಿಸಬಹುದಾಗಿದೆ. ನಮಗೆ ದೊರೆತಿರುವ ಗದ್ಯಗ್ರಂಥಗಳಲ್ಲಿ ಕ್ರಿಶ. ಸುಮಾರು ೯೨೦ರಲ್ಲಿ ಬಂದಿರಬಹುದಾದ ಶಿವಕೋಟ್ಯಾಚಾರ್ಯ ವಿರಚಿತ ವಡ್ಡಾರಾಧನೆಯೇ ಪ್ರಪ್ರಥಮ ಗದ್ಯ ಗ್ರಂಥ. ಇದಕ್ಕಿಂತ ಹಿಂದೆ ಗದ್ಯಶಾಸನಗಳಿದ್ದವು. ಆ ತರುವಾಯ ಕ್ರಿಶ. ೯೭೮ರಲ್ಲಿ ಚಾವುಂಡರಾಯನ 'ಚಾವುಂಡರಾಯ ಪುರಾಣ' ಗಮನಾರ್ಹವಾಗಿದೆ. ಇವು ಪ್ರಾಚೀನ ಗದ್ಯಕೃತಿಗಳಾಗಿರುವಂತೆ ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಅಧ್ಯಯನದ ದೃಷ್ಟಿಯಿಂದಲೂ ಮಹತ್ವದ ಕೃತಿಗಳಾಗಿವೆ. ವಡ್ಡಾರಾಧನೆಯಲ್ಲಿ ಕಥಾಗದ್ಯ ಪ್ರಧಾನ, ಚಾವುಂಡರಾಯ ಪುರಾಣದಲ್ಲಿ ಕಥಾಗದ್ಯ ಮತ್ತು ಶಾಸ್ತ್ರೀಯ ಗದ್ಯಮಿಲನವಾಗಿದೆ. ವಡ್ಡಾರಾಧನೆಗೆ ಮೂಲ ಯಾವುದು ಎಂಬುದು ತಿಳಿಯುವುದಿಲ್ಲ. ಆದರೆ ಪ್ರಾಕೃತದಲ್ಲಿರುವ ಭಗವತಿ ಆರಾಧನೆಯಲ್ಲಿ ಬರುವ ಕೇವಲ ಗಾಹೆಗಳನ್ನು ಕನ್ನಡ ಕಥೆಗಳನ್ನಾಗಿ ವಿಸ್ತರಿಸಿದ್ದಾರೆ. ಎರಡೆರಡು ಸಾಲಿನ ಗಾಹೆಗಳಲ್ಲಿ ಸೂತ್ರಪ್ರಾಯವಾಗಿ ಸಂಗ್ರಹಿಸಿರುವ ೧೯ ಗಾಹೆಗಳನ್ನು ೧೯ ಕಥೆಗಳನ್ನಾಗಿ ವಿಸ್ತರಿಸಿ ಬರೆದಿದ್ದಾರೆ. ಚಾವುಂಡರಾಯ ಪುರಾಣಕ್ಕೆ ಮೂಲ ಮುಖ್ಯ ಆಕರ ಸಂಸ್ಕೃತದಲ್ಲಿರುವ ಜಿನಸೇನ ಗುಣಭದ್ರರ 'ಮಹಾಪುರಾಣ'. ಸಂಸ್ಕೃತ ಶ್ಲೋಕದಲ್ಲಿರುವ ಪುರಾಣವನ್ನು ಚಾವುಂಡರಾಯ ಕನ್ನಡದಲ್ಲಿ ಗದ್ಯವಾಗಿಸಿದ್ದಾರೆ. ಇಲ್ಲಿ ಕಾವ್ಯಗುಣಕ್ಕಿಂತ ಧಾರ್ಮಿಕತೆ ಹೆಚ್ಚಾಗಿದೆ. ಪುರಾಣ ರಚನೆಯಲ್ಲಿ ಕಾವ್ಯವನ್ನಾಗಿಸುವ ಇಲ್ಲವೇ ಸಾಹಿತ್ಯ ಕೃತಿಯನ್ನಾಗಿಸುವ ಪ್ರಯತ್ನಕ್ಕೆ ತೊಡಗಿದ್ದರೆ ಸ್ವಾರಸ್ಯವಾದ ಕೃತಿಯಾಗಬಹುದಿತ್ತೇನೋ. ಆದರೆ ಗದ್ಯವನ್ನಾಗಿಸುವುದರಲ್ಲಿ ದುರ್ಬಲತೆ ಇದ್ದರೂ ಕಥೆ ಕನ್ನಡದಲ್ಲಿ ರಚಿತವಾಗಿರುವುದು ಶ್ರೇಷ್ಠ ಕೃತಿಯಾಗಿದೆ. ಈ ಎರಡೂ ಕೃತಿಗಳಲ್ಲಿಯೂ ಸಮಾನವಾದ ಅಂಶಗಳಿವೆ, ದೇಶಿಯ ಪರಿಕಲ್ಪನೆಯಿದೆ. ಇವೆರಡೂ ಜೈನಧರ್ಮಕ್ಕೆ ಸಂಬಂಧಿಸಿದವು. ಎರಡರಲ್ಲೂ ಧರ್ಮಪ್ರತಿಪಾದನೆಗೆ ಬಳಸಿಕೊಂಡ ಸಮಾನ ಆಶಯಗಳಿವೆ. ಕನ್ನಡ ಪದ್ಯಗಳಿವೆ. ಹಾಗೆಯೇ ಅನ್ಯ ಕೃತಿಗಳಿಂದ ಉದಾಹರಿಸಿದ ಸಂಸ್ಕೃತ ಪದ್ಯ, ಪ್ರಾಕೃತ ಗಾಹೆಗಳೂ ಇವೆ. ಅನೇಕ ಸಮಾನ ಸಂದರ್ಭಗಳೂ, ರೂಪಗಳೂ, ನುಡಿಗಟ್ಟುಗಳೂ ಕಂಡುಬರುತ್ತವೆ.

ಶಿವಕೋಟ್ಯಾಚಾರ್ಯ ಕೃತ ವಡ್ಡಾರಾಧನೆಯು ಕನ್ನಡ ಸಾಹಿತ್ಯದ ಮೊದಲ ಹಳಗನ್ನಡ ಕಥಾಸಂಕಲನ. 'ವಡ್ಡಾರಾಧನೆ' ಎಂಬ ಶಬ್ದದ ಮೂಲ 'ವೃದ್ಧಾರಾಧನೆ' ಅಥವಾ ಬೃಹದಾರಾಧನೆ. ವೃದ್ಧ ಎಂದರೆ ಶ್ರೇಷ್ಠ ಜ್ಞಾನಿ, ಯತಿ, ಮಹಾಪುರುಷ. ಆರಾಧನೆ ಎಂದರೆ ಸೇವೆ. ಪೂಜೆ, ಜೈನ ಸಿದ್ಧಾಂತದ ದೃಷ್ಟಿಯಿಂದ ಸಮ್ಯಕ್‌ಜ್ಞಾನ, ಸಮ್ಯಕ್ ಚಾರಿತ್ರ, ಸಮ್ಯಕ್ ದರ್ಶನ ಹಾಗೂ ಸಮ್ಯಕ್ ತಪಸ್ಸು ಈ ನಾಲ್ಕನ್ನು ಸಾಧಿಸುವುದೇ ಆರಾಧನೆ. ಪ್ರತಿಯೊಂದು ಕಥೆಯ ಪ್ರಾರಂಭದಲ್ಲಿ ಪ್ರಾಕೃತ ನಿಬದ್ಧವಾದ ಒಂದು ಗಾಥೆ ಇರುತ್ತದೆ. ಇದು ಕಥೆಯ ಸಾರಸೂಚಿಯಾಗಿರುತ್ತದೆ. ಇದರಲ್ಲಿ ಪ್ರಾಕೃತ–ಸಂಸ್ಕೃತ–ಕನ್ನಡ ಭಾಷೆಗಳ ಮಿಲನವಿದೆ. ದೇಶಿಯ ಶಬ್ದಗಳ ಬಳಕೆಯಿಂದ ಸೊಗಸಾಗಿದೆ. ನಿರೂಪಣಾ ವಿಧಾನ, ಅಡಕವಾದ ನೀತಿ, ತತ್ವವಿಚಾರ ಬಹಳ ಮುಖ್ಯ. ಕವಿಯೇ ಹೇಳಿರುವಂತೆ ಈ ಕಥಾನಾಯಕರು ನಾಲ್ಕು ಬಗೆಯ ಉಪಸರ್ಗ [ತಪೋವಿಘ್ನ]ಗಳನ್ನು ಸಹಿಸದವರು. ಹಸಿವು, ಬಾಯಾರಿಕೆ ಮೊದಲಾದ ೨೨ ಬಗೆಯ ತೊಂದರೆಗಳನ್ನು ಸೈರಿಸಿ ಪಂಚೇಂದ್ರಿಯಗಳನ್ನು ಹತೋಟಿಯಾಗಿಟ್ಟು ಬಾಹ್ಯವನ್ನು ಆಂತರಿಕ ಪರಿಗ್ರಹಗಳನ್ನು ತ್ಯಜಿಸಿದವರು. ಆರು ವಿಧದ ಬಾಹ್ಯ ತಪಸ್ಸನ್ನು ಆರು ಬಗೆಯ ಅಭ್ಯಂತರ ತಪಸ್ಸನ್ನೂ ಆಚರಿಸಿದವರು. ಇದೇ ತಪಸ್ಸಿನ ಆರಾಧನೆಯಾಗಿದೆ. ವಡ್ಡಾರಾಧನೆಯಲ್ಲಿ ಕವಿಯ ಕಥನಕೌಶಲ ಚನ್ನಾಗಿ ವ್ಯಕ್ತವಾಗಿದೆ. ಸಹಜತೆ, ಸರಳತೆಯಿಂದ ಕೂಡಿದ್ದು ವರ್ಣನೆಗಳು ಹೆಚ್ಚಾಗಿಲ್ಲ. ವಡ್ಡಾರಾಧನೆಯು ಆ ಕಾಲದ ಭಾಷಾ ಸ್ವರೂಪವನ್ನು ತಿಳಿದುಕೊಳ್ಳುವುದಕ್ಕೂ, ಜನಜೀವನವನ್ನು ಅರಿಯುವುದಕ್ಕೂ ವಿಶೇಷವಾದ ಸಹಾಯವನ್ನು ಮಾಡುತ್ತದೆ. ಗ್ರಾಮಸಂರಕ್ಷಣೆ, ನಾಗರಪೂಜೆ, ಕಳ್ಳತನ ಮಾಡುವ ರೀತಿ, ಜನಗಳ ನಂಬಿಕೆ, ಆಚಾರ ವಿಚಾರ, ನಡೆನುಡಿ ಮುಂತಾದವುಗಳನ್ನೆಲ್ಲಾ ತಿಳಿದುಕೊಳ್ಳಬಹುದು. ಕಥೆಗಳು ಜೀವಂತವಾಗಿದ್ದು ತುಂಬಾ ಸ್ವಾರಸ್ಯದಿಂದ ಕೂಡಿವೆ, ಓದುಗರ ಮನವನ್ನು ಸೆಳೆಯುತ್ತವೆ.

ಡಾ. ರಂ.ಶ್ರೀ. ಮುಗಳಿಯವರು "ಕನ್ನಡ ದೇಶಿ ಹಳಗನ್ನಡ ವ್ಯಾಕರಣ ಪ್ರಕ್ರಿಯೆಯಿಂದ ಮಾರ್ಗವಾಗಿ ನಡುನಡುವೆ ಪೂರ್ವದ ಹಳಗನ್ನಡದ ಪ್ರಯೋಗದಿಂದ ಪ್ರಾಚೀನ ಕಳೆಯಿಂದ ಕೂಡಿರುವುದೇ ಈ ಗದ್ಯದ ವೈಶಿಷ್ಟ್ಯ. ಇಲ್ಲಿಯ ಗದ್ಯವು ಶಕ್ತಿಯುತವೂ, ಅರ್ಥವಾಹಿಯೂ ಆಗಿ ತನ್ನ ಬಲವಾದ ಎಳೆತದಿಂದ ಓದುಗನನ್ನು ಮುಂದೆ ಮುಂದೆ ಕರೆದೊಯ್ಯುತ್ತದೆ. ಅಲ್ಲಲ್ಲಿ ಚಿತ್ರಗಳನ್ನು ಮೂಡಿಸುತ್ತದೆ, ಪಾತ್ರಗಳನ್ನು ಅರಳಿಸುತ್ತದೆ. ಧರ್ಮವನ್ನು ಮನದಲ್ಲಿ ಅಚ್ಚೊತ್ತುವಂತೆ ಸಾರುತ್ತದೆ. ಇದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ಚಿರಂತನವಾಗಿ ನೆನೆಯತಕ್ಕ ವೈಶಿಷ್ಟ್ಯಪೂರ್ಣವಾದ ಕೃತಿಯಾಗಿದೆ" ಎಂದಿದ್ದಾರೆ. ವಡ್ಡಾರಾಧನೆಯ ಗದ್ಯ ಶುದ್ಧ ಕನ್ನಡದ ಗದ್ಯ. ಸೊಗಸಾದ ಕನ್ನಡನಾಡಿನ ದೇಸೀಶೈಲಿ. ಇದರ ಗದ್ಯ ಚಂಪೂಕಾವ್ಯಗಳ ಇತರ ಯಾವುದೇ ಕನ್ನಡ ಕಾವ್ಯಗಳ ಗದ್ಯಕ್ಕಿಂತ ಭಿನ್ನವಾದ ಗದ್ಯ, ಅನನ್ಯವಾದ ಗದ್ಯ ಇದು ವಿಶಿಷ್ಟವಾದ, ಅಲ್ಲಲ್ಲಿ ಭಾವಗೀತೆಯ ತೀವ್ರತೆಯಿಂದ ಕೂಡಿದ ಗದ್ಯ ಬರವಣಿಗೆಯಾಗಿದೆ.

೧೯೩೦ರಲ್ಲಿ ಡಿ.ಎಲ್. ನರಸಿಂಹಾಚಾರ್ಯರು ಏನಾದರೂ ಸಂಪಾದಿಸಬೇಕೆಂದು ಹಸ್ತಪ್ರತಿಯನ್ನು ನೋಡುವಾಗ, ಅದರ ಮೇಲೆ "ವಾ.ಷ" ಎಂದು ನಮೂದಾಗಿರುವುದು

ಗಮನಕ್ಕೆ ಬಂದಿತು. ಅದು ವಾರ್ಧಕ ಷಟ್ಪದಿ ಎಂದು ತಿಳಿದು ಓದಲು ತೆರೆದಾಗ, ಅದೊಂದು ಗದ್ಯಗ್ರಂಥವೆಂದು ತಿಳಿದು ತುಂಬಾ ಸಂತೋಷವಾಯಿತು. ಹಳಗನ್ನಡದಲ್ಲಿ ಒಳ್ಳೆಯ ಗದ್ಯರಚಿತವಾಗಿರುವುದೆಂದು ಸಂಪಾದಿಸಿ ಪ್ರಕಟಿಸಿದರು. ಇದರಲ್ಲಿ ರೋಮೀಯ 'ದೀನಾರ' ಗ್ರೀಕಿನ 'ದ್ರಮ್ಮ' ರೀತಿಯ ಶಬ್ದಗಳ ಬಳಕೆಯಿದೆ. ಹಳೆಯ ನುಡಿಗಟ್ಟಿನಲ್ಲಿ ಪ್ರವೀಣನಾಗಿದ್ದ ಅರ್ವಾಚೀನ ಕವಿಯೊಬ್ಬ ಇಂಥ ಪ್ರಯೋಗಗಳನ್ನು ಮಾಡಿದ್ದಾರೆ. ಒನ್, ಒಳ್, ಒರ್ ಪ್ರತ್ಯಯಗಳು ಹಲ್ಮಿಡಿ ಶಾಸನದ ಕಾಲದಿಂದ ಹಿಡಿದು ಕವಿರಾಜಮಾರ್ಗದ ಕಾಲದವರೆಗೆ ಇದ್ದುದು ಕಂಡುಬರುತ್ತದೆ. ಅನ್, ಅಳ್, ಅರ್ ಮುಂತಾದ ಪ್ರತ್ಯಯಗಳು ಪ್ರಯೋಗದಲ್ಲಿದ್ದು ನಂತರ 'ಒ' ಕಾರಾದಿ ಪ್ರತ್ಯಯ ಕಡಿಮೆಯಾಗಿ 'ಅ' ಕಾರಾದಿಯಾಗಿರುವುದು ಕಂಡುಬರುತ್ತದೆ. ಡಾ. ಆ.ನೇ. ಉಪಾಧ್ಯೆಯವರು 'ಪ' ಕಾರಗಳು 'ಹ'ಕಾರವಾಗಿರುವ ವಿಷಯ ಪ್ರಸ್ತಾಪಿದ್ದಾರೆ. ಇದು ಒಂಬತ್ತನೇ ಶತಮಾನದಲ್ಲಿಯೇ ಜನರ ಬಾಯಿಮಾತಿನಲ್ಲಿಯೇ ತಲೆದೋರಿ ಅಲ್ಲಿಂದ ಶಾಸನಗಳಿಗೆ ಪ್ರವೇಶಿಸಿರಬಹುದು ಎಂದಿದ್ದಾರೆ. ವಡ್ಡಾರಾಧನೆಯ ಗದ್ಯಶೈಲಿ ನೋಂಪಿಕಥೆಗಳ ಗದ್ಯಶೈಲಿಗಿಂತ ಹಳೆಯದು. ಈ ನೋಂಪಿ ಕಥೆಗಳನ್ನು ಯಾರು, ಯಾವ ಕಾಲದಲ್ಲಿ ರಚಿಸಿದರೆಂಬುದು ತಿಳಿದಿಲ್ಲ. ಇವುಗಳಲ್ಲಿ ಪ>ಹ ಮಾರ್ಪಾಟು ಹೇರಳವಾಗಿದೆ. ಹಜಿದಲೆ, ಹೊಟ್ಟೆ, ಹೊಜಿಹಲ್ಲು ಇತ್ಯಾದಿ ಉದಾಹರಣೆಗಳು ಸಿಕ್ಕುತ್ತವೆ.

ಹಳಗನ್ನಡಕ್ಕಿಂತಲೂ ಹಳೆಯದಾದ ಎಂದರೆ ಪೂರ್ವದ ಹಳಗನ್ನಡ ಪ್ರಯೋಗಗಳು ಕೆಲವು ವಡ್ಡಾರಾಧನೆಯಲ್ಲಿವೆಯೆಂಬ ವಿಷಯದಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. 'ಒ'ಕಾರಯುಕ್ತ ಆಖ್ಯಾತಪ್ರತ್ಯಯಕ್ಕೆ ಬದಲಾಗಿ 'ಅ'ಕಾರಯುಕ್ತವಾಗಿರುವಂತೆ, 'ಆನ್' ಎಂಬ ದ್ವಿತೀಯ ವಿಭಕ್ತಿ ಬಳಕೆಯಾಗಿದೆ ಉದಾ: "ವಾಯುಭೂತಿಯೆಂಬೊನಾನಾ ಮೋದಿಸಿದೆಂ". 'ಆ' ಎಂಬ ಷಷ್ಠೀ ದೀರ್ಘಕ್ಕೆ ಅಧಮರಾ, ಪುಲ್ಲಮಾನಸರಾ, ದುರ್ಜನರಾ ಎಂಬುದು ಪ್ರಯೋಗವಾಗಿದೆ. 'ಉಳ್' ಎಂಬ ಸಪ್ತಮಿ ವಿಭಕ್ತಿ ಪ್ರತ್ಯಯ ವಡ್ಡಾರಾಧನೆಯಲಿಲ್ಲ. ಎಲ್ಲೆಡೆಗಳಲ್ಲಿಯೂ 'ಒಳ್' ಎಂದೇ ಬಳಕೆಯಾಗಿದೆ. 'ಉಳ್ಳ' ಎಂಬರ್ಥದ 'ಒಡೆಯ' ಎಂಬ ತದ್ಧಿತ ಪ್ರತ್ಯಯವನ್ನು ನಾಗವರ್ಮ ಪ್ರಸ್ತಾಪಿಸಿದ್ದಾನೆ. ಈ ರೀತಿಯ ಪ್ರಯೋಗ ವಡ್ಡಾರಾಧನೆಯಲ್ಲಿರುವಷ್ಟು ಬೇರಾವ ಗ್ರಂಥಗಳಲ್ಲೂ ಇಲ್ಲ. ಒಡೆಯನ್, ಒಡೆಯಳ್, ಒಡೆಯರ್, ಒಡೆಯರು, ಒಡೆತು, ಒಡೆಯವು-ಈ ಎಲ್ಲಾ ರೂಪಗಳು ಈ ಗ್ರಂಥದಲ್ಲಿವೆ. ಪಂಪನ ಗ್ರಂಥಗಳಲ್ಲಿ ಈ ಪ್ರತ್ಯಯದ ಪ್ರಯೋಗ ಕೆಲವು ಮಾತ್ರ ಇವೆ. 'ಬುದ್ಧಿಯೊಡೆಯರ್'. ಇವನಿಗಿಂತ ಹಿಂದಿನ ಕಾಲದ ಗ್ರಂಥಗಳಲ್ಲಾಗಲಿ, ಶಾಸನಗಳಲ್ಲಾಗಲಿ ಈ ಪ್ರತ್ಯಯವಿದ್ದಂತೆ ಕಾಣುವುದಿಲ್ಲ. ಜನರ ಮಾತಿನಲ್ಲಿ ಬಳಕೆಯಲ್ಲಿದ್ದಿರಬಹುದಾದ ಈ ಪ್ರತ್ಯಯವನ್ನು ಶಿವಕೋಟ್ಯಾಚಾರ್ಯ ತೆಗೆದುಕೊಂಡು ಮೊದಲಿಗೆ ತನ್ನ ಗ್ರಂಥದಲ್ಲಿ ಬಳಸಿರಬಹುದು.

"ಉಂ" ಎಂಬ ಸಮುಚ್ಚಯವನ್ನೊಳಗೊಂಡಿರುವ ಕೆಲವು ಪ್ರಯೋಗಗಳು ವಡ್ಡಾರಾಧನೆಯಲ್ಲಿವೆ. ಉದಾ: ಸೂರ್ಯಮಿತ್ರಾಚಾರ್ಯರುಂ ಅಗ್ನಿಭೂತಿ-ರುಕ್ಷಿಯರುಂ ಕಂಡು - 'ಲಡ್ಡುಗೆಗಳ್ ಮಂಡಗೆಗಳುಂ' ಇತ್ಯಾದಿ. ಮುಂದೆ ಪಂಪ, ರನ್ನರಲ್ಲಿಯೂ

ಇರುವ ಪ್ರಯೋಗಗಳನ್ನು ಕಾಣಬಹುದಾಗಿದೆ. ಈ ಪದಸಮುಚ್ಚಯಗಳನ್ನು ಕವಿರಾಜಮಾರ್ಗಕಾರ ದೋಷವೆಂದು ಪರಿಗಣಿಸಿದರೆ, ಶಬ್ದಮಣಿ ದರ್ಪಣಕಾರ ಕೇಶಿರಾಜ ಸಮುಚ್ಚಯ ಪ್ರತ್ಯಯ ಇಲ್ಲದಿರುವ ಎಡೆಯಲ್ಲಿ ಅಧ್ಯಾಹಾರವೆಂದು ಹೇಳಿದ್ದಾನೆ. "ಸಾರಮರಧ್ಯಾರೋಪಂ...ಪೇಱ್ವುದಾ ಸಮುಚ್ಚಯದುಮುಗಂ" ಅಯುಂ, ಸಿರಿತಾಯುಂ, ತಂದೆಕಣ್ಣುಂ ಗತಿಯೆನಿಸಿದಪಂ ಸಿಂಹಸೇನ ಕ್ಷಿತೀಶಂ" ಎಂದಿದ್ದಾರೆ. ಇದೇ ಸಮುಚ್ಚಯದ ಪ್ರತ್ಯಯವನ್ನು ಬೇರೊಂದು ರೀತಿಯಲ್ಲಿ ಪ್ರಯೋಗಿಸಿರುವುದು ವಡ್ಡಾರಾಧನೆಯಲ್ಲಿದೆ. ಅದು ಆ ಗ್ರಂಥದ ವೈಶಿಷ್ಟ್ಯವಾಗಿದೆ. ಆಖ್ಯಾತ ಪ್ರತ್ಯಯಗಳು ನಾಮ, ಸಂಖ್ಯಾ, ಗುಣವಚನ, ಸರ್ವನಾಮ ಈ ಶಬ್ದಗಳಿಗೆ ಸೇರಿ ನಾಮಕ್ರಿಯೆಗಳಾಗುವ ಸಂದರ್ಭದಲ್ಲಿ ಅವುಗಳ ಅಂತ್ಯಕ್ಕೆ 'ಉಂ' ಪ್ರತ್ಯಯ ಸೇರುತ್ತದೆ. "ಆಮೆಲ್ಲಂ ಕೂಸುಗಳೆಮುಂ ನವಯೌವನರ್ತೆಮುಂ" ಎಂಬ ಈ ಉದಾಹರಣೆಯಲ್ಲಿ ನಾಮಪದ, ಆಖ್ಯಾತ ಪ್ರತ್ಯಯ ಸಮುಚ್ಚಯ 'ಉಂ' ಇರುವುದು ವ್ಯಕ್ತವಾಗಿದೆ. "ನಾವೆಲ್ಲ ಕೂಸುಗಳಾಗಿದ್ದೇವೆ ಮತ್ತು ನವಯೌವನರಾಗಿದ್ದೇವೆ" ಎಂದು ಮಾಡಬಹುದು. ಕ್ರಿಯಾಪದಗಳು ಸಮುಚ್ಚಾಯಕವಾಗಿ ಬಂದಾಗ ಅವುಗಳ ಅಂತ್ಯಕ್ಕೆ 'ಉಂ' ಪ್ರತ್ಯಯ ಸೇರುತ್ತದೆ. ಉದಾ: "ಆಂ ಸೋಲ್ತೆನುಂ ಸತ್ತೆನುಂ" ಇತ್ಯಾದಿ.

ಚಾವುಂಡರಾಯಪುರಾಣವನ್ನು ರಚಿಸಿದವನು ಚಾವುಂಡರಾಯ. ಈತನ ಕಾಲ ೯೭೮. ಇವನು ಬ್ರಹ್ಮಕ್ಷತ್ರಿಯ ವಂಶದಲ್ಲಿ ಹುಟ್ಟಿದವನು. ಅಜಿತಸೇನಾಚಾರ್ಯನ ಶಿಷ್ಯನಾದ ರಾಚಮಲ್ಲನಲ್ಲಿ ಸೇನಾನಾಯಕನೂ ಮಂತ್ರಿಯೂ ಆಗಿದ್ದನು. ಶ್ರವಣಬೆಳ್ಗುಳದಲ್ಲಿ ಗೊಮ್ಮಟೇಶ್ವರ ಪ್ರತಿಮೆ ಪ್ರತಿಷ್ಠಾಪಿಸಿದ್ದನು. ಚಾವುಂಡರಾಯ ಪುರಾಣ ರೂಢಿಯಲ್ಲಿರುವ ತ್ರಿಷಷ್ಠಿ ಲಕ್ಷಣ ಮಹಾಪುರಾಣ ಎಂಬ ಕನ್ನಡ ಗದ್ಯಗ್ರಂಥ. ಇದು ೬೩ ಶಲಾಕಾಪುರುಷರ ಚರಿತ್ರೆ ಗೃಹಸ್ಥರ ಮತ್ತು ಮುನಿಗಳ ಚಾರಿತ್ರ ವಿಚಾರವಿದೆ. ೨೪ ಜನ ತೀರ್ಥಂಕರರು, ೧೨ ಜನ ಚಕ್ರವರ್ತಿಗಳು, ೯ ಜನ ಬಲದೇವರು, ೯ ಜನ ವಾಸುದೇವರು, ೯ ಜನ ಪ್ರತಿವಾಸುದೇವರುಗಳನ್ನೊಳಗೊಂಡ ಗದ್ಯಗ್ರಂಥ. ಇದು ಜೈನರಿಗೆ ಅತ್ಯಂತ ಪವಿತ್ರವಾದ ಧರ್ಮಗ್ರಂಥ. ಗ್ರಂಥಾರಂಭ ಗ್ರಂಥಾಂತ್ಯದಲ್ಲಿ ತೀರ್ಥಂಕರರ ಸ್ತುತಿರೂಪದ ಕಂದಪದ್ಯವಿದೆ ಪ್ರಾರ್ಥನಾ ಪದ್ಯಗಳಿವೆ. ಅಲ್ಲಲ್ಲಿ ಗಾಹೆಗಳೂ ಇವೆ. ಸಾಮಾನ್ಯವಾಗಿ ತೀರ್ಥಂಕರರ ಚರಿತ್ರೆಯೆಲ್ಲ ಒಂದೇ ರೀತಿಯಾಗಿರುತ್ತದೆ.

ಚಾವುಂಡರಾಯಪುರಾಣ ಕನ್ನಡದ ಮೊತ್ತಮೊದಲನೆಯ ಮಹಾಪುರಾಣವಾಗಿದೆ. ಜಿನಸೇನನ 'ವಾಗಾರ್ಥಸಂಗ್ರಹ', ಗುಣಭದ್ರನ 'ಗದ್ಯಕಥಾ' ಸಂಸ್ಕೃತ ಕೃತಿಗಳನ್ನು ಅವರ ಪ್ರೇರಣೆಯಿಂದ ಕನ್ನಡ ಗದ್ಯದಲ್ಲಿ ಬರೆದಿದ್ದಾನೆ. ಸಂಸ್ಕೃತ ಮಹಾಪುರಾಣದಲ್ಲಿಲ್ಲದ ಹಲವಾರು ವಿಚಾರಗಳನ್ನು ಪ್ರಸ್ತಾಪಿಸಿದ್ದಾನೆ. ಗದ್ಯಶೈಲಿಗೆ ಹೆಸರಾಗಿರುವ ಈ ಕೃತಿಯಲ್ಲಿ ಕಥಾಗದ್ಯದ ಸಹಜ ಓಘ, ಬಳಕೆ ಮಾತಿನ ಸೊಗಸು ಇವುಗಳ ಜೊತೆಗೆ ಶಾಸ್ತ್ರ ಗದ್ಯದ ಅಚ್ಚುಕಟ್ಟು, ಚೊಕ್ಕತನ ಇವು ಸೇರಿ ಜನಸಾಮಾನ್ಯರಿಗೆ ಸುಲಭವಾಗಿದ್ದರೂ ಶಾಸ್ತ್ರಶುದ್ಧವಾದ ನಡಿಗೆಯ ಬೆಡಗನ್ನು ಕಾಣಬಹುದು. ವಿಷಯ ಹಾಗೂ ವಿನ್ಯಾಸಗಳಲ್ಲಿ ಅಸ್ವತಂತ್ರವಾದರೂ ಹಳಗನ್ನಡ ಗದ್ಯಶೈಲಿಯಲ್ಲಿ ತನ್ನದೇ ಒಂದು ಮಾದರಿಯಾಗಿ ಮೆರೆದಿದೆ. ಅದರ

ಸ್ವರೂಪವನ್ನು 'ಗಂಭೀರ, ಧಾರಾಳ, ಚೊಕ್ಕಟ' ಎಂಬ ಮೂರು ಮಾತುಗಳಲ್ಲಿ ಅಡಕಗೊಳಿಸಿ ಹೇಳಬಹುದು.

ಚಾವುಂಡರಾಯ ಪುರಾಣ ಕನ್ನಡದ ಎಷ್ಟೋ ಜೈನ ಪುರಾಣಗಳಿಗಿಂತ ಮೊದಲು ರಚಿತವಾಗಿದೆ. ಇದು ಗದ್ಯದಲ್ಲಿದ್ದರೂ ಜನಪದ ಕಥಾಶಯಗಳು ಮತ್ತು ವರ್ಗಗಳು ಇದರಲ್ಲಿ ಅಂತರ್ಗತವಾಗಿವೆ. ಕಡೆಯ ತೀರ್ಥಂಕರನ ಕಥಾಭಾಗದ ಕಡೆಯಲ್ಲಿ ಬರುವ ಪೂರ್ವ ಭವಾವಳಿ ಕಥಾ ನಿರೂಪಣೆಯನ್ನು ಕೊಟ್ಟಿದೆ. ಜಂಬುಕುಮಾರನು ತನ್ನನ್ನು ಭೋಗದೆಡೆಗೆ ಅನುರಕ್ತನನ್ನಾಗಿಸಲು ಬಂದ ವಿದ್ಯುಚ್ಚೋರನಿಗೆ ದೃಷ್ಟಾಂತ ಕಥೆಗಳನ್ನು ಹೇಳಿ ವಿದ್ಯುಚ್ಚೋರನನ್ನೇ ವೈರಾಗ್ಯಕ್ಕೆ ಅಣಿಗೊಳಿಸುತ್ತಾನೆ. ಕರ್ಮಭೂಮಿಯ ಸಭ್ಯತೆಯ ಯುಗದಲ್ಲಿ ಧರ್ಮೋಪದೇಶ ಮತ್ತು ಚಾರಿತ್ರದಿಂದ ಜನತೆಗೆ ಒಳ್ಳೆಯದು ಕೆಟ್ಟದ್ದು ಯಾವುದು ಎಂಬುದನ್ನು ತಿಳಿಸಿಕೊಟ್ಟವರೇ ಈ ೬೩ ಮಹಾಪುರುಷರು. ಇವರ ಚರಿತ್ರೆಗಳೇ ಚಾವುಂಡರಾಯ ಪುರಾಣದಲ್ಲಿ ವರ್ಣಿತಗೊಂಡಿದೆ. ಪ್ರತಿ ತೀರ್ಥಂಕರ ಪುರಾಣ ನಿರೂಪಣೆ ಮುಗಿಯುವಾಗ ಗದ್ಯವಿರುತ್ತದೆ. ಆರಂಭದಲ್ಲಿ ಕಂದಪದ್ಯಾನಂತರದ ಗದ್ಯ ಬಹುತರವಾಗಿ ಸಮಾನ ನಡಿಗೆ, ವಿವರ, ಮಾದರಿಯನ್ನು ಒಳಗೊಂಡಿರುತ್ತದೆ. ಗದ್ಯಶೈಲಿ ಸುಂದರವಾಗಿ ಮೂಡಿಬಂದಿದೆ. ಉದಾ: ಇತ್ತಂ ಪ್ರಿಯದತ್ತೆಯಂ–ಎನಗೆ ತಪಮಾಸನ್ನದೊಳಕುಮೆ ಬೆಸಸಿಮನೆ ಮಕ್ಕಳಿಲ್ಲದುಬ್ಬೆಗದೊಳ್ ನುಡಿದಳೆಂದಜಿದು ಮುನಿಯರ್ ತಮ್ಮ ದಕ್ಷಿಣಹಸ್ತದೈದು ಬೆರಲುಮನೆಡದ ಕಿರುಗುಣಿಕೆಯುವಂ ತೋರಿ ಪರಸಿಪೋಗೆ ಎಂದು ಅದ್ಭುತವಾಗಿ ಚಿತ್ರಿಸಿದ್ದಾರೆ.

■

ಆಧಾರಗ್ರಂಥಗಳು

೧. ಶಿವಕೋಟ್ಯಾಚಾರ್ಯ – ವಡ್ಡಾರಾಧನೆ

೨. ಚಾವುಡಂರಾಯ – ಚಾವುಂಡರಾಯ ಪುರಾಣ

೩. ರಂ.ಶ್ರೀ. ಮುಗಳಿ – ಕನ್ನಡ ಸಾಹಿತ್ಯ ಚರಿತ್ರೆ

೪. ಡಿ.ಎಲ್. ನರಸಿಂಹಚಾರ್ – ಪೀಠಿಕೆಗಳು, ಲೇಖನಗಳು

೫. ಎನ್. ಬಸವಾರಾಧ್ಯ – ಗದ್ಯವಿಕಾಸ

ನಾಗವರ್ಮನ ಕರ್ಣಾಟಕ ಕಾದಂಬರಿಯ ಒಂದು ಅನುಸಂಧಾನ

◆

ಡಾ. ಎನ್.ಆರ್. ಲಲಿತಾಂಬ

ಕರ್ನಾಟಕ ಕಾದಂಬರಿಯ ಕಿವಿಮಾತು

ಮನುಷ್ಯನನ್ನು ನಿರಂತರವಾಗಿ ತೀವ್ರವಾಗಿ ಕಾಡುವ, ಕಾಡುತ್ತಿರುವ ಮೂರು ಮುಖ್ಯ ಸೆಳೆತಗಳು ಸಂಪತ್ತಿನ ದಾಹ, ಅಧಿಕಾರದ ದಾಹ ಹಾಗೂ ದೇಹಸೌಖ್ಯದ ದಾಹ. ಕನ್ನಡ ಸಾಹಿತ್ಯದಲ್ಲಿ ಸಂಪತ್ತು, ಅಧಿಕಾರಗಳ ಹಿಂದೆ ಬಿದ್ದು ಹೋರಾಟಕ್ಕೆ ಇಳಿದವರ ಮಹಾಯುದ್ಧಗಳ, ಮಹಾಮರಣಗಳ, ಮಹಾಪರಿವರ್ತನೆಗಳ ಕಥಾನಕಗಳು ವಿಶೇಷವಾಗಿ ಕಾಣಿಸಿಕೊಂಡಿವೆ.

ಆದರೆ ಯಾರನ್ನೂ ಬಿಡದೆ ಕಾಡುವ 'ದೇಹಸೌಖ್ಯದ' ದಾಹಕ್ಕಾಗಿ ಹಂಬಲಿಸಿದ, ಶುದ್ಧ ಕಾಮಕ್ಕಾಗಿ ಯುದ್ಧಸಾರಿದ ಕಥಾನಕಗಳಿಲ್ಲ. ಪರಸ್ತ್ರೀ, ಪರಪುರುಷಾಪೇಕ್ಷೆಗೆ ಒಳಗಾಗಿ ಅವರನ್ನು ದಕ್ಕಿಸಿಕೊಳ್ಳುವ ಪ್ರಯತ್ನಗಳು, ಸನ್ನಿವೇಶಗಳು ವಿರಳವಾಗಿಯಾದರೂ ಇವೆ. (ಯಶೋಧರಚರಿತೆಯ ಅಮೃತಮತಿ, ಅನಂತನಾಥಪುರಾಣದ ಚಂಡಶಾಸನ, ಕೀಚಕ, ರಾವಣ ......)

ಮೋಹಪಾಶಕ್ಕೆ ಬಿದ್ದು ಮನ್ಮಥನೊಂದಿಗೆ ಯುದ್ಧಸಾರಿ ಸೋತು ಕೋಟಲೆಗೆ ಒಳಗಾದ ಎಳೆಯರ ಮಹಾಕಾವ್ಯ ಕನ್ನಡದಲ್ಲಿ 'ಕರ್ನಾಟಕ ಕಾದಂಬರಿ' ಕೃತಿ ಒಂದೇ. ಮೋಹವು ಹಸಿಹಸಿಯಾಗಿ ದೇಹಮೂಲವಾದ ಅದಮ್ಯ ಕಾಮದಿಂದ ಆರಂಭಗೊಂಡು ಪರಿಪಕ್ವವಾದ ದಿವ್ಯ ಪ್ರೇಮವಾಗಿ ಮಾಗುವ ಹಂತವನ್ನು ತಲುಪುವುದು ಈ ಕಥಾನಕದ ವೈಶಿಷ್ಟ್ಯ

ತನ್ನ ಕಾಲಮಾನದ ಕ್ಷಾತ್ರ ಮೌಲ್ಯಗಳಿಗೆ ಹೊಂದದ ಈ ಕಥಾನಕವನ್ನು ನಾಗವರ್ಮ ಯಾಕೆ ಆರಿಸಿಕೊಂಡನೆಂಬುದೇ ಆಶ್ಚರ್ಯ ಆ ಕಾಲಘಟ್ಟದಲ್ಲಿ ಕ್ಷಾತ್ರ ವೀರರು, ಧರ್ಮವೀರರು ತೇಜಸ್ವಿಗಳಾಗಿ ಜನಮನಗೆಲ್ಲುತ್ತಿದ್ದ ಕಾವ್ಯಗಳ ಕೇಂದ್ರವಾಗುತ್ತಿದ್ದ ಕಾಲ. ವೀರಮರಣ, ವೀರಸ್ವರ್ಗ, ಭಾಷೆಗೆ ತಪ್ಪದ ವೇಳೆವಾಳಿತನ, ಜೋಳದಪಾಳಿ, ತ್ಯಾಗ, ಸ್ವರ್ಗಕ್ಕೂ

ಒಡೆಯನನ್ನು, ಪತಿಯನ್ನು ಅನುಸರಿಸಿ ನಡೆವ ಮಹಾವೀರರೂ, ಸತಿಯರು ಗೌರವಕ್ಕೆ ಪಾತ್ರರಾಗುತ್ತಿದ್ದ ಕಾಲವದು.

ಸಮಕಾಲೀನ ಮೌಲ್ಯಗಳ ನಿರಾಕರಣೆ

ಈ ಕೃತಿ ಅಂತಹ ರಾಜತ್ವ ಮತ್ತು ಅದರ ಊಳಿಗವನ್ನು, ಆ ಕಾಲದಲ್ಲಿ ನಂಬಲಾದ ಮಹಾ ಮೌಲ್ಯಗಳನ್ನು ಅಪನಂಬಿಕೆಯಿಂದ ನೋಡುತ್ತದೆ. ಇಂತಹ ಮೌಲ್ಯಗಳು ಭಾರತೀಯ ಸಮಾಜದಲ್ಲಿ ದಟ್ಟವಾಗಿ ಬೇರು ಬಿಟ್ಟು ಪಸರಿಸಿದ ಕಾಲಕ್ಕಿಂತ ಹಿಂದಿನದು ಈ ಕಥನ. ಬಾಣನಿಂದ ರಚಿತವಾದ ಈ ಕೃತಿಯ ಕಾಲ ೭ನೇ ಶತಮಾನ. ಕರ್ನಾಟಕದಲ್ಲಿ ಆಗಷ್ಟೇ ಈ ವೀರಮೌಲ್ಯಗಳು 'ಕ್ಷಣವಿಧ್ವಂಸಿನೀ ಕಾಯೇ ಕಾಚಿಂತೇ ಮರಣೇ ರಣೇ' ಎಂಬಂತಹ ಘೋಷವಾಕ್ಯಗಳು, ಆಳ್ದನ ಜೋಳದ ಪಾಳಿಗಾಗಿ ಪ್ರಾಣ ಒತ್ತೆ ಇಡುವ, ಭಾಷೆಗೆ ತಪ್ಪದ ಒಡೆಯನ ಸೇವೆ, ಬಂಟತನಗಳು ವೀರಪುರುಷ ಲೋಕವನ್ನು ಸೆಳೆಯತೊಡಗಿದ್ದವು. ಸ್ತ್ರೀಗೆ ಪಾತಿವ್ರತ್ಯ, ಸಹಗಮನಗಳು, ಮಹಾಸತಿಯಾಗುವ ಮೌಲ್ಯಗಳು ನಿಧಾನವಾಗಿ ವ್ಯಾಪಿಸತೊಡಗಿದ್ದವು.

ಹತ್ತು ಹನ್ನೊಂದನೆಯ ಶತಮಾನದ ಹೊತ್ತಿಗೆ ಯಾಜಮಾನ್ಯ ವಿಜೃಂಭಿಸಿ ಊಳಿಗಮಾನ್ಯತೆಗೆ ಭದ್ರ ಬುನಾದಿ ಏರ್ಪಟ್ಟಿತ್ತು. ಕ್ಷಾತ್ರಧರ್ಮ, ಯಾಜಮಾನ್ಯವು ಕೌಟುಂಬಿಕ ನೆಲೆಯಿಂದ ಆರಂಭಿಸಿ ಅರಸೊತ್ತಿಗೆ, ಧಾರ್ಮಿಕ ಕ್ಷೇತ್ರಗಳು ಎಲ್ಲದರಲ್ಲೂ ತನ್ನೆಲ್ಲಾ ವೈಭವ, ಶಕ್ತಿಗಳೊಂದಿಗೆ ಅಭಿವ್ಯಕ್ತಗೊಳ್ಳುತಿದ್ದ ಕಾಲ. ಆದರೆ ಈ ಇಡೀ ಕಾದಂಬರಿ ಇವುಗಳಿಂದ ತಪ್ಪಿಸಿಕೊಂಡಿರುವುದಷ್ಟೇ ಅಲ್ಲ, ಅಂತಹ ಮೌಲ್ಯಗಳನ್ನು ಅನುಮಾನದಿಂದ ಸಹ ನೋಡಿದೆ. ಇಲ್ಲಿ ಕಾಣಿಸಿಕೊಳ್ಳುವ ಸಮಾಜದಲ್ಲಿ ಅರಸರು ಅಧಿಕಾರಿಗಳು, ಋಷಿಮುನಿಗಳು, ಊಳಿಗದವರ ನಡುವೆ ತರತಮವಿಲ್ಲದ ಮಾನವ ಸಂಬಂಧಗಳ ಪೋಷಣೆಯು ಊಳಿಗಮಾನ್ಯ ಸಮಾಜಕ್ಕಿಂತ ಭಿನ್ನವಾಗಿ ರೂಪಿಸಲ್ಪಟ್ಟಿದೆ. ಸ್ತ್ರೀ ಸೌಂದರ್ಯದ ವರ್ಣನೆಯಿದ್ದರೂ ಅವಳನ್ನು ಕೇವಲ ಭೋಗವಸ್ತುವಾಗಿ ನಿರೂಪಿಸದೇ ಅತ್ಯಂತ ಗೌರವಾನ್ವಿತವಾಗಿ ನಡೆಸಿಕೊಂಡಿರುವುದನ್ನು ಕಾಣಬಹುದು. ಸ್ತ್ರೀಪುರುಷ ಸಂಬಂಧಗಳು ಶುದ್ಧ ಸ್ನೇಹಶೀಲವಾಗಿಯೂ ಚಿತ್ರಿತವಾಗಿದೆ. ಚಂದ್ರಾಪೀಡ ಮತ್ತು ಪತ್ರಲೇಖೆಯ ಮುಕ್ತಸ್ನೇಹ, ಒಡನಾಟಗಳು ಅತ್ಯಂತ ಆಧುನಿಕವಾಗಿವೆ. ಹೆಣ್ಣುಗಳ ಮನೋಲೋಕ ಒಂದಷ್ಟು ಇಲ್ಲಿ ತೆರೆದುಕೊಂಡಿದೆ. ಚಂದ್ರಾಪೀಡನಿಗೆ ಮಹಾಶ್ವೇತೆಯನ್ನು ನೋಡಿದಾಗ ಉಂಟಾದ ಭಾವಗಳನ್ನು ಗಮನಿಸಬಹುದು.

"ಮೊದಲೊಳ್ ಗೌರವಂ ಮೂಡಿದುಲ್ಲದೆ ತನ್ನ ವಾರ್ತೆಯಂ ಸದ್ಭಾವದಿನಾದ್ಯಂತಂ ಸತಿ ಪೇಳ್ದುದರ್ಕೆ ಹೃತ ಹೃದ್ಯನಾದ" ಚಂದ್ರಾಪೀಡ ಆಡುವ ಮಾತನ್ನು ಗಮನಿಸಬಹುದು. "ಕಾನನದೊಳೆ ನಟ್ಟುನಿಂದು ಸುಕುಮಾರಮೆನಿಪ್ಪ ಶರೀರಮಂ ಕಱುತ್ತಿನಿವಿರಿದೊಂದು ಘೋರತಪಕೊಡ್ಡಿದೆ ನಿನ್ನವೋಲಾರ್ ಕೃತಜ್ಞೆಯರ್" (೫–೨೦೧) ಎಂದು ಹೇಳುವುದಲ್ಲದೆ, ಪ್ರಿಯಕರನ ಸಾವಾದರೂ ತಾನು ಸಾಯದೇ ಇನ್ನೂ ಬದುಕಿರುವ ಬಗೆಗೆ ಮಹಾಶ್ವೇತೆ ಆತ್ಮನಿಂದನೆ ಮಾಡಿಕೊಂಡಾಗ ಗಂಡಂದಿರೊಂದಿಗೆ,

ಪ್ರಿಯಪಾತ್ರರೊಂದಿಗೆ, ಅನ್ನವಿತ್ತ ಒಡೆಯನಿಗೆ ಭಾಷೆಕೊಟ್ಟು ಸಾಯುವ ಪದ್ಧತಿಯನ್ನೇ ನಿರಾಕರಿಸುವ ಮಾತನ್ನಾಡುತ್ತಾನೆ ಚಂದ್ರಾಪೀಡ! "ಸತ್ತವರೇಟ್ವೆರೆ, ಪೇಳ್ ಒಡಸತ್ತರೆ ತಮ್ಮಟಲಿನ ಅಳವಿಯಂ ಮಳ್ಗಿಸಲೆಂದು ಉತ್ತವಳಿಕೆಯೊಳೆ ಸಾವರ್, ಸತ್ತವರ್ ಅವಗೆ ಆವ ಹಿತಮನ್ ಆಚರಿಸುವರೋ (೫-೨೦೨) ಎಂದು ಈ ಸಹಗಮನ ಹಾಗೂ ಸಹಮರಣಗಳ ಆಚರಣೆಯನ್ನು ಪ್ರಶ್ನಿಸುವುದನ್ನು ಗಮನಿಸಬಹುದು. ಅಲ್ಲದೆ ಅವರವರಿಗೆ ಆದ ಕರ್ಮಫಲ ಬೇರೆಬೇರೆ ಇರುವಾಗ ಅದರಿಂದ 'ಮೇಲೆ ಕೂಡುವರ್ ಒಡಸತ್ತವರ್' ಎಂಬೊಂದು ಕೂಡದು ಕೇವಲಮ್ ಆತ್ಮಘಾತ ದೋಷಮೆ ಪೆರತಿಲ್ಲ' (೫-೨೦೩) ಎಂದು ಖಡಾಖಂಡಿತವಾಗಿ ಹೇಳುತ್ತಾನೆ. ಇದೇರೀತಿ ರತಿ, ಕುಂತಿ, ಅಭಿಮನ್ಯುವಿನ ಮಡದಿ ಉತ್ತರೆ, ದುಶ್ಶಳೆ ಇವರ್‍ಯಾರೂ ಸತ್ತ ಪತಿಗಳೋಂದಿಗೆ ಸಹಗಮನ ಮಾಡಲಿಲ್ಲ, ಇದ್ದು ಸಾಧಿಸಬಹುದು ಸತ್ತವರೊಡಸಾಯುವುದರಲ್ಲಿ ಅರ್ಥವಿಲ್ಲವೆಂಬ ವಿಚಾರವನ್ನು ಕವಿ ಚಂದ್ರಾಪೀಡನಿಂದ ಹೇಳಿಸಿದ್ದಾನೆ.

ಹಾಗಾದರೆ ಆ ಕಾಲಕ್ಕಿಂತ ಭಿನ್ನವಾಗಿ ಕಾದಂಬರಿಕೃತಿಯು ಪ್ರತಿಪಾದಿಸುವ ಮೌಲ್ಯಗಳಾವುವು? ಬದುಕನ್ನು ದುಸ್ಸಹವಾಗಿಸುವ ತೀವ್ರವಾದ ಹಮ್ಮು, ದ್ವೇಷಾಸೂಯೆಗಳು, ಸಣ್ಣತನಗಳು ದರ್ಪ ದೌರ್ಜನ್ಯ ಈ ಕೃತಿಯಲ್ಲಿ ಎಲ್ಲಿಯೂ ಕಾಣುವುದಿಲ್ಲ, ಬದಲಿಗೆ ಮತ್ತೊಬ್ಬರ ಬದುಕನ್ನು ಸಹನೀಯವಾಗಿಸುವ, ಸಾಂತ್ವನ ನೀಡುವ 'ಮಾನವಾಂತಃಕರಣ ಇಲ್ಲಿನ ಪಾತ್ರಗಳ ಪ್ರಧಾನ ಸ್ಥಾಯಿಭಾವವಾಗಿದೆ'. ಸಾಮಾನ್ಯ ಚೇಟಿಯಿಂದ ಹಿಡಿದು ಮಹಾರಾಣಿಯರವರೆಗೂ, ಸೇವಕನಿಂದ ಚಕ್ರವರ್ತಿಯವರೆಗೂ ಸಹಬಾಂಧವರು, ಸಹವರ್ತಿಗಳಿಗೆ ಸಾಧ್ಯವಾದಷ್ಟು ನೋವುಂಟಾಗದಂತೆ ನಡೆದುಕೊಳ್ಳುವ ಒಂದು ಸಭ್ಯ ನಾಗರಿಕ ಸಮಾಜ ಇಲ್ಲಿ ಕಾಣುತ್ತದೆ.

ಇಂತಹ ಸಭ್ಯ ಸಮಾಜದಲ್ಲಿ ಒಬ್ಬ ಸಜ್ಜನನಾಗಿ ಬದುಕುವುದಕ್ಕೆ ಅಗತ್ಯವಾದ ಅಪೂರ್ವವಾದ, ವ್ಯಕ್ತಿತ್ವ ವಿಕಸನಕ್ಕೆ ಅಗತ್ಯವಾದ ಉತ್ತಮ ಆಪ್ತಸಮಾಲೋಚನೆಯ ಪಾಠ ಈ ಕೃತಿಯಲ್ಲಿದೆ.

"ನಗದಂತು ಜಗಂ ಗುರುಗಳ್ ಪೊಗಳ್ವಂತು, ಜೀವಿಗಳ್ಗೆ ಶುಭಮಪ್ಪಂತು, ಉಬ್ಬೆಗಂ ಆಗದಂತೆ ನಂಟರ್ಗೆ ಅಗಣಿತ ಗುಣವೆನಿಸಿ ನಿಲ್ವುದು" ಎಂಬ ಮಾತುಗಳನ್ನು ಹರಯಕ್ಕೆ ಬಂದಿರುವ, ಸದ್ಯದಲ್ಲೇಪಟ್ಟಾಭಿಷಿಕ್ತನಾಗಿ ಸಿಂಹಾಸನವನ್ನು ಏರಿ ಆಡಳಿತ ಸೂತ್ರವನ್ನು ಹಿಡಿಯಲಿರುವ ಸಂದರ್ಭದಲ್ಲಿ ಮಂತ್ರಿ ಸುಖನಾಸನು ಚಂದ್ರಾಪೀಡನಿಗೆ ನೀಡುತ್ತಿರುವ ಆಪ್ತಸಮಾಲೋಚನೆಯಿದು. ಇಲ್ಲಿ ಅರಸನಾದರೂ ಅವನು ಈ ಲೋಕದ ಜನರ ಆಸೆ ಅಪೇಕ್ಷೆಗಳು ರೀತಿನೀತಿಗಳಿಗೆ ವಿರುದ್ಧವಾಗಿ ಸಾಮಾಜಿಕವಾದ ಹೊಣೆಗೇಡಿಯಾಗಿ ನಗೆಪಾಟಲಿಗೆ ಒಳಗಾಗದಿರುವ ಅವಶ್ಯಕತೆಯನ್ನೂ, ವಿದ್ಯೆ ಬುದ್ಧಿಯನ್ನು ಕೊಟ್ಟು ತನ್ನನ್ನು ಉತ್ತಮ ಮನುಷ್ಯನನ್ನಾಗಿ ರೂಪಿಸಲು ಶ್ರಮಿಸುವ ಗುರುವು ತಲೆತಗ್ಗಿಸುವಂತೆ ಮಾಡದೆ ಆತ ಮೆಚ್ಚಿಕೊಳ್ಳುವಂತೆ, ಹೆಮ್ಮೆಪಡುವಂತೆ ನಡೆದುಕೊಳ್ಳಬೇಕಾದ ಆವಶ್ಯಕತೆಯನ್ನು, ತಾನು ಪಡೆದುಕೊಂಡ ಸಾಮರ್ಥ್ಯ, ಸಂಪತ್ತು

ಸ್ಥಾನಮಾನದ ಬಲದಿಂದ ಸಕಲಜೀವಿಗಳಿಗೆ ತ್ರಾಸ ಉಂಟಾಗುವಂತಹ ಜೀವವಿರೋಧಿ ನಿಲುವುಗಳನ್ನು ಹೊಂದದೆ ಬದಲಿಗೆ ಅವುಗಳಿಗೆ ಶುಭವಾಗುವಂತಹ ಜೀವಪರನಿಲುವನ್ನು ರೂಢಿಸಿಕೊಳ್ಳಬೇಕೆಂಬುದನ್ನು ಹೇಳಿದೆ.

ಯಾವುದೇ ವ್ಯಕ್ತಿಯು ಎಷ್ಟೇ ದೊಡ್ಡವನಾಗಿ ಪ್ರತಿಷ್ಠಿತನಾಗಿ ಬೆಳೆದರೂ ಅವನ ನಡವಳಿಕೆಗಳು ತನ್ನ ಕುಲಬಾಂಧವರು ತಲೆತಗ್ಗಿಸುವಂಥದ್ದಾಗಿರದೆ ಉತ್ತಮ ಗುಣಗಳನ್ನು ರೂಢಿಸಿಕೊಳ್ಳಬೇಕಾದ ಆವಶ್ಯಕತೆಯನ್ನು ಇಲ್ಲಿ ಸರಿಯಾದ ಸಮಯದಲ್ಲಿ ಸರಿಯಾದ ವ್ಯಕ್ತಿಯಿಂದ ತಿಳಿಸಿಕೊಡುತ್ತಿರುವುದು ವಿಶೇಷವಾಗಿದೆ. ಮುಂದೆ ಚಂದ್ರಾಪೀಡ ಇಡೀ ಸಮ್ರಾಜ್ಯಕ್ಕೆ ಆದರ್ಶಪ್ರಭುವಾಗಬೇಕಾದವನು. (ಈಗಲೂ ರಾಜ್ಯಭಾರ ಮಾಡಬೇಕಾಗಿರುವವರಿಗೆ ಪದಗ್ರಹಣದ ಸಂದರ್ಭದಲ್ಲಿ ಕೆಲವು ಆದರ್ಶ ಮೌಲ್ಯಗಳನ್ನು ಹೇಳಿಕೊಡುವುದನ್ನು ಗಮನಿಸಬಹುದು!) ಕರ್ನಾಟಕ ಕಾದಂಬರಿಯ ಈ ಸುಖನಾಸನ ಆಪ್ತ ಸಮಾಲೋಚನೆಯ ಭಾಗವು ಕೇವಲ ಅರಸರಿಗಷ್ಟೇ ಅಲ್ಲ, ಇದು ಸರ್ವಕಾಲದ, ಸರ್ವದೇಶದ ಆಡಳಿತವರ್ಗಕ್ಕೂ ಯುವಸಮುದಾಯಕ್ಕೂ ಸಲ್ಲುವಂತಹ ಮಾರ್ಗದರ್ಶನ ಸೂತ್ರವಾಗಿದೆ.

ಅಧಿಕಾರ, ಸಂಪತ್ತು ಮತ್ತು ವಿಷಯ ಸುಖಭೋಗಗಳನ್ನು ಕುರಿತ ಆಪ್ತಸಮಾಲೋಚನೆ

ಅಧಿಕಾರ, ಸಂಪತ್ತು ಮತ್ತು ವಿಷಯ ಸುಖಭೋಗಗಳನ್ನು ವ್ಯಕ್ತಿ ಹತೋಟಿಯಲ್ಲಿ ಇಟ್ಟುಕೊಳ್ಳದಿದ್ದರೆ ಆಗಬಹುದಾದ ಅನರ್ಥ ಪರಂಪರೆಯ ಬಗೆಗೆ ಮುನ್ನೆಚ್ಚರಿಕೆಯನ್ನು ಇಲ್ಲಿ ನೀಡಲಾಗಿದೆ. ಪ್ರಭುತ್ವ ಮತ್ತು ಅರಮನೆಯ ರಾಜಕೀಯದ ಪೊಳ್ಳುತನ, ದಂಡನಾಯಕರು ಮಂತ್ರಿಗಳ ಹೀನತನ, ಪ್ರಭುತ್ವದೊಂದಿಗೆ ಕೈಜೋಡಿಸಿ ಸ್ವಾರ್ಥ ಸಾಧಿಸುವ, ಅಪಮೌಲ್ಯಗಳನ್ನೇ ಮೌಲ್ಯವೆಂದು ಅರಸನ ತಲೆಗೆ ತುಂಬಿ ಹೊಟ್ಟೆ ಹೊರೆಯುವ ಪುರೋಹಿತರನ್ನು ವಿಡಂಬಿಸಲಾಗಿದೆ. ರಾಜನೀತಿಗೆ, ರಾಜತಾಂತ್ರಿಕತೆಗೆ ಕಿರೀಟಪ್ರಾಯವಾದ ಕೈಪಿಡಿ ಇದ್ದಂತೆ ಎಂದು ನಂಬಲಾಗಿರುವ ಕೌಟಿಲ್ಯನ ಅರ್ಥಶಾಸ್ತ್ರದ ದೋಷವನ್ನು, ಅದನ್ನು ಕಲಿತ ರಾಜರಿಂದಾಗುತ್ತಿರುವ ಅನಾಹುತವನ್ನು ಇಲ್ಲಿ ಎತ್ತಿಹೇಳಿದೆ.

ಪ್ರಭುತ್ವದ ವಿಡಂಬನೆ–ಉತ್ತಮ ಪ್ರಭುತ್ವದ ಲಕ್ಷಣ

ಅರಸೊತ್ತಿಗೆಯನ್ನು ಕವಿ ಸನ್ನಿ ಎಂದು ಕರೆದಿದ್ದಾನೆ. "ಅರಸಾಗಲೊಡಂ ಮೆಯ್ಮಱೆದು ರಾಜ್ಯ ಸುಖಸನ್ನಿಪಾತನಿದ್ರೆಯ ಕೈಯ್ಕೊಂಡು ಇರುಳುಂ ಪಗಲುಂ ಜಾಡ್ಯದೆ ಮರವಟ್ಟು ಎಚ್ಚಱುವರಲ್ಲವ್ ಎಂತುಂ ಭೂಪರ್." ರಾಜ್ಯದ ಸುಖಸನ್ನಿಪಾತದ ರೋಗ ಹಿಡಿದು ಆಡಳಿತವನ್ನು, ಪ್ರಜಾಹಿತವನ್ನು ಮರೆತು ವರ್ತಿಸುವ ಇಂತಹ ಪ್ರಭುತ್ವವನ್ನು ಎಚ್ಚರಿಸುವವರಾರು?

"ಜನಪತಿಗಳ್ ನುಡಿಯಲ್ ಮಾರ್ದನಿಯಂತನುವಾದಿಸಿ ಬರ್ದುಕಲೊಲ್ಲದೆ ಮಾರ್ಕೊಂಡು ಅನುಚಿತಮಿದೆಂದು ಮಾಣಿಪ ಮನುಜೋತ್ತಮರ್ ಎಲ್ಲಿಯಾನುಮ್ ಇರ್ಪರೆ ಜಗದೊಳ್" ಎಂಬ ಕವಿಯ ಪ್ರಶ್ನೆ ವಾಸ್ತವವನ್ನು ಹೇಳುತ್ತಿದೆ. ಆಳುವವನು

ಸರಿಯಿಲ್ಲವೆಂದು ತಿಳಿದಿದ್ದರೂ ಸುತ್ತಲಿನ ಜನ ತಮ್ಮ ಹೊಟ್ಟೆಹೊರೆಯುವುದನ್ನು ನೋಡಿಕೊಳ್ಳುತ್ತಾರೆಯೇ ಹೊರತು ತನಗೆ ಕಷ್ಟಬಂದರೂ ಹೆದರದೆ ಪ್ರಭುತ್ವವನ್ನು ಪ್ರತಿಭಟಿಸಿ, ತಿದ್ದುವ ಸಾಹಸಮಾಡುವ ಧೀರರಾದ ನರಶ್ರೇಷ್ಠನು ಇರುವುದಿಲ್ಲ, ಇದು ಸತ್ಯ. ಹಾಗೊಂದು ಪಕ್ಷ ತಿದ್ದುವ ಪ್ರಯತ್ನವನ್ನು ಮಾಡಿದರೂ ಅದು ಒಡಕು ಮಡಕೆಗೆ ನೀರು ತುಂಬಿದಂತೆ. ಹಾಗಾಗಿ "ಅರಸರೇಗೆಯ್ದೊಡಂ ಕೇಳ್ವರಿಲ್ಲಂ". ಅದಕ್ಕಾಗಿ ಪ್ರಭುತ್ವ ತನಗೆ ಬೇಕಾದ್ದನ್ನೇ ಮಾಡುತ್ತಾ ಅದೇ ಸರಿ ಎನ್ನುವ ಅಭಿಪ್ರಾಯವನ್ನು ಎತ್ತಿಹಿಡಿಯುವ ಜನರನ್ನೇ ಸಾಕಿಕೊಳ್ಳುತ್ತದೆ. ಅಂತಹವರಿಂದ ತಮಗೆ ಬೇಕಾದಂತೆ 'ಜನಾಭಿಪ್ರಾಯವನ್ನು ರೂಪಣೆ' ಮಾಡಿಸುತ್ತದೆ ಎಂದು ಪ್ರಭುತ್ವದ ಭಾಗವೇ ಆಗಿರುವ ಮಂತ್ರಿ ಸುಖನಾಸನ ಬಾಯಲ್ಲಿ ಹೇಳಿಸಲಾಗಿದೆ. ನೋಮ್ ಚಾಮ್‌ಸ್ಕಿ ಕೂಡ ಇಂಥ ಜನಾಭಿಪ್ರಾಯ ರೂಪಣೆ ಕುರಿತು ಹೇಳುತ್ತಾನೆ. ತಮಗೆ ಬೇಕಾದಂತೆ ಜನಾಭಿಪ್ರಾಯವನ್ನೂ ರೂಪಿಸುವ ಜಾಲವನ್ನೇ ಸಿದ್ಧಪಡಿಸುವುದೂ ಕೂಡ ಪ್ರಭುತ್ವದ ಒಂದು ತಂತ್ರಗಾರಿಕೆಯೇ ಆಗಿರುತ್ತದೆ. ಇಂಥ ರಾಜಕಾರಣ ಕುರಿತು ಸಾವಿರ ವರ್ಷಗಳ ಹಿಂದೆಯೇ ನಮ್ಮ ಕವಿಗಳು ಚರ್ಚಿಸಿರುವುದು ವಿಶೇಷ.

ಕವಿ ಕೇವಲ ಅರಸರ ದರ್ಪ ಅಹಮ್ಮುಗಳನ್ನಷ್ಟೇ ಹೇಳದೆ, ಅವರ ಮೂರ್ಖತನ ವನ್ನು ಬಯಲಿಗೆಳೆದಿದ್ದಾನೆ. ಈ ಅರಸರನ್ನು ದೂಷಿಸಿ ಪ್ರಯೋಜನವಿಲ್ಲ ; ಈ ಪ್ರಭುತ್ವದ ಗುಣವೇ ಅಂತಹದು. ಅದು ಎಂಥ ಮಹನೀಯನಿಗೇ ದೊರಕಿದರೂ ಅದು ತನ್ನ ಗುಣವನ್ನು ತೋರಿಸಿಯೇ ತೋರಿಸುತ್ತದೆ. ನೃಪಾಲರನ್ನು ದುಷ್ಟರನ್ನಾಗಿ ಮಾಡಿಬಿಡುತ್ತದೆ ಎನ್ನುತ್ತಾನೆ.

ರಾಜತ್ವಕ್ಕೆ ಕಾರಣವಾಗುವ ಪವಿತ್ರವೆಂದು ಪರಿಗಣಿಸಲ್ಪಟ್ಟ 'ಪಟ್ಟಾಭಿಷೇಕವನ್ನು, ಆ ಸಂದರ್ಭದ ಆಚರಣೆಗಳನ್ನೇ ಕವಿ ವಿಡಂಬಿಸಿರುವುದು ವಿಶೇಷ. " ಮೊದಲೊಳ್ ರಾಜ್ಯಾಭಿಷೇಕ ಪ್ರಬಲಜಲಮೆ ಕರ್ಚಿತ್ತು ದಾಕ್ಷಿಣ್ಯಮಂ, ಹೋಮದ ಧೂಮ ಚಿತ್ತದೊಳ್ ತೊಟ್ಟನೆ ಮಲಿನತೆಯಂ ಪೊರ್ದಿಸಿತು, ಒಪ್ಪಿರಲ್ ಕಟ್ಟಿದ ಪಟ್ಟಂ ಬರ್ಪಮುಪ್ಪಂ ಮಱೆಯಿಸಿತು, ಅಧಿಕ ಕ್ಷಾಂತಿಯಂ ವಿಪ್ರವರ್ಗಾಸ್ಪದ ದರ್ಭಾನೀಕ ಸಮ್ಮಾರ್ಜನಿ ಕಳೆದುದೆನಲ್ ದುಷ್ಟರಪ್ಪರ್ ನೃಪಾಲರ್." ರಾಜ್ಯಾಭಿಷೇಕದ ಪ್ರಬಲ ಜಲವು ರಾಜನಾಗುವವನಲ್ಲಿ ಇರಬಹುದಾದ ಒಂದಿಷ್ಟು ದಾಕ್ಷಿಣ್ಯ, ಕರುಣೆಗಳನ್ನು ತೊಳೆದುಬಿಡುವುದಂತೆ; ಆ ಸಂದರ್ಭದಲ್ಲಿ ಮಾಡುವ ಹೋಮದ ಹೊಗೆಯಿಂದ ಅರಸನ ತಿಳಿಯಾದ ಮನಸ್ಸೂ ಸಹ ಮಲಿನಗೊಳ್ಳುವುದಂತೆ! ಅರಸನಿಗೆ ತೊಡಿಸುವ ಆ ಕಿರೀಟ, ಪೇಟ ಮುಂತಾದ ವಸ್ತುಗಳು ತನಗೂ ಮುಪ್ಪು ಬರುತ್ತದೆ, ಈ ಪಟ್ಟ ಶಾಶ್ವತವಲ್ಲ ಎಂಬುದನ್ನೂ ಸಹ ಮರೆಸಿಬಿಡುತ್ತದೆ. ಅಂದರೆ ತಾನು ಶಾಶ್ವತನೇನೋ ಎಂಬ ಭ್ರಮೆಗೆ ಸಿಕ್ಕ ಆ ಜೀವ ಪಟ್ಟಕ್ಕೆ ಬಿಡಲಾಗದಂತೆ ಅಂಟಿಕೊಂಡುಬಿಡುತ್ತದೆ. ಇದೆಲ್ಲಕ್ಕಿಂತ ತೀವ್ರ ವಿಡಂಬನೆ ಇರುವುದು ಮುಂದಿನ ಮಾತಿನಲ್ಲಿ. ಪಟ್ಟಾಭಿಷೇಕದ ಆಚರಣೆಯನ್ನು ನಡೆಸಿಕೊಡುವ ಈ ಪುರೋಹಿತವರ್ಗದ ಕೈಯಲ್ಲಿರುವ ದರ್ಭೆಯ

ಕಂತೆಯೆಂಬ ಕಸಪೊರಕೆಯು ಅರಸರಲ್ಲಿದ್ದ ಅಲ್ಪಸ್ವಲ್ಪ ಕ್ಷಮಾಗುಣವನ್ನೂ ಚೆನ್ನಾಗಿ ಗುಡಿಸಿ ತೊಡೆದುಹಾಕುತ್ತದಾದ್ದರಿಂದ ನೃಪರು ದುಷ್ಟರಾಗುತ್ತಾರಂತೆ!

ಅಧಿಕಾರ ಮತ್ತು ಜ್ಞಾನ ಒಟ್ಟಾಗಿ ಸೇರಿ ಸಮಾಜವನ್ನು ಹೇಗೆ ಆಳುತ್ತವೆ ಎಂಬುದನ್ನು ಇಲ್ಲಿ ಗಮನಿಸಬಹುದು. ಪ್ರಭುತ್ವದ ಸುತ್ತ ಇರುವ ಪುರೋಹಿತಶಾಹಿ ಆಳುವವನನ್ನು ಸಾಮಾನ್ಯರಿಂದ ದೂರಮಾಡಿಬಿಡುತ್ತದೆ, ತಾನು ಅಸಾಮಾನ್ಯನೆಂಬ ಭ್ರಮೆಗೆ ತಳ್ಳಿಬಿಡುತ್ತದೆ. ದೈವವನ್ನು ನೋಡಲು ನೀವು ಪರಲೋಕದ ಕಡೆಗೆ ದೃಷ್ಟಿಹರಿಸುವ ಆವಶ್ಯಕತೆಯಿಲ್ಲ 'ಪ್ರತ್ಯಕ್ಷ ದೈವವಾದ ಅರಸನು ನಿಮ್ಮ ಮುಂದೆಯೇ ನಿಂತಿದ್ದೇನೆ ನೋಡಿ" ಎಂದು ಹೇಳುವ ತೆರದಿ ಅರಸುಗಳು ತಲೆಯ ಮೇಲೆ ಆಕಾಶವನ್ನು ಮುಚ್ಚುವಂತಹ ಶ್ವೇತಛತ್ರಿಗಳನ್ನು ಮೆರೆಸಲಾರಂಭಿಸುತ್ತಾರಂತೆ!

ದಳಪತಿಗಳು ರಾಜನ ಉತ್ತಮ ಗುಣಗಳು ಪುನಃ ಮರಳದಂತೆ ರಾಷ್ಟ್ರದ ಗಡಿಗಳಾಚೆಗೆ ಓಡಿಸಿ ಬಿಡುವರೋ ಎಂಬಂತೆ ಉತ್ತಮ ಮಾತುಗಳನ್ನು, ತಿಳುವಳಿಕೆಯನ್ನು ನೀಡ ಬರುವವರನ್ನು "ನಡೆಯಿರಿ, ನಡೆಯಿರಿ" ಎಂದು ಗದರಿಸಿ ದೂರಮಾಡುತ್ತಾರಂತೆ!

"ನೃಪರೊಳ್ನುಡಿಯಂ ಬೀಸುವುದು ಚಾಮರಾವಳಿ" ಎಂಬ ಮಾತಿನಲ್ಲಿ ಅಕಸ್ಮಾತ್ತಾಗಿ ಅರಸರುಗಳು ಆಡುವ ಒಳ್ಳೆಯ ಮಾತುಗಳು ಜನರಿಗೆ ಕೇಳುವ ಮುನ್ನವೇ ಅವನ ಸುತ್ತಿನ ಚಾಮರಾವಳಿಯವರು ಆ ಮಾತುಗಳನ್ನು ಸಂಪೂರ್ಣವಾಗಿ ಹಾರಿಸಿಬಿಡುವಂತೆ ಚಾಮರ ಬೀಸಿಬಿಡುತ್ತಾರಂತೆ! ಪ್ರಭುತ್ವದ ಸುತ್ತಯಿರುವ ಈ 'ವಿಷವರ್ತುಲ'ವನ್ನು ಕುರಿತು ಉತ್ತಮನಾದ ಅರಸ ಸದಾ ಜಾಗೃತನಾಗಿರಬೇಕಾಗುತ್ತದೆ. ಅಧಿಕಾರದ ಮದ ಅವರನ್ನು ಕುರುಡರನ್ನಾಗಿಸುತ್ತದೆ. ಕಣ್ಣುಬೇನೆ ಬಂದವರಂತೆ ಅರಸರು ಶ್ರೇಷ್ಠರನ್ನು ಗುರುತಿಸದವರಾಗುತ್ತಾರೆ.

ಹಿರಿದಾದ ಅಧರ್ಮ, ಸುಳ್ಳು ತಟವಟಗಳಿಂದ ಹೆಳವರಾದಂತೆ ಸುಳ್ಳಾಡುವ ಪಾಪದಿಂದಾಗಿ ಬಾಯಿಬೇನೆ ಬಂದವರಂತೆ ತೊದಲುವ ಅಹಂಕಾರ ಪರ್ವತದ ತುತ್ತ ತುದಿಯಲ್ಲಿರುವ ಅರಸರ ಸುತ್ತ ಎಂಥವರು ತುಂಬಿಕೊಂಡಿರುತ್ತಾರೆಂದರೆ "ಸರ್ವಸ್ವಮಂ ವಂಚಿಸಿಕೊಳಲೆಂದು ಅವರ್ಗಳ ಸಮೀಪದೊಳಗೆ ಆಮಿಷಕ್ಕೆರಗುವ ಪರ್ದುಗಳುಮ್ ಆಸ್ಥಾನದೊಳ್ ಕೊಳದೊಳಗೆ ಪಾರ್ವ ಬಕಂಗಳುಮ್ ಎನಿಪಂತಿರ್ದು ತಮ್ಮ ಕಜ್ಜಕ್ಕೆ ಕೆಲರ್ ಧೂರ್ತರ್ ಅರಸುಗಳಂ ಪ್ರತಾರಿಸುತಿರ್ಪರ್". ಸ್ವಾರ್ಥಕ್ಕಾಗಿ ರಾಜರನ್ನು ಮೋಸಗೊಳಿಸುತ್ತಾ ಉದ್ಧಟತನವನ್ನು (ಗುರುವಿನೊಂದಿಗಿನ) ಸ್ವಾತಂತ್ರ್ಯವೆಂದು ಕರೆಯುತ್ತಾ, ಜೂಜನ್ನು ವಿನೋದವೆಂದು, ಹೆಂಡಕುಡಿಯುವುದನ್ನು ವಿಲಾಸವೆಂದು, ಹೆಚ್ಚಾದ ಬೇಟೆಯಾಡುವಿಕೆಯನ್ನು ಶಕ್ತಿವರ್ಧಕವೆನ್ನುತ್ತಲೂ ಕೈಹಿಡಿದ ಕುಲೀನ ಪತ್ನಿಯನ್ನು ತೊರೆಯುವುದನ್ನು ವೈರಾಗ್ಯವೆಂತಲೂ, ಪರಸ್ತ್ರೀಯೊಂದಿಗೆ ಬೆರೆಯುವ ಭಂಡತನವನ್ನು ನಿಪುಣತೆ ಎನ್ನುತ್ತಲೂ, ಕೊಬ್ಬುವುದನ್ನು ಪರಾಕ್ರಮವೆನ್ನುತ್ತಲೂ, ಅಪಮಾನ ಮಾಡಿದಾಗ ಹೆದರಿ ಸುಮ್ಮನಾಗುವುದನ್ನು ಸೈರಣೆಯೆಂತಲೂ, ಚಪಲತೆಯನ್ನು ಉತ್ಸಾಹವೆಂತಲೂ ವ್ಯಾಖ್ಯಾನಿಸಿ ಅರಸನನ್ನು ತಪ್ಪುದಾರಿಗೆಳೆಯುತ್ತಾರೆ. ಈ ರೀತಿ ದೋಷಗಳನ್ನೇ

ಗುಣಗಳೆಂದು ಅಪವ್ಯಾಖ್ಯಾನಿಸಿ ಮುಂದೆ ಹೊಗಳಿ ಅರಸನನ್ನು ಅಟ್ಟಕ್ಕೇರಿಸಿ ಹಿಂದೆ ಚಪ್ಪಾಳೆ ತಟ್ಟಿ ನಗುತ್ತಾರೆ. ಅಲ್ಲದೆ ಮೋಸದಲ್ಲಿ ನಿಪುಣರಾದ ಈ ವಂಚಕರು ತಾವು ಮಾನವಾತೀತ ಶಕ್ತಿಯುಳ್ಳ ಪವಾಡ ಪುರುಷರೆಂದು, ಅಸಮಾಕ್ಷನಾದ ಶಿವನೆಂದೂ, ಶ್ರೀಮನ್ನಾರಾಯಣನೇ ತಾವೆಂದೂ ತಾವೇ ದೇವರೆಂದು ದುರಭಿಮಾನವನ್ನು ಬೆಳೆಸಿಕೊಂಡಿರುತ್ತಾರೆ. ತಮ್ಮ ಆಡುವ ಆಟಕ್ಕೇ ಅಳುವವರು ತಾಳ ಹಾಕುವಂತೆ ಮಾಡಿಟ್ಟುಕೊಂಡಿರುತ್ತಾರಂತೆ. ಇದು ಮೂರ್ಖರಾದ ಅರಸರುಗಳಿಗೆ ತಿಳಿಯುವುದೇ ಯಿಲ್ಲವೆನ್ನುತ್ತಾನೆ ಕವಿ. ಈ ಕಾಲದಲ್ಲೂ ಇಂಥವರಿಗೇನೂ ಕೊರತೆಯಿಲ್ಲವೆಂಬುದು ನಮಗೆ ತಿಳಿದ ವಿಚಾರವೇ ಆಗಿದೆ.

ಸಾವಿರಾರು ದುರ್ವ್ಯವಹಾರಗಳಿಂದ ಕೂಡಿದ ಭಯಂಕರವಾದ ರಾಜಕೀಯದ ವಿಡಂಬನೆಯನ್ನು ಇಲ್ಲಿ ಕಾಣಬಹುದು. ಹೀಗೆ ಅರಸನನ್ನು ಅಡ್ಡದಾರಿಗೆಳೆಯುವವರ ಹುನ್ನಾರಗಳನ್ನರಿಯದೇ ದಡ್ಡನಾದ ಅರಸನು ಅಂತಹವರನ್ನೇ ಗೌರವಿಸಿ, ಕಾಪಾಡುತ್ತಾನೆ. "ಅರಸುಮಕ್ಕಳ್ಗತಿನೃಶಂಸಮಪ್ಪ ಕೌಟಿಲ್ಯ ಶಾಸ್ತ್ರ ಪ್ರಮಾಣದಿನ್ ಆಪಾಂಶುವಧೋಪದೇಶವಂ ಮಾಳ್ಪ ನಿಪುಣನೇ ಪರಮ ಪಂಡಿತನೆನಿಸುಗುಂ"- ಅರಸು ಪುತ್ರರಿಗೆ ಕೌಟಿಲ್ಯನಿಂದ ರಚಿಸಲ್ಪಟ್ಟಿರುವ, ಪರಹಿಂಸೆಯನ್ನೇ ಬೋಧಿಸುವ ಅರ್ಥಶಾಸ್ತ್ರದ ಪ್ರಮಾಣದಿಂದ ನಿಗೂಢ ಕೊಲೆಯನ್ನು ಉಪದೇಶಿಸುವ ನಿಪುಣನೇ ಉದ್ದಾಮ ಪಂಡಿತನೆನಿಸಿಕೊಳ್ಳುತ್ತಾನೆ ಎಂಬ ಈ ವಿಡಂಬನೆ ಅಪೂರ್ವವಾದುದು. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿನ ಉತ್ತಮ ಆಡಳಿತದ ಲಕ್ಷಣಗಳು ಪ್ರಭುತ್ವದ ದೃಷ್ಟಿಯಿಂದ ನೀಡಲ್ಪಟ್ಟವುಗಳಾಗಿವೆ. ಅದರಲ್ಲಿ ರಾಜತಂತ್ರದ ಎಲ್ಲ ವ್ಯವಹಾರಗಳೂ ವಿಶೇಷವಾದವುಗಳೆಂಬಂತೆ, ಅವುಗಳಲ್ಲಿ ಅರಸನಾಗತಕ್ಕವನು ಪರಿಣತನಾಗಬೇಕೆಂಬಂತೆ ಈ ಸಂಸ್ಕೃತಿಯಲ್ಲಿ ವಿವರಿಸಿಕೊಳ್ಳಲಾಗಿದೆ. ಆದರೆ ಕಾದಂಬರಿಯಲ್ಲಿ ಕವಿ ಅರ್ಥಶಾಸ್ತ್ರವನ್ನು ವಿಭಿನ್ನನೆಲೆಯಲ್ಲಿ ಮೌಲ್ಯಮಾಪನಮಾಡಿದ್ದಾನೆ. ಇದರ ಅನೇಕ ಉಪದೇಶಗಳು ಜಾಣ್ಮೆಗಳು ಜೀವವಿರೋಧಿಯಾಗಿವೆ. ಅರಸರಿಗೆ ಸರ್ವಾಧಿಕಾರಿತನವನ್ನು ನೀಡಿ, ವಿರೋಧಿಸಿದವರನ್ನು ಸದ್ದಿಲ್ಲದಂತೆ ನಿವಾರಿಸುವ ತಂತ್ರಗಾರಿಕೆಯನ್ನು ನೀಡುತ್ತದೆ ಎಂಬ ಕವಿಯ ಗಮನಿಕೆ ನಿಜಕ್ಕೂ ಆಶ್ಚರ್ಯವನ್ನುಂಟು ಮಾಡುತ್ತದೆ. ಅರ್ಥಶಾಸ್ತ್ರ ಕೃತಿಯನ್ನು ಅರೆದು ಕುಡಿದು ಮಹಾಪಂಡಿತರೆಂದು ಬೀಗುತ್ತಿದ್ದವರನ್ನೂ ಆ ಕಾರಣಕ್ಕಾಗಿಯೇ ರಾಜಕುವರರಿಗೆ ಗುರುಗಳಾಗುತ್ತಿದ್ದವರನ್ನೂ ಲೇವಡಿಮಾಡಿರುವುದು ವಿಶೇಷ.

ಸ್ವತಃ ಬ್ರಾಹ್ಮಣನಾಗಿದ್ದರೂ ಕವಿ "ಅವಿಚಾರ ಕ್ರಿಯಾ, ಕ್ರೂರಪ್ರಕೃತಿಯಪ್ಪ ಪುರೋಹಿತನೆ ಅರಸನಿಗೆ ಗುರು" ಆಗುವುದರಿಂದಾಗಬಹುದಾದ ಆಪತ್ತುಗಳ ಬಗೆಗೆ ಎಚ್ಚರಿಕೆಕೊಡುದನ್ನು ಮೆಚ್ಚದಿರಲು ಸಾಧ್ಯವೇಯಿಲ್ಲ. ಬಹುಶಃ ಇಂಥ ವಿಚಾರಗಳಲ್ಲಿ ನಾಗವರ್ಮ ಬಾಣನಿಂದಲೇ ಸ್ಫೂರ್ತಿ ಪಡೆದಿದ್ದಾನೆ ಎನಿಸುತ್ತದೆ. ಬಾಣನೂ ಸ್ವಭಾವತಹ ನಿಷ್ಠುರವಾದಿಯೂ ಬ್ರಾಹ್ಮಣನಾಗಿಯೂ ಸರ್ವರೊಳಗೊಂದಾಗಿ ಬೆರೆಯುವ ಅವಿಚಾರ ಅಚಾರಗಳನ್ನು ವಿರೋಧಿಸುವವನೂ ಆಗಿದ್ದನೆಂದೂ ಅವನ ವಿರುದ್ಧವಾಗಿ ಸಂಪ್ರದಾಯಶೀಲರು ಅರಸನಿಗೆ ದೂರಿತ್ತಿದ್ದರೆಂಬುದೂ ತಿಳಿದುಬರುತ್ತದೆ.

ಅರಸರ ಸುತ್ತಲೂ ತುಂಬಿಕೊಂಡು, ಅರಸನ ಸ್ವಂತ ಕುಟುಂಬ ವ್ಯವಹಾರದಲ್ಲಿ ತಲೆಹಾಕಿ ರಾಜಕೀಯ ಮಾಡುವ, ತಂದಿಟ್ಟು ತಮಾಷೆ ನೋಡುವ ಪಾಪಿಷ್ಠ ಮಂತ್ರಿಗಳ ಬಗೆಗೂ, ಅಧಿಕಾರದ ಚುಕ್ಕಾಣಿ ಹಿಡಿಯುವ ವ್ಯಕ್ತಿಯು ಎಚ್ಚರಿಕೆ ವಹಿಸಬೇಕಾಗುತ್ತದೆ ಎಂಬುದರ ಬಗೆಗೆ ಕವಿ ಎಚ್ಚರಿಸಿದ್ದಾನೆ. ಸಹೋದರ ಸ್ನೇಹದಿಂದ ಮೃದುವಾದ ಹಾಗೂ ಕಲ್ಮಷವಿಲ್ಲದ ಮನಸ್ಸುಳ್ಳ ಅಣ್ಣ ತಮ್ಮಂದಿರನ್ನು ನಿನಗೆ ಶತ್ರುವೆಂದು ಹೇಳಿಕೊಟ್ಟು, ತೊಂದರೆಗೆ ಈಡುಮಾಡಿಸಿ ಸ್ಥಾನಭ್ರಷ್ಟರನ್ನಾಗಿ ಮಾಡಿಸುವ ಮಹಾ ಪಾಪಿಷ್ಠನೇ ಶ್ರೇಷ್ಠಮಂತ್ರಿ ಎನಿಸಿಕೊಳ್ಳುತ್ತಾನೆ" ಎಂಬ ವಿಚಾರಗಳನ್ನು ಸ್ವತಃ ಮಂತ್ರಿಯಾದ ಸುಖನಾಸನೇ ರಾಜಕುಮಾರನಿಗೆ ಹೇಳುತ್ತಿರುವ ಔಚಿತ್ಯವನ್ನು ಇಲ್ಲಿ ಅರಿಯಬೇಕು.

ಹಾದರವನ್ನು ಬೋಧಿಸುವ ದುಷ್ಟರು ಅರಸನ ಸುತ್ತ ಇರುತ್ತಾರೆ. ಅಂತಹವರನ್ನು ನೆಚ್ಚಿನವರೆಂದು, ಗೆಳೆಯರೆಂದು ನಂಬಿದ ಅರಸನ ನಾಶ ನಿಶ್ಚಿತ. ಈ ರೀತಿ ಸಾವಿರಾರು ದುರ್ವ್ಯವಹಾರಗಳಿಂದ ತುಂಬಿಹೋಗಿರುವ ಭಯಂಕರವಾದ ರಾಜಕೀಯವು ಎಂಥ ಮಹನೀಯನನ್ನೂ ಭ್ರಾಂತನಾಗುವಂತೆ ಮಾಡಿ ಬಿಡುತ್ತದೆ. ಆ ಕಾರಣದಿಂದ ರಾಜತಂತ್ರದೊಳಗೆ ರಾಜನೀತಿಜ್ಞನಾಗಿ ಕೆಟ್ಟ ಚಟಗಳು, ಸಿರಿಯ ಹಮ್ಮು, ಹೊಗಳಿಕೆ, ಸ್ತ್ರೀಲೋಲುಪತೆಗಳು ಮೋಸಗೊಳಿಸದಂತೆ ಮನಸ್ಸನ್ನು ಹತೋಟಿಯಲ್ಲಿ ಇಟ್ಟುಕೊಂಡಿರುವವನು ಮಾತ್ರ ಯಶಸ್ವಿ ಆಡಳಿತಗಾರನಾಗಲು ಸಾಧ್ಯವೆಂಬುದನ್ನು ಕವಿ ವಿವರವಾಗಿ ತಿಳಿಸುತ್ತಾನೆ.

ರಾಜನಾದವನ ಸ್ವಂತ ಬದುಕಿನ ಉತ್ತಮ ಸೂತ್ರಗಳನ್ನೂ ಕವಿ ಈ ಕೃತಿಯಲ್ಲಿ ನೀಡಿದ್ದಾನೆ.

"ದುಷ್ಟ ಚೇಷ್ಟಾಸಹಸ್ರ ದಾರುಣಮಪ್ಪ ರಾಜ್ಯ ತಂತ್ರದೊಳು .... ನಗದಂತು ಜಗಂ, ಗುರುಗಳ್ ಪೊಗಳ್ವಂತು ಜೀವಿಗಳ್ಗೆ ಶುಭಮಪ್ಪಂತು, ಉಬ್ಬೆಗಂ ಆಗದಂತು ನಂಟರ್ಗೆ, ಅಗಣಿತ ಗುಣವೆನಿಸಿ ನಿಲ್ವದು ಆ ಕಲ್ಪಾಂತಂ". ಒಬ್ಬ ಅರಸು ಜನ ತನ್ನ ಬಗೆಗೆ ಲಘುವಾಗಿ ಆಡಿಕೊಂಡು ನಗದಂತೆ ತನ್ನ ನಡವಳಿಕೆಯನ್ನು ತಿದ್ದಿಕೊಳ್ಳಬೇಕಂತೆ! (ಇದನ್ನು ಇವತ್ತಿನ ರಾಜಕೀಯ ವ್ಯಕ್ತಿಗಳಿಗೆ ಕಲಿಸುವವರಾರು?) ಇನ್ನು ಶ್ರೇಷ್ಠನಾದ ಗುರುವು ತನ್ನ ಶಿಷ್ಯನ ಅಧಃಪತನವನ್ನು ನೋಡಿ ತಲೆತಗ್ಗಿಸುವಂತೆ ಮಾಡದೆ ಅವನು ಹೊಗಳುವಂತೆ ಬದುಕಿತೋರಿಸಬೇಕು. ಅದೇ ರೀತಿ ತನ್ನ ಕುಲದ ನೆಂಟರು, ತಂದೆ ತಾಯಿ ಆಪ್ತ ಬಂಧುಗಳು 'ಹೀಗಾದನಲ್ಲಾ' ಎಂದು ವ್ಯಥೆಪಡದಂತೆ ಬದುಕಬೇಕಂತೆ. ಪಕ್ಷಪಾತವಿಲ್ಲದೆ ಕೇವಲ ಮಿತ್ರರು ಬಂಧುಗಳಷ್ಟೇ ಅಲ್ಲ ಸಕಲ ಜೀವಿಗಳಿಗೆ ಶುಭವಾಗುವಂತಹ ವಿಶಾಲವೂ ಜೀವಪರವೂ ಆದ ಚಿಂತನೆಗಳನ್ನು ಜೀವನ ದೃಷ್ಟಿಕೋನವನ್ನಿಟ್ಟುಕೊಂಡು ಆಡಳಿತ ನಡೆಸಬೇಕು. ಅದಕ್ಕೆ ಬೇಕಾಗುವ ಸಕಲ ಗುಣಗಣಗಳನ್ನೂ ಅಳವಡಿಸಿಕೊಂಡ, ಸಕಲ ಸಿದ್ಧತೆಯನ್ನುಳ್ಳ ವ್ಯಕ್ತಿತ್ವ ವಿಕಸನದ ಪಾಠಗಳನ್ನು ಮೈಗೂಡಿಸಿಕೊಂಡವನು ಉತ್ತಮ ಅರಸನಾಗಿ ಜನಮಾನಸದಲ್ಲಿ ನಿಲ್ಲುತ್ತಾನೆಂಬ ಸುಖನಾಸನ ಅಮೃತವಚನಗಳಿಂದ ತೊಳೆಯಲ್ಪಟ್ಟ ಚಂದ್ರಾಪೀಡನು

ಪವಿತ್ರನಾದನಂತೆ. ಲೋಕವನ್ನು ಅರ್ಥಮಾಡಿಕೊಳ್ಳಲು ಅಗತ್ಯವಾದ ಹೊಸಕಣ್ಣು ಬಂದಂತೆ, ಅನೇಕ ಸತ್ ಚಿಂತನೆ-ಸದ್ವಿಚಾರಗಳಿಂದ ಅಲಂಕರಿಸಲ್ಪಟ್ಟವನಂತೆ ಸಂತೋಷಗೊಂಡ ಮನಸ್ಸುಳ್ಳವನಾದನೆಂದು ಕವಿ ನಾಗವರ್ಮ ಹೇಳಿದ್ದಾನೆ. ಇಲ್ಲಿನ ಸುಖನಾಸನ ಕಿವಿಮಾತುಗಳು ಯಾವಕಾಲಕ್ಕೂ ಆಡಳಿತದ ಚುಕ್ಕಾಣಿ ಹಿಡಿಯಲು ಸಿದ್ಧವಾಗುತ್ತಿರುವವರಿಗೆ ಹೊಸಕಣ್ಣು ನೀಡುವಂತಹ ಸಾರ್ವಕಾಲಿಕ, ಸಾರ್ವದೇಶಿಕ ಸತ್ಯವೇ ಆಗಿದೆ.

ಹದಿಹರಯಕ್ಕೆ ಅಗತ್ಯವಾದ ಆಪ್ತಸಮಾಲೋಚನೆ

ಜವ್ವನದ ಒಡಲಿನಲ್ಲಿ ತುಂಬಿರುವ 'ತಮ' ಎಷ್ಟು ಅಪಾಯಕಾರಿ ಎಂಬುದನ್ನು ಕವಿ ವಿವರಿಸುತ್ತಾನೆ. ಹದಿಹರಯದಲ್ಲಿ ತೀವ್ರವಾಗಿ ಕಾಡುವ ಮಾನಸಿಕ ಕ್ಷೋಭೆ, ದಿಕ್ಕೆಡುವಂತೆ ಮಾಡುವ ಸಹಜ ದೇಹಭಾವಗಳು ತಮದ ಹಾಗೆ. ಅದನ್ನು ಭೇದಿಸುವುದು ಅಸಾಧ್ಯ. ಒಂದು ಬಗೆಯ ಕೆಟ್ಟ ಕತ್ತಲೆಯದು ಇಡೀ ಶರೀರವನ್ನು ಆಕ್ರಮಿಸುತ್ತದೆ. ಅದನ್ನು ನಿವಾರಿಸಲು ಕೈದೀವಿಗೆಗಳಿಗಾಗಲೀ ಸಹಸ್ರ ಕಿರಣದಳಿರುವ ಸೂರ್ಯನಿಗಾಗಲೀ ಸಾಧ್ಯವಿಲ್ಲ. "ಕೈದೀವಿಗೆಗಳ ಬೆಳಗಿಂ ಕಾಯ್ದೆಸೆವ ಸಹಸ್ರ ಕಿರಣನಿಂ ಭೇದಿಸಲ್ ಏಗೆಯ್ದುಂ ಬಾರದು ದಲ್ ತವೆ ಮಾಯ್ದೀ ಜವ್ವನದೊಡಲೊಳ್ ಇಡಿರ್ದ ತಮಂ" ಎಂದು ಕವಿ ನಿಟ್ಟುಸಿರು ಬಿಟ್ಟಿದ್ದಾನೆ. ಹಾಗಾದರೆ ಇದಕ್ಕೆ ಪರಿಹಾರವೇ ಇಲ್ಲವೇ? ಈ ಅಪಾಯಕಾರಿ ಕಾಲಘಟ್ಟವನ್ನು ವಿವೇಕದಿಂದ ಯಾರು ದಾಟಿಬಿಡುತ್ತಾರೋ ಅವರು ಮಹನೀಯರೇ ಸರಿ. ಯಾಕೆಂದರೆ ಈ ದೇಹ ದಾಹದ ಜ್ವರವು ಶಿಶಿರೋಪಚಾರದಿಂದ ವಶವಾಗುವಂಥದ್ದಲ್ಲ. ಅದು ಅಂಕುಶಕ್ಕೆ ಸಿಗದ ಇಂದ್ರಿಯ ದಿಗ್ಗಜಸಮೂಹದ ದಾಂಧಲೆಗೆ ಒಳಗಾಗಿರುತ್ತದೆ ಯಂತೆ. ಇಂತಹ ಮಣಿಸಲಾಗದ ಇಂದ್ರಿಯಗಳ ಸೆಳೆತದೊಂದಿಗೆ ಈ ಹದಿಹರಯ ದವರನ್ನು ದಿಕ್ಕು ತಪ್ಪಿಸುವ "ಪಿತೃಗಳುಪಾರ್ಜಿಸಿಟ್ಟ ಸಿರಿ, ಜವ್ವನದ ಏಟ್ಗೆ, ಪೆಱಂಗಿದಿಲ್ಲೆನಿಪ್ಪ ಅತಿಶಯ ರೂಪು, ಶಕ್ತಿಗಳ್ ಇವಲ್ಲವೆ ಹಾನಿಯ ಬಳ್ಳಿವಳ್ಳಿ" ಎಂದು ಮತ್ತಷ್ಟು ಕಾರಣಗಳನ್ನೂ ಇಲ್ಲಿ ಕವಿ ಪಟ್ಟಿಮಾಡಿದ್ದಾನೆ.

ಒತ್ತಿ ಬರುತ್ತಿರುವ ನಾನಾ ಆಕರ್ಷಣೆ, ಒತ್ತಡಗಳಿಂದ ಕಂಗಾಲಾಗುತ್ತಿರುವ, ಛಿದ್ರಗೊಳ್ಳುತ್ತಿರುವ ಯುವಶಕ್ತಿ, ಯೂತ್ ಅನ್‌ರೆಸ್ಟ್, ಯೂತ್ ಸೂಯಿಸೈಡ್, ಡ್ರಗ್ಸ್ ಇತ್ಯಾದಿ ನಾನಾ ಸಮಸ್ಯೆಗಳು ಪ್ರಸ್ತುತ ನಮ್ಮ ಸಮಾಜವನ್ನು ತೀವ್ರವಾಗಿ ಕಾಡುತ್ತಿವೆ. ಇವುಗಳ ಮೂಲವನ್ನು ಹುಡುಕುತ್ತಾಹೋಗುವ ಇವತ್ತಿನ ಸಮಾಜವಿಜ್ಞಾನಿಗೆ ದೊರೆಯುವ ಉತ್ತರವನ್ನೇ ಕವಿಯೂ ಇಲ್ಲಿ ಹೇಳಿದ್ದಾನೆ. ಈ ಸಮಸ್ಯೆ ಈಗಿನದು ಮಾತ್ರವಲ್ಲ ಸಾವಿರ ವರ್ಷಕ್ಕೆ ಹಿಂದಿನಿಂದಲೂ ಇತ್ತು. ಇದರ ಮೂಲಭೂತ ಕಾರಣವನ್ನು ನಮ್ಮ ಹಿರಿಯರು ಅಂದೇ ಕಂಡುಕೊಂಡಿದ್ದರೆಂಬುದಕ್ಕೆ ಈ ಮೇಲಿನ ಪದ್ಯ ಸಾಕ್ಷಿಯಾಗಿದೆ. ಇಲ್ಲಿ ಯುವಕರ ಅಧಃಪತನಕ್ಕೆ ನಾಲ್ಕು ಮುಖ್ಯ ಕಾರಣಗಳನ್ನು ಗುರುತಿಸಿದ್ದಾನೆ. ಒಂದು, ತಂದೆ ತಾಯಿಯರು ಹಾಗೂ ಹಿರಿಯರು ಸಂಪಾದನೆಮಾಡಿ ಇಟ್ಟಿರುವ ಅಪಾರವಾದ ಸಂಪತ್ತು ಯುವಕರಿಗೆ ದುಡಿಮೆಯ ಅರ್ಥವಾಗಲೀ, ಸಾರ್ಥಕತೆಯಾಗಲೀ

ಅರಿವಾಗದಂತೆ ಮಾಡಿಬಿಡುತ್ತದೆ. ಬೆವರಿನ ಬೆಲೆ ಅರಿಯದ ಭೋಗವನ್ನು ಅವರು ತಮ್ಮದಾಗಿಸಿಕೊಳ್ಳುತ್ತಿದ್ದಾರೆ. ಎರಡನೆಯದು ಸಹಜವಾಗಿಯೇ ಯೌವನದ ಅದಮ್ಯ ಹುಮ್ಮಸ್ಸು, ಏನನ್ನಾದರೂ ಜಯಿಸಬಲ್ಲೆನೆಂಬ ದೇಹ ಸಾಮರ್ಥ್ಯ, ಜೊತೆಗೆ ಅತಿಶಯವಾದ ಸೌಂದರ್ಯವೂ ಸೇರಿಕೊಂಡುಬಿಟ್ಟರೆ ಹಿಡಿಯಲು ಸಾಧ್ಯವಿಲ್ಲ, ಇಲ್ಲಿ ಕವಿ ಹೇಳುವ ಶಕ್ತಿಗಳಾವುವೆಂದರೆ ತಂದೆತಾಯಿಗಳು ಮಕ್ಕಳಿಗೆ ನೀಡುತ್ತಿರುವ ಸಾಮಾಜಿಕ ಮತ್ತು ಆರ್ಥಿಕ ಸ್ಟೇಟಸ್ ಹಾಗೂ ಅಧಿಕಾರಗಳು. ಇವುಗಳೇ ಯುವಶಕ್ತಿಯ ಹಾನಿಯ ಸರಮಾಲೆಗಳು ಎಂಬ ಕವಿಯ ವಿಚಾರದಲ್ಲಿ ಯಾವ ಅನುಮಾನವೂ ಇಲ್ಲ. ಖಂಡಿತವಾಗಿಯೂ ಇವುಗಳು ಯಾವಕಾಲಕ್ಕೂ ಯುವಶಕ್ತಿಯ ಸಾಧನೆ ಸಿದ್ಧಿಗೆ ತೊಡರು ಬಳ್ಳಿಗಳೇ ಆಗಿವೆ.

"ವರಯವ್ವನದಂದು ಪುರುಷನಂ ಪ್ರಕೃತಿ ರಜಂಬೊರೆದು ತಿರುಪುತ್ತೆ ಸುಟ್ಟುಱಿ ತೆರಳ್ಚಿ ತಱಗೆಲೆಯನ್ ಉಯ್ವ ತೆಱದಿಂದ ಎತ್ತಂ ಇರದೆ ಒಯ್ದುದು ತನ್ನಿಚ್ಚೆಗೆ." ಈ ಸುಂಟರ ಗಾಳಿಯು ಧೂಳನೆಬ್ಬಿಸಿ ತರಗೆಲೆಯನ್ನು ತಿರ್ರನೆ ತಿರುಗಿಸಿ ಎಲ್ಲಿಗೋ ಕೊಂಡೊಯ್ಯುವಂತೆ ಹೊಸಯವ್ವನದಲ್ಲಿ ದೇಹಪ್ರಕೃತಿಸ್ವಭಾವವು ಮನುಷ್ಯನನ್ನು ಎಲ್ಲಿಯೂ ನಿಲ್ಲಲಾಗದಂತೆ ರಜೋಗುಣವನ್ನು ಹೆಚ್ಚಿಸಿ ದಿಕ್ಕಾಪಾಲು ಮಾಡುವುದು. ವಿಷಯ ಅಭಿಲಾಷೆಗಳು ತಪ್ಪಿಸಿಕೊಳ್ಳಲಾಗದಂತೆ ಸೆಳೆದು, ಕಾಮಿನಿ ಕಾಂಚನಗಳಿಂದ ದಿಗ್ಭ್ರಮೆಯನ್ನು ಹುಟ್ಟಿಸಿ ವಿವೇಕವನ್ನು ನಾಶಮಾಡುವುವು. ಹಾಗಾಗಿ ಯೌವನಾವಸ್ಥೆಗೆ ಕಾಲಿಟ್ಟಿರುವವರು ಇವುಗಳನ್ನು ಚೆನ್ನಾಗಿ ಅರಿತಿರಬೇಕು ಇಲ್ಲದಿದ್ದರೆ ತರಗೆಲೆಯಂತೆ ಬದುಕು ಛಿದ್ರವಾಗಿ, ದಿಕ್ಕಾಪಾಲಾಗುವುದು ಖಚಿತವೆಂದು ಕವಿ ಕಿವಿಮಾತು ಹೇಳಿದ್ದಾನೆ. ಇದಕ್ಕೆ ಉದಾಹರಣೆಯೋ ಎಂಬಂತೆ ಮುಂದೆ ಈ ಕೃತಿಯಲ್ಲಿ ಎಂಥ ವಿದ್ಯಾವಂತ ನಾದರೂ, ಸಂಸ್ಕಾರವಂತನಾದರೂ ಯೌವ್ವನದ ಸೆಳೆತಕ್ಕೆ ಸಿಕ್ಕ ಪುಂಡರೀಕನ ವ್ಯಥೆಯ ಕಥೆ ತೆರೆದುಕೊಳ್ಳುವುದನ್ನು ನಾವು ಗಮನಿಸಬಹುದು.

ಇಂತಹ ಆಪ್ತ ಸಮಾಲೋಚನೆಯು ಪರಿಶುದ್ಧರಾದವರ ಮನಸ್ಸಿಗೆ ಹಿಡಿಯುತ್ತದೆ. ಸ್ವಭಾವತಃ ದುರ್ಜನನಾದವನಿಗೆ ಇಂತಹ ಉಪದೇಶಗಳು ವಿವೇಕವನ್ನು ಉಂಟು ಮಾಡುವುದಿಲ್ಲ. "ವಿನಯಮನಾಗಿಸಲ್ ನೆರೆಯದು ಅನ್ವಯಮುಂ ಶ್ರುತಮುಂ ಸ್ವಭಾವ ದುರ್ಜನನೆನಿಪಂಗೆ" (೩-೭೫) ಯಾವುದೇ ವ್ಯಕ್ತಿ ಪಡೆದಿರುವ ವಿದ್ಯೆಯಾಗಲೀ ಅವನ ಕುಲವಾಗಲೀ ವಿನಯವಂತನನ್ನಾಗಿ ಮಾಡುತ್ತದೆಂದು ನಂಬಲಾಗುವುದಿಲ್ಲ. ಹೇಗೆಂದರೆ "ಶಿಶಿರೈಕ ನಿಧಾನಮಪ್ಪ ಚಂದನದೊಳೆ ಪುಟ್ಟಕಿಚ್ಚು ಸುಡದಿರ್ಪುದೇ?" ತಂಪಿನ ಏಕೈಕ ಸಂಪತ್ತಿನಂತಿರುವ ಶ್ರೀಗಂಧದಲ್ಲಿ ಹುಟ್ಟುವ ಬೆಂಕಿಯು ಸುಡದೆ ತಂಪಾಗಿರುತ್ತದೆಯೇ? ಬೆಂಕಿಯನ್ನು ಆರಿಸಲು ಶಕ್ತವಾದ ನೀರಿನ ಒಡಲಲ್ಲೇ ಬಡಬಾಗ್ನಿ ಉದಿಸಿದರೂ ಅದು ಉರಿಯುವುದಿಲ್ಲವೇ? ಅದೇ ರೀತಿ "ಒಳ್ಳೆಯ ತಂದೆ ತಾಯಿಗಳ ಹೊಟ್ಟೆಯಲ್ಲಿ ಹುಟ್ಟಿದ ಮಾತ್ರಕ್ಕೆ ಮಕ್ಕಳು ಒಳ್ಳೆಯವರಾಗುತ್ತಾರೆಂಬ ನಂಬುಗೆ ಏನಿಲ್ಲ" ಎಂಬ ಕಟು ಸತ್ಯವನ್ನೇ ಕವಿ ಹೇಳಿದ್ದಾನೆ. ಅಂದರೆ ಅತ್ಯಂತ ಉತ್ತಮ ಕುಟುಂಬ, ಸಂಸ್ಕೃತಿ ನಡಾವಳಿಗಳ

ಹಿನ್ನೆಲೆಯಿದ್ದರೂ ಸಹ ಯೌವ್ವನದಲ್ಲಿ ಹಾದಿ ತಪ್ಪಿಬಿಡುವ ಸಾಧ್ಯೆಯಿರುವುದರಿಂದ ಪ್ರತಿಯೊಬ್ಬರೂ ಎಚ್ಚರಿಕೆಯಿಂದಲೇ ಇರಬೇಕಾಗುತ್ತದೆಂಬುದು ಕವಿಯ ವಿಚಾರವಾಗಿದೆ.

ದುರ್ಜನರ ಸಹವಾಸದಿಂದಾಗಿ, ಹಾಗೂ ಮೋಹಪಾಶಕ್ಕೆ ಸಿಲುಕಿ ಮನ್ಮಥನ ಹೂವಿನ ಬಾಣದಿಂದ ಸೀಳಿಹೋದ ಎದೆಯವನಿಗೆ ಗುರುಗಳ ಉಪದೇಶಾಮೃತವು ಹಿತವಾಗುವುದಿಲ್ಲ. ಹಾದರವನ್ನು ಬೋಧಿಸುವವರು ನೆಚ್ಚಿನ ಗೆಳೆಯರು ಎನಿಸಿಕೊಳ್ಳುತ್ತಾರೆ. ಕೆಟ್ಟ ಚಟಗಳು ಶರೀರದ ವಿಷಯ ಭೋಗಗಳ ಕಡೆಗೆ ಸೆಳೆಯುತ್ತವೆ [ಬೆಸನಂಗಳ್ ತನುವಿಚ್ಚೆಗೊಯ್ವುದು]. ಅವುಗಳ ಮೇಲೆ ಹತೋಟಿ ಇರಬೇಕೆಂಬ ಆಪ್ತ ಸಲಹೆಗಳು ಎಂದಿಗೂ ಎಲ್ಲರಿಗೂ ಕಾಲಾತೀತ ದೇಶಾತೀತವಾಗಿ ಸಲ್ಲುವಂತಹವುಗಳಾಗಿವೆ.

ಧನಾಪೇಕ್ಷೆ- ಲಕ್ಷ್ಮೀವಿಡಂಬನೆ

ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಬೇಕಾದವರು, ಅಧಿಕಾರಗಳನ್ನು ಹಿಡಿಯುವವರು, ಅರಸನಾಗುವವರು ಮೊದಲು ಈ ಸ್ಥಿರೆಯಲ್ಲದ, ಅತಿ ನಿಷ್ಠುರ ಕಠಿಣ ಸ್ವಭಾವದವಳಾದ, ವೀರಯೋಧರ ಕತ್ತಿಗಳ ಸಮೂಹವೆಂಬ ನೈದಿಲೆಯ ಗುಂಪಿನಲ್ಲಿ ಅಲೆಮಾರಿ ದುಂಬಿಯಂತಿರುವ ವಿಶ್ವಾಸಪಾತ್ರಳೆಂದು ಲಕ್ಷ್ಮಿಯನ್ನು ನಂಬಿರುವ ಜನರು, ಅವಳ ಬಗೆಗೆ ಮೊದಲು ಸರಿಯಾಗಿ ಪರ್ಯಾಲೋಚಿಸಬೇಕು.

ಈ ಲಕ್ಷ್ಮಿ ಎಂಥವಳೆಂದರೆ "ಸ್ಥಿರೆಯಲ್ಲದವಳನ್, ಅತಿನಿಷ್ಠುರೆಯಂ, ಭಟಖಡ್ಗ ಮಂಡಲೋತ್ಪಲವನದೊಳ್ ತಿರುಪಾಱಡಿಯಂ (ವಿಭ್ರಮಭ್ರಮರಿ) ನಚ್ಚಿನ ಸಿರಿಯಂ ಭಾವಿಪುದು ಮುನ್ನಮೇ ಶುಭಕಾಮಂ", "ಸುರೆಯಿಂ (ಅಮೃತ) ಸೊರ್ಕು, ಸರೋರ್ವೀರುಹ ಕಿಸಲಯದಿಂ ರಾಗಮಂ, ಕೌಸ್ತುಭ ಪ್ರಸ್ತರದಿಂ ನೈಷ್ಠಯಮಂ, ದುರ್ವಿಷಮ ವಿಷದಿನುನ್ಮೋಹಮಂ, ಮುಗ್ಧದೋಷಾಕರನಿಂ (ಚಂದ್ರ) ವಕ್ರತ್ವಮಂ ದುಶ್ಶ್ರವನನ ಹಯದಿ ವೇಗಮಂ ತಾಳ್ದಿ ನೀರಾಕರದಿಂದೆಟ್ಟೆಂದಳಂತಾ ಸಿರಿ ತನ್ನ ಸಹಭವರಂ ಪೋಲ್ವುದೇಂ ಚೋದ್ಯಮಾಯ್ತೆ" ಎಂದು ಕವಿ ಲಕ್ಷ್ಮಿಯನ್ನು ವಿಡಂಬಿಸುತ್ತಾನೆ. ಸಮುದ್ರದಲ್ಲಿ ಹುಟ್ಟಿದ ಲಕ್ಷ್ಮಿಯು ತನ್ನ ಸಹಜಾತರಾದ ಅಮೃತ, ಕಲ್ಪವೃಕ್ಷ, ಕೌಸ್ತುಭಮಣಿ, ವಿಷ, ಚಂದ್ರ, ಉಚ್ಚೈಃಶ್ರವಸೆಂಬ ಕುದುರೆ ಮುಂತಾದ ಒಂದೊಂದರಿಂದಲೂ ಒಂದೊಂದು ಗುಣವನ್ನು ಕಲಿತುಕೊಂಡು ಹುಟ್ಟಿಬಂದಿದ್ದಾಳೆ. ಹಾಗಾಗಿ ಅವಳಲ್ಲಿರುವ ಸೊಕ್ಕು, ಅನುರಾಗ, ನೈಷ್ಠುರ್ಯ, ದಯಾಹೀನತೆ, ಕಾಠಿಣ್ಯ, ಇತರರನ್ನು ಸಮ್ಮೋಹ ಗೊಳಿಸುವ ಉನ್ಮೋಹಕತ್ವ, ವಕ್ರತ್ವ, ಕುಟಿಲತೆ, ಚಂಚಲತ್ವಗಳು ಅವಳಿಗೆ ಸಹಜವೇ ಆಗಿದೆ. ಲೋಕದಲ್ಲಿ ಸಹೋದರರಲ್ಲಿ ಹೋಲಿಕೆ ಇರುವುದು ಆಶ್ಚರ್ಯವೇನಲ್ಲ ಎಂದು ಚಮತ್ಕಾರದಿಂದ ಸಿರಿಯ ಹಾಗೂ ಸಿರಿಯನ್ನು ಹೊಂದಿದ ಜನರ ಗುಣಗಳನ್ನು ಕವಿ ಇಲ್ಲಿ ಪಟ್ಟಿಮಾಡಿದ್ದಾನೆ.

ಈ ಲಕ್ಷ್ಮೀ ತಿರುಗಾಲುತಿಪ್ಪಿ, ಒಂದೆಡೆ ನಿಲ್ಲವುದಿಲ್ಲ. ಏಕೆಂದರೆ ಒಂದೆ ಸಮನೆ ಮುಂದಗಿರಿಯ ಭೋರೆಂದು ತಿರುಗುತ್ತಿರುವಾಗ ಹುಟ್ಟಿದ ಸಂಸ್ಕಾರ ಅವಳನ್ನು ಬಿಟ್ಟಿಲ್ಲವಂತೆ!

"ಶ್ರುತಮಂ ಕಯ್ಕೊಳ್ಳಳ್ ಆಚಾರಮನ್ ಅವಧರಿಸಳ್ ಸತ್ಯಮಂ ಬಾರ್ತೆಗೆಯ್ಯಳ್, ಲಕ್ಷಣಮನೆಣಿಸಳ್, ಔದಾರ್ಯಮಂ ಚಿಂತಿಸಳ್, ಸಂಗತಿಯಂ ವಿಶ್ವಾಸಿಸಳ್, ಸುಂದರತರ ವಪ್ಪುದಂ ನೋಡಳ್ ಎಂತುಂ ವಿಶೇಷಜ್ಞತೆಯಂ ತಾನೇತಕ್ಕೆಂಬಳ್" ಇಂತಹ ಸಿರಿಯನ್ನು ತಿಳಿದೂ ತಿಳಿದೂ ಹೊಗಳುವುದಕ್ಕೆ ಹೊರಡುವವನು ದಡ್ಡನೇ ಸರಿ. ಲಕ್ಷ್ಮಿಯು ಧೈರ್ಯವಂತನನ್ನು ಹುಚ್ಚನೆಂದು ಹಾಸ್ಯಮಾಡುತ್ತಾಳೆ. ಸತ್ಕುಲ ಪ್ರಸೂತನನ್ನು ಹಾವೆಂದು ದಾಟಿಹೋಗುತ್ತಾಳೆ, ಶೂರನನ್ನು ಕತ್ತರಿಸಿ ಬಿಡುವವನೆಂದು ಶಂಕೆಯಿಂದ ಒಪ್ಪುವುದಿಲ್ಲವಂತೆ! ಉದಾರಿಯಾದವನನ್ನು 'ತಲೆಹರಟೆ' ಎಂದು ಹೀಯಾಳಿಸುತ್ತಾಳಂತೆ! ವಿದ್ವಾಂಸನನ್ನು ಮುಟ್ಟುವುದೂ ಇಲ್ಲ, ಅಸ್ಪೃಶ್ಯನೆಂಬಂತೆ ದಾನಿಯಿಂದ ದೂರವಿರುತ್ತಳೆ, ವಿನಯವಂತನನ್ನು ದೂರದಿಂದಲೇ ನೋಡಿ ಪಾಪಿಷ್ಠನೆಂದು ಹತ್ತಿರಕ್ಕೆ ಸುಳಿಯುವುದಿಲ್ಲ. ಇಂತಹ ಲಕ್ಷ್ಮಿಯನ್ನು ನಂಬಬೇಡ.

ಇವಳು ದುರಾಸೆಯನ್ನು ಹೆಚ್ಚಿಸುತ್ತಾಳೆ, ಕೆಟ್ಟಪರಿಣಾಮವನ್ನು ಉಂಟುಮಾಡುತ್ತಾಳೆ. ದುರ್ಜನರನ್ನು ಪ್ರೀತಿಸುತ್ತಾಳೆ. ಎಲ್ಲರನ್ನೂ ತನ್ನ ವಿರೋಧಿ ನಡವಳಿಕೆಗಳಿಂದ ಮರುಳುಗೊಳಿಸುತ್ತಾಳೆ. ದೀಪದ ಕುಡಿಯು ಎಷ್ಟೆಷ್ಟು ಪ್ರಕಾಶಮಾನವಾಗಿ ಉರಿಯು ತ್ತದೆಯೋ ಅಷ್ಟಷ್ಟು ಹೆಚ್ಚಾಗಿ ಬಹಳ ಕಪ್ಪಾದ ಕಾಡಿಗೆಯನ್ನು ಹೊರಕ್ಕೆ ಹಾಕುತ್ತದೆಯಲ್ಲವೆ? ಅದೇ ರೀತಿ ಲಕ್ಷ್ಮಿಯು ಎಷ್ಟೆಷ್ಟು ಹೆಚ್ಚಾಗಿ ಒಂದು ಕಡೆ ಸೇರಿ ಬೆಳಕಿಗೆ ಬರುತ್ತಾಳೋ ಅಷ್ಟಷ್ಟು ಹೆಚ್ಚಾಗಿ ಅಲ್ಲಿ ಪರಹಿಂಸೆ ಪರಸ್ತ್ರೀಹರಣ ಮೊದಲಾದ ಹೇಸಿಗೆ ಕೆಲಸವನ್ನು ಮಾಡಿಸುತ್ತಾ ತಾವು ಮಾಡುವುದು ಸರಿಯೆಂಬ ಭ್ರಾಂತಿಯನ್ನು ಜನರಲ್ಲಿ ಹುಟ್ಟಿಸುತ್ತಾಳಂತೆ. ಇವಳಿಂದ ಸದ್ಗುಣಗಳು ನಾಶವಾಗುತ್ತವೆ, ಇವಳು ಚಪಲ ಸ್ವಭಾವದ ಇಂದ್ರಿಯಗಳನ್ನು ಗೋರಿಗೊಳಿಸುತ್ತಾಳೆ. ಉತ್ತಮ ನಡತೆಯೆಂಬ ಚಿತ್ರವನ್ನು ಕಪ್ಪುಹೊಗೆಯಿಂದ ಅಂದ ಗೆಡಿಸುತ್ತಾಳೆ. ಧರ್ಮವೆಂಬ ಚಂದ್ರಬಿಂಬಕ್ಕೆ ಭಯಂಕರ ರಾಹುವಿನ ನಾಲಗೆಯಂತಿದ್ದಾಳೆ. ಚಂಚಲೆಯಾದ ಇವಳು ಕಾಮಿನಿ ಕಾಂಚನವೇ ಮೊದಲಾದವುಗಳ ಆಸೆಯೆಂಬ ವಿಷದ ಬಳ್ಳಿಯನ್ನು ಬೆಳೆಸುವ ಜಲಧಾರೆಯಂತೆ ಇದ್ದಾಳೆ. ಅಂತಹ ಸಿರಿಯ ಕುರಿತು ಎಚ್ಚರಿಕೆಯಿಂದ ಇರಬೇಕು. ಇವಳನ್ನು ಒಲಿಸಿಕೊಂಡು ಹೇಗಾದರೂ ಮಾಡಿ ತನ್ನ ಬಳಿ ಉಳಿಸಿಕೊಳ್ಳಬೇಕೆಂದು ಜನ ನಾನಾ ಉಪಾಯಗಳನ್ನೇ ಮಾಡುವರಾದರೂ ಅವಳು ಯಾರ ಬಳಿಯಲ್ಲೂ ಒಕ್ಕತನವಿರುವವಳಲ್ಲ. ಯಾರ ಆತ್ಮೀಯತೆಗೂ ಕಟ್ಟುಬೀಳುವವಳಲ್ಲ!

ಚಿತ್ರಗತಿಯಾಗಿಯುಂ ನೋಡೆ ಸಂಚರಿಸುವಳ್ (ಚಿತ್ರದಲ್ಲಿ ಬರೆದಿಟ್ಟರೂ ಮತ್ತೆಲ್ಲಿಗೋ ಹೊರಟುಬಿಡುವಳು), ಕರುವಿಟ್ಟೊಡಂ ನಿಲಿಸಲರಿದೆನಿಸಿ ಚೆದಱುವಳ್ (ಎರಕಹೊಯ್ದು ನಿರ್ಮಿಸಿದರೂ ಬಂದು ನಿಲ್ಲಲಾರಳು), ಕಂಡರಿಸಿದೊಡಮಲ್ಲಿ ನಿಲಲಾರಳೆನಿಸುವಳ್; ಅಷ್ಟೇ ಅಲ್ಲ ಹೆಸರು ಕೇಳಿದರೂ ಸಾಕು ದಕ್ಕುವವಳಲ್ಲ, ಪ್ರೀತಿಯಿಂದೊಮ್ಮೆ ನೆನೆಸಿಕೊಂಡರೂ ವಂಚಿಸುತ್ತಾಳೆ. ಆದ್ದರಿಂದ ಸಿರಿಯ ಅಣಕವು ನಿನ್ನನ್ನು ಮೋಸಗೊಳಿಸದಂತೆ ನೋಡಿಕೋ ಎಂದು ಶುಕನಾಸನು ಚಂದ್ರಾಪೀಡನಿಗೆ ಉಪದೇಶಿಸುತ್ತಾನೆ.

ಇವತ್ತು ಲಕ್ಷ್ಮೀ ಕಟಾಕ್ಷ ಯಾರ ಕಡೆಗಿದೆ. ಅವಳ ಹಿಂದೆಬಿದ್ದವರನ್ನು ಅವಳು ಹೇಗೆ ಬೀದಿಗೆಳೆಯುತ್ತಿದ್ದಾಳೆ, ಕಾಳಸಂತೆಯ ಮಹಾಸಾಮ್ರಾಜ್ಞಿಯಾಗಿ ಮೆರೆಯುತ್ತಿದ್ದಾಳೆಂಬ ಎಲ್ಲ ವಿಚಾರಗಳೂ ತಿಳಿದಿದ್ದರೂ ನಾವು ಮಹಾಲಕ್ಷ್ಮಿಯನ್ನು ಚಿತ್ರಪಟದಲ್ಲೋ, ಬೆಳ್ಳಿ ಬಂಗಾರದಲ್ಲೋ ಎರಕಹೊಯ್ದು, ಪ್ರತಿಮೆಮಾಡಿ ವಿಶೇಷವಾಗಿ ವ್ರತಹಿಡಿದು ಕೃಪೆಗಾಗಿ ಬೇಡುತ್ತಿರುವುದೇನೂ ಕಡಿಮೆಯಾಗಿಲ್ಲ.

ಕರ್ಣಾಟಕ ಕಾದಂಬರಿಯು ಕೇವಲ ಅಮರ ಪ್ರೇಮ ಕಾವ್ಯವಷ್ಟೇ ಅಲ್ಲ. ಅದನ್ನೊಂದು ಸಾಂಸ್ಕೃತಿಕ ಪಠ್ಯವಾಗಿ ನಾವು ಮರುಓದಿಗೆ ಒಳಪಡಿಸುವ ಆವಶ್ಯಕತೆಯಿದೆ. ಈ ಕೃತಿಯಲ್ಲಿ ನಾನಾ ಸಂಸ್ಕೃತಿ, ಸಮುದಾಯಗಳು, ಅವರ ರೀತಿ ನೀತಿ ನಡವಳಿಕೆ, ನಂಬಿಕೆಗಳು, ಆಚರಣೆಗಳು, ಸಾಮಾಜಿಕ ವ್ಯವಸ್ಥೆಗಳು, ಸ್ತ್ರೀ ಪುರುಷ ಸಂಬಂಧಗಳು ಅವರ ಮನೋಲೋಕ ಸೂಕ್ಷ್ಮವಾಗಿ ಅನಾವರಣಗೊಂಡಿದೆ. ವಾಸ್ತವ ಮತ್ತು ಪುರಾಣದ ನಡುವೆ ವಿಶಿಷ್ಟಕೊಂಡಿಯನ್ನು ಬೆಸೆದು ಅಪೂರ್ವ ಅನುಭವವನ್ನು ಈ ಕೃತಿ ನೀಡುತ್ತದೆ. ಅತ್ಯುತ್ತಮ ಜೀವನ ನಡೆಸುವುದಕ್ಕೆ ಬೇಕಾದ ಅಪೂರ್ವವಾದ ಯಾವುದೇ ಮಹಾಕಾವ್ಯದಲ್ಲಿರಬಹುದಾದ ಸಂದೇಶಗಳು ಈ ಕೃತಿಯಲ್ಲಿವೆ. ಹಸನಾದ ಬಾಳಿಗೆ ಆವಶ್ಯಕವಾದ ಸಮ್ಯಮ, ಸನ್ನಡತೆ, ಸತ್‌ಚಿಂತನೆ, ಮೌಲ್ಯಗಳನ್ನು ಇದು ಒಳಗೊಂಡಿದೆ. ಅವುಗಳ ಕಡೆಗೂ ನಾವು ಗಮನಕೊಟ್ಟು ಅನುಸಂಧಾನ ಮಾಡಿದಾಗ ನಾಗವರ್ಮನಂತಹ, ಬಾಣನಂತಹ ಮಹಾಕವಿಗಳಿಗೆ ಸಲ್ಲಬೇಕಾದ ಗೌರವವನ್ನು ಸಲ್ಲಿಸಿದಂತಾಗುತ್ತದೆ.

■

ಹರಿಹರನ ರಗಳೆಗಳ ಗದ್ಯ

◆

ಡಾ. ಆರ್. ಲಕ್ಷ್ಮೀನಾರಾಯಣ

ಹರಿಹರ ಮತ್ತು ರಾಘವಾಂಕರ ವಿಶಿಷ್ಟತೆಯನ್ನು ಬಣ್ಣಿಸುವ ಪ್ರೊ. ಎಸ್.ವಿ. ರಂಗಣ್ಣನವರ ಒಂದು ಹಳೆಯ ಮಾತಿದೆ. ಅದೆಂದರೆ–"ಹರಿಹರ ರಾಘವಾಂಕರು ಕನ್ನಡ ಕಾವ್ಯದೇವಕಿಯನ್ನು ಚಂಪೂಕಂಸನ ಸೆರೆಯಿಂದ ಬಿಡಿಸಿದ ಶ್ರೀಕೃಷ್ಣಬಲರಾಮರು." ವಚನಗಳು ರಚಿತವಾದದ್ದು ಸಾಹಿತ್ಯ ರಚನೆ ಮಾಡಬೇಕೆಂಬ ಉದ್ದೇಶಹೊಂದಿರದ ಭಕ್ತರಿಂದ ಎಂಬುದನ್ನು ಹಾಗೂ ಅದು ಕಾವ್ಯವಲ್ಲ ಎಂಬುದನ್ನು ಮನಸ್ಸಿಗೆ ತಂದುಕೊಂಡರೆ ಮೇಲಿನ ಮಾತು ಹೆಚ್ಚು ಅರ್ಥಪೂರ್ಣವೆನಿಸುತ್ತದೆ. ರಗಳೆಯ ರಚನೆಯ ಮೂಲಕ ಚಂಪೂ ಕಾವ್ಯ ಪದ್ಧತಿಗೆ ಹರಿಹರನು ಒಂದು ಬಲವಾದ ತಡೆಯೊಡ್ಡಿ ಪರ್ಯಾಯವೊಂದನ್ನು ರೂಢಿಗೆ ತಂದ. ಅವನೂ ಚಂಪೂ ಕಾವ್ಯ ಬರೆದಿರುವನಾದರೂ ಅದು ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಿದೆ ಅಷ್ಟೆ. ಅವನ ನಂತರದ ರಾಘವಾಂಕನಂತೂ ಷಟ್ಪದಿ ಕಾವ್ಯ ಸಂಪ್ರದಾಯದ ಪ್ರವರ್ತಕನಾಗುವ ಮೂಲಕ ಚಂಪೂಕಾವ್ಯಸಂಪ್ರದಾಯಕ್ಕೆ ಮುಕ್ತಾಯ ಹಾಡಿದ.

ವಚನಕಾರರಾದ ಕೂಡಲೇ ಬಂದ ತಕ್ಷಣದ ಕವಿಯೆಂದರೆ ಹರಿಹರನೇ. ಹಾಗಾಗಿ ಅವನೊಬ್ಬ ಸಂಧಿಕಾಲದ ಕವಿ ಎನ್ನಬಹುದು. ಹಿಂದಿನ ಚಂಪೂ ಕವಿಗಳಿಗೂ ತದನಂತರದ ಕವಿ ಹರಿಹರನಿಗೂ ಮಧ್ಯವರ್ತಿಯಾಗಿ ಬಂದ ವಚನಸಾಹಿತ್ಯದ ನೇರ ಪರಿಣಾಮ ಮತ್ತು ಪ್ರಭಾವಗಳ ಹಿನ್ನೆಲೆಯಲ್ಲಿ ಕಾವ್ಯ ರಚನೆ ಮಾಡಿದ ಕವಿ ಅವನಾದ್ದರಿಂದ ಅದರೆಲ್ಲ ಸಕಾರಾತ್ಮಕ ಫಲಗಳು ಹರಿಹರನ ರಗಳೆಗಳಿಗೂ ದೊರೆಕೊಂಡಿವೆ.

ಹರಿಹರನ ರಗಳೆಗಳ ಗದ್ಯದ ವಿಶಿಷ್ಟತೆ ಮತ್ತು ಅನನ್ಯತೆಗಳನ್ನು ಮುಖ್ಯವಾಗಿ ಅವನಿಗಿಂತ ಹಿಂದಿನ ಚಂಪೂ ಗದ್ಯ, ಅದರಲ್ಲೂ ಗದ್ಯ ಪ್ರಾಚುರ್ಯದಿಂದ ಕೂಡಿದ ದುರ್ಗಸಿಂಹನ ಪಂಚತಂತ್ರದ ಗದ್ಯ ಮತ್ತು ನಯಸೇನನ ದೇಸಿ ಪ್ರಾಚುರ್ಯದ ಗದ್ಯಕ್ಕೆ ಹೋಲಿಸಿಯೇ ಕಂಡುಕೊಳ್ಳಬೇಕಾಗುತ್ತದೆ. ಪಂಪ, ರನ್ನ, ಜನ್ನ, ನೇಮಿಚಂದ್ರ, ಅನಂತರದ ರುದ್ರಭಟ್ಟನೇ ಮೊದಲಾದ ಕವಿಗಳ ಚಂಪೂ ಕಾವ್ಯಗಳಲ್ಲಿ ಚಂಪು

ಬಳಕೆಯಾಗುವುದೇನದ್ದರೂ ಕಥನದ ಕೊಂಡಿಯಾಗಿ ವಸ್ತು ಕಥನದ ಅಥವಾ ಇತಿವೃತ್ತದ ನಿರೂಪಣೆಗೆ ಮತ್ತು ಕ್ವಚಿತ್ತಾಗಿ ವರ್ಣನೆಗೆಳಿಗೆ. ಅಲ್ಲೊಂದು ಇಲ್ಲೊಂದು ಅಪವಾದಗಳು ಇರಬಹುದಾದರೂ, ಚಂಪೂ ಕಾವ್ಯಗಳ ಗದ್ಯವೆಂದರೆ ಸಾಮಾನ್ಯವಾಗಿ ವೃತ್ತಗಂಧಿಯಾದ ಗದ್ಯ, ಸಂಸ್ಕೃತ ಪ್ರಾಚುರ್ಯದಿಂದ ಕೂಡಿದ ದೀರ್ಘವಾದ ಸಮಾಸಘಟಿತ ಶ್ಲೇಷ, ಅರ್ಥಾಂತರನ್ಯಾಸ, ಮುಕ್ತಪದಗ್ರಹಣ, ವಿರೋಧಾಭಾಸಾದಿ ಅಲಂಕಾರಗಳಿಂದ ನಿಬಿಡವಾದ ಗದ್ಯ. ಪಂಪಭಾರತದಲ್ಲಿ ಅರಿಕೇಸರಿಗೆ ಯೌವನೋದಯವಾದ ಸಂದರ್ಭದ ನಖ-ಶಿಖಾಂತ ವರ್ಣನೆಯನ್ನು ೫೫ ಪಂಕ್ತಿಗಳಲ್ಲಿ ಕವಿ ನೀಡಿದ್ದಾನೆ. ಪಾಂಡು-ಮಾದ್ರಿಯರ ಸಮಾಗಮದ ಸಂದರ್ಭದ ವಸಂತ-ವರ್ಣನೆ, ಸುಭದ್ರಾ ವಿವಾಹೋತ್ತರದ ಸಂದರ್ಭದ ವರ್ಣನೆ, ಅರ್ಜುನನ ವೇಶ್ಯಾವಾಟಿ ವಿಹಾರದ ವರ್ಣನೆ, ಮೃಗಯಾ ಸಂದರ್ಭದ ವರ್ಣನೆ, ಅರ್ಜುನನ ಸಾಹಸಗಳ ವರ್ಣನೆ ಇಂಥ ಕೆಲವು ಸಂದರ್ಭಗಳೇ ಗದ್ಯದ ವರ್ಣನೆ ಇರುವಂಥವು. ಇಲ್ಲೆಲ್ಲ ಅತಿಶಯೋಕ್ತಿಯಿದ್ದರೂ ಮನೋಹರವಾಗಿದೆ. ಬಂದಿರುವ ಹೋಲಿಕೆಗಳೂ ಒಟ್ಪಾರೆ ಹದವರಿತು ಬಂದಿವೆಯೆಂದೇ ಹೇಳಬಹುದು. ದೇಸಿ ನುಡಿಗಟ್ಟುಗಳು, ನಾದಸೂಕ್ಷ್ಮಗಳನ್ನು ತಕ್ಕಮಟ್ಟಿಗೆ ಕಾಣಬಹುದು.. ಆದರೆ ಇದೇ ಮಾತನ್ನು ಪಂಪನ ನಂತರದ ಜನ್ನ, ನೇಮಿಚಂದ್ರ, ರುದ್ರಭಟ್ಟ ಷಡಕ್ಷರಿ ಮುಂತಾದವರ ಗದ್ಯದ ಬಗ್ಗೆ ಹೇಳಲಾಗುವುದಿಲ್ಲ. ಅದೆಲ್ಲ ಪಾಂಡಿತ್ಯ ಪ್ರದರ್ಶನದಿಂದ ತುಂಬಿರುವ ಗದ್ಯ. ದುರ್ಗಸಿಂಹನ ಗದ್ಯದಲ್ಲಿ ಕಂಡು ಬರುವ ನಾಣ್ಣುಡಿ, ದೇಸಿವೆತ್ತ ಪೊಸ ನುಡಿ, ಜಾಣ್ಣುಡಿ, ಚಿಕ್ಕ ಚಿಕ್ಕ ವಾಕ್ಯಗಳು ಉಪಮಾ ಸಮೃದ್ಧಿ ಇದೆಲ್ಲ ಮುಂದಿನ ನಯಸೇನನಲ್ಲೂ ಮುಂದುವರಿದಿದೆ. ನಯಸೇನನಲ್ಲಂತೂ ಎಕ್ಕೆ ಎಕ್ಕೆಯಾಗಿ ಬರುವ ಸಾದೃಶ್ಯ ಮಾಲಿಕೆಗಳಲ್ಲಿ ಅವನ ವಿಸ್ತಾರವಾದ ಜನಜೀವನದ ಗಾಢ ಪರಿಚಯ, ತಿರುಳ್ಗನ್ನಡದ ಹೊಗರು ಹೆಚ್ಚಾಗಿಯೇ ಕಂಡುಬರುತ್ತದೆ.

ವಚನಗದ್ಯವಂತೂ ವಿಶಿಷ್ಟವಾದ ಲಯ, ನಾದ ಮಾಧುರ್ಯ, ದೃಷ್ಟಾಂತ, ರೂಪಕ, ಉಪಮೆ, ಗಾದೆ ಮಾತುಗಳ ಬಳಕೆಯಿಂದ ತನ್ನ ಅನನ್ಯತೆಗೆ ಹೆಸರಾಗಿದೆ.

ಪದ್ಯ ಭಾವದ ವಾಹಕ, ಗದ್ಯ ಆಲೋಚನೆಯ ಮತ್ತು ವಸ್ತು ಕಥನದ ವಾಹಕ ಎಂಬುದು ಸಾಮಾನ್ಯವಾದ ತಿಳಿವಳಿಕೆಯ ಸಂಗತಿಯಾದರೂ ಅದಕ್ಕೆ ಅಪವಾದಗಳು ಎಲ್ಲ ಭಾಷೆಗಳಲ್ಲೂ ಇರುತ್ತವೆ. ಗದ್ಯ ಪದ್ಯಗಳ ಕಾರ್ಯಕ್ಷೇತ್ರಗಳು ಅದಲು-ಬದಲಾಗಿ ಪದ್ಯ ಲೋಕೋಪಯೋಗಿಯಾಗಿ ಗದ್ಯ ಭಾವೋಪಯೋಗಿಯಾಗಿಯೂ ಬಳಕೆಯಾಗುವುದು ಉಂಟು. ಪದ್ಯ ಲೋಕೋಪಯೋಗಿರುವುದಕ್ಕೆ ಛಂದಸ್ಸು, ವ್ಯಾಕರಣ ಅಲಂಕಾರಾದಿ ಶಾಸ್ತ್ರಗಳು ಪದ್ಯದಲ್ಲಿ ನಿರೂಪಿತವಾಗಿರುವ ನಮ್ಮ ಗ್ರಂಥಗಳು ಉದಾಹರಣೆಯಾದರೆ ಗದ್ಯ ಭಾವೋಪಯೋಗಿಯಾಗಿರುವುದಕ್ಕೆ ಹರಿಹರನ ರಗಳೆಗಳ ಗದ್ಯವೇ ಉತ್ಕೃಷ್ಟ ಉದಾಹರಣೆ. ಭಾವಾವಿಷ್ಕಾರಕ್ಕೆ ಬಳಕೆಯಾಗುವ, ಕಲಾಪರಿಣಾಮದ ಉದ್ದೇಶದ ಗದ್ಯದಲ್ಲಿ ನಿಯತವಾದ ಛಂದಸ್ಸಿಲ್ಲದಿದ್ದರೂ ಅನಿಯತವಾದ ಲಯ ಇದ್ದೇ ಇರುತ್ತದೆ; ಇರಬೇಕು.

ಗದ್ಯದ ಕಲಾತ್ಮಕ ಲಯವನ್ನು ಸಾಮಾನ್ಯವಾದ ಆಡು ಮಾತಿನ ಲಯಗಳ ಒಂದು ವ್ಯವಸ್ಥೆಯೆಂದು ಹೇಳಬಹುದು.

ಲಯಾನ್ವಿತ ಗದ್ಯ ಶುದ್ಧ ವ್ಯಾವಹಾರಿಕವಲ್ಲದ, ಆದರೆ ನಿತ್ಯ ಜೀವನಕ್ಕೆ ದೂರವೂ ಅಲ್ಲದ ಸುವರ್ಣಮಾಧ್ಯಮ. ಹರಿಹರನ ರಗಳೆಯ ಗದ್ಯದ ಹಿನ್ನೆಲೆಯಲ್ಲಿರುವುದು ವಚನಗಳ ಗದ್ಯ–ಪದ್ಯಗಳ ನಡುವಿನ ಅನಿಯತ ಗತಿಯ ಲಯವೇ. ಚಂಪೂ ಕಾವ್ಯಗಳ ಗದ್ಯ ಮಹಾಕಾವ್ಯ ಪರಂಪರೆಯನ್ನನುಸರಿಸಿದ ಕಾರಣ ಅದರಲ್ಲಿ ಪ್ರತಿಭೆಗಿಂತ ಪಾಂಡಿತ್ಯ ಚಮತ್ಕಾರಗಳಿಗೆ, ಕತೆಗಿಂತ ವರ್ಣನೆಗೆ, ಸರಳತೆಗಿಂತ ಅಲಂಕಾರಭೂಯಿಷ್ಠತೆಗೆ, ಸ್ವಭಾವೋಕ್ತಿಗಿಂತ ವಕ್ರೋಕ್ತಿಗೆ, ಸಹಜತೆಗಿಂತ ಕೃತಕತೆಗೆ ಪ್ರಾಧಾನ್ಯ ದೊರೆಯಿತು.

ನಿಯತವಾದ ಯಾಂತ್ರಿಕವಾದ ಛಂದಸ್ಸಿನ ಮೇಲೆ ಪ್ರಭುತ್ವ ಸಾಧಿಸುವುದು ಅಷ್ಟೇನೂ ಕಷ್ಟವಲ್ಲ. ಆದರೆ ಅದೇ ಆಡು ಮಾತಿನ ಗದ್ಯ ಲಯದ ಮೇಲೆ ಪ್ರಭುತ್ವ ಸಾಧಿಸುವುದು ಕಷ್ಟ ವಚನ, ಹರಿಹರನ ರಗಳೆಗಳ ಗದ್ಯದಂಥ ಗದ್ಯ ಬರೆಯುವುದು ಅಷ್ಟು ಸುಲಭವಂತೂ ಅಲ್ಲ. ಇದಕ್ಕೆ ಹರಿಹರನ ರಗಳೆಗಳು ಮತ್ತು ಅವುಗಳಲ್ಲಿ ಬಳಕೆಯಾಗಿರುವ ಗದ್ಯಭಾಗಗಳೇ ನಿದರ್ಶನ.

ಅವನೊಬ್ಬ ವರ್ಣಕ ಕವಿ. ವಸ್ತುಕ ಕಾವ್ಯಗಳಾದ ಚಂಪೂ ಕಾವ್ಯಗಳ ಪುರಾಣ ಪ್ರಸಿದ್ಧ ಕಥಾ ಪರಂಪರೆಯಿಂದಲೇ ಕಾವ್ಯವಸ್ತುವನ್ನಾಯ್ದುಕೊಳ್ಳುವುದನ್ನು ಬಿಟ್ಟುಕೊಟ್ಟು ಒಬ್ಬ ಕುಂಬಾರ, ಒಬ್ಬ ಬೆಸ್ತ, ಒಬ್ಬ ರೈತ ಇಂಥ ಸಾಮಾನ್ಯರಲ್ಲಿ ಸಾಮಾನ್ಯರಾದ ಭಕ್ತರ ಕಥೆಗಳನ್ನು ಕಥಾವಸ್ತುವಾಗಿ ಆರಿಸಿಕೊಳ್ಳುವ ಸ್ವಾತಂತ್ರ್ಯವನ್ನು ಮೆರೆದದ್ದು ಕೂಡ ಹರಿಹರನದೇ ಆದ ವಿಶಿಷ್ಟತೆ. ಕಥಾ ವಸ್ತುವಿನ ಆಯ್ಕೆಯಲ್ಲಿ ತೋರಿದ ಸ್ವಾತಂತ್ರ್ಯವನ್ನೇ ಕಾವ್ಯರಚನಾ ಪ್ರಕ್ರಿಯೆಯಲ್ಲೂ ತೋರಿದ್ದಾನೆ.

"ವಸ್ತುಕದಲ್ಲಿ ಅಲಂಕಾರಗಳ ಬಳಕೆಯ ಮೂಲಕ ಭಾಷೆಯ ಸಾಮರ್ಥ್ಯ ಹೆಚ್ಚಿಸಿ ಅದರ ಮೂಲಕ ವಸ್ತು ಸ್ವರೂಪ ವರ್ಣಿಸಿದರೆ ವರ್ಣಕದಲ್ಲಿ ಅಲಂಕಾರಗಳ ಬಳಕೆ ಮಾಡಿದರೂ ತಾನು ಬಣ್ಣಿಸುತ್ತಿರುವ ವಸ್ತುವಿನ ಸ್ವರೂಪವನ್ನು ಅದರೆಲ್ಲ ವೈವಿಧ್ಯತೆಯ ಮೂಲಕ ಹಿಡಿಯಲಾಗುತ್ತದೆ" (ಡಾ. ಎಚ್. ಶಶಿಕಲಾ) ಎಂಬುದಕ್ಕೂ ಸ್ಪಷ್ಟ ಪುರಾವೆ ಹರಿಹರನಲ್ಲಿ ಸಿಗುತ್ತದೆ.

ಪದ್ಯದಲ್ಲಾಗಲಿ ಗದ್ಯದಲ್ಲಾಗಲಿ ಹರಿಹರನದು ಆವೇಶ ಮತ್ತು ಉತ್ಸಾಹಪೂರಿತವಾದ ಶೈಲಿ ಎಂಬುದನ್ನು ಕನ್ನಡ ವಿಮರ್ಶೆ ಈಗಾಗಲೇ ಗುರುತಿಸಿದೆ. ಹರಿಹರನ ರಗಳೆಗಳೆಂದರೆ ಭಾವಗೀತಾತ್ಮಕತೆಯ ಸಿದ್ಧಿಶೃಂಗವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. "ಏನವ್ವ ಸಂಪಗೆಯೆ ಶಿವನ ಸಿರಿಮುಡಿಗಿಂದು/ನೀನೀವ ಪೊಸ ಕುಸುಮಮಂ ನೀಡುನೀಡೆಂದು", "ಎನ್ನಯ್ಯ, ಎನ್ನರಸ, ಎನ್ನ ಬಂಧುವೆಯೆನುತೆ/ ಎನ್ನ ಕಣ್ಣಿಂ ಗತಿಯೆ, ಮತಿಯೆ ಕರುಣಿಪುದೆನುತೆ" ಎಂಬಂಥ ರಸಾರ್ದ್ರವಾದ ಅಸಂಖ್ಯ ಸಾಲುಗಳ ಅವನ ರಗಳೆಗಳಲ್ಲಿ ಭಾವಗೀತೆಯ ಕಲಾನೈಪುಣ್ಯದ ಹಲವು ಸಾಧ್ಯತೆಗಳನ್ನು ಕಾಣಬಹುದೆಂಬುದೇನೋ

ಸರಿಯೆ. ರಗಳೆಗಳಿಗೆ ಸರಿಮಿಗಿಲಾಗಿ, ಕೆಲವೊಮ್ಮೆ ರಗಳೆಗಳನ್ನೂ ಮೀರಿಸಿದಂತೆ ಅವನ ಗದ್ಯ ಕೂಡ ಈ ಭಾವಗೀತ ಕಲಾಸಿದ್ಧಿಯ ಜೊತೆಗೆ ಸನ್ನಿವೇಶ ನಿರೂಪಣೆಯಲ್ಲಿ ಕಂಡು ಬರುವ ನಾಟಕೀಯ ನೈಪುಣ್ಯತೆಯ ಎಲ್ಲ ಸಾಧ್ಯತೆಗಳಿಗೆ ಸಾಕ್ಷಿ ಒದಗಿಸುತ್ತದೆ. ರಗಳೆಗಳಲ್ಲಿ ಬರುವ ವ್ಯಕ್ತಿಗಳ ತೀವ್ರವಾದ ಅನುಭವ ನಿರೂಪಣೆಗೆ ತಕ್ಕ ಶಬ್ದಗಳಿಂದಲೇ ಅಭಿವ್ಯಕ್ತಿ ನೀಡುವ ಅವನ ಭಾಷಾಕೌಶಲ ಅವನ ಕಾವ್ಯ ಪ್ರತಿಭೆಗೆ ಮಾತ್ರವಲ್ಲದೆ ಕನ್ನಡ ಸಂಸ್ಕೃತಗಳ ಮೇಲಿನ ಅವನ ಭಾಷಾಪ್ರಭುತ್ವಕ್ಕೂ ನಿದರ್ಶನವಾಗಿದೆ.

ವಚನಕಾರರಿಂದಾಗಿ ಕನ್ನಡ ಮಾತಿಗೆ ಅಪೂರ್ವ ಅಭಿವ್ಯಕ್ತಿ ಕೌಶಲ ಪ್ರಾಪ್ತವಾಯಿತು. ಸರಳವಾದ ಕನ್ನಡ ಮಾತಿಗೆ ಹೊಸದೊಂದು ಕಾಂತಿ, ಬಂದಿತು. ಮುಂದೆ ಬಂದ ಹರಿಹರನಿಂದಾಗಿ ಅದಕ್ಕೆ ಪ್ರಾಣ ಸಂಚಾರವುಂಟಾಗಿ ಎಂಥದೇ ರಸಭಾವಗಳನ್ನು ಸಮರ್ಥವಾಗಿ ಮೂಡಿಸುವ, ಶಕ್ತಿ ಬಂದಿತು.

ಈಗಾಗಲೇ ಎಲ್ಲರಿಗೂ ತಿಳಿದಿರುವಂತೆ ಹರಿಹರ ದೀರ್ಘ ರಗಳೆಗಳಲ್ಲಿ ಮಾತ್ರ ಗದ್ಯ ಬಳಸುತ್ತಾನೆ. ಬಸವ ರಾಜದೇವರ ರಗಳೆ ಮತ್ತು ನಂಬಿಯಣ್ಣನ ರಗಳೆಗಳಂಥ ಅತ್ಯಂತ ದೀರ್ಘ ರಗಳೆಗಳಲ್ಲಿ ಒಂದು ಸ್ಥಲ ಗದ್ಯ ಒಂದು ಸ್ಥಲ ರಗಳೆ ಹೀಗೆ ಉದ್ದಕ್ಕೂ ಬಳಸುತ್ತ ಹೋಗಿದ್ದಾನೆ. ಹಂಪಿ ವಿಶ್ವವಿದ್ಯಾನಿಲಯ ಪ್ರಕಟಿಸಿರುವ ೧೦೮ ರಗಳೆಗಳಲ್ಲಿ ೧೮ ರಗಳೆಗಳಲ್ಲಿ ಮಾತ್ರ ಪದ್ಯದ ಜೊತೆಗೆ ಗದ್ಯವನ್ನೂ ಬಳಸಿದ್ದಾನೆ. ಅವಗಳ ಪೈಕಿ ಚೇರಮ ನಾಯರ ರಗಳೆ, ರೇವಣಸಿದ್ದೇಶ್ವರ ರಗಳೆ, ಇವುಗಳಲ್ಲಿ ೨ ಸ್ಥಲ ಗದ್ಯ (ಒಟ್ಟು ೫ಸ್ಥಲ), ಅಕ್ಕ ಮಹಾದೇವಿಯ ರಗಳೆಯಲ್ಲಿ ೩ ಸ್ಥಲ ಗದ್ಯ, ೪ ಸ್ಥಲ ಪದ್ಯ, ಉಳಿದ ೧೧ ರಗಳೆಗಳಲ್ಲಿನ ಒಟ್ಟು ಮೂರು ಸ್ಥಲದಲ್ಲಿ ಎರಡು ಸ್ಥಲ ಪದ್ಯದ ನಡುವೆ ಒಂದೇ ಸ್ಥಲ ಗದ್ಯ.

ಆದಿ, ಅಂತ್ಯ ಪ್ರಾಸಗಳಿಂದ ನಿಬದ್ಧವಾಗಿ ಎರಡು ಹಳಿಗಳ ಮೇಲೆ ಒಂದೇ ಸಮನೆ ಸಾಗುವ ನಿಯತಗತಿಯ ರಗಳೆಯ ಸಾಲುಗಳ ರೈಲಿನ ಭೋರ್ಗರೆತದ ಏಕತಾನತೆಯನ್ನು ಮುರಿಯುವ ಸಲುವಾಗಿ ಬರುವ ಗದ್ಯದಿಂದ ಉಂಟಾಗಿರುವ ವೈವಿಧ್ಯ, ಪ್ರಯೋಜನ ಅಷ್ಟಿಷ್ಟೆಂದು ಹೇಳುವಂತೆಯೇ ಇಲ್ಲ. ಇಲ್ಲಿ ಬರುವ ಗದ್ಯ ಸಹಜವಾಗಿಯೇ ರಗಳೆಗೆ ಹೊಂದಿಕೆಯಾಗುವ ಗದ್ಯವೇ ಆದರೂ ವಚನ ಗದ್ಯದ ಸರಳತೆ ಸುಭಗತೆ, ಲಯಗಾರಿಕೆ, ಆಡುಮಾತಿನ ಸೊಗಡು, ಸೊಗಸು, ಪದಮೈತ್ರಿ ಇವೆಲ್ಲದರಿಂದ ಕೂಡಿಕೊಂಡು ಅದಕ್ಕೆ ಇನ್ನಿಲ್ಲದ ಶೋಭೆಯನ್ನು ತಂದುಕೊಟ್ಟಿದೆ.

ಪುನರಾವರ್ತನೆ, ಪ್ರಾಸಾನುಪ್ರಾಸಗಳ ಆಧಿಕ್ಯ, ಉಪಮೆ ರೂಪಕಗಳಿಂದ ನಿಬಿಡವಾಗಿರುವ ಹರಿಹರನ ಗದ್ಯದ ನಡೆ ಅತ್ಯಪೂರ್ವವೇ ಸರಿ.

ಪುನರಾವರ್ತನೆಗೆ

"ಒಂದು ಭಾವವನ್ನು ಎಷ್ಟು ಬಾರಿ ಬಳಸಿದರೆ, ಸುರೂಪ, ಎಷ್ಟು ಮೀರಿದರೆ ಕುರೂಪ ಎಂಬ ಸಂಖ್ಯಾನಿರ್ಣಯ ರಸಾನುಭವ ವಿದ್ಯೆಯಲ್ಲಿ ದಕ್ಕದು. ಪಾತ್ರ, ಭಾವ,

ಸನ್ನಿವೇಶಗಳ ಮೇಲೂ ನಿಂತಿರತಕ್ಕ ವಿಚಾರ ಅದು" (ಎಸ್.ವಿ. ರಂಗಣ್ಣ: ಶೈಲಿ) ಎಂಬ ಮಾತನ್ನು ಗಮನದಲ್ಲಿಟ್ಟುಕೊಂಡೇ ಈ ಬಗ್ಗೆ ಹರಿಹರನನ್ನು ಓದಬೇಕು.

೧) ಕಣ್ ತೀವಿ ನೋಡಿ, ಮೈತೀವಿ ಮುಟ್ಟಿ, ನಾಲಗೆ ತೀವಿ ಹೊಗಳಿ, ಮನಂತೀವಿ ನೆನೆದು, ಬುದ್ಧಿತೀವಿ ಬೆಚ್ಚು, ಅಹಂಕಾರ ತೀವಿ ವೆಚ್ಚಿ, ಚಿತ್ತ ತೀವಿ ಅಚ್ಚೊತ್ತಿ, ಮತ್ತೆ ಇತ್ತಿತ್ತು ತಣಿಯದೆ.........

೨) ಸರ್ವಸಂಭ್ರಮದ ನಡುವೆ ಸಕಲ ಜನಾನಂದರಸಂ ಮಡುಗಟ್ಟೆ ಚೋಳದೇಶಂ ಗುಡಿಗಟ್ಟೆ ಭಕ್ತರ ಭಾಳಂ ಪಟ್ಟಂಗಟ್ಟೆ, ಭಕ್ತಿರಸಂ ಸೇತುಗಟ್ಟೆ ಸತ್ಯದ ನುಡಿ ಕೆಚ್ಚುಗಟ್ಟೆ ಪುಣ್ಯದ ಫಲಂ ಪೆರ್ಗೊನೆಗಟ್ಟೆ ಪರಸಮಯಂ ಸರಕುಗಟ್ಟೆ ಪುರಮಂ ಪೊರಮಟ್ಟು....... (ನಂಬಿಯಣ್ಣನ ರಗಳೆ),

ಮನುಷ್ಯಹೃದಯದ ಎಲ್ಲ ತರಹದ ಭಾವನೆಗಳನ್ನೂ ರಸಸ್ಯಂದಿಯಾಗಿ, ಚಿತ್ರವತ್ತಾಗಿ, ಕಣ್ಣಿಗೆ ಕಟ್ಟುವಂತೆ ಚಿತ್ರಿಸುವ ಅವನ ಗದ್ಯದ ಪರಿ ಅವನಿಗೇ ಮಿಸಲು. ಅವನು ಬಳಸುವ ಪದಗಳು ಪಾತ್ರದ ಭಾವಗಳನ್ನು ಓದುಗನಲ್ಲೂ ಸಮರ್ಥವಾಗಿ ಪುನರ್ನಿರ್ಮಿಸುವ ಶಕ್ತಿ ಹೊಂದಿವೆ. ಅವನ ಮನಸ್ಸು ಒಂದು ರೀತಿಯಲ್ಲಿ ಭಾವಗಳ ನರ್ತನಶಾಲೆಯೆನ್ನ ಬಹುದು. ಒಂದೇ ಭಾವವನ್ನು ಅದೆಷ್ಟು ವಿಧವಾಗಿ ಹೇಳಿದರೂ ಬಣ್ಣಿಸಿದರೂ ಅವನಿಗೆ ತೃಪ್ತಿಯಿಲ್ಲವೇನೋ ಎನ್ನುವಂತೆ ಲಯಬದ್ಧವಾಗಿ ಪದಗಳ ತೋರಣವನ್ನು ಕಟ್ಟುತ್ತಾ ಹೋಗುತ್ತಾ ಹೋಗುತ್ತಾನೆ.

ಕೂಡಲ ಸಂಗಮಕ್ಕೆ ಬಂದು ಸಂಗನನ್ನು ಕಂಡ ಕ್ಷಣ ಬಸವಣ್ಣನವರಲ್ಲಿ ಮೂಡಿದ ಭಾವಗಳನ್ನು ಕನ್ನಡ ಗದ್ಯದಲ್ಲಿ ಹರಿಹರ ಕಟ್ಟಿಕೊಡುವುದು ಹೀಗೆ :

೧) ದೇವ ದೇವ ಅನಾಥ ನಾಥ ಅನಿಮಿತ್ತ ಬಂಧುವೆ ತಾಯ್ತಂದೆ ಬಂಧುಬಳಗವೆ ಕುಲವೆ ಬಲವೆ ಛಲವೆ ತವರೆ ಕಣ್ಣೆ ಗತಿಯೆ ಮತಿಯೆ ಪುಣ್ಯವೆ ಪ್ರಾಣವೆ ಕಾವುದು ಕಾವುದೆಂಬೆ ಎನುತ್ತೆನುತೆ ಅನುತಾಪವೊಳಗೇರಿ ಭವದ ಬೇಗೆ ಬೆಂಬತ್ತಿ ಕರಣಂ ಕಾಹೇರಿ ಹರಣಂ ಕುಕ್ಕುಳಂಗುದಿದು ಗದುಗದುಪಾಗಿ ಕಣ್ಗಳಂ ಮುಚ್ಚಿ ಸೆರೆಬಿಗಿದು.......

೨)ನೀಂ ಬಿಜ್ಜಳರಾಯನಿರ್ಪ ಮಂಗಳವಾಡಕ್ಕೆ ಪೋಗು ಎಂಬ ನುಡಿಯೊಡನೆ ಕನಸಿನ ಮಾತು ಮನವನಿಮ್ಮೈಗಂಡು ನಿದ್ರೆ ತಿಳಿದು ಕಣ್ದೆರೆದು ಕೆಲಬಲನಂ ನೋಡಿ ಬೆಚ್ಚಿ ಬೆಗಡುಗೊಂಡು ಅನುತಾಪವೇರೆ ವಿರಹಂ ಹೊಮ್ಮಿ ಕಣ್ಗೆಟ್ಟು ಅಗಲಲಾರದೆ .... -ದೇವದೇವ ಸಂಗ ಕಂಡ್ಯೆ ಕೆಟ್ಟೆಂ ಕೆಟ್ಟೆಂ. ತೊಟ್ಟನಿಂತು ಕಣ್ ನೋಡದೆ ಹುಣ್ಣ ನೋಡದೆ ಹೋಗೆಂಬರೆ? ಗಗನದಿಂದಿಳಿವಂಗೆ ಆಧಾರಮಾಗುತ್ತೆ ತಪ್ಪುವರೆ ? ಕಾಳ್ಕಿಚ್ಚಿನಿಂದ ಬೇವಂಗೆ ತಂಪಿನ ಸೋನೆಯ ಮಳೆಯಾಗುತ್ತ ಮಾಣ್ಬರೆ? ಇಂತು ನಡುಗಡಲೊಳಾಳುವಂಗೆ ತೆಪ್ಪಮಾಗುತ್ತ ಪಿಂಗುವರೆ ? ನರಕದೊಳಾಳಲೀಯದೆ ಚಂಡಿಕೆವಿಡಿದುದ್ಧರಿಸಲೆಂದಾಳ್ಗೊಂಡ ಗುರುವೆ ಪರಮ ಬಂಧುವೆ, ಪ್ರಾಣವೆ, ಬೆಳುದಿಂಗಳೇಕೆ ಬಿಸುಪೇಕೆ? ಅಮೃತವೇಕೆ ವಿಷವೇಕೆ? ಬೆಳಗೇಕೆ ತಮವೇಕೆ? ನೀನೇಕೆ

ಈ ನುಡಿಯೇಕೆ? ಹೊದ್ದಿದರಂ ಹೋಗೆಂಬರೆ? ಸಾರ್ದರಂ ಸೈರಿಸೆಂಬರೆ ? ನಂಬಿದವರ ಗೋಣಂ ಕೊಯ್ವರೆ ? ಶಿಶುವನಿರಿವರೆ ? ಪಶುವಂ ಕೊಲುವರೆ? ಎನ್ನಂ ಬಿಡುವರೆ? ಕರುಣಿ ಕರುಣಿ, ಕರುಣಂ ಲೇಸಾಯ್ತು. ಅರ್ಚಿಸಿತಕ್ಕೆ ಫಲಮಾಯ್ತು. ಇನ್ನೇನು ಇನ್ನೇನು?

ಇದರಲ್ಲಿ ತನ್ನ ಆರಾಧ್ಯ ದೇವನ ಅಗಲಿಕೆಯಿಂದ ನೊಂದ ಭಕ್ತ ಬಸವಣ್ಣನ ಮನಸ್ಥಿತಿಯನ್ನು ಅದೆಷ್ಟು ಹೋಲಿಕೆಗಳನ್ನು ಕೊಟ್ಟು ವರ್ಣಿಸಿದರೂ ಹರಿಹರನಿಗೆ ತೃಪ್ತಿಯಿಲ್ಲ. ಶಬ್ದಗಳನ್ನು ಹೇಗೆ ಬೇಕೆಂದರೆ ಹಾಗೆ ಕುಣಿಸುವ ಶಬ್ದವಿಲಾಸದ ಪರಿ ಅವನಿಗೇ ಮೀಸಲು. ಹಾಗೆಯೇ ನಂಬಿಯಣ್ಣನ ರಗಳೆಯ ಈ ಭಾಗದ ಗದ್ಯ :

ನರಸಿಂಗಮೊನೆಯರ್ ಸೌಂದರ ಪೆರುಮಾಳೆಯನ್ನು ಕಂಡು ಹರುಷ ಪುಳಕಿತನಾಗಿ ಬಾಯ್ಗೆ ಬಂದುದಂ ಪೊಗಳಿ ನೆರೆ ಪುಳಕಿತನಾಗಿ ಶಿವನ ಶಿಶುವೆ, ಶಿವನ ಕುಮಾರಕನೆ, ಶಿವನ ಪುಣ್ಯವೆ ಶಿವನ ಸೊಬಗೆ ಶಿವಶಿವಾಯೆಂದು ಕೊಂಡಾಡಿ

ಮುಂಡಾಡಿ ಪುರಕ್ಕೊಡಗೊಂಡು ಬಂದರಮನೆಯಂ ಪೊಕ್ಕು ದಿವ್ಯ ಸಿಂಹಾಸನದೊಳು–ಜೆಡೆಯ ನಾಯನಾರು –ಸೌದರನಂ ನೋಡಿ ನೋಡಿ ಹಿಗ್ಗುತಂ ಪೊಂಗುತಂ ಪೊರೆಯೇರುತಂ ತೂಗುತಂ ಬೀಗುತಂ ಬಿರಿವುತ್ತರಳುತ್ತ ಮೆಲ್ಲರುಂ ಶೈವಸಂಪನ್ನರಾಗಿ ಪುಳಕದ ಪುಂಜರಾಗಿ ಅನುರಾಗದಾಗರವಾಗಿ ಭಕ್ತಿಯ ಬೆಳೆಸಿರಿವಂತರಾಗಿ ನುಡಿಯಲರಿಯದೆ ....

ಅವನ ಗದ್ಯ ಶರಣಸತಿ ಬಸವಣ್ಣನ ಲಿಂಗಪತಿಯೊಂದಿಗಿನ ವಿರಹವನ್ನು, ವಿವಾಹವನ್ನು ವರ್ಣಿಸಿದಷ್ಟೇ ಸಮರ್ಥವಾಗಿ, ನಂಬಿಯ ವಿರಹದುರಿಯಲ್ಲಿ ಬೇಯುತ್ತಿರುವ ಪರವೆಯ ವಿರಹಸಂತಾಪವನ್ನೂ, ಸಮಾಗಮವನ್ನು ಕೂಡ ವರ್ಣಿಸಬಲ್ಲುದು.

೧) ಬಸವಣ್ಣನು– "ಮೋಹದ ಮುನಿಸು ಮನದೊಳ್ ತೀವಿ ಪ್ರಣಯಕಲಹಂ ಬಲಿದು ಪ್ರಸಾದಮನೊಲ್ಲದೆ ಪಶುಪತಿಯ ಪದದ ಕೆಳಗೆ ನಿರ್ವೇಗದಿಂ ಪಟ್ಟಿರ್ದಿರೆ ರಾತ್ರಿಯೊಳು ನೇತ್ರತ್ರಯಂ ಭಕ್ತನಿರವಂ ನೋಡಿ ಕರಗಿ"

"ಹರುಷ ಪುಳಕ ಶರೀರ ಸುಖಜಳಬಿಂದು ಸಂದಷ್ಟ ನಯನ ಪುಷ್ಪಸಂಯುತ ಶೈವಸಾಮ್ರಾಜ್ಯಪೂಜ್ಯನಾಗಿ ರಂಗಮಂಟಪಂ ವಿವಾಹ ಮಂಟಪಮಾಗೆ ಪರಿವಾರದೇವರುಂ ನಿಬ್ಬಣಿಗರಾಗೆ ಕರಣಂಗಳೇ ಸುವಾಸಿನಿರಾಗೆ ಸಕಳೇಂದ್ರಿಯಂಗಳಾರತಿಯನೆತ್ತೆ ಭಕ್ತಿರಸಂ ಕೈದಾರೆಯಾಗೆ ಗುರುಕಾರುಣ್ಯ ಮುಹೂರ್ತಕ್ಕೆ ಜನನ ಮರಣಗಳೆಂಬ ತೆರೆಯರ್ ಪಿಡಿದ ಸಂಸಾರದ ತೆರೆ ಸರಿಯೆ ನಂದಿಯ ಮುಖದ ಮದವಣಿಗನಂ ಕಂಡು ನಿಷ್ಠೆ ನೇಮಂಗಳ ಜೀರಿಗೆ ಬೆಲ್ಲಂಗಳಂ ತಳಿದು ಪ್ರಾಣೇಶ್ವರನಂ ಪರಮ ಪ್ರೀತಿಯೊಳಪ್ಪಿಕೊಂಡು ಸಂಗಂ ಪತಿಯಾಗಿ ಬಸವಂ ಸತಿಯಾಗಿ ಪಂಚಾಕ್ಷರಿಯೆ ಗತಿಯಾಗಿ ಸದ್ಭಕ್ತಿಯೆ ಮತಿಯಾಗಿ ಸಂಗನ ಬಸವಂ..........

೨) ಇಂತು ......ಕಾಮನ ಪರಿವಾರದಿಂದೇಸುವಡೆದು ಏರುವಡೆದ ಪುಲ್ಲೆ ಬಸವಳಿದು ಬಿರ್ದಂತೆ ಕೊಳನ ತಡಿಯಣ ಬಾಲಚೂತದ ನೆಳಲ ಶಶಿಕಾಂತದ ಶಿಲಾತಳದೊಳು

ಪೊರಳುತ್ತಿರ್ಪ ಪರವೆಗೆ ಅಶೋಕೆ ಸಶೋಕೆ, ಮಾಮರಂ ತೋಮರಂ, ಬೆಳುದಿಂಗಳು ಬಿಳಿಯಿಂಗಳಂ, ಕೊಳಂ ಕೊಳುಗುಳಂ, ಸಸಿ ಬಿಸಿ, ಲತೆಯಸಿಲತೆ, ಕದಳಿ ಕದಳೀಘಾತಂ, ಸಂಪಗೆ ಪಗೆ, ಫಳಂ ನಿಷ್ಫಳಂ, ಕಾವಂ ದಾವಂ, ವನಂ ಪಿತೃವನವಾಗಿ....... ಸೌಂದರನಿಲ್ಲದ ಪರವೆಗೆ ಚರಾಚರ ವಸ್ತುಗಳು ಮುಳಿಯೆ.

೩) ಸಮಕುಲದ ಸಮರೂಪಿನ ಸಮಚಿತ್ತದ ಸಮಯೌವನದ ಸಮಾನುರಾಗದ ಸಮಸುಖದತಿಕಾಮಿಗಳ್ಗೆ ಸುರತ ಸುಖದ ತಡೆಬಿಟ್ಟು ಸೋಂಕು ಮೇರೆದಪ್ಪಿ ಲಜ್ಜೆಯ ತೆರೆ ಸರಿದು ನುಡಿಗದುಗದಿಕೆಯೊಳದ್ದು ಉಪಚರವೊಗ್ಗುಡಿಸಿ ಲಲ್ಲೆ ಮೈದೋರಿ ಮರಹಂಕುರಿಸಿ ಸವಿ ಪಲ್ಲವಿಸಿ ಮುಗುಳ್ನಗೆ ಹೂತು ಪ್ರಥಮಾಲಿಂಗನದೊಳ್ ಸಫಲಮಾಗೆ ಮತ್ತೆಮತ್ತುಜ್ವಲಿಸುವ ಚೊಕ್ಕೆಯದನುಭವಕ್ಕೆ ಸಿರಿಮಂಚಂ ಸುಖದುಕ್ಕಡಮಾಗೆ.........

ಇಲ್ಲೆಲ್ಲ ಒಂದೇ ಅರ್ಥದ ಕ್ರಿಯೆಗಳ, ನಾಮಪದಗಳ, ಪುನರಾವರ್ತನೆ ಭಾವದ ವಿಸ್ತಾರಕ್ಕೆ ಅಗತ್ಯವೆನ್ನುವ ರೀತಿಯಲ್ಲಿಯೇ ಬಂದಿರುವುದನ್ನು ನೋಡಬಹುದು. ಸಂಕಟದ ಆವರ್ತನಶೀಲತೆ ತರಂಗ ತರಂಗವಾಗಿ ಹೊರಹೊಮ್ಮುತ್ತದೆ.

ಉದಾಹರಣೆಗೆ: ಹೋ! ಹೋ! ಮಗನೆ! ಹಾ, ಹಾ ಮಗನೆ

ಗಂಗಾಧರಾ ಚಂದ್ರಶೇಖರಾ ಕರುಣಾಕರಾ, ಶಂಕರಾ, ಅಭಯಕರಾ, ಭಕ್ತಜನಬಾಂಧವಾ, ಅರ್ಧನಾರೀಶ್ವರಾ

ಪ್ರಾಸಾನುನುಪ್ರಾಸಗಳಂತೂ ಹರಿಹರನ ಗದ್ಯದ ಹಾಸು–ಹೊಕ್ಕು: ಅವಕ್ಕೆ ಲೆಕ್ಕವೇ ಇಲ್ಲ: ಹರಕರುಣೋದಯಮಾದಂತರುಣೋದಯಮಾಗೆ, ನಿದ್ರೆ ತಿಳಿದೆದ್ದು ಸಾಲ್ಗೊಂಡ ಪುಳಕಂಗಳಂ ಸಂತೈಸಿಕೊಂಡಾನಂದಾಶ್ರುಗಳಂ ಮುಂದುಗೊಳಿಸಿ ಸಂತಸಮಂ ಸೈತಿಟ್ಟು ಪರಿಕಿಸಿ ನೋಡಿ ಹರನ ಕರುಣಕ್ಕೆ ಹಾರೈಸಿ ಭಕ್ತಿಭರದಿಂ ಭಾರೈಸಿ, ಮನದ ಮೊನೆಯಂ ಕೋರೈಸಿ ಬುದ್ಧಿಯೊಳಗಂ ಸಾರೈಸಿ ಅಹಂಕಾರಮಂ ತೇರೈಸಿ ಚಿತ್ತದೊಳು ಪೂರೈಸಿ ಎಲೆ ಬಸವ, ಬಸವಣ್ಣ, ಬಸವಯ್ಯ, ಬಸವರಸ, ಬಸವಿರಾಜ, ಬಸವಿದೇವ ನಿನ್ನ ನೇಮವಿದಾರ್ಗುಂಟು! ಗುರು ಲಿಂಗದೊಳೆ ರಡಿಲ್ಲದಿಪ್ಪೆ ಶರಣರಂ ಸಂಗನೆಂದೆ ಕಾಣ್ಬೆ (ಬ. ದೇ. ರಗಳೆ).

ಕೆಲವೊಮ್ಮೆ ತನಗೆ ಬೇಕೆನಿಸಿದರೆ ಸಂಸ್ಕೃತಭೂಯಿಷ್ಠ ಸಮಾಸಘಟಿತ ರೂಪಕಗಳನ್ನು, ಉಪಮೆಗಳನ್ನು ಮಾಲೆಮಾಲೆಯಾಗಿ ಕೋದುಬಿಡುತ್ತಾನೆ:

೧) ಪರನೃಪಾಲಗರ್ವಪರ್ವತಕುಲಿಶಂ, ಪರಿಪಂಥಿಪನ್ನಗವೈನತೇಯಂ, ದುರ್ಜನಗಿರಿ ವಜ್ರಾಘಾತಂ, ಭಕ್ತಕುಲಚಕ್ಷು

೨) ಬಸವಣ್ಣನವರ ಕನಸಿನಲ್ಲಿ ಕಾಣಿಸಿಕೊಂಡ ಶಿವನ ಸ್ವರೂಪದ ವರ್ಣನೆಯಲ್ಲಿ ಬರುವ ಅತಿಶಯೋಕ್ತಿಗಳಲ್ಲಿ ಕಂಡುಬರುವ ಅದ್ಭುತ ಕಲ್ಪಕತೆಯ ಸೌಂದರ್ಯ ನಮ್ಮನ್ನು ವಿಸ್ಮಿತಗೊಳಿಸುತ್ತದೆ. "ಕನಸಿನೊಳು ಬೆಳೆದು ಕವಲಿರಿದು ನೀಳ್ದ ಪ್ರವಾಳಜಾಳದಂತೆ

ಬೆಂಬಳಿವಿಡಿದ ಕೆಂಜಡೆಗಳಿಂ, ಸುತ್ತಿರ್ದ ಜಟಾಬಂಧದೊಳಗಣ ಸುರನದಿಯೆಂಬ ಸರೋಜಿನೀ ತಟದೊಳಗಿರ್ದ ಬಿಸಕಂದದಂಕುರದಂತಿರ್ದ ಚಂದ್ರಕಳೆಯಿಂ, ವಿದ್ಯುಲ್ಲತಾ ಗರ್ಭೀಕೃತ ಶಾರದಾವಿಭ್ರಮದಂತೆ ಭಸಿತಂ ಮುಸುಂಕಿದ ಬಿಸುಗಣ್ಣಿಂ ಮೆರೆವ ಲಲಾಟ ಪಟ್ಟದಿಂ, ಶೃಂಗಾರದ ತವರ್ಮನೆಯಂತಿರ್ದ ಮುಖಮಂಡಲದಿಂ, ನಯಮಂ ಕರೆವ ನಾಗಕುಂಡಲದಿಂ ಹರನೊಳ್ ನೆರೆಯಲ್ ಬಂದ ಕಾಳಿಂದೀ ನದಿ ಸುರನದಿಗೆ ಸೋಲ್ತಿಳಿದಂತಿರ್ದ ಕೊರಳ ಗರಳದಿಂ, ಕಲ್ಪಕುಜದ ಶಾಖೆಗಳಂತಿರ್ದ ದಶಭುಜಂಗಳ ತೋಳ್ತುರಗಲಿಂ ವೇದಂಗಳ್ ತನ್ನ ಕಾಣದಂತೆ ಮುಸುಂಕಿದ ಮಾಯಾಪಟಲವೆನಿಪ ಗಜಚರ್ಮದಿಂ, ಎಳವಿಸಿಲ ಬೆಳಗಂ ತರುಣ ತರಣಿಗೆ ಕಡಂಗೊಡುವ ಪ್ರಭಾ ದುಕೂಲದಂತಿರ್ದ ಪುಲಿದೊಗಲಿಂದೊಪ್ಪಿ, ಪಶುಪತಿ ಬಸವನ ಮೊನೆಯೊಳೊಪ್ಪೆ ಮೂರ್ತಿಗೊಂಡು' ಕಂಬಳಿ ನಾಗಿದೇವನ ಮೈಯಲ್ಲಿ ಹಾಲು ಹರಿಯುತ್ತದೆಂಬುದನ್ನು ಪ್ರಮಾಣೀಕರಿಸಿಕೊಟ್ಟ ನಂತರದಲ್ಲಿ–ಬಸವಣ್ಣ ಹೇಗಿದ್ದ ಎಂಬುದನ್ನು ವರ್ಣಿಸುವುದು ಹೀಗೆ:

"ಹಾರದ ನಡುವಣ ನಾಯಕ ರತ್ನದಂತೆ ಅವಯವದ ನಡುವಣ ಉತ್ತಮಾಂಗದಂತೆ ನವರತ್ನದ ನಡುವಣ ಚಿಂತಾರತ್ನದಂತೆ ಗೋಕುಲದೊಳಗಣ ಕಾಮಧೇನುವಿನಂತೆ ತರುಕುಲದ ನಡುವಣ ಸುರಕುಜದಂತೆ ಗಿರಿಗಳ ನಡುವಣ ಮೇರುಗಿರಿಯಂತೆ ಸುವರ್ಣದ ನಡುವಣ ಪರುಷದಂತೆ ನಕ್ಷತ್ರಂಗಳ ನಡುವಣ ಚಂದ್ರನಂತೆ ನವಗ್ರಹಂಗಳ ನಡುವಣ ಭಾಸ್ಕರನಂತೆ ಅನುಲೇಪನಂಗಳ ನಡುವಣ ಭಸಿತಮಂಡನದಂತೆ ಕಾಂತಿಗಳ ನಡುವಣ ಸ್ವಯಂಜ್ಯೋತಿಯಂತೆ–

ಜೆಡೆಯ ನಾಯನಾರು ಮತ್ತು ಯಸ್ಯಜ್ಞಾನ ದೇವಿಯರು ಕೂಸಾದ ನಂಬಿಯಣ್ಣನನ್ನು ನರಸಿಂಗ ಮೊನೆಯರಿಗೆ ಒಪ್ಪಿಸಿಕೊಟ್ಟಿದ್ದು–"ಪರಮಾನುರಾಗದಿಂ ಪರೀಕ್ಷಕನ ಕೈಯೊಳನರ್ಘ್ಯ ರತ್ನಮಂ ಕೊಡುವಂತೆ, ವಸಂತನ ಕೈಯೊಳು ಕಲ್ಪತರುವಿನ ಸಸಿಯಂ ಕೈಲೆಡೆಗುಡುವಂತೆ."

ಇವುಗಳಲ್ಲಿ ಬಹಳಷ್ಟು ಕವಿಸಮಯ ಬದ್ಧ ಉಪಮೆಗಳೇ ಆದರೂ ಲಯಬದ್ಧವಾಗಿ, ಪದಮೈತ್ರಿಯಿಂದ ಕೂಡಿಕೊಂಡು ಅದ್ಭುತವಾಗಿ ಸಾಗುವ ಸಾಲುಗಳು ಗದ್ಯದ ನಡೆಗೆ ಅಪೂರ್ವವಾದ ಕಾಂತಿಯನ್ನುಂಟುಮಾಡಿವೆ.

ಉತ್ಪ್ರೇಕ್ಷೆಗೆ ಉತ್ಕೃಷ್ಟ ಉದಾಹರಣೆ: (ಪರವೆಯ ವರ್ಣನೆ)

೧) ಮುಖವೆಲ್ಲಂ ಕಣ್ಣು, ಬೆನ್ನೆಲ್ಲಂ ಮುಡಿ, ಉರವೆಲ್ಲಂ ಮೊಲೆ, ಪಿಂದೆಲ್ಲಂ ನಿತಂಬಂ, ನಡೆಯೆಲ್ಲಂ ಮೃದು, ನುಡಿಯೆಲ್ಲಂ ಜಾಣು, ನೋಟವೆಲ್ಲಂ ಸುಧೆ, ಚರಿತವೆಲ್ಲಂ ಕುಲವೆನಿಸಿ

೨) ಸಂಕಿಲಿನಾಚಿಯರನ್ನು ಸಿಂಗರಿಸಲು ಬಂದ ರತಿಮಂಗಳೆ ಅವಳ ಸೌಂದರ್ಯ ವರ್ಣಿಸಿದ್ದು ಹೀಗೆ:

ಎಲೆ ಮುಗ್ಧೆ ನಿನ್ನವಯವಂಗಳ ಚೆಲ್ವಿಂಗಾಭರಣಂ ಮರೆ, ನಿನ್ನ ಸೌಕುಮಾರ್ಯಕ್ಕೆ ಹೂದೊಡಿಗೆ ಹೊರೆ, ನಿನ್ನ ಮುಖಮಂಡಲಕ್ಕೆ ಶಶಿಮಂಡಲವುಪ್ಪಾರತಿಯ ಪಾತ್ರೆ ನಿನ್ನ ಲೋಚನಕ್ಕೆಳಮಿಂಚು ಹೊರಗು, ನಿನ್ನ ನಳಿತೋಳ್ಗಳ ಲತೆ ಬಾಡಿ ಮಿಕ್ಕವು, ನಿನ್ನ ಕೊರ್ವಿದ ಕುಚಂಗಳ್ಗೆ ಪೊಣರ್ವಕ್ಕಿ ಗವಸಣಿಗೆ, ನಿನ್ನ ನಡುವಿಂಗೆ ನಳಿನ ತಂತು ನಿರೋಧಂ ನಿನ್ನ ಬೆರಲ್ಗಗರಲಂಬಾಗದ ವಸ್ತು......

ಹರಿತವಾದ ವ್ಯಂಗ್ಯ ವಿಡಂಬನೆಯಲ್ಲೂ ಹರಿಹರ ನಿಸ್ಸೀಮನೆಂಬುದು ಅವನ ಈ ಗದ್ಯದ ಭಾಷೆಯಿಂದ ತಿಳಿಯುತ್ತದೆ:

ಇತ್ತಲೊಡನೆ ಬರುತಿರ್ಪ ವೈಷ್ಣವರ ಬೇಹಿನ ಸಾಹಸಿಗನೋರ್ವಂ ಪುರಕೆ ಪರಿತಂದು ಬಸವನ ಚರಿತ್ರಮನಜ್ಞಾನಿಗಳಪ್ಪ ವಿಪ್ರಕುಲಕ್ಕೆ ಪೇಳೆ ; ಕೇಳ್ದು ಸಂಭ್ರಮದಿಂ ಸಡಗರಿಸುತ್ತಂ, ನಾರಣಕ್ರಮಿತಂ ಕೃಷ್ಣಪೆದ್ದಿ ವಿಷ್ಣುಭಟ್ಟಂ ಕೇಶವಭಟ್ಟಂ ವಿಷ್ವಕ್ಸೇನಭಟ್ಟಂ ಮುರಾರಿಕ್ರಮಿತಂ ಗೋವಿಂದ ಪಂಡಿತಂ ಧರಣೀಧರ ಭಟ್ಟಂ ವೈಕುಂಠಪೆದ್ದಿ ಜಲಶಯನಕ್ರಮಿತಂ ದಶಾವತಾರಭಟ್ಟಂ ಜನಾರ್ದನ ಪೆದ್ದಿ ವಾಸುದೇವಘೈಸಂ ಅಚ್ಯುತಕ್ರಮಿತಂ ದಾಮೋದರಭಟ್ಟಂ ಮೊದಲಾದ ಛಾಂದಸರು ವೇದಜಡರು ಮಟ್ಟೆಯ ಮರುಳ್ಗಳು ವ್ಯಥೋತ್ಸಾಹಿಗಳು ಹೆಬ್ಬೇಳಿಗಳು ದರ್ಭೆಯ ನಿರ್ಭಾಗ್ಯರೆಲ್ಲಂ ನೆರೆದರಮನೆಗೆ ಬಂದು–ದೇವದೇವ, ಎಲೆ ಭೂಪ, ಎಲೆಲೆ ಬಿಜ್ಜಳ, ಬಸವನ ನಡೆವಳಿ ದಿನದಿನಕ್ಕೆ ವಿಪರೀತಮಾಗಿರ್ದಪುದು ಹಿರಿಯ ಮಾಹೇಶ್ವರರೆಂದು ಬೆರೆಸಿಕೊಂಡಿಪ್ಪುದಲ್ಲದೆ ಇಂದೀ ಗಳಿಗೆಯೊಳೊರ್ವಂ–ಪೊಲೆಯನೆಂದೊಡೆ ಕೋಪಂ ಹಿರಿಯ ಭಕ್ತನ ಮನೆಯೊಳ ಗುಂಡುತಿದೆ ನಿನ್ನೋಲಗದೊಳು ಪೊಲೆಗಲಸಲುಂ ಬಂದಪಂ..

ಆಮೇಲೆ ಬಿಜ್ಜಳ "ಹಿರಿಯ ಮಾಹೇಶ್ವರರೆಂದು ಪೊಲೆಗಲಸಿ ಅವರ ಮನೆಯೊಳುಂಡುದಲ್ಲದೆ ಇಲ್ಲಿ ಬಂದು ಎಲ್ಲರಂ ಗೋಜಾಗತಂ ಮಾಳ್ಪುದು ಮಾರ್ಗವಲ್ಲ" ಎಂದಿದ್ದಕ್ಕೆ ಬಸವಣ್ಣ "ಎಲೆ ಬುದ್ಧಿಯಿಲ್ಲದ ಭೂಪ, ಎರಗಿವಿಯ ಮರುಳೆ ನಾರಣ ಕ್ರಮಿತರ ಕೇರಿಯಂ ಪೊಕ್ಕೆನೆ ? ಮುಕುಂದ ಭಟ್ಟರ ಮನೆಯೊಳುಂಡೆನೆ? ಸೌರಪೆದ್ದಿಗಳ ಸಾರಿ ನಿಂದೆನೆ? ದಾಮೋದರ ಭಟ್ಟರಂ ಪ್ರೇಮದಿಂ ಸೋಂಕಿದೆನೆ? ಹರನನರಿಯದ ಹೊಲೆಯರ ಮನೆಯಂ ಹೊಕ್ಕುಂಡುದಿಲ್ಲ.

ನಾಟಕೀಯತೆಗೆ:

"ಕುಮಾರಂ ಕಂಡೆಲೆ ಅಯ್ಯಾ ಏನನೆಳಸಿ ಬಂದಿರೊಳ್ಳಿತ್ತಪ್ಪ ಸಮಯವೇನಾದೊಡಂ ಬೇಡಿಕೊಳ್ಳಿಮೆನಲಾ ಮಾತಿನೊಡನೆ ನಾಲಗೆಯ ಕೀಲುರ್ಚಿದಂತೆ ಎಲವೋ ನಾಂ ಬೇಡಿಬರ್ಪವಂ ನೀಂ ಕುಡುವವನುಂಟುಂಟೇಕೆ ತಪ್ಪುವುದಕ್ಕಕ್ಕು ನಡೆ ನಡೆ ನಿನ್ನಂ ಬೇಡಿ ಬಂದುದುಂಟುಂಟು, ನೀನೆನ್ನ ತೊತ್ತಿನ ಮಗಂ, ನಿನ್ನ ಪೆಸರು ಸೌಂದರ ಪೆರುಮಾಳೆಯಲ್ಲಂ; ನಂಬಿಯೆಂಬುದು. ಇನಿತು ದಿನಂ ಶುಶ್ರೂಷೆಗೆ ಸಮರ್ಥನಲ್ಲದ ಕಾರಣದಿಂ ಬಾರದಿರ್ದವೀಗಳು ಹತ್ತೆಂಟು ಹರೆಯದ ಬಲುಗಂಡುದೊತ್ತಾದೆ; ಏಳೇಳು.

ಕೊಡೆಯುಮಂ ಕೋಲುಮಂ ಕಮಂಡಲುಮಂ ಪಿಡಿಪಿಡಿಯೆಂದು ಸಿಂಹಾಸನದೊಳಿರ್ದ ಕುಮಾರಂಗೆ ನೀಡೆ".

ನರಸಿಂಗಮೊನೆಯರ್ ತಾಂ ಭಕ್ತನಪ್ಪುದರಿಂ ಭಕ್ತಾನುಕಂಪಿಯಪ್ಪುದರಿಂ ಮಾಹೇಶ್ವರ ಸಮಯದೊಳು ಪುಸಿಯ ನುಡಿಯಲಾಗದೆಂತಪ್ಪುದೆಂದರಿಯಬಾರದು; ಅವರೆಂದಂತೆ ಎಮ್ಮ ಪೆತ್ತ ಮಗನಲ್ಲ, ಕೊಂಡು ಸಾಕಿದ ಮಗನಪ್ಪುದು ತಪ್ಪದಿದಕ್ಕೆ ಧರ್ಮವೆಂತಿರ್ಪುದಂತೆ ಮಾಡುವುದೆಂದು ಬೆಸಸಿ ಕಳುಪಲವಂ ಕುಮಾರನಲ್ಲಿಗೆಯ್ತಂದು ನ್ಯಾಯವೇನಂ ಪೇಳ್ದುದಂತೆ ಮಾಳ್ಪುದೆಂದು ಬೆಸಸಿದರೆನಲಿದು ಇಂತಾದುದೆಯೆನುತೆ ನಂಬಿಯಣ್ಣಂ ವೃದ್ಧನಿರವಂ ನೋಡಿ, ಒಮ್ಮೊಮ್ಮೆ ಕೋಪಿಸುತ್ತೊಮ್ಮೊಮ್ಮೆ ಶಂಕಿಸುತ್ತೊಮ್ಮೊಮ್ಮೆ ಉಮ್ಮಳಿಸುತ್ತುಂ ಒಮ್ಮೊಮ್ಮೆ ಬೆರಗಾಗುತ್ತಂ, ಎಲೆ ಅಯ್ಯಾ, ನಿನ್ನ ಸಾಕ್ಷಿಗಳನೀಗಳೆ ನೋಡಿಕೊಂಬೆನೆನುತ್ತಂ ತಿರುವೆಣ್ಣನಲ್ಲೂರ್ಗೆ ಪೊರಮಟ್ಟಾಗಳ್–

ಎಲೆಲೆ ಪಿಚ್ಚ ಬ್ರಾಹ್ಮಣಾ, ನಾನೆ ನಿನಗೆ ತೊತ್ತಿನ ಮಗ, ನಾನೆ ನಾನೆಯೆನೆ, ನೀ ನೀ ನೀನೆಂದು ಕೈವಿಡಿದೆಳೆವುದುಂ

ಒಂದು ವ್ಯಕ್ತಿಚಿತ್ರವನ್ನುಅತ್ಯಂತ ಸ್ವಾರಸ್ಯಕರವಾಗಿ ಮೂರ್ತಿಮತ್ತಾಗಿ ಕಣ್ಣೆದುರು ನಿಲ್ಲಿಸುವಂತೆಯೇ ಒಂದು ಸಂದರ್ಭವನ್ನು ಚಿತ್ರವತ್ತಾಗಿ ಸಣ್ಣ ಸಣ್ಣ ವಿವರಗಳೊಂದಿಗೆ ಕಟ್ಟಿಕೊಡುವ ಕಲೆ ಹರಿಹರನಿಗೇ ಮೀಸಲು ಎನ್ನುವಂತಿದೆ ನಂಬಿಯಣ್ಣನ ರಗಳೆಯಲ್ಲಿ ಬರುವ ವೃದ್ಧ ಮಾಹೇಶ್ವರನ ಚಿತ್ರ ಮತ್ತು ನಂಬಿಯಣ್ಣನ ಮದುವೆಯ ಮಂಟಪಕ್ಕೆ ಹೋಗಿ ಅವನು ಮಾಡುವ ಉತ್ಪಾತಗಳು ಹಾಗೂ ಅವನ ಉಪದ್ವ್ಯಾಪಗಳು:

೧) "ಆಪಾದ ಮಸ್ತಕಂಬರಂ ಉದ್ಧೂಳಿಸಿದ ವಿಭೂತಿ ತಲೆಯಂ ಮೆಯ್ಯಂ ತೀವಿದ ನರೆತೆರೆಗಳಾಗೆ ಜೆಡೆಯ ಚಂದ್ರಕಳೆ ಕೊಡೆಯಾಗೆ ಹಿಡಿದ ತ್ರಿಸೂಲಂ ಕೊಡೆಯ ಕಾವಾಗೆ ಖಟ್ವಾಂಗಂ ಯಷ್ಟಿಯಾಗೆ ಆಭರಣದೊಂದು ಸರ್ಪಂ ಪ್ರಮಾಣಪತ್ರಮಾಗೆ ಕಮಲಜಶಿರಂ ಕಮಂಡಲಮಾಗೆ ಪುಲಿದೊಗಲ್ಗಜಚರ್ಮಂ ಉಟ್ಟ ಹೊದೆದ ವೇಷ್ಟಿಗಳಾಗೆ ಮೆಟ್ಟಿದ ನೆಲೆನಾಗಂ ಪಾದರಕ್ಷೆಗಳಾಗೆ ಕಟ್ಟಿದ ಶಿರೋಮಾಲೆ ಜಪಮಾಲೆಯಾಗೆ ಮಹಾವೃದ್ಧನಾಗಿ........ ಕೆಯ್ಯ ಕೊಡೆಯಿಂ ಮೆಯ್ಯ ತೆರೆಗಳಿಂ ಜೋಲ್ವ ಪುರ್ವಿಂ ಎಳಲ್ವ ತೋಳ ತೊವಲಿಂ ಇಟ್ಟ ವಿಭೂತಿಯಿಂ ಊರಿದ ಯಷ್ಟಿಯ ಕೋಲಿಂ ಪಿಡಿದ ಕಮಂಡಲದಿಂ ಇಳಿದ ಬೆಳುಗಡ್ಡದಿಂ ನಡುಗುವ ನರೆದಲೆಯಿಂ ನರೆತು ಸಡಿಲ್ದ ಸರ್ವಾಂಗದಿಂ ಪುಣ್ಯಂ ಪಣ್ಣಾದಂತೆ ಒಮ್ಮೊಮ್ಮೆ ಕೆಮ್ಮುತೊಮ್ಮೊಮ್ಮೆ ಗೊಹೆಗೊಹೆ ಗುಟ್ಟುತುಂ ಶಿಥಿಲಾಕ್ಷರಂಗಳಿಂ ನಮಃಶಿವಾಯೆನುತೆ ಎನಿಲಾರದಂತೆ ನಡುಗುತಂ........

೨).....ಮೆಲ್ಲಮೆಲ್ಲನೆಲ್ಲವಂ ನೋಡುತಂ ಮನದೊಳು ನಗುತೆ ಕೋಲನೂರಿ ಕೆಮ್ಮುತೆ ಕೆಮ್ಮಿಕೆಮ್ಮಿ ಕುಮ್ಮುತೆ ಸಾಲ್ಗೊಂಡಿರ್ದ ತುಪ್ಪದ ಕೊಡಂಗಳೊಳ್ ನಾಲ್ಕೆರಡನೆಡಹಿ ನಮಃಶಿವಾಯೆಂಬ ವೃದ್ಧ ಧ್ವನಿ ಪುಟ್ಟೆ ಕೊಡಂಗಳ ಮೇಲೊಡೆಬಿರ್ದು ಕುಳ್ಳಿರ್ದರ ಮುಖದೊಳಂ ಕಣ್ಣೊಳಂ ಮೆಯ್ಯೊಳಂ ತುಪ್ಪಂ ಚೆಲ್ಲೆ ಎಲ್ಲರೆದ್ದು ಮಳ್ಳಳಿಗೊಂಡು

ಗೋಳೆಂದು ಬಿದ್ದಿರ್ದ ವೃದ್ಧಮಾಹೇಶ್ವರನಂ ಮುಂಕೊಂಡೆತ್ತಲನುವಾಗಿ ಮೆಲ್ಲಮೆಲ್ಲನೆ ನೆಗಪಿ ನಿಂದಿರಿಸಲೊಂದೆರಡಡಿಯನಿಟ್ಟು ದಡದಡಿಸಿ ನೋಡುವ ಜನರೆಲ್ಲಂ ಎಲೆಲೆ ವೃದ್ಧಂ ಬಿದ್ದಬಿದ್ದನಾಬಿದ್ದನೆಂಬಲ್ಲಿಂ ಮುನ್ನಂ ನಿಲಲಾರದೆ ಹಳಿಲನೆ ಘಳಿಗೆವಟ್ಟಲ ಮೇಲೆ ಬೀಳೆ ಕಳಸಿಗೆಯೊಡೆದು ಗಳಿಗೆವಟ್ಟಲು ಮುರಿದು ತಂಡುಲಂ ಚೆಲ್ಲಿ ಜೋಯಿಸರೆಲ್ಲಂ ಕೆದರಿ ಪೋಗೆ ಬಿದ್ದೇಳಲಾರದೆ ಹಮ್ಮೈಸಿದಂತಿರೆ ಪರಿತಂದು ಕಣ್ಣೊಳಂ ಬಾಯೊಳಂ ನೀರಂ ತಳೆದೆಂತಕ್ಕೆ ಎಚ್ಚರಿಸೆ ಎತ್ತುವವರ ಕೈಯ ಬಾಯೊಳೆ ಜೀವಂ ಹಿಡಿದಡೆ ಮುಟ್ಟಿದವರ ಭಾರಂ ತನ್ನ ಮೇಲೆಂಬ ವೃದ್ಧನಂ ನೋಡಬಾರದು ನುಡಿಸಲರಿದು ಪಿಡಿದಡೆ ಕೈಯೊಳಗೆ ಬಿಟ್ಟಡೆ ತುಪ್ಪದ ಕೊಡಮೇಲಲ್ಲದೆ ಬೀಳನೀ ವೃದ್ಧ ಬ್ರಾಹ್ಮಣನನೀ ಮುಪ್ಪಿನ ಮರುಳನೀ ಗೌತಮನ ಗೋವನೀ ಬ್ರಹ್ಮೇತಿಕಾರನನಾಪೂರ್ಗಿಸಿದ ರಾರ್ತಂದರಿದೆಮಗವಶಕುನಂ ಇನ್ನೇನೀ ಮದುವೆ ಹಸನಾಗದೆನುತ್ತೆಲ್ಲರುಂ ಕೈಯುಮಂ ಕಾಲುಮಂ ಪಿಡಿದೆತ್ತಿಕೊಂಡುಪೋಗಿ ತಮ್ಮಾಯುಷ್ಯ ಭೌಷ್ಯಗಳಂ ಪೊರಗಿಡುವಂತೆ ಚಪ್ಪರದ ಹೊರಗೆ ಮೆಲ್ಲನಿಳುಪಿ

ಈ ವಿಪ್ರನಂ ಪುಗಲೀದಿರಿಂ ಈ ವೃದ್ಧನಂ ಪುಗಿಸದಿರಿಯೆಂದು ಬಾಗಿಲ ವಂದಿರದುಹುತ್ತೆ ಕದವನಿಕ್ಕಿ ಒಳಗೆ ಪೊಗುವೇಸಕ್ಕವರಿಂ ಮುನ್ನವಯ್ತಂದೊಳಗಂ ಪೊಕ್ಕು ತೋರಣದ ತಳಿರಂ ಪರಿದು ಶಿವದಿಡುತಿರಲವರ್ಕಂಡು ಬೆರಗಾಗಿ ಈಗಳಿಂತು ಪೊರಗಿರಿಸಲಾಗಳಂತೆ ಬಂದು ಮುಂದಿರ್ದಪನೀ ವೃದ್ಧಂ ಕಿರುಕುಳನಲ್ಲಂ ಕರಣಿಕಾನಗಲೆ ವೇಳ್ಕುಮೆಂದು ನೋಡುತ್ತಿರೆ ಯಷ್ಟಿಯ ಕೋಲಿಂ ಭೃಂಗಾರಿಗಳನಿರಿದೊಡೆವುತ್ತಂ ಜಗಲಿಯಂ ದರಿಗೆಡಹುತುಂ ಮಂಗಲಮನಮಂಗಲಂ ಮಾಡುತಂ ಇರಲಿಲ್ಲಿಯ ಪಿರಿಯರು ಮಾನ್ಯರುಂ ಕುಂಡೆಲೆಯಪ್ಪರೆಯಪ್ಪರೆ ಇತ್ತ ಬಿಜಯಂಗೆಯ್ದುವೆನಲದಂ ಕೇಳದಂತೆ ಮತ್ತೆ ಮತ್ತೆ ಶಿವದಿಡುತ್ತೆನ್ನ ತೊತ್ತಿನ ಮಗನಂ ಕುಮಾರನೆಂದು ಸತ್ಕುಲಜನೆಂದು ಬಗೆದು ಹೆಣ್ಣಂ ಕೊಟ್ಟು ನಿಮ್ಮ ಕುಲಮುಂ ಕೆಡಿಸಿಕೊಳ್ಳದಿರಿ ನಾನಪ್ಪಡೆ ಮದುವೆಯನಾಗಲೀಯೆಂ ನೀವಿದರಾದ್ಯಂತವನೇನೆಣದರಿಯಿರಿವಂ ನರಸಿಂಗ ಮೊನೆಯರ್ಪೆತ್ತ ಮಗನಲ್ಲಂ ಕೊಂಡು ಸಾಕಿದ ದತ್ತಪುತ್ರಂ ಶಿವಬ್ರಾಹ್ಮಣ ಸೌಂದರ ಪೆರುಮಾಳೆಯಲ್ಲಂ ನಂಬಿಯಣ್ಣನೆಂದು ಪೆಸರು ಎನ್ನ ತೊತ್ತಿನ ಮಗನದಕ್ಕೆ ಪ್ರಮಾಣಪತ್ರವುಂಟೆಂದಟ್ಟಾಸುರಂ ಮಸಗಲು.........

ನುಡಿಗಟ್ಟುಗಳು ವಿಪುಲವಾಗಿ ಅಲ್ಲದಿದ್ದರೂ ಸಂದರ್ಭೋಚಿತವಾಗಿ ಬಂದಿವೆ.

ಕಂಡವರ ಕಣ್ಣಮಣಿ, ಸಾಗಿಸುವರ ಸೋಗಿಲಧನ, ಮುಟಿದರ ಮೆಯ್ಯ ಪುಳಕ, ಕೈಕೊಂಬವರ ಕಡವರ ಮನದ ಮಗ್ಗುಲೊಳಿರಿಸಿ, ಕಣ್ಣೊಳು ಮುದ್ದಾಡಿ, ಕೊಂಡುಕೊನೆವೋಗು,

ಒಂದು ಶಬ್ದಕ್ಕೊಂದು ವಾಕ್ಯ: ಲಿಂಗಾರ್ಪಿತವಲ್ಲದುದನಾಘ್ರಾಣಿಸೆ, ನೋಡೆ, ನುಡಿಯೆ, ಮುಟ್ಟೆ, ಕೇಳೆ

ಹೀಗೆ "ಗದ್ಯಂ ಕವೀನಾಂ ನಿಕಷಂ ವದಂತಿ" ಎಂಬ ಪ್ರಸಿದ್ಧವಾದ ಮಾತಿಗೆ ಸಾರ್ಥಕ ನಿದರ್ಶನವೆನ್ನುವಂತೆ ಹರಿಹರ ಕವಿಯ ರಗಳೆಯ ಕಾವ್ಯದಲ್ಲಿಯ ಗದ್ಯಭಾಗಗಳು ರಗಳೆಯ ಸಾಲುಗಳಿಗೆ ಸರಿಮಿಗಿಲಾಗಿ ಕಾವ್ಯದ ಲಯಗಾರಿಕೆಯನ್ನು ಉಳಿಸಿಕೊಳ್ಳುತ್ತಲೇ ಗದ್ಯದ ಸರಳತೆಗೆ ಎರವಾಗದಂತೆ ವ್ಯಕ್ತಿಗಳ ಭಾವಲೋಕವನ್ನು ಕಟ್ಟಿಕೊಡುವಲ್ಲಿ, ಸಂದರ್ಭದ ಚಿತ್ರವನ್ನು ಚಿತ್ರವತ್ತಾಗಿ ಮೂಡಿಸುವಲ್ಲಿ, ನಾಟಕೀಯತೆಯನ್ನು ಅಳವಡಿಸುವಲ್ಲಿ ಸಮರ್ಥವಾಗಿವೆ.

■

ಕನ್ನಡ ಗ್ರಂಥಸಂಪಾದನಾ ಶಾಸ್ತ್ರಕ್ಕೆ ಡಿ.ಎಲ್.ಎನ್. ಅವರ ಕೊಡುಗೆ

◆

ಎಸ್. ಬಿಳಿಗಿರಿವಾಸನ್

ಡಾ. ದೊಡ್ಡಬೆಲೆ ಲಕ್ಷ್ಮೀನರಸಿಂಹಾಚಾರ್ (೧೯೦೬-೭೧) ಸಾಹಿತ್ಯ ಕ್ಷೇತ್ರದಲ್ಲಿ ಡಿ.ಎಲ್.ಎನ್. ಎಂದೇ ಪ್ರಖ್ಯಾತರು. ಕನ್ನಡ ಗ್ರಂಥಸಂಪಾದನಾ ಕ್ಷೇತ್ರದ ಪಿತಾಮಹರು ಆದ್ಯ ಪ್ರವರ್ತಕರು. ಈ ಕ್ಷೇತ್ರಕ್ಕೆ ಘನತೆ ಗೌರವಗಳನ್ನು ತಂದುಕೊಟ್ಟವರು. ಇವರು ಈ ಕ್ಷೇತ್ರಕ್ಕೆ ಪದಾರ್ಪಣ ಮಾಡುವ ವೇಳೆಗಾಗಲೇ ಕನ್ನಡ ಗ್ರಂಥ ಸಂಪಾದನೆ ಸುಮಾರು ಒಂದು ಶತಮಾನದ ಇತಿಹಾಸವನ್ನು ಹೊಂದಿತ್ತು. ಡಿ.ಎಲ್.ಎನ್. ಅವರ ಗ್ರಂಥ ಸಂಪಾದನೆಯ ಮಹತ್ವವನ್ನೂ ಆಳ, ಅಗಲ, ಪ್ರಭಾವ ಪರಿಣಾಮಗಳನ್ನೂ ಅರಿಯಲು ಅವರಿಗಿಂತ ಹಿಂದಿನ ಗ್ರಂಥದ ಸಂಪಾದನೆಯ ಸ್ಥಿತಿಗತಿಗಳನ್ನು ಗಮನಿಸಬೇಕಾದ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಗ್ರಂಥ ಸಂಪಾದನೆಯಲ್ಲಿ ಸ್ಥೂಲವಾಗಿ ನಾಲ್ಕು ಸ್ತರಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ:

೧. ಮಿಷನರಿಗಳ ಗ್ರಂಥಸಂಪಾದನೆ.

೨. ದೇಶೀ ವಿದ್ವಾಂಸರ ಗ್ರಂಥಸಂಪಾದನೆ.

೩. ಡಿ.ಎಲ್.ಎನ್. ಅವರ ಗ್ರಂಥಸಂಪಾದನೆ.

೪. ಡಿ.ಎಲ್.ಎನ್. ಅವರ ಅನಂತರದ ಗ್ರಂಥಸಂಪಾದನೆ.

೧. ಮಿಷನರಿಗಳ ಗ್ರಂಥ ಸಂಪಾದನೆ

ಇದನ್ನು ಪ್ರಾರಂಭಿಸಿದವರು ವಿದೇಶೀಯರು. ಕ್ರಿ.ಶ. ೧೭೮೩ರಲ್ಲಿ ಕರ್ನಲ್ ಮೆಕೆಂಜಿ ಭಾರತಕ್ಕೆ ಬಂದು ೩೮ ವರ್ಷಗಳ ಕಾಲ ಭಾರತದಲ್ಲಿ ನೆಲೆಸಿದ್ದು ಅಂದಿನ ಕಾಲದ ರಾಜಕೀಯ, ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಗತಿಗಳನ್ನು ತಿಳಿಸುವ ೨೦೭೦ಕ್ಕೂ ಹೆಚ್ಚು ಕೈಫಿಯತ್ತುಗಳನ್ನು ಬರೆಸಿದುದಲ್ಲದೆ, ೧೫೬೮ ಹಸ್ತಪ್ರತಿಗಳನ್ನು ಸಂಗ್ರಹಿಸಿದರು. ಇವರ ನಂತರ ಹರ್ಮನ್ ಮೋಗ್ಲಿಂಗ್ ಕರ್ನಾಟಕಕ್ಕೆ ಬಂದು (೧೮೩೬) ಬಿಬ್ಲಿಯಾಥಿಕಾ ಕರ್ನಾಟಕ ಮಾಲಿಕೆಯಲ್ಲಿ ಜೈಮಿನಿ ಭಾರತ

(೧೮೪೫), ತೊರವೆ ರಾಮಾಯಣ (೧೮೪೯), ದಾಸರ ಪದಗಳು (೧೮೫೦) ಇತ್ಯಾದಿ ಕೃತಿಗಳನ್ನು ಪ್ರಕಟಿಸಿದರು. ಗ್ಯಾರೆಟ್ ಶಾಸ್ತ್ರಗ್ರಂಥದ ಸಂಪಾದನೆಯಲ್ಲಿ ಅಸಕ್ತರಾಗಿ ೧೮೬೮ರಲ್ಲಿ 'ಶಬ್ದಮಣಿದರ್ಪಣ'ವನ್ನು ಸಂಪಾದಿಸಿದರು. ಈ ಸಂಪಾದನಾಕಾರ್ಯದ ಇತಿಮಿತಿಗಳನ್ನು ಅರಿತ ಎಫ್. ಕಿಟ್ಟೆಲ್ ಅವರು ಹಲವಾರು ಹಸ್ತಪ್ರತಿಗಳ ಆಧಾರದಿಂದ ೧೮೭೨ರಲ್ಲಿ ಶಬ್ದಮಣಿದರ್ಪಣ, ೧೮೭೫ರಲ್ಲಿ ಛಂದೋಂಬುಧಿಯನ್ನು ಪರಿಷ್ಕರಿಸುವುದರೊಂದಿಗೆ ಶಾಸ್ತ್ರೀಯ ಸಂಪಾದನೆಗೆ ನಾಂದಿ ಹಾಡಿದರು. ಪ್ರಾಚ್ಯವಸ್ತು ಇಲಾಖೆಯ ಪ್ರಥಮ ನಿರ್ದೇಶಕರಾದ ಬಿ.ಎಲ್. ರೈಸ್ ಅವರು ಸಂಗ್ರಹ, ಸಂಪಾದನೆ, ಪ್ರಕಟಣೆಯನ್ನು ಪ್ರಾರಂಭಿಸಿ ಅಮರಕೋಶ (೧೮೭೩), ಪಂಪರಾಮಾಯಣ (೧೮೮೨), ಕರ್ಣಾಟಕ ಭಾಷಾಭೂಷಣ (೧೮೮೪), ಶಬ್ದಾನುಶಾಸನ (೧೮೯೦), ಪಂಪಭಾರತ (೧೮೯೮) ಈ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಿದುದು ವಿದೇಶೀ ವಿದ್ವಾಂಸರು ಶಾಸ್ತ್ರಕೃತಿಗಳ ಬಗೆಗೆ ನೀಡಿದ ಆದ್ಯತೆಯನ್ನು ತಿಳಿಸುತ್ತದೆ.

೨. ದೇಶೀ ವಿದ್ವಾಂಸರ ಗ್ರಂಥ ಸಂಪಾದನೆ

ಆಂಗ್ಲ ವಿದ್ಯಾಭ್ಯಾಸವನ್ನು ಹೊಂದಿ ವಿದೇಶೀ ವಿದ್ವಾಂಸರ ಕಾರ್ಯವೈಖರಿಯನ್ನು ಗಮನಿಸಿದ್ದ ದೇಶೀಯ ವಿದ್ವಾಂಸರು ಗ್ರಂಥಸಂಪಾದನಾ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಕವಿಚರಿತೆಕಾರರಾದ ಆರ್. ನರಸಿಂಹಾಚಾರ್ಯರು ಕಾವ್ಯಾವಲೋಕನ ಹಾಗೂ ಕರ್ನಾಟಕ ಭಾಷಾಭೂಷಣ (೧೯೦೩), 'ಶಬ್ದಾನುಶಾಸನ'ವನ್ನೂ (೧೯೨೬), ಕೆ.ಬಿ. ಪಾಠಕರು 'ಕವಿರಾಜಮಾರ್ಗ'ವನ್ನೂ ಸಂಪಾದಿಸಿದರು. ಎಂ.ಎ. ರಾಮಾನುಜೈಯ್ಯಂಗಾರ್ ಹಾಗೂ ಎಸ್.ಜಿ. ನರಸಿಂಹಾಚಾರ್ಯರು ಒಟ್ಟಾಗಿ 'ಕರ್ಣಾಟಕ ಕಾವ್ಯಮಂಜರಿ' ಹಾಗೂ 'ಕರ್ಣಾಟಕ ಕಾವ್ಯ ಕಲಾನಿಧಿ' ಮಾಲಿಕೆಯಲ್ಲಿ ಮಲ್ಲಿನಾಥ ಪುರಾಣ, ಕಬ್ಬಿಗರ ಕಾವ, ಚಿಕದೇವರಾಜ ವಿಜಯಂ, ಲೀಲಾವತಿ ಪ್ರಬಂಧ ಇತ್ಯಾದಿ ೭೫ ಕೃತಿಗಳನ್ನು ಕಾವ್ಯ, ಶಾಸ್ತ್ರ ಕ್ಷೇತ್ರಗಳಲ್ಲಿ ಸಂಪಾದಿಸಿ ಪ್ರಕಟಿಸುವುದರ ಮೂಲಕ ಕನ್ನಡ ಸಾಹಿತ್ಯ ಶ್ರೀಮಂತಿಕೆಯ ವಿಶ್ವರೂಪ ದರ್ಶನವನ್ನು ಮಾಡಿಸಿದರು. ಈ ಸಂಪಾದಿತ ಕೃತಿಗಳಲ್ಲಿ ಹಲವಾರು ಹಸ್ತಪ್ರತಿಗಳನ್ನು ಬಳಸಿ ಸಂಕ್ಷಿಪ್ತವಾದ ಪೀಠಿಕೆಯೊಂದಿಗೆ ವಿರಳ ಪಾಠಾಂತರಗಳನ್ನು ಅಡಿಟಿಪ್ಪಣಿಯಲ್ಲಿ ಸೂಚಿಸಿರುವರಾದರೂ, ಗ್ರಂಥ ಸಂಪಾದನೆಯನ್ನು ಕುರಿತ ವಿವರಗಳು ಅಷ್ಟಾಗಿ ದಾಖಲಾಗಲಿಲ್ಲವೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಎನ್.ಆರ್. ಕರಿಬಸವ ಶಾಸ್ತ್ರಿಗಳು (೧೮೭೨-೧೯೨೩) ಗ್ರಂಥ ಪ್ರಕಾಶಿಕೆಯಿಂದ ಸಿದ್ಧಾಂತ ಶಿಖಾಮಣಿ, ಪಂಡಿತಾರಾಧ್ಯಚರಿತೆ, ಸೌಂದರ ಪುರಾಣ ಕೃತಿಗಳನ್ನು ಪರಿಷ್ಕರಿಸಿ ಪ್ರಕಟಿಸಿದರು. ಪಿ.ಆರ್. ಕರಿಬಸವಶಾಸ್ತ್ರಿಯವರು (೧೮೪೬-೧೯೨೧) 'ವೀರಶೈವ ಮತ ಪ್ರಕಾಶಿಕೆ'ಯ ಆಶ್ರಯದಲ್ಲಿ ಜೈಮಿನಿ ಭಾರತ, ರಾಖಶೇಖರ ವಿಳಾಸ, ಶಬರ ಶಂಕರ ವಿಳಾಸ ಪ್ರಕಟಿಸಿದ್ದಾರೆ. ಈ ಕೃತಿಗಳ ಸಂಪಾದನೆಯಲ್ಲಿ ಸಂಪೂರ್ಣವಾಗಿ ಮಿಶನರಿಯ ಮಾದರಿಯನ್ನಾಗಲೀ, ಜನಪ್ರಿಯ ಆವೃತ್ತಿಗಳನ್ನಾಗಲೀ ಅನುಸರಿಸದೆ ತಮ್ಮ ಸ್ವಾನುಭವದ ಹಿನ್ನೆಲೆಯಿಂದ ಪರಿಷ್ಕರಿಸಿ ಉತ್ತಮ ಪಾಠಗಳನ್ನು ನೀಡಲು ಪ್ರಯತ್ನಿಸಿರುವರು.

ವಿಶೇಷವಾಗಿ ವಚನ ಸಾಹಿತ್ಯ ಶೋಧನೆಯ ಮೂಲಕ ಹಲವಾರು ಶಿವಶರಣರ ವಚನಗಳನ್ನು ಉತ್ತರ ಕರ್ನಾಟಕ ಭಾಗದಲ್ಲಿ ಫ.ಗು. ಹಳಕಟ್ಟಿಯವರು ಪ್ರಕಟಿಸಿದರು. ಇವರು ಅತ್ಯದ್ಭುತವಾದ ಕಾರ್ಯವನ್ನು ಮಾಡಿದರೂ ವಚನ ಸಾಹಿತ್ಯ ಸಂಪಾದನೆಯನ್ನು ಕುರಿತು ಸೈದ್ಧಾಂತಿಕತೆಯನ್ನು ತಿಳಿಸುವ ಉದ್ದೇಶವಿರಲಿಲ್ಲ. ಉತ್ತಂಗಿ ಚೆನ್ನಪ್ಪನವರು ೧೯೨೪ರಲ್ಲಿ ಸರ್ವಜ್ಞನ ವಚನಗಳನ್ನು ಪರಿಷ್ಕರಿಸುವುದರ ಮೂಲಕ ಅದರ ಸಾಧಕ ಬಾಧಕಗಳನ್ನು ನಿರೂಪಿಸಿರುವರು. ೧೯೩೪ರಲ್ಲಿ ಶಿ.ಶಿ. ಬಸವನಾಳರು ಚನ್ನಬಸವ ಪುರಾಣ, ಬಸವಣ್ಣನವರ ವಚನಗಳು ಎಂಬ ಗ್ರಂಥಗಳನ್ನು ವಿವರವಾದ ಪೀಠಿಕೆಯೊಂದಿಗೆ ಪರಿಷ್ಕರಣಕ್ಕೆ ಸಂಬಂಧಿಸಿದ ಮಾಹಿತಿಗಳೊಂದಿಗೆ ಪ್ರಕಟಿಸಿದರು.

೧೯೨೯–೧೯೪೦ರ ಕಾಲಮಾನದಲ್ಲಿ ಎ. ವೆಂಕಟರಾವ್ ಹಾಗೂ ಎಚ್. ಶೇಷಯ್ಯಂಗಾರ್ಯರು ಮದ್ರಾಸ್ ವಿಶ್ವವಿದ್ಯಾನಿಲಯದಿಂದ ರಸರತ್ನಾಕರ, ಕವಿರಾಜಮಾರ್ಗ, ಪುಷ್ಪದಂತ ಪುರಾಣ, ಖಗೇಂದ್ರಮಣಿ ದರ್ಪಣ ಮುಂತಾದ ೯ ಅಪ್ರಕಟಿತ ಕೃತಿಗಳನ್ನು ಪ್ರಕಟಿಸಿದರು. ಡಿ.ಎಲ್.ಎನ್. ಅವರ ಸಮಕಾಲೀನರಾದ ಎಂ. ಮರಿಯಪ್ಪಭಟ್ಟ ಅವರು ಮದ್ರಾಸಿನಿಂದ ವರ್ಧಮಾನ ಪುರಾಣ, ಅಭಿನವಾಭಿದಾನ ಇತ್ಯಾದಿ ೧೦ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದರು. ಎ. ಶಾಂತಿರಾಜ ಶಾಸ್ತ್ರಿಗಳು ಜೈನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಏಳಕ್ಕೂ ಮೀರಿ ತಾಳೆಗರಿಗಳಲ್ಲಿದ್ದ ಗ್ರಂಥಗಳನ್ನು ಪರಿಷ್ಕರಿಸಿ ಪ್ರಕಟಿಸಿದರು. ಗೋರೆಬಾಳ ಹನುಮಂತರಾಯರು ಎಪ್ಪತ್ತನಾಲ್ಕಕ್ಕೂ ಮೀರಿ ಕೃತಿಗಳನ್ನು ಪ್ರಕಟಿಸಿದರು. ಇವರು ಪ್ರಚಾರದ ಬಗೆಗಿನ ಉದ್ದೇಶದಿಂದ ಸಂಪಾದಿಸಿ ಪ್ರಕಟಿಸಿದುದರಿಂದ ದಾಸ ಸಾಹಿತ್ಯದ ಶಾಸ್ತ್ರೀಯ ಸಂಪಾದನೆಗೆ ಗಮನ ನೀಡಲಿಲ್ಲವೆಂದು ಕಂಡುಬರುತ್ತದೆ ಎಂದು ಈ ಕ್ಷೇತ್ರದಲ್ಲಿನ ಹಲವಾರು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

೩. ಡಿ.ಎಲ್.ಎನ್. ಅವರ ಗ್ರಂಥ ಸಂಪಾದನೆ

ಡಿ.ಎಲ್.ಎನ್. ಅವರು ಪ್ರಾರಂಭದಲ್ಲಿ ಮೈಸೂರು ಪ್ರಾಚ್ಯ ವಿದ್ಯಾ ಸಂಶೋಧನ ಸಂಸ್ಥೆಯಲ್ಲಿ ರೆಸಿಡೆಂಟ್ ಕನ್ನಡ ಪಂಡಿತರಾಗಿ ೧೯೩೦ರಲ್ಲಿ ನೇಮಿಸಲ್ಪಟ್ಟರು. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಅತ್ಯಂತ ಒಲವಿದ್ದ ಡಿ.ಎಲ್.ಎನ್. ಅವರಿಗೆ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಗರ್ಭೀಕರಿಸಿಕೊಂಡಿದ್ದ ಹಸ್ತಪ್ರತಿಗಳೊಂದಿಗಿನ ಒಡನಾಟವು ಹೆಚ್ಚಾಯಿತು. ಅನಂತರ ಅವರು ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿರುವಾಗಲೂ ಸಹ ಗ್ರಂಥಸಂಪಾದನೆ, ಸಂಶೋಧನೆಯಲ್ಲಿ ಅತ್ಯಂತ ಆಸಕ್ತರಾಗಿದ್ದರು. ಅವರ ಗುರುವರ್ಯರಾದ ಪ್ರೊ. ಟಿ.ಎಸ್. ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರಿ, ಬಿ.ಎಂ. ಶ್ರೀಯವರ ನಿರಂತರ ಪೋಷಣೆಯಲ್ಲಿ ತಮ್ಮ ವೃತ್ತಿಜೀವನದೊಂದಿಗೆ ಪ್ರವೃತ್ತಿಯಾಗಿ ಗ್ರಂಥಸಂಪಾದನೆಯಲ್ಲಿ ತಮ್ಮನ್ನು ತಾವು ಅತ್ಯಂತ ಗಂಭೀರವಾಗಿ ತೊಡಗಿಸಿಕೊಂಡು ಹಲವಾರು ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದರು. ಅವುಗಳಲ್ಲಿ ಪ್ರಮುಖವಾದುವುವೆಂದರೆ 'ಸಕಲ ವೈದ್ಯ ಸಂಹಿತಾ ಸಾರಾರ್ಣವಂ' ಸಂಪುಟ ೧ (೧೯೩೨), ಕರ್ನಾಟಕ ಮಹಾಭಾರತ : ಭೀಷ್ಮಪರ್ವ (೧೯೩೩). ಇವು ಅವರ

ಪ್ರಾರಂಭದ ಸಂಪಾದನಾ ಕೃತಿಗಳಾದುದರಿಂದ ಪಾಠ ಪರಿಷ್ಕರಣದಲ್ಲಿ ಉತ್ತಮವಾಗಿದ್ದರೂ ಸಂಕ್ಷಿಪ್ತ ಪೀಠಿಕೆಯನ್ನು ಒಳಗೊಂಡಿದೆ. ಭೀಷ್ಮಪರ್ವವು ಪ್ರಾಚ್ಯ ವಿದ್ಯಾ ಸಂಶೋಧನಾಲಯದ ಕುಮಾರವ್ಯಾಸ ಭಾರತದ ಇತರ ಪರ್ವದಲ್ಲಿ ಅನುಸರಿಸಿರುವ ರೀತಿಯಲ್ಲಿದೆ. ಈ ಆವೃತ್ತಿಗಳು ಕುವೆಂಪು, ಮಾಸ್ತಿಯವರ ಆವೃತ್ತಿಗಿಂತಲೂ ಶಾಸ್ತ್ರೀಯವಾಗಿ ಅಧಿಕೃತವಾಗಿರುವುದೆಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಪಂಪರಾಮಾಯಣ ಸಂಗ್ರಹ (೧೯೩೭) ವು ತಿರುವಳ್ಳೂರು ರಾಘವಾಚಾರ್ ಅವರೊಂದಿಗೆ ಸಂಪಾದಿಸಿದ್ದು ಪಾಠ ಪರಿಷ್ಕರಣೆ, ಪೀಠಿಕೆಗಳು ವಿದ್ವತ್ಪೂರ್ಣವಾಗಿದ್ದು, ಮೌಲಿಕ ಕೃತಿ ವಿಮರ್ಶೆಯೂ ಮೂಡಿಬಂದಿದೆ. ಸಿದ್ಧರಾಮಚಾರಿತ್ರ (೧೯೪೧) ವನ್ನು ಪ್ರೊ. ಟಿ.ಎಸ್. ವೆಂಕಣ್ಣಯ್ಯ ನವರೊಂದಿಗೆ ಸಂಪಾದಿಸಿದ್ದು, ನಾಲ್ಕು ಪ್ರತಿಗಳ ಆಧಾರದಿಂದ ಪರಿಷ್ಕರಿಸಿ ಪ್ರತಿಗಳ ಸ್ವರೂಪ, ಪಾಠಶೋಧದ ಬಗೆಗೆ ಸುದೀರ್ಘವಾಗಿ ತಿಳಿಸಲಾಗಿದೆ. ಅತ್ಯಂತ ವಿಶದವಾದ ಪೀಠಿಕೆಯಲ್ಲಿ ಸಿದ್ಧರಾಮನ ವ್ಯಕ್ತಿತ್ವ ಹಾಗೂ ಆತನ ಬಗೆಗಿನ ಸಾಹಿತ್ಯದ ಬಗ್ಗೆ ವಿಪುಲವಾದ ಮಾಹಿತಿಯಿದೆ. ಸಿದ್ಧರಾಮನ ದೀಕ್ಷಾಪ್ರಸಂಗದ ವಿಚಾರಗಳು ವಾದ ವಿವಾದಕ್ಕೆ ಕಾರಣವಾಗಿದ್ದುದು ಅಪರೂಪದ ವಿಚಾರವಾಗಿದೆ. ವಡ್ಡಾರಾಧನೆ (೧೯೭೦) ಡಿ.ಎಲ್.ಎನ್. ಅವರ ಸ್ವತಂತ್ರ ಸಂಪಾದಿತ ಕೃತಿಯಾಗಿದ್ದು, ಅವರಿಗೆ ಅಪಾರವಾದ ಕೀರ್ತಿಯನ್ನು ತಂದಿತ್ತ ಕೃತಿಗಳಲ್ಲಿ ಒಂದಾಗಿದೆ. ಇದೊಂದು ಕಥಾಸಂಗ್ರಹವಾದುದರಿಂದ ವಿಪುಲವಾದ ಪಾಠಾಂತರಕ್ಕೆ ಅವಕಾಶವಿದ್ದು, ಸಂಪಾದಕರ ವಿದ್ವತ್ತಿಗೆ ಸವಾಲಿನಂತಿದೆ. ಸೂಕ್ತ ಪಾಠಗಳ ಆಯ್ಕೆ, ಪಾಂಡಿತ್ಯ ಪೂರ್ಣವಾದ ಪೀಠಿಕೆ, ವಿಸ್ತಾರವಾದ ಟಿಪ್ಪಣಿ ಶಬ್ದಕೋಶಗಳು ಈ ಕೃತಿಯನ್ನು ಆದರ್ಶ ಗ್ರಂಥ ಸಂಪಾದನೆಯ ಘನತೆಗೆ ಏರಿಸಿವೆ. ಈ ಕೃತಿಯಲ್ಲಿ ಹಸ್ತಪ್ರತಿಗಳ ಸ್ವರೂಪವನ್ನು ಕುರಿತು ಸುದೀರ್ಘವಾಗಿ ನಿರೂಪಿಸಿರುವುದು ಇದರ ವೈಶಿಷ್ಟ್ಯವಾಗಿದೆ. ಡಿ.ಎಲ್.ಎನ್. ಅವರಲ್ಲಿ ಗ್ರಂಥ ಸಂಪಾದನಾ ಶಾಸ್ತ್ರಕಾರರೊಬ್ಬರು ರೂಪುಗೊಳ್ಳುತ್ತಿರುವ ಸೂಚನೆಯು ಇದರಲ್ಲಿ ದೊರೆಯುವುದೆಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಸಿದ್ಧರಾಮ ಚರಿತೆಯ ಸಂಗ್ರಹ (೧೯೫೧), ಸುಕುಮಾರ ಚರಿತಂ (೧೯೫೪) ಪರಿಷ್ಕರಣದಲ್ಲಿಯೂ ತಮ್ಮ ಹಿಂದಿನ ಕೃತಿಗಳ ಸಂಪಾದನಾ ಕ್ರಮವನ್ನೇ ಅನುಸರಿಸಿದ್ದು ಎರಡು ಹಸ್ತಪ್ರತಿಗಳ ಆಧಾರದಿಂದ ಭಿನ್ನ ಪಾಠಗಳನ್ನು ಗುರುತಿಸುವುದರೊಂದಿಗೆ, ಪಾಠಾಂತರಗಳನ್ನು ನೀಡಿ, ಸೂಕ್ತ ಪಾಠವನ್ನು ಸ್ವೀಕರಿಸಿ, ಅಭ್ಯಾಸಪೂರ್ಣ ಪೀಠಿಕೆಯನ್ನು ನೀಡಿದ್ದಾರೆ. ಶಬ್ದಮಣಿ ದರ್ಪಣಂ (೧೯೫೯) ಕೃತಿಯ ಸಂಪಾದನೆಯಲ್ಲಿಯೂ ಹಿಂದಿನ ಪರಿಷ್ಕರಣೆಗಳಿಗಿಂತ ಉತ್ತಮಿಕೆಯನ್ನು ಸಾಧಿಸಿರುವರು. ಈ ಕೃತಿಯು ವಿದ್ವತ್ವಲಯದ ಮನ್ನಣೆಯನ್ನು ಗಳಿಸಿ, ಹಲವಾರು ವರ್ಷಗಳ ಕಾಲ ಪಠ್ಯಪುಸ್ತಕವಾಗಿ, ಅನೇಕ ಪೀಳಿಗೆಗಳು ವ್ಯಾಸಂಗ ಮಾಡಲು ಸಾಧ್ಯವಾಯಿತು. ಗೋವಿನ ಹಾಡು (೧೯೬೦) ಎಂಬಂತಹ ಜನಪ್ರಿಯ ಹಾಡುಗಳನ್ನು ತಮ್ಮ ಗಂಭೀರ ಕೃತಿಗಳೊಂದಿಗೆ ಸಂಪಾದಿಸಿರುವುದು ಕೌತುಕದ ವಿಷಯವಾಗಿದೆ. ಈ ಕೃತಿಯಲ್ಲಿಯೂ ಡಿ.ಎಲ್.ಎನ್. ಅವರು ತೋರಿಸಿರುವ ವಿಚಕ್ಷಣೆಯು ಮೆಚ್ಚುವಂತಹುದು.

ಮೇಲ್ಕಂಡ ಸಂಪಾದಿತ ಕೃತಿಗಳಿಗೆ ತಿಲಕಪ್ರಾಯವಾಗಿ ಡಿ.ಎಲ್.ಎನ್. ಅವರ 'ಕನ್ನಡ ಗ್ರಂಥ ಸಂಪಾದನೆ' ೧೯೬೪ರಲ್ಲಿ ಪ್ರಕಟವಾಗಿ ಕನ್ನಡ ಪಾಂಡಿತ್ಯ ಕ್ಷೇತ್ರದಲ್ಲಿ ಅವರ ಹೆಸರು ಪ್ರತಿಷ್ಠಿತವಾಯಿತು. ಇದೊಂದು ಅನುಪಮ ಘಟನೆಯಾಗಿದೆ. ತೀ.ನಂ.ಶ್ರೀ ಹಾಗೂ ಡಿ.ಎಲ್.ಎನ್. ಅವರ ಅವಿವರತ ಪ್ರಯತ್ನದಿಂದ ಕನ್ನಡ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಕನ್ನಡ ಗ್ರಂಥ ಸಂಪಾದನೆ ಪಠ್ಯ ವಿಷಯವಾದುದು ಮಹತ್ವವಾದ ವಿಷಯವಾಯಿತು. ಈ ಅಂಶವು ಕೃತಿರಚನೆಗೆ ಪ್ರೇರಕ ಶಕ್ತಿಯಾಗಿ ಪರಿಣಮಿಸಿತು.

ಈ ಕೃತಿಯ ರಚನೆಯ ಕಾಲವನ್ನು ಕುರಿತು ಹೇಳುವಲ್ಲಿ ೧೯೬೦ರ ಸುಮಾರಿಗೆ ಕನ್ನಡದ ಪ್ರಮುಖ ಕೃತಿಗಳು ಪ್ರಕಟವಾಗಿದ್ದು, ಆರ್. ನರಸಿಂಹಾಚಾರ್ಯ, ಎಂ.ಎ. ರಾಮಾನುಜೈಯ್ಯಂಗಾರ್, ಎಸ್.ಜಿ. ನರಸಿಂಹಾಚಾರ್ಯ, ಶಿ.ಶಿ. ಬಸವನಾಳನ, ಪ್ರೊ. ಟಿ.ಎಸ್. ವೆಂಕಣ್ಣಯ್ಯ, ಮುಂತಾದ ವಿದ್ವಾಂಸರು ಈ ಕ್ಷೇತ್ರದಲ್ಲಿ ಶ್ರಮಿಸಿದ್ದರು. ವಿಶೇಷವಾಗಿ ಮದ್ರಾಸು, ಮೈಸೂರು, ಧಾರವಾಡದಲ್ಲಿ ಹಸ್ತಪ್ರತಿ ಭಂಡಾರಗಳು ರೂಪುಗೊಂಡು ವರ್ಣನಾತ್ಮಕ ಹಸ್ತಪ್ರತಿ ಸೂಚಿ ಸಂಪುಟಗಳು ಸಿದ್ಧವಾಗಿದ್ದುವು. ಅಂದರೆ ಆ ವೇಳೆಗಾಗಲೇ ಕನ್ನಡದಲ್ಲಿ ಗ್ರಂಥಸಂಪಾದನೆಯ ಪರಂಪರೆಯು ನಿರ್ಮಾಣವಾಗಿದ್ದು, ಈ ಗ್ರಂಥ ಸಂಪಾದನಾ ಶಾಸ್ತ್ರಾಧ್ಯಯನಗಳನ್ನು ಒಂದು ಭದ್ರವಾದ ಬುನಾದಿಯ ಮೇಲೆ ನಿಲ್ಲಿಸುವಂತಹ ಸಿದ್ಧಾಂತ ಕೃತಿಯೊಂದರ ಅಗತ್ಯವಿತ್ತು. ಈ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಅಲ್ಲಿಯವರೆಗೆ ಒಂದೆರಡು ಲೇಖನಗಳ ಹೊರತು ಕನ್ನಡದಲ್ಲಿ ಬೇರೆ ಬರಹಗಳಿರಲಿಲ್ಲ. ಇವೆಲ್ಲವೂ 'ಕನ್ನಡ ಗ್ರಂಥ ಸಂಪಾದನೆ' ಎಂಬ ಆಚಾರ್ಯ ಕೃತಿಯೊಂದು ರೂಪುಗೊಳ್ಳಲು ಕಾರಣವಾಯಿತು.

ಈ ಕೃತಿಯು ಡಿ.ಎಲ್.ಎನ್. ಅವರ ವಿದ್ವತ್ತು, ಪ್ರಾಚೀನ ಹಾಗೂ ಮಧ್ಯಕಾಲೀನ ಸಾಹಿತ್ಯದ ತಳಸ್ಪರ್ಶಿಯಾದ ಅಧ್ಯಯನಕ್ಕೆ ಒರೆಗಲ್ಲಾಯಿತು. ಕನ್ನಡ ಹಸ್ತಪ್ರತಿಗಳನ್ನು ಪರಿಶೀಲಿಸುವುದರೊಂದಿಗೆ ಕನ್ನಡ ಗ್ರಂಥಸಂಪಾದನೆಯ ಸ್ವರೂಪವನ್ನು ಪ್ರದರ್ಶಿಸಿರುವರು. ಕೃತಿಯ ವ್ಯಾಪ್ತಿ, ವಿಧಾನ, ವಿಶ್ಲೇಷಣೆ, ಸ್ವೋಪಜ್ಞತೆ ಎಲ್ಲವೂ ಉನ್ನತ ಮಟ್ಟದ್ದಾಗಿದ್ದು, ಕೃತಿ ರಚನೆ ಹಾಗೂ ನಿರ್ವಹಣೆಗೆ ತಮ್ಮದೇ ಆದ ಮಾರ್ಗವನ್ನು ಅನುಸರಿಸಿದ್ದಾರೆ. ಗ್ರಂಥ ಸಂಪಾದನೆಯ ತತ್ತ್ವಗಳನ್ನು ಕನ್ನಡ ಗ್ರಂಥಗಳಿಗೆ ಅಳವಡಿಸುವ ರೀತಿಯನ್ನು ಸೋದಾಹರಣವಾಗಿ ನಿರೂಪಿಸಿದ್ದಾರೆ. ಈ ಕೃತಿಯನ್ನು ಅಧ್ಯಯನ ಮಾಡುವಾಗ ಶಾಸ್ತ್ರಕೃತಿಯೊಂದನ್ನು ಅಧ್ಯಯನ ಮಾಡುತ್ತಿರುವೆವೆಂಬುದು ಯಾರಿಗೂ ಭಾಸವಾಗುವುದಿಲ್ಲ. ಕಠಿಣವಾದ ವಿಷಯವನ್ನು ಸರಳವಾಗಿ ನಿರೂಪಿಸುವ ಅನನ್ಯ ಲೇಖನ ಕಲೆಯು ಅವರಿಗೆ ಕರಗತವಾಗಿದೆ.

ಈ ಕೃತಿಯು ಹನ್ನೆರಡು ಅಧ್ಯಾಯಗಳಲ್ಲಿ ತೆರೆದುಕೊಳ್ಳುತ್ತದೆ. 'ಗ್ರಂಥ ಸಂಪಾದನೆಯ ಚರಿತ್ರೆ' ಎಂಬ ಮೊದಲನೆಯ ಅಧ್ಯಾಯದಲ್ಲಿ ಭಾರತ ಹಾಗೂ ಪಾಶ್ಚಿಮಾತ್ಯ ದೇಶಗಳಾದ ಗ್ರೀಕ್, ರೋಂ, ಹಾಲಂಡ್, ಫ್ರಾನ್ಸ್‌ಗಳ ವಿದ್ವತ್ತಿನ ಚರಿತ್ರೆಯಲ್ಲಿ ಗ್ರಂಥಸಂಪಾದನಾ ಕಾರ್ಯವು ಶಾಸ್ತ್ರವಾಗಿ ಪರಿಣಮಿಸಿರುವುದನ್ನು ಕೂಲಂಕಷವಾಗಿ ವಿವರಿಸಿರುವರು.

ಕನ್ನಡದ ಜ್ಞಾನವಾರಿಧಿಯಾದ ಹಸ್ತಪ್ರತಿಗಳು ಉಳಿದು ಬರಲು ಲೇಖನ ಸಾಮಗ್ರಿಗಳು ಪ್ರಮುಖ ಪಾತ್ರ ವಹಿಸುತ್ತವೆ. ಲೇಖನ ಸಾಮಗ್ರಿಗಳನ್ನು ಲೋಹದಿಂದ ಮಾಡಿದ ವಸ್ತುಗಳು (ಕಬ್ಬಿಣ, ಕಂಚು, ಹಿತ್ತಾಳೆ ಇತ್ಯಾದಿ) ಹಾಗೂ ಲೋಹೇತರ ವಸ್ತುಗಳು (ಮಣ್ಣು, ಮರ, ಚರ್ಮ, ಭೂರ್ಜಪತ್ರ ಇತ್ಯಾದಿ) ಎಂದು ಎರಡು ಭಾಗವಾಗಿ ವಿಭಜಿಸಿದ್ದಾರೆ. 'ಲೇಖನ ಸಾಮಗ್ರಿಗಳು' ಎಂಬ ಎರಡನೆಯ ಅಧ್ಯಾಯದಲ್ಲಿ ಇವುಗಳನ್ನು ಪ್ರಸ್ತಾಪಿಸಲಾಗಿದೆ. ಹಸ್ತಪ್ರತಿಗಳನ್ನು ಬರೆಯುವ ಬರೆಹಗಾರರನ್ನು 'ಲಿಪಿಕಾರರು' ಎಂದು ಕರೆಯುತ್ತಾರೆ. ಅವರು ಪ್ರಾಚೀನ ಜ್ಞಾನವಾರಿಧಿಯನ್ನು ತಲೆಮಾರಿನಿಂದ ತಲೆಮಾರಿಗೆ ಕೊಂಡೊಯ್ಯುವ ಭಾಷಿಕ ಸಂಕಥನಕಾರರು. ಲಿಪಿಕಾರರಿಗೆ ರಾಜರು ಹಾಗೂ ಆಶ್ರಯದಾತರಿಂದ ಪ್ರೋತ್ಸಾಹ ದೊರೆಯುತ್ತಿದ್ದು ಕೃತಿಯನ್ನು ಪ್ರತಿ ಮಾಡಿದ ನಂತರ ಅವರಿಗೆ ಧನಧಾನ್ಯದ ರೂಪದಲ್ಲಿ ಪ್ರತಿಫಲವು ದೊರೆಯುತ್ತಿತ್ತು. ಲಿಪಿಕಾರರು ತಾವು ನಕಲು ಮಾಡಿದ ಗ್ರಂಥಾಂತ್ಯದಲ್ಲಿ ತಮ್ಮ ಸ್ವವಿಷಯಗಳನ್ನು ಕ್ವಚಿತ್ತಾಗಿ ತಿಳಿಸಿರುವರು. ಅದಕ್ಕೆ ಸಂಬಂಧಿಸಿದ ನಿರ್ದಶನವೊಂದನ್ನು ಕಾಣಬಹುದು.

"ಆನಂದ ಸಂವತ್ಸರದ ಕಾರ್ತಿಕ ಬಹುಳ ಪಾಡ್ಯ ಸೋಮವಾರದಲ್ಲು
ಮಲ್ಲರಸನು ಬರೆದ ವೊಡ್ಡಾರಾಧನೆ ಸಮಾಪ್ತಂ."

ಹಸ್ತಪ್ರತಿಯಲ್ಲಿನ ಪ್ರಶಸ್ತಿಗಳಿಂದ ಲಿಪಿಕಾರರ ಸ್ಥಳ, ಪ್ರತಿಯಾದ ಕಾಲ, ಪ್ರಾದೇಶಿಕ ಪಾಠ ಸಂಪ್ರದಾಯ ಮುಂತಾದ ಅಂಶಗಳು ತಿಳಿದುಬರುತ್ತದೆ. ಲಿಪಿಕಾರರನ್ನು ವೃತ್ತಿನಿರತ ಮತ್ತು ವೃತ್ತಿನಿರತವಲ್ಲದ ಲಿಪಿಕಾರರೆಂದು ಎರಡು ಭಾಗವಾಗಿ ವಿಂಗಡಿಸಿದ್ದಾರೆ. ಲಿಪಿಕಾರರಿಗೆ ತಮ್ಮ ದೇಹ ಮನಸ್ಸುಗಳ ಎಚ್ಚರಿಕೆಯ ಇತಿಮಿತಿಗಳ ಅರಿವು ಹಾಗೂ ಅದನ್ನು ಮರೆಮಾಡದೆ ಮುಕ್ತವಾಗಿ ಒಪ್ಪಿಕೊಳ್ಳುವ ಪ್ರಾಜ್ಞತೆ, ಪ್ರಾಮಾಣಿಕತೆಗಳಿವೆ. 'ತಿದ್ದಿಕೊಂಬುದು ಸುತರ ತಪ್ಪು ತಿದ್ದುವಂತೆ', 'ತಪ್ಪಿರೆ ತಿದ್ದಿ ಲೇಸಾಗಿ ನಿಮಗೆ ಕೈ ಮುಗಿವೆ' ಎಂದು ಸದ್ವಿನಯದಿಂದ ತಿದ್ದಿಕೊಂಡು ಓದಲು ನಿವೇದಿಸಿಕೊಂಡಿದ್ದಾರೆ. ಇವೆಲ್ಲವನ್ನೂ 'ಲಿಪಿಕಾರರು ಮತ್ತು ಅವರ ಆದರ್ಶ' ಎಂಬ ಮೂರನೆಯ ಅಧ್ಯಾಯದಲ್ಲಿ ಲಿಪಿಕಾರರ ಮನೋಧರ್ಮವನ್ನು ಸೂಕ್ಷ್ಮವಾಗಿ ಪರಿಶೀಲಿಸಿದ್ದಾರೆ. 'ಹಸ್ತಪ್ರತಿಗಳ ಸ್ವರೂಪ ಮತ್ತು ವಿಂಗಡಣೆ' ಎಂಬ ನಾಲ್ಕನೆಯ ಅಧ್ಯಾಯದಲ್ಲಿ ಕವಿಯ ಸ್ವಹಸ್ತಾಕ್ಷರ ಪ್ರತಿ, ಏಕೈಕ ಹಸ್ತಪ್ರತಿ, ಮಾತೃಕೆ, ಪರಂಪರಾಗತ ಪ್ರತಿಗಳು, ಮಿಶ್ರಪ್ರತಿಗಳ ಸ್ವರೂಪವನ್ನು ತಿಳಿಸಿದ್ದಾರೆ. ಸಂಪಾದಕರು ತಮಗೆ ದೊರೆತ ಹಸ್ತಪ್ರತಿಗಳನ್ನು ಎಚ್ಚರಿಕೆಯಿಂದ ಪರೀಕ್ಷಿಸಿ ಅವು ಯಾವ ರೀತಿ ಪ್ರತಿಗಳೆಂಬ ವಿಚಾರದಲ್ಲಿ ತೀರ್ಮಾನಿಸಿ ಅವಕ್ಕೆ ಉಚಿತವಾದ ಸಂಪಾದನಾ ಕ್ರಮವನ್ನು ಅನುಸರಿಸಬೇಕೆಂಬುದನ್ನು ನಿರೂಪಿಸಲಾಗಿದ್ದು, ಅತ್ಯಂತ ಚೊಕ್ಕವಾದ ಹಾಗೂ ಆಕರ್ಷಕವಾದ ಅಧ್ಯಾಯವಾಗಿದೆ. 'ಪಾಠಾಂತರ ಸಂಕಲನ' ಎಂಬ ಐದನೆಯ ಅಧ್ಯಾಯದಲ್ಲಿ "ಸಂಪಾದನೆಗಾಗಿ ತೆಗೆದುಕೊಂಡ ಕೃತಿಯ ಹಸ್ತಪ್ರತಿಗಳು ದೊರೆಯುವಷ್ಟನ್ನೂ ಸಂಪಾದಕರು ಅಗತ್ಯವಾಗಿ ಪರಿಶೀಲಿಸಬೇಕು. 'ಅವುಗಳಲ್ಲಿ ಕಾಲದ ದೃಷ್ಟಿಯಿಂದ ಪ್ರಾಚೀನವಾದುವು. ಪ್ರಾದೇಶಿಕ ದೃಷ್ಟಿಯಿಂದ ಗಮನಾರ್ಹವಾದುವು. ಪರಿಶುದ್ಧತೆಯ ದೃಷ್ಟಿಯಿಂದ ಉತ್ತಮವಾದುವು ಇಂತಹ ಪ್ರತಿಗಳನ್ನು ಆರಿಸಿಕೊಳ್ಳಬೇಕು"

ಎಂದು ಡಿ.ಎಲ್.ಎನ್. ಅವರು ತಿಳಿಸಿದ್ದಾರೆ. ಇತರ ಪ್ರತಿಗಳ ಪಾಠವನ್ನು ಹೋಲಿಸಿ ನೋಡಿ ಪಾಠಾಂತರಗಳನ್ನು ಬರೆದುಕೊಳ್ಳಬೇಕು. ಹೀಗೆ ಎಲ್ಲ ಪ್ರತಿಗಳ ಪಾಠಾಂತರಗಳನ್ನು ಒಂದು ಪ್ರತಿಯಲ್ಲಿ ಒಟ್ಟಿಗೆ ಸೇರಿಸುವುದಕ್ಕೆ ಪಾಠಾಂತರ ಸಂಕಲನ ಎನ್ನುವರು. ಪಾಠಾಂತರಗಳ ಸಂಕಲನ ಕಾರ್ಯವಾದ ನಂತರ ಪಾಠಾಂತರದ ಪರಿಶೀಲನೆಯಿಂದ 'ಅಕ್ಷರ ಸ್ಖಾಲಿತ್ಯಗಳು', 'ಇತರ ಸ್ಖಾಲಿತ್ಯಗಳು' ಎಂಬುದನ್ನು ಕುರಿತು ಆರು ಮತ್ತು ಏಳನೆಯ ಅಧ್ಯಾಯಗಳಲ್ಲಿ ವಿವೇಚಿಸಿರುವರು. ಲಿಪಿಕಾರರ ಕೈ ತಪ್ಪು, ಕಣ್ತಪ್ಪು, ಕಿವಿ ತಪ್ಪುಗಳಿಂದ ಅನೇಕ ಸ್ಖಾಲಿತ್ಯಗಳು ಉಂಟಾಗುತ್ತವೆ. ಎಂಟನೆಯ ಅಧ್ಯಾಯವಾದ 'ಹಸ್ತಪ್ರತಿಗಳ ಪರಸ್ಪರ ಸಂಬಂಧ ಮತ್ತು ಪೀಳಿಗೆ' ಎಂಬುದರಲ್ಲಿ ವಿಶೇಷವಾಗಿ ಚಂಪೂ ಕೃತಿಗಳನ್ನು ಸಂಪಾದಿಸುವಾಗ ಸಂಪಾದಕರು ಹಸ್ತಪ್ರತಿಗಳ ಪರಸ್ಪರ ಸಂಬಂಧವನ್ನು ಚೆನ್ನಾಗಿ ತಿಳಿದಿರಬೇಕು. ಸಂಪಾದನೆಗೆ ಉಪಯೋಗಿಸಿಕೊಳ್ಳುವ ಪ್ರತಿಗಳು ಸಂಖ್ಯೆಯಲ್ಲಿ ಅಧಿಕವಾದಂತೆ ಅವುಗಳ ಪರಸ್ಪರ ಸಂಬಂಧ ಸೂಚಕ ಪೀಳಿಗೆ ಜಟಿಲವು ಅಧಿಕತರವಾಗುತ್ತದೆ. ದೇಶೀ ಸಾಹಿತ್ಯ ಸಂಪಾದನೆಗೆ ಪೀಳಿಗೆಯ ಕ್ರಮಾದಿಗಳು ಅತಿ ಶಿಥಿಲವಾಗಬೇಕೆಂದು ಡಿಎಲ್ಎನ್ ಅವರು ಸೂಚಿಸಿರುವರು. "ಹಳಗನ್ನಡ ಗ್ರಂಥಗಳ ಸಂಪಾದನೆ ಒಂದು ವ್ಯವಸ್ಥೆಗೆ ಒಳಪಡುವುದಾದರೂ ಅದೇ ವ್ಯವಸ್ಥೆಯನ್ನು ನಡುಗನ್ನಡದ ಮತ್ತು ಈಚಿನ ಕಾಲದ ಕನ್ನಡ ಗ್ರಂಥ ಸಂಪಾದನೆಗೆ ಅನ್ವಯಿಸುವುದರಲ್ಲಿ ಕೆಲವು ಕ್ಲೇಶಗಳಿವೆ. ನಡುಗನ್ನಡ ಗ್ರಂಥಗಳಲ್ಲಿ ಹಲವು ವೇಳೆ ಹಳಗನ್ನಡದ ಪ್ರಯೋಗಗಳು ಮಿಶ್ರಣವಾಗಿರುತ್ತವೆ. ಇದು ಒಂದೊಂದು ಪ್ರತಿಯಲ್ಲಿ ಒಂದೊಂದು ತೆರನಾಗಿರುತ್ತದೆ. ಇದು ಸಂಪಾದನಾ ಕಾರ್ಯಕ್ಕೆ ಅಳವಡುವುದು ಅಸಾಧ್ಯವೆಂದು ತೋರಬಹುದು. ಇದಕ್ಕೆ ಬೇರೆ ಕ್ರಮವನ್ನು ಏರ್ಪಡಿಸಬೇಕಾಗುತ್ತದೆ" ದೇಸಿ ಸಾಹಿತ್ಯ ಸಂಪಾದನೆಗೆ ಅನ್ಯ ಮಾನದಂಡಗಳಿವೆಯೆಂಬ ಅಂಶವು ಡಿ.ಎಲ್.ಎನ್. ಮನಗಂಡಿದ್ದರೆಂಬುದು ಗಮನಾರ್ಹವಾದುದು.

'ಪಾಠಪರಿಷ್ಕರಣ' ಎಂಬ ಒಂಬತ್ತನೆಯ ಅಧ್ಯಾಯವು ಅತ್ಯಂತ ದೊಡ್ಡ ಅಧ್ಯಾಯವಾಗಿದೆ. ಗ್ರಂಥ ಸಂಪಾದನಾ ಕಾರ್ಯವು ಹಸ್ತಪ್ರತಿ ಸಂಗ್ರಹ, ವರ್ಗೀಕರಣ, ಪಾಠಸಂಕಲನ, ಪಾಠ ಪರಿಷ್ಕರಣದ ಹಂತಗಳಲ್ಲಿ ನಡೆಯಲಿದ್ದು, ಪ್ರತಿಯೊಂದು ಹಂತದಲ್ಲಿಯೂ ಅನುಸರಿಸಬೇಕಾದ ಪ್ರತ್ಯೇಕ ನಿಯಮಗಳನ್ನು ತಿಳಿಸಲಾಗಿದೆ. ಅವುಗಳಲ್ಲಿ ಪಾಠ ಪರಿಷ್ಕರಣವು ಗ್ರಂಥಸಂಪಾದನೆಯ ಅಂತಿಮ ಘಟ್ಟವಾಗಿದೆ. ಅತ್ಯಂತ ಮಹತ್ವದ ಬೌದ್ಧಿಕ ಚಟುವಟಿಕೆಯಿಂದ ಈ ಭಾಗವನ್ನು ಬಹು ದಕ್ಷತೆಯಿಂದ ಸಂಪಾದಕರು ಸಾಧಿಸಬೇಕು. ಪಾಠಾಂತರಗಳನ್ನು ಅತ್ಯಂತ ಎಚ್ಚರಿಕೆಯಿಂದ ಪರಿಶೀಲಿಸಿ 'ಅಂತಸ್ಸಂಭಾವ್ಯತೆ' ಹಾಗೂ 'ಲಿಪಿಕಾರನ ಲೇಖನ ಸಂಭಾವ್ಯತೆ'ಯ ಸ್ವರೂಪವನ್ನು ಅನುಲಕ್ಷಿಸಿ ಒಪ್ಪಿತ ಪಾಠವನ್ನು ಅನ್ವೇಷಿಸಬೇಕಾಗುತ್ತದೆ. ಪಾಠ ಪರಿಷ್ಕರಣದ ಸಾಮಾನ್ಯ ತತ್ವಗಳನ್ನು ಹೀಗೆ ತಿಳಿಸಿದ್ದಾರೆ.

೧. ಸುಲಭ ಪಾಠಕ್ಕಿಂತ ಕಠಿಣ ಪಾಠವು ಗ್ರಾಹ್ಯವಾದುದು.

೨. ಒಂದು ಸಂಪ್ರದಾಯಕ್ಕೆ ಸೇರಿದ ಒಂದು ಪ್ರತಿಯ ಪಾಠವು ಮತ್ತೊಂದು ಸಂಪ್ರದಾಯಕ್ಕೆ ಸೇರಿದ ಪಾಠಕ್ಕೆ ಸಮಾನವಾಗಿದ್ದರೆ ಅದೇ ಮೂಲಪಾಠವಾಗುತ್ತದೆ.

೩. ಉಪಪ್ರಧಾನ ಮಾತೃಕೆಗಳ ಪಾಠಗಳು ಭಿನ್ನವಾಗಿದ್ದರೆ ಆಗ ಮೇಲಿನ ಎರಡು ಸಂಭಾವ್ಯತೆಗಳ ಒರೆಗಲ್ಲಿಗೆ ಉಜ್ಜಿ ಪರೀಕ್ಷಿಸಿ ಸ್ವೀಕರಿಸಬೇಕು.

೪. ಭಿನ್ನ ಸಂಪ್ರದಾಯಗಳಲ್ಲಿ ಪ್ರಾಚೀನತರ ಪಾಠಕ್ಕೆ ಹೆಚ್ಚು ಪುರಸ್ಕಾರ.

ಡಿ.ಎಲ್.ಎನ್. ಅವರು ಈ ತತ್ವಗಳನ್ನು ಹಲವಾರು ಹಳಗನ್ನಡ ಪದ್ಯಗಳಿಗೆ ಅನ್ವಯಿಸಿ ಪಾಠದೋಷಗಳನ್ನು ಪರಿಹರಿಸಿದ್ದಾರೆ. ಗ್ರಂಥ ಸಂಪಾದನೆಯಲ್ಲಿ ಪಾಠ ಪರಿಷ್ಕರಣವು ಎಷ್ಟು ಮಹತ್ವದೆಂಬುದು ಇದರಿಂದ ವಿದಿತವಾಗುವುದು.

'ಗ್ರಂಥ ಸಂಪಾದಕನಿಗೆ ಕೆಲವು ಸೂಚನೆಗಳು' ಎಂಬ ಹತ್ತನೆಯ ಅಧ್ಯಾಯದಲ್ಲಿ ಮುಂದಿನ ತಲೆಮಾರಿನ ಸಂಪಾದಕರಿಗೆ ಅಮೂಲ್ಯವಾದ ಸೂಚನೆಗಳನ್ನು ನೀಡಿದ್ದಾರೆ. ಗ್ರಂಥ ಸಂಪಾದನೆಯ ಮಹತ್ವವನ್ನು ತಿಳಿಸುತ್ತಾ 'ಕವಿಯ ಹಸ್ತಪ್ರತಿಯ ಪಾಠವೇನಿದ್ದಿತೆಂಬುದನ್ನು ಕಂಡು ಹಿಡಿಯುವ ಅವನ ಸರ್ವ ಪ್ರಯತ್ನಗಳೂ ಶ್ಲಾಘ್ಯವಾದುವು. ಅವು ಸತತವಾಗಿ ನಡೆಯುತ್ತಲೇ ಇರುತ್ತವೆ ಅವನ ಮನಸ್ಸಿನಲ್ಲಿ ಕವಿ ಕಾವ್ಯವನ್ನು ಲೋಕಕ್ಕೆ ದಾನ ಮಾಡುತ್ತಾನೆ. ಅದನ್ನು ಸಂರಕ್ಷಿಸಿಕೊಂಡು ಬರುವುದು ಸಂಪಾದಕ ವಿದ್ವಾಂಸರ ಹೊಣೆಗಾರಿಕೆ' ಎಂದಿದ್ದಾರೆ. 'ಮುದ್ರಿತ ಗ್ರಂಥಗಳ ಸಂಪಾದನೆ' ಎಂಬ ಹನ್ನೊಂದನೆಯ ಅಧ್ಯಾಯದಲ್ಲಿ ಮುದ್ರಿತ ಗ್ರಂಥಗಳ ಸಂಪಾದನೆಯ ಸ್ವರೂಪವಿದ್ದರೆ, ಹನ್ನೆರಡನೆಯ ಅಧ್ಯಾಯವಾದ 'ಇತರ ವಿಷಯಗಳು' ಎಂಬಲ್ಲಿ ವಿಮರ್ಶಕರಿಗೆ, ಭಾಷಾಶಾಸ್ತ್ರಜ್ಞರಿಗೆ, ವ್ಯಾಕರಣಕಾರರಿಗೆ, ನಿಘಂಟುಕಾರರಿಗೆ ಗ್ರಂಥಸಂಪಾದನೆ ಯಿಂದಾಗುವ ಮಹತ್ವವನ್ನು ತಿಳಿಸಿದ್ದಾರೆ. ಪಾರಿಭಾಷಿಕ ಪದಗಳ ಅಕಾರಾದಿ, ಉದಾಹರಣೆಗಳ ಅಕಾರಾದಿ, ಸಹಾಯಕ ಗ್ರಂಥ ಸೂಚಿ, ಓದಬಹುದಾದ ಕೃತಿಗಳು, ಕನ್ನಡ ಹಸ್ತಪ್ರತಿ ಭಂಡಾರಗಳು ಎಂಬ ಅನುಬಂಧಗಳು ಗ್ರಂಥದ ಮಹತ್ವವನ್ನು ಹೆಚ್ಚಿಸಿವೆ.

ಕ್ನನಡ ಗ್ರಂಥಸಂಪಾದನ ಕ್ಷೇತ್ರದಲ್ಲಿ ಹೊಸ ದಿಗಂತವೊಂದನ್ನು ಆವಿಷ್ಕರಿಸಿದ ಮೌಲಿಕ ಕೃತಿಯಾಗಿ ಇದು ಅದ್ವಿತೀಯವಾಗಿದೆ. 'ಕನ್ನಡ ಗ್ರಂಥ ಸಂಪಾದನೆ'ಯಂತಹ ಕೃತಿಯು 'ನಿಚ್ಚಂ ಪೊಸತು'. ಇಂತಹ ಮಹತ್ವಪೂರ್ಣವಾದ ಕೃತಿಯು ಯಾವ ಭಾರತೀಯ ಭಾಷೆಯಲ್ಲೂ ಕಂಡುಬರುವುದಿಲ್ಲ. ಬಹುಶಃ ಇದನ್ನು ಇಂಗ್ಲಿಷ್‌ಗೆ ಅನುವಾದಿಸಿದರೆ ಆ ಕ್ಷೇತ್ರಕ್ಕೆ ಅದೊಂದು ಮೌಲಿಕ ಕೊಡುಗೆಯೂ ಆಗಬಲ್ಲುದು ಎಂದು ಡಾ. ಎಂ. ಚಿದಾನಂದಮೂರ್ತಿಯವರು ಅಭಿಪ್ರಾಯಪಡುತ್ತಾರೆ. ಈ ಕೃತಿಯು ಪ್ರಕಟವಾದ ನಂತರ ಪ್ರಾಚೀನ ಗ್ರಂಥಗಳನ್ನು ಸಂಪಾದಿಸುವವರಲ್ಲಿ ಅಧಿಕವಾದ ಶಾಸ್ತ್ರೀಯ ದೃಷ್ಟಿ ಮೂಡಿತು ಎಂಬುದು ಗಮನಾರ್ಹವಾದುದು. "ಗ್ರಂಥ ಸಂಪಾದನಾ ಕಾರ್ಯವು ಈಗ ಒಂದು ಖಚಿತವಾದ ಶಾಸ್ತ್ರವಾಗಿ ಪರಿಣಮಿಸಿದೆ. ಅದರ ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿದಲ್ಲಿ ಮೂಲಪಾಠವನ್ನು ಬಲುಮಟ್ಟಿಗೆ ಶುದ್ಧವಾಗಿ ನಿರ್ಣಯಿಸುವುದು

ಸಾಧ್ಯ. ನಂಬಿಯಣ್ಣನ ರಗಳೆಯಂತೂ ಈ ಶಾಸ್ತ್ರ ಪದ್ಧತಿಯ ಅನೇಕ ಸೂಕ್ಷ್ಮಾಂಶಗಳಿಗೆ ಒಳ್ಳೆಯ ನಿದರ್ಶನಗಳನ್ನು ಒದಗಿಸಿಕೊಡುತ್ತದೆ" ಎಂದು ತೀನಂಶ್ರೀಯವರು ನಂಬಿಯಣ್ಣನ ರಗಳೆಯ ಪೀಠಿಕೆಯಲ್ಲಿ ತಿಳಿಸಿದ್ದಾರೆ. ಎ.ಆರ್. ಕೃಷ್ಣಶಾಸ್ತ್ರಿಗಳು, ಎನ್. ಅನಂತರಂಗಾಚಾರ್, ಎಂ.ಆರ್.ಶ್ರೀ. ಮುಂತಾದವರು ಕೆಳದಿ ನೃಪ ವಿಜಯ, ಧರ್ಮಾಮೃತ, ಕವಿ ಜಿಹ್ವಾಬಂಧನ, ಸೂಕ್ತಿ ಸುಧಾರ್ಣವ, ಪ್ರಭುಲಿಂಗಲೀಲೆ ಮುಂತಾದ ಕೃತಿಗಳನ್ನು ಪರಿಷ್ಕರಿಸಿದರು. ಮೈಸೂರು ಸೀಮೆಯಲ್ಲಿ ಡಿ.ಎಲ್.ಎನ್.ರವರ ಶಿಷ್ಯವೃಂದವು ಅತ್ಯಂತ ಉಮೇದಿನಿಂದ ಕಾರ್ಯನಿರ್ವಹಿಸಿದರು. ಇಂದಿಗೂ ಈ ಭಾಗದಲ್ಲಿ ಡಿ.ಎಲ್.ಎಲ್. ಅವರ ಸಿದ್ಧಾಂತಗಳೇ ಚಾಲ್ತಿಯಲ್ಲಿದೆ.

೪. ಡಿ.ಎಲ್.ಎನ್. ಅವರ ಅನಂತರದ ಗ್ರಂಥ ಸಂಪಾದನೆ

ಡಿ.ಎಲ್.ಎನ್. ಅನಂತರ ವಚನ ಸಾಹಿತ್ಯ ಸಂಪಾದನೆಯು ಅತ್ಯಂತ ಹುಲುಸಾಗಿ ನಡೆಯಿತು. ಅವರು ತಮ್ಮ ಕೃತಿಯಲ್ಲಿ ವಚನ ಸಾಹಿತ್ಯ ಪರಿಷ್ಕರಣದ ಬಗೆಗೆ ಹೆಚ್ಚಾಗಿ ಚರ್ಚಿಸಲಿಲ್ಲ ಹಾಗೂ ವಚನ ಕೃತಿಗಳನ್ನು ಸಂಪಾದಿಸಲಿಲ್ಲ. ಇದಕ್ಕೆ ಮೂಲ ಕಾರಣವೆಂದರೆ ಕರ್ನಾಟಕವು ಸಾಂಸ್ಕೃತಿಕವಾಗಿ ಉತ್ತರ ಹಾಗೂ ದಕ್ಷಿಣವೆಂದು ವಿಭಜನೆಯಾದುದು. ಮತ್ತೊಂದು ಪ್ರಮುಖ ಕಾರಣವೆಂದರೆ ನಮ್ಮ ಹಿರಿಯ ಕನ್ನಡ ವಿದ್ವಾಂಸರು ವಚನಗಳನ್ನು ಸಾಹಿತ್ಯ ಪ್ರಕಾರವಾಗಿ ನಿಧಾನವಾಗಿ ಗುರುತಿಸಿದುದಾಗಿದೆ. ಸ್ವತಂತ್ರ ಘಟಕಗಳಾದ ವಚನಗಳನ್ನು ರಸಸಿದ್ಧಾಂತದ ನೆಲೆಯಲ್ಲಿ ಪರಿಭಾವಿಸಲು ಹೊರಟ ಗೊಂದಲಗಳಿದ್ದುದಲ್ಲದೆ ಅಂದಿನ ಮೈಸೂರು ಭಾಗದಲ್ಲಿ ವಚನ ಸಾಹಿತ್ಯದ ಸಂಶೋಧನೆಯ ಹಿನ್ನಡೆಯಾಗಿತ್ತು. ಅನಂತರ ಡಾ. ಎಲ್. ಬಸವರಾಜು ಅವರ ವಚನ ಚಂದ್ರಿಕೆ, ಬಸವಣ್ಣನವರ ವಚನಗಳು, ಅಕ್ಕಮಹಾದೇವಿಯ ವಚನಗಳು ಇತ್ಯಾದಿ ಕೃತಿಗಳು ಅನೇಕ ಹಸ್ತಪ್ರತಿಗಳ ಆಧಾರದಿಂದ ಪರಿಷ್ಕರಣೆಗೊಂಡು ಪ್ರಕಟವಾದವು. ಈ ಕೃತಿಗಳಿಗೆ ನೀಡಿರುವ ಟಿಪ್ಪಣಿಗಳು, ಸೂಚಿಗಳು ಅತ್ಯಂತ ಮೌಲ್ಯಯುತವಾಗಿದೆ. ದೇವರ ದಾಸಿಮಯ್ಯನ ವಚನಗಳಲ್ಲಿ ಜೇಡರ ದಾಸಿಮಯ್ಯ, ಮುದನೂರು ದಾಸಿಮಯ್ಯ, ದೇವರ ದಾಸಿಮಯ್ಯ ಇವರುಗಳು ಅಭಿನ್ನರೆಂಬ ಅಭಿಪ್ರಾಯ ವ್ಯಕ್ತವಾಗಿದೆ.

ಉತ್ತರ ಕರ್ನಾಟಕದ ಭಾಗದಲ್ಲಿ ಹಳಕಟ್ಟಿಯವರ ಅನಂತರ ಕರ್ನಾಟಕ ವಿಶ್ವವಿದ್ಯಾನಿಲಯವು ಭಾರೀ ಪ್ರಮಾಣದಲ್ಲಿ ವಚನ ಕೃತಿಗಳ ಸಂಪಾದನೆಯನ್ನು ಕೈಗೊಂಡ ಕೀರ್ತಿಯನ್ನು ಹೊಂದುತ್ತದೆ. ಚೆನ್ನಬಸವಣ್ಣನವರ ವಚನಗಳು, ಶಿವಶರಣೆಯರ ವಚನಗಳು, ಸಕಲ ಪುರಾತನರ ವಚನಗಳು, ಸಕಲ ಪುರಾತನರ ಬೆಡಗಿನ ವಚನಗಳು ಮುಂತಾದ ಕೃತಿಗಳನ್ನು ಅಪಾರ ಪರಿಶ್ರಮದಿಂದ ಸಂಪಾದಿಸಲಾಯಿತು. ಇಲ್ಲಿನ ಗ್ರಂಥ ಸಂಪಾದನೆಯ ವಿಧಾನವು ವಿಭಿನ್ನವಾಗಿದ್ದು, ಆಕರಗಳ ಸುದೀರ್ಘ ವಿವರಗಳು ದೊರೆಯುತ್ತವೆ. ಲಿಂಗಚಿದಮೃತಬೋಧೆ, ವಿಶೇಷಾನುಭವ ಷಟ್ಸ್ಥಲ ಮುಂತಾದ ಸಂಕಲನ ಕೃತಿಗಳು ಪ್ರಕಟವಾದುವು. ಅನೇಕ ವೀರಶೈವ ಕಾವ್ಯಗಳು ಮರು ಪರಿಷ್ಕರಣೆಗೆ ಒಳಗಾದವು. ಆ ಕೃತಿಗಳೆಂದರೆ ರಾಜಶೇಖರ ವಿಳಾಸ, ಬಸವರಾಜ ವಿಜಯಂ, ಪದ್ಮರಾಜ ಪುರಾಣ,

ಸೋಮನಾಥ ಚಾರಿತ್ರ ಕೃತಿಗಳಲ್ಲಿ ಪಾಠಾಂತರ ಸಂಕಲನ, ಸುದೀರ್ಘ ಪೀಠಿಕೆಯಿರುವುದು ಈ ಆವೃತ್ತಿಗಳಲ್ಲಿನ ವಿಶೇಷವಾಗಿದೆ.

ಶೂನ್ಯಸಂಪಾದನೆಗಳೆಲ್ಲವೂ ಪರಿಷ್ಕೃತಗೊಂಡು ಪ್ರಕಟವಾಗಿರುವುದರೊಂದಿಗೆ ವೀರಶೈವ ಸಂಶೋಧನೆಗೆ ಅಮೂಲ್ಯವಾದ ಆಕರಗಳಾದವು. ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ, ಬಸವೇಶ್ವರ ಪುರಾಣದ ಕಥಾಸಾಗರ ಪರಿಷ್ಕರಣೆಗಳು ವೀರಶೈವ ಗದ್ಯಕ್ಕೂ, ಚಾವುಂಡರಾಯ ಪುರಾಣ ರಾಜಾವಳಿ ಕಥಾಸಾಗರವು ಜೈನಗದ್ಯಕ್ಕೂ, ಕರ್ನಾಟಕ ಕೈಫಿಯತ್ತುಗಳು ಚಾರಿತ್ರಿಕ ಗದ್ಯಗ್ರಂಥಕ್ಕೂ ನಿದರ್ಶನವಾಗಿ ವಿದ್ವಾಂಸರ ಅವಿರತ ಪ್ರಯತ್ನದಿಂದ ಪ್ರಕಟವಾದವು.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದನಾ ವಿಭಾಗದಿಂದ ಡಿ.ಎಲ್.ಎನ್. ಅವರ ಪರಂಪರೆಯಲ್ಲಿ ಸುಮಾರು ೧೩೫ ವೈವಿಧ್ಯಪೂರ್ಣವಾದ ಕೃತಿಗಳು ಶಾಸ್ತ್ರೀಯವಾಗಿ ಸಂಪಾದಿತವಾಗಿ ಪ್ರಕಟವಾದುವು ಹಾಗೂ ಕಾವ್ಯಕೃತಿಗಳ ಸಂಪಾದನೆಗೆ ಉತ್ತಮವಾದ ಕೊಡುಗೆಗಳಾಗಿ ಪರಿಣಮಿಸಿದುವು. ದಾಸಸಾಹಿತ್ಯವು ಶಾಸ್ತ್ರೀಯವಾಗಿ ಸಂಪಾದಿತವಾದುದಲ್ಲದೆ, ಅನೇಕ ಆಕರಗಳನ್ನು ಆಧರಿಸಿ ಶ್ರೀಪಾದರಾಜರು, ಜಗನ್ನಾಥದಾಸರು, ವಾದಿರಾಜರು, ಗೋಪಾಲದಾಸರು, ವ್ಯಾಸರಾಯರು, ಹರಪನಹಳ್ಳಿ ಭೀಮವ್ವ, ಹೆಳವನಕಟ್ಟೆ ಗಿರಿಯಮ್ಮನಂತಹವರ ಕೀರ್ತನೆಗಳು ಸ್ವತಂತ್ರ ಸಂಪುಟಗಳಲ್ಲಿ ಶಾಸ್ತ್ರೀಯವಾಗಿ ಪರಿಷ್ಕೃತಗೊಂಡು ಪ್ರಕಟವಾದುದರಿಂದ ಕೀರ್ತನೆಗಳ ಕರ್ತೃತ್ವವು ನಿರ್ದಿಷ್ಟವಾವಾಯಿತು.

ಉತ್ತರ ಕರ್ನಾಟಕ, ವಿಶೇಷವಾಗಿ ಧಾರವಾಡ ವಚನ ಸಂಪಾದನೆಗೆ ಪ್ರಖ್ಯಾತವಾಯಿತು. ವಚನಗಳ ಸಂಪಾದನೆಯು ಹಲವಾರು ಹಸ್ತಪ್ರತಿಗಳನ್ನು ಆಧರಿಸಿ ನಡೆಸುವ ಸಂಪಾದನೆಯ ಕಾರ್ಯದ ತೊಂದರೆಗಳನ್ನು ಗ್ರಹಿಸಿ ಭಿನ್ನ ವಿಧಾನವನ್ನು ಕ್ರಮೇಣ ರೂಪಿಸಿಕೊಂಡು ಶುದ್ಧ, ಪ್ರಾಚೀನ ಮತ್ತು ಒಂದೇ ಪೀಳಿಗೆಗೆ ಸೇರಿದ ಕೆಲವು ಪ್ರತಿಗಳನ್ನು ಬಳಸುವುದು ಸೂಕ್ತವೆಂಬ ಮಹತ್ವದ ಅಂಶವನ್ನು ಕಂಡುಕೊಳ್ಳಲಾಯಿತು. ಕನ್ನಡ ಸಂಸ್ಕೃತಿ ನಿರ್ದೇಶನಾಲಯವು ೧೯೯೩ರಲ್ಲಿ 'ಸಮಗ್ರ ವಚನ ಸಾಹಿತ್ಯ' ೧೫ ಸಂಪುಟಗಳಲ್ಲಿ ಪ್ರಕಟಿಸಿದ್ದು, ಶರಣರ ವಚನಗಳನ್ನು ಆಕರಗಳಿಂದ ಸಂಗ್ರಹಿಸಿ, ಪ್ರಕ್ಷಿಪ್ತಗಳನ್ನು ನಿವಾರಿಸಿ, ನಿಜವಚನಗಳ ಪಾಠವನ್ನು ಪರಿಷ್ಕರಿಸಿದ್ದು ಈ ಸಂಪುಟಗಳ ವೈಶಿಷ್ಟ್ಯವಾಗಿದೆ.

ಗದುಗಿನ ಶ್ರೀ ತೋಂಟದಾರ್ಯ ಮಠದ ವೀರಶೈವ ಲಿಂಗಾಯತ ಅಧ್ಯಯನ ಸಂಸ್ಥೆಯು ಕೆಸ್ತೂರ ದೇವರು, ಕಡೆಕೋಳ ಮಡಿವಾಳೇಶ್ವರ. ಕವಿಲಿಂಗ, ಕೂಡಲೂರು ಬಸವಲಿಂಗ ಶರಣ, ಮುದ್ವೀರ ಸ್ವಾಮಿಗಳು ಮೊದಲಾದವರ ಸ್ವರವಚನಗಳನ್ನು ಮೊದಲ ಬಾರಿಗೆ ಸಾಹಿತ್ಯಲೋಕಕ್ಕೆ ಪರಿಚಯಿಸಿತು. ಈ ಸಂಪುಟಗಳು ಬಹುಪಾಲು ಏಕೈಕ ಪ್ರತಿಯನ್ನು ಆಧರಿಸಿದ್ದರೂ ಮಹತ್ವಪೂರ್ಣವಾದ ಪೀಠಿಕೆಗಳು ಹಾಗೂ ಸಮರ್ಪಕ ಪಾಠಗಳಿಂದ ಉಪಯುಕ್ತವಾಗಿವೆ.

ಬೆಂಗಳೂರು ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರದ ಸ್ಥಾಪನೆ, ಸಂಗ್ರಹ, ಹಸ್ತಪ್ರತಿ ವರ್ಣನಾತ್ಮಕ ಸೂಚಿಗಳು ಪ್ರಕಟಗೊಂಡವು. ಕನ್ನಡ ಸಂಸ್ಕೃತಿ ನಿರ್ದೇಶನಾಲಯವು 'ಸಮಗ್ರ ಹರಿದಾಸ ಸಾಹಿತ್ಯ'ವನ್ನು ೪೦ ಸಂಪುಟಗಳಲ್ಲಿ ಪ್ರಕಟಿಸಿತು. ಈ ಸಂಪುಟಗಳಲ್ಲಿನ ಕವಿಕೃತಿಗಳ ಬಗೆಗಿನ ಪೀಠಿಕೆಗಳು ಮಹತ್ವಪೂರ್ಣವಾಗಿವೆ. ಹಂಪಿ ಕನ್ನಡ ವಿಶ್ವವಿದ್ಯಾನಿಲಯವು ಸಹ ಈ ಕ್ಷೇತ್ರದಲ್ಲಿ ಅತ್ಯಂತ ಕ್ರಿಯಾಶೀಲವಾಗಿದೆ.

ಪ್ರಸ್ತುತ ಕನ್ನಡ ಗ್ರಂಥ ಸಂಪಾದನೆ ಡಿ.ಎಲ್.ಎನ್. ಅವರಿದ್ದ ಸ್ಥಿತಿಯಲ್ಲಿಲ್ಲ. ಇಂದಿನ ಗ್ರಂಥ ಸಂಪಾದಕರು 'ಮೂಲಪಾಠ', 'ಕವಿಪಾಠ', 'ಶುದ್ಧಪಾಠ'ದ ಪರಿಕಲ್ಪನೆಯನ್ನು ಪ್ರಶ್ನಿಸುತ್ತಿರುವರು. 'ಶುದ್ಧಪಾಟ' ಪರಿಕಲ್ಪನೆಯು 'ಒಪ್ಪಿತ ಪಾಠ' ಎಂಬ ಹೊಸ ಪರಿಕಲ್ಪನೆಗೆ ಮುಖಾಮುಖಿಯಾಗಿದೆ. ಡಿ.ಎಲ್.ಎನ್. ಅವರು ಕನ್ನಡ ಗ್ರಂಥ ಸಂಪಾದನೆಯನ್ನು ವಿವರಿಸಲು ಕನ್ನಡದಲ್ಲಿ ಪಾರಿಭಾಷಿಕ ಶಬ್ದಗಳನ್ನು ಸೃಷ್ಟಿಸಿದರು. ಇವರ 'ಕನ್ನಡ ಗ್ರಂಥ ಸಂಪಾದನೆ' ಕೃತಿ ಪ್ರಕಟವಾದ ನಂತರದ ಗ್ರಂಥ ಸಂಪಾದನ ಕಾರ್ಯಗಳಲ್ಲಿ ಏಕಸೂತ್ರತೆ, ಶಾಸ್ತ್ರೀಯ ದೃಷ್ಟಿಯಂತಹ ಮೌಲಿಕ ಅಂಶಗಳು ಸೇರ್ಪಡೆಯಾದವು. ಅವರ ನಂತರ ೯೦ಕ್ಕೂ ಹೆಚ್ಚು ಹಸ್ತಪ್ರತಿ ಸೂಚಿಗಳು ಪ್ರಕಟವಾಗಿವೆ. ಹಸ್ತಪ್ರತಿ ಶಾಸ್ತ್ರವು ಪ್ರತ್ಯೇಕವಾಗಿ ಬೆಳೆಯುತ್ತಿದ್ದು, ಅವುಗಳನ್ನು ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಆಕರಗಳಾಗಿ ಅಭ್ಯಸಿಸಬೇಕಾದ ಮಹತ್ವವನ್ನು ಅರಿಯಲಾಗಿದೆ. ಒಂದೇ ರೀತಿಯ ಸಿದ್ಧಾಂತವು ಎಲ್ಲ ರೀತಿಯ ಕೃತಿಗಳಿಗೆ ಅನ್ವಯವಾಗುವುದಿಲ್ಲ ಎಂಬ ಅರಿವುಂಟಾಗಿದ್ದು ಮಾರ್ಗಸಾಹಿತ್ಯ ಸಂಪಾದನೆ, ದೇಸೀ ಸಾಹಿತ್ಯ ಸಂಪಾದನೆ, ವಚನ ಸಾಹಿತ್ಯ ಸಂಪಾದನೆ ಎಂಬ ವಿಭಜನೆಗಳು ಉಂಟಾಗಿ, 'ಸ್ಥಿರಪಠ್ಯ', 'ಚರಪಠ್ಯ' ಎಂಬ ಪಾರಿಭಾಷಿಕ ಪದಗಳ ಸೇರ್ಪಡೆಯಾಗಿದೆ. ಇಂದಿನ ಸಂಪಾದಿತ ಕೃತಿಗಳಲ್ಲಿ ಕೃತಿನಿಷ್ಠ ಪೀಠಿಕೆಗಳ ಸ್ಥಾನದಲ್ಲಿ ಸಂಸ್ಕೃತಿನಿಷ್ಠ ಅಂಶಗಳು ಸ್ಥಾನ ಹೊಂದುತ್ತಿದ್ದು ಕವಿನಿಷ್ಠವಾಗಿರುತ್ತಿದ್ದ ಗ್ರಂಥಸಂಪಾದನೆ ಲಿಪಿಕಾರನಿಷ್ಠ ನೆಲೆಗೆ ಪಲ್ಲಟವಾಗುವ ಸೂಚನೆಗಳು ದೊರೆಯುತ್ತಿವೆ.

ಮಹಿಳಾ ಗ್ರಂಥ ಸಂಪಾದನೆ

ಮಹಿಳೆಯ ಗ್ರಂಥ ಸಂಪಾದನೆಯನ್ನು ಅವಲೋಕಿಸಿದಾಗ ಗ್ರಂಥ ಸಂಪಾದನಾ ಕ್ಷೇತ್ರಕ್ಕೆ ಪದಾರ್ಪಣ ಮಾಡಿದ ಪ್ರಥಮ ಮಹಿಳೆ ಡಿ. ಚಂಪಾಬಾಯಿ ೧೯೪೦ರಷ್ಟು ಹಿಂದೆಯೇ ಇವರು 'ಹದಿಬದೆಯ ಧರ್ಮ'ದ ಪರಿಷ್ಕೃತ ಆವೃತ್ತಿಯನ್ನು ಸಿದ್ಧಪಡಿಸಿ, ಮುನ್ನುಡಿ, ಶಬ್ದಕೋಶ ರಚಿಸಿ ಉತ್ತಮವಾದ ತಳಹದಿಯನ್ನು ಹಾಕಿದರು. ೧೯೭೩ರಲ್ಲಿ ಎಂ.ಎನ್. ಲೀಲಾವತಿಯವರು ಹರಿಹರನ ಐದು ರಗಳೆಗಳನ್ನು ಸಂಪಾದಿಸಿದ್ದಾರೆ. ಅನಂತರದಲ್ಲಿ ಡಾ. ಕಮಲಾ ಹಂಪನಾ, ಡಾ. ಟಿ.ಎನ್. ನಾಗರತ್ನ, ವೈ.ಸಿ. ಭಾನುಮತಿ, ಟಿ.ಕೆ. ಇಂದೂಬಾಯಿ ಮುಂತಾದವರು ವಿವಿಧ ಕ್ಷೇತ್ರಗಳಲ್ಲಿ ತಮ್ಮದೇ ಆದ ಕಾರ್ಯವನ್ನು ನಿರ್ವಹಿಸಿ ಮಹಿಳೆಯರೂ ಗ್ರಂಥ ಸಂಪಾದನೆಯನ್ನು ಸಮರ್ಥವಾಗಿ ನಿರ್ವಹಿಸಬಲ್ಲರು ಎಂಬುದನ್ನು ತೋರಿಸಿದ್ದಾರೆ. ೧೯೮೩ರ ಸಮಯದಲ್ಲಿ ಮಹಿಳೆಯರು ಆರು ಗ್ರಂಥಗಳನ್ನು ಸಂಪಾದಿಸಿದ್ದು ಎರಡು ಕಮಲಾ ಹಂಪನಾರವರು ಇತರರೊಂದಿಗೆ

ಸಂಪಾದಿಸಿದ ಚಾವುಂಡರಾಯ ಪುರಾಣ, ಮಂದಾಕಿನೀಬಾಯಿಯವರು ಇತರರೊಂದಿಗೆ ಸಂಪಾದಿಸಿರುವ ಪುರಂದರದಾಸರ ಪದಗಳು ಉಲ್ಲೇಖಾರ್ಹವಾದುವು. ಹವ್ಯಕ ಇಂಗ್ಲಿಷ್ ನಿಘಂಟು, ಡಿ.ಎಲ್.ಎಲ್.ಎನ್. ಅವರ ಆಯ್ದ ಲೇಖನಗಳು, ಸ್ತೋತ್ರ ರತ್ನಮಾಲೆ, ಪರ್ವ ಒಂದು ಸಮೀಕ್ಷೆ ಇವು ಮಹಿಳಾ ಸಂಪಾದಿತ ಕೃತಿಗಳಾಗಿವೆ. ಸರ್ವಮಂಗಳಾ ಅವರು ಶಂಕರಾಚಾರ್ಯರ ಆಯ್ದ ಸ್ತೋತ್ರಗಳನ್ನು 'ಸ್ತೋತ್ರ ರತ್ನಮಾಲೆ' ಎಂಬ ಹೆಸರಿನಲ್ಲಿ ಸಂಪಾದಿಸಿ ಪ್ರಕಟಿಸಿದ್ದಾರೆ.

೧೯೮೫ರ ಮಹಿಳಾ ಸಂಪಾದಿತ ಕೃತಿಗಳ ಸಮೀಕ್ಷೆಯಿಂದ ಕೆಲವು ಪ್ರಮುಖಾಂಶಗಳು ತಿಳಿದುಬರುತ್ತವೆ.

೧. ಹಳಗನ್ನಡ ಗ್ರಂಥ ಸಂಪಾದನೆ, ವಿಚಾರಗೋಷ್ಠಿಗಳ ಲೇಖನಗಳ ಸಂಪಾದನೆ, ನಿಘಂಟು ಸಂಪಾದನೆ, ಪ್ರಸಿದ್ಧ ಕೃತಿಗಳ ಸಂಗ್ರಹ ಸಂಪಾದನೆ, ಹೀಗೆ ಸಂಪಾದನೆಯ ಕ್ಷೇತ್ರವು ಮಹಿಳೆಯರಿಂದ ವಿಸ್ತರಿಸಿರುವುದು.

೨. ಜಾನಪದ ಅಧ್ಯಯನ ಹಾಗೂ ಕೃತಿ ಪ್ರಕಟಣಾ ಕ್ಷೇತ್ರದಲ್ಲಿ ಮಹಿಳೆಯ ಪಾತ್ರವಿಲ್ಲದಿರುವುದು.

೩. ಹಳಗನ್ನಡ ಗ್ರಂಥ ಸಂಪಾದನೆಯಲ್ಲಿ ಹೊಸ ಮಹಿಳಾ ಹೆಸರುಗಳು ಕಾಣಿಸಿಕೊಂಡಿರುವುದು.

ಹೀಗೆ ಮಹಿಳೆಯರ ಸೃಜನಶೀಲ ಸಾಹಿತ್ಯ ಸೃಷ್ಟಿಯ ಮನೋಧರ್ಮವು ಸಂಶೋಧನೆ, ವಿಚಾರ ವಿಮರ್ಶೆಯ ಕಡೆಗೆ ಸೆಳೆಯುತ್ತಿರುವ ಎಳೆಗಳನ್ನು ಗುರುತಿಸಬಹುದಾಗಿದೆ.

ಒಟ್ಟಿನಲ್ಲಿ "ಗ್ರಂಥ ಸಂಪಾದನೆಯ ಹುಟ್ಟಿನ ಗುಟ್ಟು, ಅದನ್ನು ಒಂದು ಕಲಾತ್ಮಕ ಶಾಸ್ತ್ರ ಎಂದು ನಿರೂಪಿಸುತ್ತದೆ. ಕವಿ–ಮೊದಲು ಅನುಭವಿ, ಅನಂತರ ಸಹೃದಯ; ಸಂಪಾದಕ ಮೊದಲು ಸಹೃದಯ, ಅನಂತರ ಕವಿ. ಲೋಕದ ಸತ್ಯವನ್ನು ಕವಿ ಪ್ರತಿಪಾದಿಸುತ್ತಾನೆ ; ಕವಿಲಿಖಿತ ಸತ್ಯವನ್ನು ಸಂಪಾದಕನು ಪ್ರತಿಪಾದಿಸುತ್ತಾನೆ. ಸತ್ಯಪ್ರತಿಪಾದನೆಯಿಲ್ಲದ ಸಂಪಾದನೆಯನ್ನು 'ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು" ಎಂದಂತೆ ಒಲೆಯೊಳಗಿಕ್ಕಬೇಕು. ಬಿದ್ದುಹೋದ ಕವಿ, ಎದ್ದು ಬಂದು ಪಾಪ ಏನನ್ನೂ ಹೇಳಲಾರ. ಹೀಗೆಂದು ಗ್ರಂಥ ಸಂಪಾದಕ ಮನಬಂದಂತೆ ಸಂಪಾದಿಸಲಾರ. ಸಹೃದಯ ಲೋಕವೆಂಬ ಅಂಕುಶ ಅವನನ್ನು ತಿವಿಯುತ್ತದೆ. ಅಂತೆಯೆ ಈಗ ಇರುವ, ಮತ್ತೆ ಮುಂದೆ ಯುಗ ಯುಗಾಂತರದಲ್ಲಿ ಬರುವ ಸಹೃದಯ ಕೋಟಿಯು ಗ್ರಂಥ ಸಂಪಾದನೆಯನ್ನು ಮೆಚ್ಚುವಂತಿರಬೇಕು; ಆ ಸಹೃದಯ ಕೋಟಿ ನುಡಿದ ನುಡಿ, ವಿಜ್ಜಿಕಾ ನುಡಿದ ನುಡಿಯ ಪಡಿನುಡಿಯಂತಿರಬೇಕು:

ಕವೇರಭಿಪ್ರಾಯಮಶಬ್ದಗೋಚರಂ
ಸ್ಫುರಂತಮಾರ್ದ್ರೇಷು ಪದೇಶು ಕೇವಲಂ

ವದದ್ಭಿರಂಗೈಃ ಕೃತರೋಮವಿಕ್ರಿಯೈಃ
ಜನಸ್ಯತೂಷ್ಣೀಂಭವತೋಽಯಮಂಜಲಿಃ ॥

[ನುಡಿಗೆ ನಿಲುಕದ ಕವಿಯ ಬಗೆಯ ಭಾವವನು
ಆರ್ದ್ರ ಪದಗಳಲಿ ಕೇವಲ ಮಿನುಗುವುದನು–
ಪುಳಕ ಹುರಿಗೊಂಡಂಗಗಳಲಿ ಮಾರ್ನುಡಿದು
ಮೌನವಾಂತವನಿಗಿದೊ ಮಣಿವೆ ಕೈಮುಗಿದು]

"ಆಗ ಗ್ರಂಥಸಂಪಾದಕ ಧನ್ಯ ; ಗ್ರಂಥಸಂಪಾದನೆ ಸಾರ್ಥಕ" ಎಂಬ ಶ್ರೀ ಸೀತಾರಾಮ ಜಾಗೀರ್‌ದಾರ್ ಅವರ ಈ ಮಾತುಗಳು ಅಕ್ಷರಶಃ ಸತ್ಯವಾದುದು.

ಗ್ರಂಥಋಣ

೧. ಕನ್ನಡ ಗ್ರಂಥ ಸಂಪಾದನೆ–ಡಾ. ಡಿ.ಎಲ್. ನರಸಿಂಹಾಚಾರ್, ಶಾರದಾ ಮಂದಿರ, ಮೈಸೂರು, ೧೯೭೬.

೨. ಗ್ರಂಥ ಸಂಪಾದನೆ ಎಳೆಗಳು–ಡಾ. ವೈ.ಸಿ. ಭಾನುಮತಿ, ವಿಸ್ಮಯ ಪ್ರಕಾಶನ ೨೦೦೯.

೩. ಕನ್ನಡ ಗ್ರಂಥ ಸಂಪಾದನೆ–ಡಾ. ಎಸ್.ಎಸ್. ಅಂಗಡಿ, ಕನ್ನಡ ಸಾಹಿತ್ಯ ಪರಿಷತ್ತು, ೨೦೦೭.

೪. ಗ್ರಂಥ ಸಂಪಾದನೆ : ಕೆಲವು ಅಧ್ಯಯನ–ಡಾ. ವೈ.ಸಿ. ಭಾನುಮತಿ, ಕಾಗಿನೆಲೆ ಪ್ರಕಾಶನ, ೧೯೯೭.

೫. ಗ್ರಂಥ ಸಂಪಾದನಾ ಶಾಸ್ತ್ರ ಪರಿಚಯ–ಸೀತಾರಾಮ ಜಾಗೀರ್‌ದಾರ್, ಕನ್ನಡ ಸಾಹಿತ್ಯ ಸಂಘ, ರಂಗಂಪೇಟೆ (ಸುರಪುರ), ೧೯೭೮.

೬ ಭಾರತೀಯ ಗ್ರಂಥಸಂಪಾದನ ಪರಿಚಯ–ಅನು. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಹರ್ಷವರ್ಧನ ಪ್ರಕಾಶನ, ೧೯೬೮.

೭. ಕನ್ನಡ ಗ್ರಂಥ ಸಂಪಾದನ ಶಾಸ್ತ್ರ–ಡಾ. ಎಂ.ಎಂ. ಕಲಬುರ್ಗಿ, ಸಮಾಜ ಪುಸ್ತಕಾಲಯ, ೧೯೮೬

೮. ಕರಡಚ್ಚು ತಿದ್ದುವಿಕೆ ಮತ್ತು ಕನ್ನಡ ಭಾಷೆ–ಪ್ರೊ. ಜಿ. ಅಶ್ವತ್ಥನಾರಾಯಣ, ಕನ್ನಡ ಪುಸ್ತಕ ಪ್ರಾಧಿಕಾರ, ೨೦೧೭.

ವಚನ ಸಂಪಾದನೆ : ಪ್ರಮುಖ ಹೆಜ್ಜೆಗಳು

◆

ಡಾ. ಪಿ.ವಿ. ನಾರಾಯಣ

ವಚನಗಳು ಬಸವಾದಿಗಳಿಂದ ರಚಿತವಾದುದು ಹನ್ನೆರಡನೆಯ ಶತಮಾನದಲ್ಲಾದರೂ, ಅವುಗಳನ್ನು ಆಯಾ ವಚನಕಾರರೇ ಬರೆದಿಟ್ಟರೇ ಅಥವಾ ಅವುಗಳನ್ನು ದಾಖಲಿಸಲು ಬೇರೇನಾದರೂ ವ್ಯವಸ್ಥೆಯಿತ್ತೇ ಎಂಬುದು ಖಚಿತವಾಗಿ ತಿಳಿಯದು. ಶಾಂತರಸನು ವಚನ ಭಂಡಾರಿ ಎನ್ನಿಸಿಕೊಂಡಿದ್ದು ಪ್ರಾಯಶಃ ಆಮೇಲಿನ ಪೌರಾಣಿಕ ಕಲ್ಪನೆಯಿಂದ ಇರಬೇಕು. ಅವನೂ ಭಂಡಾರದ ಅಧಿಕಾರಿಯಾಗಿದ್ದು, ವೀರಶೈವ ಪುರಾಣಗಳ ಕಾಲದಲ್ಲಿ ಅನುಭವ ಮಂಟಪದ ಕಲ್ಪನೆ ಬಂದು, ಅಲ್ಲಿ ಅವನು ಅಲ್ಲಿನ ಚರ್ಚೆಯಲ್ಲಿ ಭಾಗವಹಿಸಿದ ವಚನಕಾರರ ವಚನಗಳನ್ನು ಬರೆದಿಟ್ಟನೆಂಬ ಐತಿಹ್ಯ ಇರುವುದಾದರೂ, ಹಾಗಾದರೆ ಅನುಭವ ಮಂಟಪದಲ್ಲಲ್ಲದೆ ಬೇರೆಡೆ ಹೊಮ್ಮಿದ ವಚನಗಳನ್ನು ಅವನು ಬರೆದಿಡಲು ಹೇಗೆ ಸಾಧ್ಯವಾಗುತ್ತಿತ್ತು, ಮತ್ತು ವಚನಕಾರರು ತಮ್ಮ ಕೊನೆಯಲ್ಲೂ ರಚಿಸಿದ ವಚನಗಳು ಹೇಗೆ ಉಳಿದವು, ಇತರರ ಮುಂದೆಯೇ ಶರಣರು ವಚನಗಳನ್ನು ಹೇಳಿದರೇ – ಎಂಬಂತಹ ಪ್ರಶ್ನೆಗಳು ನಮಗೆ ಎದುರಾಗುತ್ತವೆ. ಇದಕ್ಕೆಲ್ಲ ಸಮಂಜಸವಾದ ಉತ್ತರವನ್ನು ಕಂಡುಕೊಳ್ಳುವುದು ಕಷ್ಟದ ಮಾತು. ವಚನಗಳು ಹದಿನೈದನೆಯ ಶತಮಾನದವರೆಗೂ ಮೌಖಿಕ ಸಂಪ್ರದಾಯದಲ್ಲಿಯೇ ಉಳಿದಿದ್ದು, ಮುಸಲ್ಮಾನರ ಆಡಳಿತ ಕೊನೆಗೊಂಡ ಮೇಲೆ, ಅಂದರೆ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ನಂತರ, ಅವುಗಳನ್ನು ಬರೆದಿಡುವ ಆವಶ್ಯಕತೆ ಮತ್ತು ಅನಿವಾರ್ಯತೆ ಉಂಟಾಗಿ ಬಸವಾದಿಗಳ ರಚನೆಗಳನ್ನು ವಿವಿಧ ಬಗೆಯಲ್ಲಿ ಕಾಪಿಡುವ ಕೆಲಸ ಭರಾಟೆಯಿಂದ ನಡೆದಿರುವಂತೆ ಕಾಣುತ್ತದೆ. ಹಾಗಾಗಿಯೇ ಈ ಕಾರ್ಯ ನಡೆದ ಹದಿನೈದನೆಯ ಶತಮಾನದ ಕಾಲವನ್ನು ವಚನ 'ಸಂಗೋಪನ ಯುಗ' ಎಂಬ ಹೆಸರಿನಿಂದ ಕರೆಯುವುದು ರೂಢಿಯಾಗಿದೆ.

ಈ ಹೊತ್ತಿನಲ್ಲಿ ವಚನಗಳನ್ನು ಬರಹದಲ್ಲಿ ದಾಖಲಿಸುವ, ಅಂದರೆ ಅವುಗಳ ಸಂಪಾದನ ಕಾರ್ಯವು, ವಿವಿಧ ಬಗೆಗಳಲ್ಲಿ ನಡೆದವು: ೧. ಅದುವರೆಗೂ (ಕೆಲವರ ದೃಷ್ಟಿಯಲ್ಲಿ) ಮೌಖಿಕವಾಗಿಯೇ ಇದ್ದ ಬಸವಾದಿಗಳ ವಚನಗಳನ್ನು ಶಾಶ್ವತವಾಗಿಸಲು

ಬರಹರೂಪಕ್ಕೆ ಇಳಿಸಿದ್ದು; ೨. ವಚನಗಳನ್ನು ಸ್ಥಲಾನುಸಾರಿಯಾಗಿ ಜೋಡಿಸಿದ್ದು; ೩. ವಚನಗಳಿಗೆ ವ್ಯಾಖ್ಯಾನ, ಟೀಕುಗಳನ್ನು ರಚಿಸಿದ್ದು ಮುಂತಾದವು.ಇವುಗಳಲ್ಲಿ ಯಾವುದು ಮೊದಲು ಶುರುವಾಯಿತು ಎಂದು ಹೇಳುವುದೂ ಕಷ್ಟ ಆದರೆ ಸಂಗ್ರಹಕಾರ್ಯ ಮೊದಲು ನಡೆದಿರಬೇಕೆಂದು ಊಹಿಸಬಹುದು. ವಿವಿಧ ವಚನಕಾರರ ರಚನೆಗಳನ್ನು ಒಟ್ಟಾಗಿಯೋ, ಬಿಡಿಯಾಗಿಯೋ, ವಸ್ತುವಿಗನುಗುಣವಾಗಿಯೋ ಮೊದಲು ದಾಖಲೆಗೊಳಿಸಿರಬೇಕು, ಅವುಗಳಲ್ಲಿ ತೀರ ಹೊಸತನ–ಸ್ವೋಪಜ್ಞತೆಯನ್ನು 'ಶೂನ್ಯಸಂಪಾದನೆ' ಆವಿಷ್ಕಾರಗೊಳಿಸಿತು. ಹದಿನೈದನೆಯ ಶತಮಾನದ ಮೊದಲರ್ಧದಲ್ಲಿ ಮೂಡಿಬಂದಿರಬಹುದಾದ ಶಿವಗಣಪ್ರಸಾದಿಯ 'ಶೂನ್ಯಸಂಪಾದನೆ'ಯಲ್ಲಿ ವಚನಗಳನ್ನು ಸಂಭಾಷಣರೂಪದಲ್ಲಿ ಪವಣಿಸುವುದು, ಬಸವಾದಿಗಳ ಚಳವಳಿಯ ಮುಖ್ಯ ಆಶಯಗಳನ್ನು ಪ್ರಸಂಗರೂಪದಲ್ಲಿ ಚಿತ್ರಿಸುವುದು; ಜ್ಞಾನ–ಕರ್ಮ, ಕಾಯಕ–ದಾಸೋಹ, ಭಕ್ತ–ಜಂಗಮ, ಲಿಂಗಧಾರಣೆಯ ಆವಶ್ಯಕತೆ – ಮುಂತಾದ ವಿವಿಧ ಪರಿಕಲ್ಪನೆಗಳಿಗೆ ಸಂಬಂಧಿಸಿದ ಚರ್ಚೆ–ಮುಂತಾದುವೆಲ್ಲ ಇದರಲ್ಲಿ ನಡೆದು, ತನ್ನ ಪರಿಕಲ್ಪನೆಯಲ್ಲಂತೋ ಅಂತೆಯೇ ತನ್ನ ಸಂರಚನೆಯಲ್ಲಿಯೂ ಈ ಕೃತಿ ಅದ್ಭುತವೆನಿಸಿದೆ.

ಈ ಕೃತಿಯ ಹೆಸರಿನಲ್ಲಿನ ಮತ್ತು ಇತರ ಕಡೆಗಳಲ್ಲಿನ (ಉದಾಹರಣೆಗೆ, ಸಂಪಾದನೆಯ ಚೆನ್ನಂಜೆದೇವ) 'ಸಂಪಾದನೆ' ಎಂಬ ಶಬ್ದವು, ಈಚಿನ ಗ್ರಂಥಸಂಪಾದನೆಯ ಪರಿಕಲ್ಪನೆಯಂತೆ ಕೇವಲ ಮೂಲಪಾಠದ ಶೋಧನೆ ಎಂಬ ಭಾವನೆಗೆ ಭಿನ್ನವಾಗಿಯೂ ಅದನ್ನು ಮೀರಿಯೂ ಅರ್ಥವನ್ನು ಗಳಿಸಿಕೊಂಡಿತ್ತು. ವಚನಗಳನ್ನು ಆವಶ್ಯಕತೆಗನುಗುಣ ವಾಗಿ ಮಾರ್ಪಡಿಸುವುದು; ಅವುಗಳಿಗೆ ಸಂಭಾಷಣೆಯ ಸ್ವರೂಪವನ್ನು ನೀಡುವುದು ಮತ್ತು ಸಮಯದ ವಾಕ್ಯಗಳೆಂಬ ಕೊಂಡಿಗಳನ್ನು ಜೋಡಿಸುವುದು, ಶರಣನೊಬ್ಬನು ಬೇರೊಬ್ಬನನ್ನು ಕುರಿತು ವಚನವನ್ನು ಹೇಳುತ್ತಿರುವಂತೆ ಸಂಬೋಧನೆಯನ್ನು ಸೇರಿಸುವುದು ಇತ್ಯಾದಿಗಳೆಲ್ಲ ಇದೊಂದೆಡೆಯೇ ನಡೆದಿದೆ. ಅಲ್ಲದೆ ಕಲ್ಲುಮಠದ ಪ್ರಭುದೇವ ಮತ್ತು ಇತರ ಅನೇಕರು ಮಾಡಿದ ವಚನವ್ಯಾಖ್ಯಾನ ಮತ್ತು ಟೀಕುಗಳಲ್ಲಿ ಅವುಗಳ ಅರ್ಥವನ್ನು ತನ್ನ ನಿಲವಿಗೆ ಅನುಸಾರಿಯಾಗಿ ವಿವರಿಸಿದ್ದೂ ಸಂಪಾದನೆಯ ಒಂದು ಬಗೆಯಾಗಿದೆ.

ಸಂಪಾದನೆಯ ಕುರಿತಂತೆ ಕೇವಲ ವಚನಗಳಿಗೆ ಮಾತ್ರವೇ ಇದು ಅನ್ವಯಿಸುವುದಿಲ್ಲ. ಆ ಹೊತ್ತಿನ ಇತರ ಮತಗಳವರಲ್ಲಿಯೂ ಇಂತಹುದೇ ಭಿನ್ನ ಅರ್ಥವ್ಯಾಪ್ತಿಯನ್ನು ಅದು ಪಡೆದಿತ್ತು ಎನ್ನಿಸುತ್ತದೆ. ರಚನೆಯ ಮೂಲಸ್ವರೂಪವನ್ನು ಉಳಿಸಿಕೊಳ್ಳುವುದನ್ನು 'ಪಾಠಶೋಧನೆ' ಎಂದು ಕರೆಯುತ್ತಿದ್ದಂತೆ ತೋರುತ್ತದೆ (ಅಥವಾ ಆ ಶಬ್ದವೂ ಈಚಿನದೋ!). ವೇದಗಳ ಮೂಲಸ್ವರೂಪವನ್ನುಳಿಸಿಕೊಳ್ಳುವ ಬರವಣಿಗೆಗೆ ಮೊದಲಿನ ಅತ್ಯಂತ ಹಳೆಯ ಪ್ರಯತ್ನವೆಂದರೆ ಕ್ರಮಪಾಠ, ಪದಪಾಠ, ಜಟಾಪಾಠ ಮತ್ತು ಘನಪಾಠಗಳು. ಮುಂದೆ ಬರವಣಿಗೆ ಬಂದಮೇಲೆ ಅವುಗಳಲ್ಲಿನ ಮೂಲಸ್ವರೂಪವನ್ನುಳಿಸಿಕೊಳ್ಳುವ ಪ್ರಯತ್ನವೂ ಮುಂದುವರಿದಿದೆ. ಆದರೆ ಇಷ್ಟಕ್ಕೇ ಇದು ಸೀಮಿತವಾಗಲಿಲ್ಲ ಮಧ್ವಾಚಾರ್ಯರು ತಮ್ಮ 'ಮಹಾಭಾರತ ತಾತ್ಪರ್ಯನಿರ್ಣಯ'ದ ಮೊದಲಲ್ಲಿ ಹೇಳುವ ಮಾತುಗಳಿಗೆ ವಾದಿರಾಜರು ನೀಡುವ ವ್ಯಾಖ್ಯಾನವನ್ನು ಡಿವಿಎಸ್

ತಮ್ಮ 'ಗ್ರಂಥಸಂಪಾದನೆ' ಕೃತಿಯಲ್ಲಿ ಉಲ್ಲೇಖಿಸುತ್ತಾರೆ: "ಕೆಲವು ದುರ್ವಿದಗ್ಧರೂ ಕುತ್ಸಿತರೂ ಆದ ವಿದ್ವಾಂಸರ ಕೌಟಿಲ್ಯದಿಂದ ಭಾರತಾದಿ ಗ್ರಂಥಗಳು ನಷ್ಟಪ್ರಾಯವಾಗಿವೆ. ತಂತಮ್ಮ ಮತಧರ್ಮಗಳಿಗೆ ಅನುಕೂಲವಾಗಿರುವಂತೆ ಕೆಲವರು ಶ್ಲೋಕಗಳನ್ನು ರಚಿಸಿ ಮೂಲಗ್ರಂಥದೊಳಕ್ಕೆ ಸೇರಿಸಿಬಿಡುತ್ತಾರೆ; ತಂತಮ್ಮ ಮತಧರ್ಮಗಳಿಗೆ ಪ್ರತಿಕೂಲವಾಗಿರುವ ಶ್ಲೋಕಗಳನ್ನು ಬರೆಯದೆ ಬಿಟ್ಟುಬಿಡುತ್ತಾರೆ ಕೆಲವರು; ಈ ಗ್ರಂಥಗಳಲ್ಲಿ ಆ ಶ್ಲೋಕಗಳೇ ಇಲ್ಲವೆಂದು ಹೇಳುವುದಕ್ಕೆ ಅವರಿಗೆ ಅವಕಾಶ ಕಲ್ಪಿತವಾಗುತ್ತದೆ; ಒಂದು ಎಡೆಯಲ್ಲಿ ಹೇಳಿರುವ ಶ್ಲೋಕಗಳನ್ನು ಕಥಾವಿಚ್ಛೇದ ಮಾಡುವುದಕ್ಕಾಗಿ ಇನ್ನೊಂದೆಡೆಯಲ್ಲಿ ಬರೆಯುತ್ತಾರೆ; ಕಥೆಗೆ ಅನುಕೂಲವಾದ ಶ್ಲೋಕಗಳನ್ನು ಇಲ್ಲಿ ಬರೆಯುತ್ತಾರೆ; ಕೆಲವರು ಸಜ್ಜನರೂ ಕೂಡ ಅನವಧಾನದಿಂದಲೂ ಅಜ್ಞಾನದಿಂದಲೂ ಅನ್ಯಥಾ ಜ್ಞಾನದಿಂದಲೂ ಹೀಗೆ ಮಾಡುತ್ತಾರೆ; ಇವುಗಳನ್ನೆಲ್ಲ ಸರಿಪಡಿಸುವುದು ಹರಿಕಿಂಕರಶ್ರೇಷ್ಠರಾದ ನಮ್ಮಂಥವರ ಪ್ರಯತ್ನ."

ಶಿವಗಣಪ್ರಸಾದಿಯು ತನ್ನ 'ಶೂನ್ಯಸಂಪಾದನೆ'ಯಲ್ಲಿ ಬಸವಾದಿಗಳ ತಾತ್ವಿಕತೆಯನ್ನು ಪ್ರಸಂಗಗಳ ರೂಪದಲ್ಲಿ ಹಿಡಿದಿಡುವ ಪ್ರಯತ್ನವು ಮುಂದಿನವರಿಗೆ ಉಪಾದೇಯವಾಗಿ ಕಂಡರೂ, ಆತನ ಕೃತಿಯಲ್ಲಿ ಬಸವಾನುಯಾಯಿಗಳ ಸಾಮುದಾಯಿಕ ಕಲ್ಪನೆಗಳೆಲ್ಲವನ್ನೂ ಪೂರ್ತಿಯಾಗಿ ಹಿಡಿದಿಡಲಾಗಿಲ್ಲವೆಂಬ ಭಾವನೆಯಿಂದಲೂ, ಅನೇಕ ಸಂಪಾದನೆಗಳನ್ನು ನಿರ್ವಹಿಸಿರುವ ಬಗೆಗಿನ ಭಿನ್ನಾಭಿಪ್ರಾಯದಿಂದಲೂ ಅದು ಆನಂತರ ಕಾಲಕಾಲಕ್ಕೆ ಮೂರು ಬಾರಿ ಪರಿಷ್ಕರಣೆಗಳಿಗೆ ಒಳಗಾಯಿತು. ಹೀಗೆ 'ಶೂನ್ಯಸಂಪಾದನೆ'ಯು ಒಂದು ರೀತಿಯಲ್ಲಿ ಸಾಮುದಾಯಿಕ ಸಂಪಾದನೆಯಾಗಿದೆ ಎನ್ನಬಹುದು.

ಸಂಗೋಪನ ಯುಗವು ವಿಜಯನಗರ ಕಾಲದ ಪ್ರವೃತ್ತಿಯಾದ 'ತನ್ನತನ'ಕ್ಕೆ (ಸಂಸ್ಕೃತ ಮತ್ತು ದೇಸಿ) ಮಹತ್ವವಿತ್ತದ್ದು; ಆ ಸಾಮ್ರಾಜ್ಯದ ಮೂಲೋದ್ದೇಶವೇ ವೈದಿಕ ಪುನರುತ್ಥಾನವಾದದ್ದರಿಂದ ಆ ಎರಡರಲ್ಲಿ ಹೆಚ್ಚಾದ ಭೇದವೆಣಿಸದ್ದರಿಂದ (ಸಾಯಣ ಮಾಧವರ ನೇತೃತ್ವದ ದೊಡ್ಡ ವಿದ್ವಾಂಸ ತಂಡವು ಕೈಗೆತ್ತಿಕೊಂಡ ವಿವಿಧ ವೈದಿಕ ಧಾರ್ಮಿಕ ಗ್ರಂಥಗಳ ವ್ಯಾಖ್ಯಾನಗಳು ಮುಂತಾದ ಕೆಲಸದಿಂದ) ಮತ್ತೆ ಸಂಸ್ಕೃತಕ್ಕೆ ಪ್ರಾಧಾನ್ಯ ದೊರೆಯಿತು. ವೀರಶೈವದಲ್ಲಿಯೂ ಹಿಂದಿನ ಕಠಿಣ ಸಂಸ್ಕೃತವಿರೋಧಿ ನಿಲವು ಬದಲಾಗಿ (ಸಂಸ್ಕೃತ ಮಾತನ್ನು ಅಂಗಡಿಯ ವಸ್ತುವನ್ನಾಗಿಯೂ ಗಾಳಕ್ಕೆ ಹಾಕುವ ಮತ್ಸ್ಯಗ್ರಾಸವಾಗಿಯೂ ನಗೆಯ ಮಾರಿತಂದೆಯು ಕಾಣುವುದನ್ನು ನೆನೆಯಿರಿ) ತನ್ನತನವನ್ನುಳಿಸಿಕೊಂಡರೂ ಸಂಸ್ಕೃತವನ್ನು ಧಿಕ್ಕರಿಸದಿದ್ದುದರಿಂದಲೋ, ಸಂಸ್ಕೃತ ಎಂದರೆ ಪಾಂಡಿತ್ಯದ ಭಾಷೆ ಎಂಬ ಕಲ್ಪನೆಯಿಂದಲೋ, ಬಸವಾದಿಗಳೂ ಸಂಸ್ಕೃತ ಧಾರ್ಮಿಕ ಪಠ್ಯಗಳನ್ನು ಬಲ್ಲವರು ಎಂದು ತೋರಿಸುವ ಚಾಪಲ್ಯದಿಂದಲೋ, ಸಂಪ್ರದಾಯವನ್ನುಳಿಸುವಲ್ಲಿ ಸಂಸ್ಕೃತದ ಪಾತ್ರ ಹಿರಿದು ಎಂಬ ಕಾರಣದಿಂದಲೋ ಈ ಪ್ರವೃತ್ತಿ ಸೇರಿಕೊಂಡದ್ದರಿಂದಲೇ, ಮೂಲದಲ್ಲಿ ಸೇರಿರದ ಬಸವಾದಿಗಳ ವಚನಗಳ ನಡುನಡುವೆ ಸಂವಾದಿ ಸಂಸ್ಕೃತೋಲ್ಲೇಖಗಳನ್ನು ಸೇರಿಸಿರುವ ಸಾಧ್ಯತೆಯಿದೆ ಎನ್ನಿಸುತ್ತದೆ. ದೇವಸ್ಥಾನಗಳಲ್ಲಿ ಹಾಡುವ ಪದ್ಧತಿಯಿದ್ದ ಪ್ರಭಾವದಿಂದಾಗಿ ಲಿಂಗಾಯತ ಮಠಗಳಲ್ಲಿ ಕನ್ನಡ ಹಾಡುಗಳನ್ನು ಹಾಡಲೆಂಬಂತೆ, ಬಸವಾದಿಗಳ ವಚನಗಳಲ್ಲಿನ

ಆಶಯಕ್ಕನುಗುಣವಾದ ಸ್ವರವಚನಗಳು ರಚಿತವಾಗಿರಬಹುದು. ಮುಂದೆ ಅನೇಕರು ಸ್ವತಂತ್ರ ವಚನಗಳು ಮತ್ತು ಸ್ವರವಚನಗಳು ಇವುಗಳ ಮೂಲಕ ಬಸವಾದಿಗಳ ವಚನಗಳ ಆಶಯವನ್ನು ತಾವು ಕಂಡುಕೊಂಡಂತೆ ಪುನಾರೂಪಿಸುವ ಪ್ರಯತ್ನವೂ ನಡೆಯಿತೆನ್ನಬಹುದು.

ಇನ್ನು ಈಚೆಗೆ ಬಂದರೆ, ಮುದ್ರಣಯುಗ ಆರಂಭಗೊಂಡದ್ದರಿಂದ ಸಂಪಾದನೆಯ ಕಾರ್ಯ ಮತ್ತೊಂದು ಮುಖ್ಯ ಹಂತವನ್ನು ತಲುಪಿತು. ಇದರಿಂದ ಹಳೆಯದನ್ನು ಉಳಿಸಿಕೊಳ್ಳುವ ಕಾರ್ಯ ಇನ್ನೂ ಹೆಚ್ಚು ಖಚಿತವಾಗಿಯೂ, ಹೆಚ್ಚು ಶ್ರಮವಿಲ್ಲದೆಯೂ, ವ್ಯಾಪಕವಾಗಿಯೂ ನಡೆಯಲು ಸಾಧ್ಯವಾಯಿತು. ಹತ್ತೊಂಬತ್ತನೆಯ ಶತಮಾನದ ಕೊನೆಯ ಹೊತ್ತಿಗೆ (೧೮೮೩) 'ಅಪ್ರಮಾಣ ಕೂಡಲಸಂಗಮದೇವಾ' ಮುದ್ರಿಕೆಯನ್ನೊಳಗೊಂಡ ವಚನಗಳನ್ನೊಳಗೊಂಡ 'ಶಿಖಾರತ್ನಪ್ರಕಾಶ', ೧೮೮೬ ರಲ್ಲಿ ಪ್ರಕಟವಾದ 'ಬಸವಣ್ಣನವರ ಷಟ್‌ಸ್ಥಲ ವಚನ ಸಂಪುಟ' ಮುಂತಾದವುಗಳಿಂದ ವಚನ ಸಂಪಾದನೆಯ ಹೊಸಯುಗ ಆರಂಭಗೊಂಡಿತೆನ್ನಬಹುದು.

ಈಗ ಇನ್ನಷ್ಟು ಮುಂದಕ್ಕೆ, ಎಂದರೆ ಇಪ್ಪತ್ತನೆಯ ಶತಮಾನದ ಆರಂಭದ ಹೊತ್ತಿಗೆ ವಚನ ಸಂಪಾದನೆಯು ಹೊಸ ತೇಜಿಯಿಂದ ಮುನ್ನಡೆಯಿತು. ಇಷ್ಟು ಹೊತ್ತಿಗೆ ಬ್ರಿಟಿಷ್ ಆಳ್ವಿಕೆ ಆಳವಾಗಿದ್ದು, ನಮ್ಮ ಶಿಕ್ಷಣ ಪದ್ಧತಿ ಹೊಸತಾಗಿ, ಬದುಕನ್ನು ಬರಹಗಳನ್ನು ಹೊಸಗಣ್ಣಿನಿಂದ ಕಾಣುವ ಪರಿಯಿಂದಾಗಿ ಅದಕ್ಕೆ ಹೊಸ ರೂಪ ಪ್ರಾಪ್ತವಾಯಿತು. ಮುದ್ರಣದಿಂದಾಗಿ ಕೇವಲ ಒಂದು ಸಮುದಾಯದವರ ಮನೆಗಳಲ್ಲಿ ಕಾಣಬಹುದಾಗಿದ್ದ ವಚನಗಳು ಮುದ್ರಿತರೂಪದಿಂದ ಅಂಗಡಿಗಳಲ್ಲಿ ಸಿಗುವಂತಾಗಿ, ಇತರರ ಗಮನವನ್ನೂ ಸೆಳೆಯುವಲ್ಲಿ ಸಫಲವಾಯಿತು. ಅನೇಕ ಶ್ರದ್ಧಾವಂತರು ಪ್ರಕಟಿಸಿದ ಜನಪ್ರಿಯ ವಚನ ಸಂಪುಟಗಳಲ್ಲದೆ, ಫ.ಗು. ಹಳಕಟ್ಟಿಯವರ ಏಕವ್ಯಕ್ತಿ ಸಾಹಸದಿಂದ 'ವಚನಶಾಸ್ತ್ರ ಸಾರ'ದ ಮೂಲಕವೂ ಅನೇಕ ಬಿಡಿವಚನಕಾರರ ವಚನಗಳ ಹೊತ್ತಗೆಗಳ ಮೂಲಕವೂ ಸಾವಿರಾರು ವಚನಗಳು ಪ್ರಕಟಗೊಂಡದ್ದು.

ಆಧುನಿಕ ವಿದ್ಯೆಯ ನೆಲೆಗಳಾದ ವಿಶ್ವವಿದ್ಯಾನಿಲಯಗಳು ಆರಂಭಗೊಂಡದ್ದರಿಂದ ಕಾವ್ಯ-ಸಾಹಿತ್ಯಗಳ ಪರಿಕಲ್ಪನೆಯ ಬಗ್ಗೆ ಹೊಸ ಅರಿವು ಮೂಡಿ, ಆರ್ದ್ರವಾದ ಬರವಣಿಗೆಯನ್ನೆಲ್ಲ ಕಾವ್ಯವೆಂದು ಪರಿಗಣಿಸುವ ಪರಿಪಾಟ ಬಂದು, ಅದುವರೆಗೆ 'ಶಾಸ್ತ್ರ'ವೆನ್ನಿಸಿಕೊಂಡಿದ್ದ ವಚನಗಳನ್ನು 'ಇತರ'ರೂ ಸಾಹಿತ್ಯ ಪ್ರಕಾರವಾಗಿ ಅಭ್ಯಸಿಸುವ ಪರಿಪಾಟ ಬೆಳೆಯಿತು. ಶಿ.ಶಿ. ಬಸವನಾಳರು ಪ್ರಕಟಿಸಿದ 'ಬಸವಣ್ಣನವರ ಷಟ್‌ಸ್ಥಲ ವಚನಗಳು' ಕೃತಿಯ ಪ್ರಸ್ತಾವನೆಯಿಂದಾಗಿ ವಚನ ಸಂಪಾದನೆಯ ಹೊಸ ಮಾರ್ಗದ ನಿರ್ಮಾಣವಾಯಿತು. ಅವರೂ ಅನೇಕ ಹಸ್ತಪ್ರತಿಗಳ ನೆರವಿನಿಂದ ಮೂಲಪಾಠದ ಕಡೆಗೆ ಗಮನವಿತ್ತಿದ್ದಾರೆ; ಎಷ್ಟೋ ಕಡೆಗಳಲ್ಲಿ ಅವರು ಒಪ್ಪಿರುವ ಪಾಠಗಳು ಕರ್ನಾಟಕ ವಿಶ್ವವಿದ್ಯಾಲಯ ಮುಂದೆ ಪ್ರಕಟಿಸಿದ ಬಸವಣ್ಣನವರ ವಚನಗಳಲ್ಲಿ ಪಾಠಕ್ಕಿಂತ ಹೆಚ್ಚು ಸಮರ್ಥನೀಯವಾಗಿ ಇವೆ. ಇದುವರೆಗೂ ಓಲೆಪ್ರತಿಗಳಲ್ಲಿ ವಚನಗಳನ್ನು ಗದ್ಯವೆಂಬಂತೆಯೇ ಬರೆಯುತ್ತಿದ್ದರು; ವಚನವೆಂಬ ಮಾತೂ ಇದಕ್ಕೆ ಪ್ರೇರಕವಾಗಿದ್ದಿರಬಹುದು. ಆದರೆ ಗದ್ಯದಂತೆ ಉದ್ದಕ್ಕೆ ಮುದ್ರಿಸದೆ ಭಾವಾನುಸಾರಿಯಾಗಿ

ಸಾಲುಗಳ ವಿಂಗಡಣೆ ಮಾಡಿ ಮುದ್ರಿಸುವ ಪರಿಪಾಟವನ್ನು ಬಸವನಾಳರೇ ಆರಂಭಿಸಿದಂತೆ ತೋರುತ್ತದೆ. ಸಾಲುಗಳಾಗಿ ವಿಂಗಡಿಸುವುದಲ್ಲದೆ, ಅರ್ಥಸ್ಪಷ್ಟತೆಗೆ ತಕ್ಕಂತಹ ವಿರಾಮ ಚಿಹ್ನೆಗಳನ್ನು ಬಳಸಿ ಅವುಗಳ ಆಂತರ್ಯವು ಎದ್ದು ಕಾಣುವಂತೆ ಮಾಡಿದ್ದಾರೆ. ಅವರಿಗೆ ಪ್ರಚೋದನೆ ಬಂದದ್ದು ರಿಚರ್ಡ್ ಜಿ. ಮೌಲ್ಟನ್ ಇಂಗ್ಲಿಷ್ ಬೈಬಲ್‌ನ ಮುದ್ರಣದಲ್ಲಿ ಗದ್ಯವೆನಿಸಿದ್ದ (ವಿಶೇಷವಾಗಿ ಸಾಮ್ಸ್‌ಗಳನ್ನು) ಪದ್ಯದಂತೆ ವಿವಿಧ ಸಾಲುಗಳಾಗಿ ವಿಂಗಡಿಸಿದ ರೀತಿ. ಪದ್ಯರೂಪದ ರಚನೆಗಳಲ್ಲಿ ಆಂತರಿಕ ಲಯ ಮತ್ತು ಅರ್ಥವಂತಿಕೆಗಳನ್ನು ಸೂಕ್ತವಾದ ರೀತಿಯಲ್ಲಿ ಸಾಲುಗಳನ್ನಾಗಿ ವಿಂಗಡಿಸುವ ಅನುಕೂಲವನ್ನು ತೋರಿಸಲು ಬಸವನಾಳರು ವಚನಗಳನ್ನಷ್ಟೇ ಉಲ್ಲೇಖಿಸದೆ ಉದಾಹರಣೆಗಳಾಗಿ ತೋರಿಸದೆ, ಕುಮಾರವ್ಯಾಸನ ಷಟ್ಪದಿ, ಇತರ ಕವಿಗಳ ಕಂದಪದ್ಯಗಳನ್ನೂ ಹೀಗೆ ಭಾವಾನುಸಾರಿ ಸಾಲುಗಳಾಗಿ ವಿಂಗಡಿಸಿ, ಹಳೆಯ ರಚನೆಗಳನ್ನು ಅರ್ಥವಿಸಿಕೊಳ್ಳುವ ಹೊಸ ಹೆದ್ದಾರಿಯನ್ನು ನಿರ್ಮಿಸಿದರು.

ಕಾಲ ಸರಿಯುತ್ತ ವಚನಗಳನ್ನು ವಿವಿಧ ದೃಷ್ಟಿಕೋನದಿಂದ ಅಭ್ಯಾಸ ಮಾಡುವವರ ಸಂಖ್ಯೆ ಹೆಚ್ಚಾದುದಲ್ಲದೆ, ಸಾಂಪ್ರದಾಯಿಕವಾದ ಶಾಸ್ತ್ರ ಎಂಬ ಅರ್ಥದ ಚಿಪ್ಪಿನಿಂದ ಹೊರಬಂದು ಬೇರೆಬೇರೆಯವರು ವಿವಿಧ ನಿಟ್ಟುಗಳಿಂದ ವಚನಗಳನ್ನು ಅರ್ಥವಿಸುವ, ಅವುಗಳ ಒಡಲಲ್ಲಿ ಅಡಗಿರುವ ಅನೇಕ ಸ್ತರಗಳಗಳನ್ನು ಕೆದಕಿ ನೋಡುವ ಮತ್ತು ಪರಿಕಿಸುವ ಪರಿ ಬೆಳೆದು ಬಂದಿತು. ಒಂದೆಡೆ ಅಲ್ಲಿನ ಮತಧಾರ್ಮಿಕ ಅಂಶಗಳನ್ನು ಸ್ಫುಟಗೊಳಿಸುವ ಕಾರ್ಯ ನಡೆದರೆ, ಮತ್ತೊಂದೆಡೆ ಅಲ್ಲಿನ ಸಾರ್ವತ್ರಿಕವೆನ್ನಿಸುವ ಅಂಶಗಳ ಕಡೆಗೂ ಕಣ್ಣು ಹಾಯಿಸುವ ಹೊಸ ದೃಷ್ಟಿ ಸೃಷ್ಟಿಯಾಯಿತು.

ಅದುವರೆಗೆ ವ್ಯಕ್ತಿಗಳ ಪ್ರಯತ್ನದ ಫಲವಾಗಿ ವಚನಗಳ ಸಂಪಾದನಕಾರ್ಯವು ಅವುಗಳನ್ನು ಜನಪ್ರಿಯಗೊಳಿಸುವ ನಿಟ್ಟಿನಲ್ಲಿಯೂ ಸಾಗಿದರೆ, ಜೊತೆಜೊತೆಗೇ ಆಧುನಿಕ ಗ್ರಂಥಸಂಪಾದನಶಾಸ್ತ್ರವನ್ನು ಬೆನ್ನಿಗಿಟ್ಟುಕೊಂಡು ಪಂಡಿತ ಆವೃತ್ತಿಗಳನ್ನು ಹೊರತರುವ ರೀತಿಯೂ ಮೂಡಿಬಂತು. ಇವುಗಳಲ್ಲಿ ಮೊದಮೊದಲು ತೊಡಗಿದ್ದವರು ಬಿಡಿ ಪಂಡಿತರು. ಆದರೆ ೧೯೬೭ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು ಸಮಗ್ರ ವಚನ ವಾಙ್ಮಯ ಪ್ರಕಟಣೆಯನ್ನು ಯೋಜನೆಯಾಗಿ ಕೈಗೆತ್ತಿಕೊಂಡು ವಿಶ್ವವಿದ್ಯಾನಿಲಯ ಅನುದಾನ ಆಯೋಗದ ನೆರವಿನಿಂದ ಒಂದು ಪ್ರತ್ಯೇಕ ವಿಭಾಗವನ್ನೇ ಆರಂಭಿಸಿ ಕ್ರಮಬದ್ಧವಾಗಿಯೂ, ಸಮಗ್ರವಾಗಿಯೂ, ಪಂಡಿತ ಆವೃತ್ತಿಗಳ ವಚನ ಸಂಪುಟಗಳನ್ನು ಹೊರತರುವ ಮಹತ್ತಾದ ಕೆಲಸವನ್ನು ಆರಂಭಿಸಿ ಪೂರೈಸಿತು. ಹೀಗೆ, ಆ ಹೊತ್ತಿಗೆ ಲಭ್ಯವಿದ್ದ ಎಲ್ಲ ವಚನಗಳನ್ನೂ ಪಂಡಿತ ಆವೃತ್ತಿಯಾಗಿ ಅನೇಕ ಸಂಪುಟಗಳಲ್ಲಿ ಪ್ರಕಟಿಸತೊಡಗಿದಾಗ ಅದಕ್ಕೊಂದು ಸಾಂಸ್ಥಿಕವೂ ಶಿಸ್ತುಬದ್ಧವೂ ಆದ ರೂಪ ದೊರೆತು ವಚನಗಳ ಕಡೆ ಮತ್ತಷ್ಟು ವಿದ್ವಾಂಸರು ಹೊರಳಲು ಕಾರಣವಾಯಿತು.

೧೯೯೩ರಲ್ಲಿ ಕರ್ನಾಟಕ ಸರ್ಕಾರವು ಕೈಗೆತ್ತಿಕೊಂಡ ಹದಿನೈದು ಸಂಪುಟಗಳ 'ಸಮಗ್ರ ವಚನ ಸಾಹಿತ್ಯ' ಸಂಪುಟಗಳ ಸಂಪಾದನೆ ಮತ್ತು ಪ್ರಕಟಣೆ ವಚನಸಾಹಿತ್ಯ ಸಂಪಾದನೆ–ಪ್ರಕಟಣೆಯ ಇತಿಹಾಸದಲ್ಲಿ ಮತ್ತೊಂದು ಮಹತ್ವದ ಹೆಜ್ಜೆ. ಈ ಯೋಜನೆಯಡಿ ಸಾಮಾನ್ಯ ಆಸಕ್ತರನ್ನು ದೃಷ್ಟಿಯಲ್ಲಿರಿಸಿಕೊಂಡದ್ದರಿಂದ ಈ ಸಂಪುಟಗಳ ಸಹಜವಾಗಿಯೇ

ಪಾಠಾಂತರಗಳ ಗೋಜಿಗೆ ಹೋಗದೆ ವಚನಗಳನ್ನೆಲ್ಲ ಹದಿನಾಲ್ಕು ಸಂಪುಟಗಳಲ್ಲಿಯೂ, ಹದಿನೈದನೆಯ ಪಾರಿಭಾಷಿಕ ಶಬ್ದಕೋಶದ ರೂಪದಲ್ಲಿಯೂ ಪ್ರಕಟಿಸಲಾಗಿದೆ.ಅಲ್ಲದೆ ಕಡಿಮೆ ದರದಲ್ಲಿ ನೀಡಿದ್ದರಿಂದ ಹೆಚ್ಚಿನ ಓದುಗರನ್ನು ಆಕರ್ಷಿಸಿ, ಈಗಾಗಲೇ ಅದರ ವಿವಿಧ ಮುದ್ರಣಗಳು ಹೊರಬಂದಿವೆ. ಜೊತೆಗೆ ಈ ಸಂಪುಟಗಳ ಮತ್ತೊಂದು ವೈಶಿಷ್ಟ್ಯವೆಂದರೆ, ಬಸವಾದಿಗಳ ಲಭ್ಯ ವಚನಗಳನ್ನಲ್ಲದೆ, ವೀರಶೈವದ ಎರಡನೆಯ ಹಂತದಲ್ಲಿ ರಚಿತವಾದ ವಚನಗಳನ್ನೂ ಸಮಗ್ರವಾಗಿ ಪ್ರಕಟಿಸಲಾಗಿದೆ. ಬಸವಾದಿಗಳ ವಚನಗಳಲ್ಲಿ ಬಸವಣ್ಣ, ಅಲ್ಲಮಪ್ರಭು, ಸಿದ್ಧರಾಮ ಮತ್ತು ಚೆನ್ನಬಸವಣ್ಣರ ವಚನಗಳನ್ನು ಬೇರೆ ಬೇರೆ ಸಂಪುಟಗಳಾಗಿಯೂ, ಐದನೆಯದರಲ್ಲಿ ಎಲ್ಲ ವಚನಕಾರ್ತಿಯರ ವಚನಗಳನ್ನೂ, ಆ ಮುಂದಿನ ಸಂಪುಟಗಳಲ್ಲಿ ಮಿಕ್ಕ ವಚನಕಾರರ ವಚನಗಳನ್ನು ಅಕಾರಾದಿಯಾಗಿಯೂ ಹಲವು ಸಂಪುಟಗಳಲ್ಲಿ ಪವಣಿಸಲಾಗಿದೆ. ಜೊತೆಗೆ, ಬಸವಾದಿಗಳ ವಚನಸಂಪುಟಗಳ ಹೊರಹೊದಿಕೆಯ ಬಣ್ಣವು ಬೇರೆಯಾಗಿದ್ದು, ಎರಡನೆಯ ಹಂತದ ವಚನಸಂಪುಟಗಳ ಹೊರಹೊದಿಕೆಯ ಬಣ್ಣ ಬೇರೆಯಾಗಿದ್ದು, ಕೊನೆಯ ಸಂಪುಟವನ್ನು ಮೂರನೆಯ ಬಣ್ಣದ ಹೊರಹೊದಿಕೆಯೊಂದಿಗೆ ಹೊರತರಲಾಗಿದೆ. ಅಲ್ಲದೆ ಅವುಗಳಿಗೆ ಕ್ರಮವಾಗಿ ಸಂಪುಟಸಂಖ್ಯೆಯನ್ನು ನೀಡಲಾಗಿದೆ. ಈ ಪ್ರಕಟಣೆಯಿಂದಾಗಿ ಅವುಗಳು ವ್ಯಾಪಕವಾಗಿ ಸಾಮಾನ್ಯರ ಬಳಿ ಹೋಗುವಂತಾಯಿತು.

ಆ ಮುಂದೆ, ಸರ್ಕಾರವು ತಾನು ಪ್ರಕಟಿಸಿದ್ದ ವಚನಗಳನ್ನೆಲ್ಲ ಅಂತರ್ಜಾಲದಲ್ಲಿ ಹಾಕುವ ಮೂಲಕ ಅವುಗಳ ಲಭ್ಯತೆಯನ್ನು ವಿಶ್ವವ್ಯಾಪಿಯಾಗಿ ಮಾಡಿದುದು ವಚನ ಸಂಪಾದನೆ–ಪ್ರಕಟಣೆಗಳ ದೃಷ್ಟಿಯಿಂದ ಮತ್ತೊಂದು ಮಹತ್ತರ ಬೆಳವಣಿಗೆ. ಆನಂತರ ವಿವಿಧ ದೃಷ್ಟಿಕೋನದಿಂದ ವಚನಗಳನ್ನು ಅಂತರ್ಜಾಲದಲ್ಲಿ ಅಳವಡಿಸುವ ಕೆಲಸವನ್ನು ಅನೇಕ ಮಂದಿ ಮಾಡಿದ್ದಾರೆ. ಆದರೆ ಇವುಗಳಲ್ಲಿ ಪಾಠಾಂತರಗಳಿಲ್ಲದ್ದರಿಂದ ಪಾಠಸಂಶೋಧನೆಗೆ ಅಷ್ಟೊಂದು ಸಹಾಯಕವಾಗುವುದಿಲ್ಲ.

ಕಾಲಕಾಲಕ್ಕೆ, ಅನೇಕರು ವಿವಿಧ ವಚನಕಾರರ 'ಪದಪ್ರಯೋಗ ಕೋಶ'ಗಳನ್ನು ರಚಿಸಿದ್ದಾರೆ. ಆದರೆ ಅವರು ಎಷ್ಟರಮಟ್ಟಿಗೆ ಮೂಲಪಾಠಗಳ ಕಡೆ ಗಮನ ಹರಿಸಿದ್ದಾರೋ ಯಾರೂ ಗಮನಿಸಿಲ್ಲ; ಜೊತೆಗೆ, ಏಕವ್ಯಕ್ತಿ ಸಾಹಸಗಳಲ್ಲಿ ಈ ಕಾರ್ಯವೂ ನಡೆಯಬೇಕೆಂದು ನಿರೀಕ್ಷಿಸುವುದು ಸಮಂಜಸವೂ ಅಲ್ಲ. ಈ ಸರಣಿಯಲ್ಲಿ, ಸಂಗಮೇಶ ಸವದತ್ತಿಮಠರ ಈಚಿನ ಹದಿನೈದು 'ವಿಷಯ ವಚನ ಸಂಪುಟಗಳು' ಒಂದು ಮಹತ್ವದ ಮತ್ತೊಂದು ಸಾಹಸವೆನ್ನಿಸಿಕೊಂಡಿದೆ. ಈ ಸಂಪುಟಗಳ ಸ್ವರೂಪದ ಮುಖ್ಯಾಂಶಗಳೆಂದರೆ; (೧) ವಿಷಯಗಳನ್ನು ಅಕಾರಾದಿಯಾಗಿ ವಿಂಗಡಿಸಿ ಕ್ರಮವಾಗಿ ಹದಿನೈದು ಸಂಪುಟಗಳಲ್ಲಿ ಜೋಡಿಸಿ ಕೊಟ್ಟಿರುವುದು; (೨) ಪ್ರತಿ ವಿಷಯದ ಆರಂಭದಲ್ಲಿ ವಿಷಯಸೂಚಕ ಶಬ್ದದ ಸ್ವರೂಪ, ಅದರ ಸಾಮಾನ್ಯಾರ್ಥ, ವಿವಿಧ ವಚನಕಾರರು ಅದನ್ನು ಬಳಸಿರುವ ರೀತಿಯ ವಿವೇಚನೆ, ಮತ್ತು (೩) ಅಲ್ಲಮಪ್ರಭು, ಬಸವಣ್ಣ ಮತ್ತು ಚೆನ್ನಬಸವಣ್ಣನವರ ವಚನಗಳನ್ನು ಮೊದಲಿಗಿತ್ತು ಆನಂತರ ಉಳಿದ ವಚನಕಾರರನ್ನು ಅಕಾರಾದಿ ಕ್ರಮದಲ್ಲಿ ಜೋಡಿಸಿ ಉಲ್ಲೇಖಗಳನ್ನಿತ್ತಿರುವುದು. ಅವರು ಇತರ ವಿದ್ವತ್ ಆವೃತ್ತಿಗಳನ್ನು ಬಳಸಿಕೊಂಡಿರುವರಾದರೂ, ತಮ್ಮ ಈ ಸಂಪುಟಗಳಿಗೆ ಸರ್ಕಾರದ ಜನಪ್ರಿಯ

ಆವೃತ್ತಿಯನ್ನು ಮುಖ್ಯವಾಗಿ ಆಧರಿಸಿರುವುದರಿಂದ, ವಚನಗಳ ಪಾಠಗಳ ಕಡೆ ಅವರು ಎಷ್ಟು ಗಮನ ಹರಿಸಿರುವರೋ ನಾನರಿಯೆ.

ಈವರೆಗೆ ವಚನಗಳ ಸಂಪಾದನೆಯ ಮುಖ್ಯ ಘಟ್ಟಗಳನ್ನು ಗುರುತಿಸಿದ್ದಾಯಿತು. ಅಲ್ಲಿಗೆ ಎಲ್ಲವೂ ಮುಗಿಯಿತು ಎಂದು ಹೇಳುವಂತಿಲ್ಲ. ಇನ್ನೂ ಅನೇಕ ಬಗೆಯಲ್ಲಿ ವಚನಸಾಹಿತ್ಯ ಸಂಪಾದನ ಕಾರ್ಯ ನಡೆಯಬಹುದು. ಉದಾಹರಣೆಗೆ, ಈಚೆಗೆ ಮೌಖಿಕ ಸಾಹಿತ್ಯ ಸಂಪಾದನೆಯು ಬರಹರೂಪದ ಸಾಹಿತ್ಯ ಸಂಪಾದನೆಗಿಂತ ಭಿನ್ನವೆಂದೂ, ಹೆಚ್ಚು ಮಹತ್ವದ್ದೆಂದೂ, ಮೂಲಪಾಠಕ್ಕಿಂತ ಅಲ್ಲಿ ಕಾಣಬರುವ ವಿವಿಧ ಪಾಠಗಳು ಬೇರೆ ದೃಷ್ಟಿಯಿಂದ ಅಧ್ಯಯನಯೋಗ್ಯವೆಂದೂ ಒಂದು ವಾದ ಬೆಳೆದಿದೆ. ನಾಡಿನ ಬೇರೆ ಬೇರೆ ಕಡೆಗಳಲ್ಲಿ ಮನೆ–ಮಠಗಳಲ್ಲಿ ಮೌಖಿಕ ರೀತಿಯಲ್ಲಿ ವಚನಗಳನ್ನು ಹೇಳುವ ಪರಿಪಾಟ ಉಳಿದುಬಂದಿದ್ದರೆ ಅವುಗಳನ್ನು ರೆಕಾರ್ಡ್ ಮಾಡಿಕೊಂಡು ಬರವಣಿಗೆಯಲ್ಲಿ ಯಥಾವತ್ತಾಗಿ ಪ್ರಕಟಿಸಿ, ಭಿನ್ನ ಪಾಠಗಳ ಆಶಯವನ್ನು ಅಭ್ಯಾಸ ಮಾಡಬಹುದೇನೋ. ಹೇಗೆ ಇಂಗ್ಲಿಷ್ ಬಲ್ಲ ಎಲ್ಲ ಕ್ಯಾಥೊಲಿಕ್ ಕ್ರೈಸ್ತರು ಪ್ರಪಂಚದಾದ್ಯಂತ ಬೈಬಲ್‌ನ ಅಧಿಕೃತ ಇಂಗ್ಲಿಷ್ ಆವೃತ್ತಿಯನ್ನೇ ಅನುಸರಿಸುವರೋ, ಅಂತೆಯೆ ಎಲ್ಲ ಲಿಂಗಾಯತರು ಅನುಸರಿಸುವ ಅಥವಾ ಅನುಸರಿಸಬೇಕಾದ ವಚನಗಳ ಆಯ್ಕೆಯನ್ನೂ, ಅಂಥ ವಚನಗಳ ಅಧಿಕೃತ ಪಾಠಗಳನ್ನೂ ನಿಷ್ಕರ್ಷಿಸಬೇಕೆಂದು ಡಾ। ಗುಂಜಾಳರು ಈಚೆಗಿನ ತಮ್ಮ ಕೃತಿಯೊಂದರಲ್ಲಿ ಸೂಚಿಸಿದ್ದಾರೆ. ಆದರೆ ಇದನ್ನು ಮಾಡುವವರು ಯಾರು? ಹೇಗೆ? ಎಂಬ ಪ್ರಶ್ನೆಗಳು ಅದನ್ನಷ್ಟು ಸುಲಭವಾಗಿಸುವುದಿಲ್ಲ. ಅವರಿಗೆ ಮಾದರಿಯಾಗಿರುವುದು ಬೈಬಲ್‌ನ ಅಧಿಕೃತ ಭಾಷಾಂತರ (ಕಿಂಗ್ ಜೇಮ್ಸ್ ವರ್ಷನ್). ಜೇಮ್ಸ್ ದೊರೆಯು ತನ್ನ ಕಾಲದಲ್ಲಿ ಅನೇಕ ವಿದ್ವಾಂಸರ ಸಮಿತಿಗಳನ್ನು ರಚಿಸಿ, ಅನುವಾದಿಸಿ, ಪರಿಶೀಲಿಸಿ ಸರ್ವಸಮ್ಮತಕ್ಕೆ ಬಂದು ಮಾಡಿರುವ ಪ್ರಯತ್ನಕ್ಕೆ ದೊರೆ ಮತ್ತು ಚರ್ಚ್ ಎರಡರ ಒಪ್ಪಿಗೆಯನ್ನೂ ಪಡೆದು ಅದನ್ನು ಬಳಕೆಗೆ ತರಲಾಯಿತು. ಯಾರ ಯಾರ ಎಷ್ಟೆಷ್ಟು ವಚನಗಳನ್ನು, ಯಾವ ಆನುಪೂರ್ವಿಯಲ್ಲಿ, ಒಟ್ಟಾರೆ ಎಷ್ಟು ವಚನಗಳನ್ನು ಸೇರಿಸಿಕೊಳ್ಳಬೇಕು, ಅದರ ಸಿದ್ಧತೆಗೆ ಯಾರಿರಬೇಕು, ಆ ಕೆಲಸವೇನಾದರೂ ಮುಗಿದರೆ ಯಾರು ಅದಕ್ಕೆ ಅಧಿಕೃತತೆಯ ಮುದ್ರೆ ಒತ್ತಬೇಕು ಮತ್ತು ಅದನ್ನು ಅನುಸರಿಸಬೇಕೆಂದು ಯಾರಿಗೆ ಹೇಳುವುದು ಎಂಬ ಅಸಂಖ್ಯ ಪ್ರಶ್ನೆಗಳು ಉದ್ಭವಿಸುತ್ತವೆ. ನನಗನ್ನಿಸುವ ಮಟ್ಟಿಗೆ ಈ ಕೆಲಸ ಅಸಾಧ್ಯ. ದೊರೆಯ ರಾಜಾಧಿಕಾರ ಒಂದೆಡೆ, ಚರ್ಚ್‌ನ ಧರ್ಮಾಧಿಕಾರ ಮತ್ತೊಂದೆಡೆ ಸೇರಿ ಬೈಬಲ್ ಅನ್ನು ಸಿದ್ಧಗೊಳಿಸಿ ಜಾರಿಗೆ ತಂದ ರೀತಿಯಲ್ಲಿ ಮಾಡುವುದಕ್ಕೆ ಇಲ್ಲಿ ಒಂದು ಮಠವಿಲ್ಲ, ಯಾವ ರಾಜ್ಯಾಧಿಕಾರವೂ ಹಾಗೆ ಮಾಡಲಾಗದು. ಆದರೆ ಒಂದು ರೀತಿಯಲ್ಲಿ, ಮೂರು ಬಾರಿ ಪರಿಷ್ಕರಣಗೊಂಡು ಗೂಳೂರು ಸಿದ್ಧವೀರಣ್ಣೊಡೆಯರ ಪರಿಷ್ಕರಣದ ನಂತರ ಮತ್ತೆ ಅದಕ್ಕೆ ಒಳಗಾಗದ್ದರೂ ನಾಲ್ಕನೆಯ ಪ್ರಯತ್ನವನ್ನು ಸಮುದಾಯವು ಬಹುತೇಕ ಒಪ್ಪಿರುವುದರಿಂದ ಅದೇ ಅಧಿಕೃತ ಎಂದು ಭಾವಿಸಬಹುದು.ಜೊತೆಗೆ ಸಮಿತಿಯ ಬದಲು ಮೂವರು ಮಠಾಧಿಪತಿಗಳು ಕಾಲಕಾಲಕ್ಕೆ 'ಶೂನ್ಯಸಂಪಾದನೆ'ಯನ್ನಾಗಲೇ ಪರಿಷ್ಕರಣೆ ಮಾಡಿ ಧಾರ್ಮಿಕ ಅನುಮೋದನೆಯನ್ನು ನೀಡಿದ್ದಾರೆ.

ಈ ಸಂದರ್ಭದಲ್ಲಿ ಮತ್ತೊಂದು ಪ್ರಯತ್ನವನ್ನು ಪರಿಗಣಿಸಬಹುದು. ಕೆಲವು ವಿದ್ವಾಂಸರು ವಚನಗಳನ್ನು 'ಓದುವ' ವಿಶಿಷ್ಟವೂ ಸೂಕ್ಷ್ಮವೂ ಆದ ದೃಷ್ಟಿಕೋನದಿಂದಾಗಿ ವಚನಗಳ ಸಂಪಾದನೆ ಎಂದರೆ ಕೇವಲ ಬರಹದ ಪಾಠ ಮಾತ್ರವಲ್ಲ, ಅವುಗಳನ್ನು ಓದುವ ಪರಿ ಎಂಬ ಭಾವನೆಯೂ ಬೆಳೆದು ಬಂದಿದೆ; ಅದು ಮುಂದುವರಿಯ ಬಹುದೇನೋ. ಇದಕ್ಕೆ ನಾನು ಗಮನಿಸಿರುವ ಎರಡು ಪ್ರಯತ್ನಗಳನ್ನು ನಿದರ್ಶನವಾಗಿ ಉಲ್ಲೇಖಿಸಬಹುದು. ಒಬ್ಬ ಸ್ವಾಮಿಗಳು ಬಸವಣ್ಣನ 'ಇವನಾರವ ಇವನಾರವ, ಇವನಾರವ ಎನಿಸದಿರಯ್ಯಾ, ಇವ ನಮ್ಮವ, ಇವ ನಮ್ಮ ಇವ ನಮ್ಮವ ಎಂದೆನಿಸಯ್ಯಾ' ಎಂಬ ಸಾಲುಗಳನ್ನು 'ಇವನ್ಹಾರವ ಇವನ್ಹಾರವ, ಇವನ್ಹಾರವ ಎನಿಸದಿರಯ್ಯಾ, ಇವ ನಮ್ಮವ, ಇವ ನಮ್ಮ ಇವ ನಮ್ಮವ ಎಂದೆನಿಸಯ್ಯಾ' ಎಂಬಂತೆ ಹೇಳಿದುದನ್ನು ಕೇಳಿದ್ದಾನೆ. ಬಸವಣ್ಣ ತನ್ನ ಬ್ರಾಹ್ಮಣಮೂಲದ ಬಗ್ಗೆ ಮುಜುಗರಕ್ಕೊಳಗಾಗಿರುವುದು ಆತನ ಅನೇಕ ವಚನಗಳಲ್ಲಿ ಸ್ಪಷ್ಟವಾಗಿದೆ. ಹಾಗಾಗಿ ಈ ಓದುವ ರೀತಿ ಪರಿಗಣನಾರ್ಹ ಎನಿಸುತ್ತದೆ. ಅಂತೆಯೇ, ಬಸವಣ್ಣನ ಇನ್ನೊಂದು ವಚನದ ಆರಂಭದ 'ಕೊಲುವನೆ ಮಾದಿಗ, ಹೊಲಸು ತಿಂಬುವನೇ ಹೊಲೆಯ' ಸಾಲುಗಳನ್ನು ಅಸರ್ಟಿವ್ (ಹೇಳಿಕೆ) ರೂಪದಲ್ಲಿರಿಸದೆ, ಒಬ್ಬ ವಿದ್ವಾಂಸರು, 'ಕೊಲುವನೆ ಮಾದಿಗ? ಹೊಲಸು ತಿಂಬುವನೇ ಹೊಲೆಯ?' ಎಂಬ ಇಂಟೆರಾಗೆಟಿವ್ (ಪ್ರಶ್ನಾರ್ಥಕ) ಸಾಲುಗಳಾಗಿ ಓದುವುದನ್ನೂ ಅವರ ಒಂದು ಲೇಖನದಲ್ಲಿ ಹೇಳಿರುವುದನ್ನು ನೋಡಿದ್ದೇನೆ. ಆಗ ಈ ವಚನದ ಅರ್ಥವು ಬದಲಾಗುತ್ತದೆ. ಸಾಲನ್ನು ಒಂದು ಹೇಳಿಕೆಯಂತೆ ಪರಿಗಣಿಸಿದರೆ ಮಾದಿಗ ಕೊಲ್ಲುತ್ತಾನೆ, ಹೊಲೆಯ ಹೊಲಸು ತಿನ್ನುತ್ತಾನೆ ಎಂಬರ್ಥ ಹೊರಡಬಹುದು. ಆದರೆ ದಲಿತರಲ್ಲಿ ತನ್ನ ಹುಟ್ಟಿನ ಮೂಲವನ್ನು ಗುರುತಿಸಿಕೊಂಡು ತನ್ನ ಕುಲದ ಹಮ್ಮನ್ನು ತುಳಿದುಕೊಳ್ಳುವ ಬಸವಣ್ಣನ ಮನಸ್ಸಿನಲ್ಲಿ ಇಂಥ ಅರ್ಥ ಇರಲು ಸಾಧ್ಯವಿಲ್ಲ. ಈ ಎರಡು ಸಾಲುಗಳನ್ನು ಪ್ರಶ್ನಾರ್ಥಕವಾಗಿ ಮಾಡಿಕೊಂಡರೆ, ಮಾದಿಗ ಕೊಲ್ಲುತ್ತಾನೆಯೇ, ಇಲ್ಲ; ಹೊಲೆಯ ಹೊಲಸು ತಿನ್ನುವವನೇ, ಅಲ್ಲ–ಅವರೂ ಇತರರಂತೆ ಮನುಷ್ಯರು, ಹೀಗಾಗಿ ಇತರರಿಗೆ ಸಮಾನರು ಎಂಬ ಅರ್ಥ ಹೆಚ್ಚು ಸ್ಫುಟವಾಗುತ್ತದೆ. ಇಂತಹ ಇನ್ನೂ ಅನೇಕ ಓದಿಗಳು ನಡೆದು ವಚನಗಳಿಗೆ ಮತ್ತಷ್ಟು ಆಳವಾದ ಅರ್ಥಗಳು ಮೂಡಲು ಸಾಧ್ಯ. ಎಷ್ಟೇ ಆಗಲಿ, ನಾವು ತಾನೇ ಬರವಣಿಗೆಯಲ್ಲಿನ ಅರ್ಥ ಕಾಣಬೇಕು. ಅಲ್ಲದೆ, ವಚನ ಸಂಪಾದನೆಯ ಇನ್ನೂ ಅನೇಕ ಬಗೆಯ ಪ್ರಯತ್ನಗಳು ಮುಂದೆ ಒದಗಿ ಬರಬಹುದು.

■

ಜ್ಞಾನನಿಧಿ ಪ್ರಾಚೀನ ಹಸ್ತಪ್ರತಿಗಳು ಹಾಗೂ ದುರವಸ್ಥೆ*

◆

ಡಾ. ಕೆಳದಿ ಗುಂಡಾ ಜೋಯಿಸ್

ಜವಾಹರ್‌ಲಾಲ್ ನೆಹರೂ ಹಾಗೂ ಐನ್‌ಸ್ಟೀನ್ ಭಾರತದ ಹಸ್ತಪ್ರತಿ ಜ್ಞಾನ ಕುರಿತು–

One of our major misfortunes is that we have lost so much of the world's ancient literatures in Greece, in India and elsewhere. Probably an organized search for old manuscripts in the religious institutions, monasteries and individuals would yeald rich results. The critical examinations of old manuscripts, their research, publication and translation we have to do in India. when we succed in breaking through our shackles and can function for ourselues, such a study is bound to throw flood of light on many phases of history, the social and scientific background behind historic events and changing ideas.

ಪುರಾತನ ಜ್ಞಾನಭಂಡಾರಗಳಿಂದ ಕೂಡಿದ ಹಸ್ತಪ್ರತಿ ಮಹತ್ವವನ್ನು ಸಾರಿದ್ದಾರೆ, ರಕ್ಷಣೆ–ಅಧ್ಯಯನಾದಿಗಳಿಲ್ಲದೆ ಹಸ್ತಪ್ರತಿಗಳು ಸೊರಗುತ್ತಿವೆ. ವೇದ, ಪುರಾಣ, ಕಾವ್ಯ, ಗಣಿತ, ಖಗೋಳ, ಜೋತಿಷ, ರಸಾಯನಶಾಸ್ತ್ರ, ಭೌತಶಾಸ್ತ್ರ, ಖನಿಜ, ವೈದ್ಯ, ಸಸ್ಯಶಾಸ್ತ್ರ, ಹಸ್ತಪ್ರತಿಗಳು ಸಂಶೋಧನೆಗೆ ಗೋಳಿಡುತ್ತಿವೆ ಜ್ಞಾನನಿಧಿ ನಮ್ಮ ಋಷಿಮುನಿಗಳಿಗೆ ಯುದ್ಧಾಭ್ಯಾಸ ಕಲೆ ಹೊಸದಾಗಿರಲಿಲ್ಲ. ಇದಕ್ಕೆ ಅಲೆಗ್ಸಾಂಡರ್ – ಮಾಕ್ಸ್‌ಮುಲ್ಲರ್ ಸಂಶೋಧನೆಗಳೇ ಸಾಕ್ಷಿ, ಲಲಿತ ವಿಸ್ತರ (ಗೌತಮಬುದ್ಧನ ಕಾಲದ)ದಲ್ಲಿ ಕಂಡುಬಂದಂತೆ, ೬೪ ಲಿಪಿಗಳಲ್ಲಿ ಹಲವಾರು ಲಿಪಿ ಗ್ರಂಥಗಳ ಹಸ್ತಪ್ರತಿಗಳು ವಿದೇಶಗಳಲ್ಲಿವೆ.

೧೯೫೪ರ ಗ್ರೇಟ್ ಬ್ರಿಟನ್ ಮತ್ತು ಐರ್ಲಂಡ್‌ನ ಜೆ.ಡಿ. ಪಿಯರ್‌ಸನ್ ಹಸ್ತಪ್ರತಿ ಗಣತಿಯಂತೆ ವಿದೇಶಗಳಲ್ಲಿ ೫೭೬೯೮ ಹಸ್ತಪ್ರತಿಗಳು ಕಂಡುಬರುತ್ತವೆ,

* ಕುವೆಂಪು ವಿ.ವಿ.ದ ವಿಚಾರಸಂಕಿರಣದಲ್ಲಿ ಮಾಡಿದ ಉದ್ಘಾಟನಾ ಭಾಷಣ.

ಸ್ವಾತಂತ್ರ್ಯಪೂರ್ವದಲ್ಲಿ ಭಾರತದ ವಿಶ್ವವಿದ್ಯಾಲಯಗಳಲ್ಲಿ ೨,೬೩೬೩೭, ರಾಜ್ಯಸರಕಾರಗಳಲ್ಲಿ ೧,೪೭,೨೪ ಸಂಸ್ಥೆಗಳಲ್ಲಿ ೧,೨೧,೩೪೮ ಹಸ್ತಪ್ರತಿಗಳಿದ್ದು, ಕೇವಲ ೧೦% catalogue ಮಾತ್ರ ಕಂಡುಬರುತ್ತವೆ. KMRC ಯೋಜನೆಯಡಿಯಲ್ಲಿ ಕೇವಲ ಒಂದೆರಡು ತಾಲ್ಲೂಕುಗಳಲ್ಲಿಯೇ ೨ ಲಕ್ಷಕ್ಕೂ ಮೇಲ್ಪಟ್ಟು ನಾವು ಸಾದರಪಡಿಸಿದ Mamus Data ದೇಶಕ್ಕೇ ಮಾದರಿಯಾದುದು. ನೇಪಾಳ ಭಾರತದಲ್ಲಿದ್ದಾಗ ದೇಶಕ್ಕೆ ಮಾದರಿಯಾದುದು. ನೇಪಾಳ ಭಾರತದಲ್ಲಿದ್ದಾಗ ರಾಜೇಂದ್ರಲಾಲ್ ಮಿತ್ರರವರು ಮಿಲಿಟರಿ ಕ್ಯಾಪ್ಟನ್ J. Waterhouse ರವರಿಗೆ ದಿ. ೧೫.೨.೧೮೮೫ರಂದು ಸಲ್ಲಿಸಿದ ಹಸ್ತಪ್ರತಿಗ ಸಂರಕ್ಷಣ ವರದಿ ಮುಂದಿನ ಪೀಳಿಗೆಗೆ ದಾರಿದೀಪವಾಗಿದೆ.

ಚೀನಾ ದೇಶದ ಹಸ್ತಪ್ರತಿ ಅಧ್ಯಯನ ಹಾಗೂ ಸಂಗ್ರಹಣೆ


ಚೀನಾದ ಹಸ್ತಪ್ರತಿ ಸಂಗ್ರಹಣೆ ಹಾಗೂ ಅಧ್ಯಯನ ಕುರಿತು ರೋಚಕ ಸಂಗತಿಗಳಿವೆ. ಬ್ರಿಟಿಷ್ ಅಧಿಕಾರಿ ಜನರಲ್ ಪೊವೆಲ್‌ನು ಚೀನಾದ ಡನ್‌ಹ್ಯಾಂಗ್‌ನನ್ನು ಬಂದೀಖಾನೆಯಿಂದ ಬಿಡಿಸಲು ಗುಹೆಯಂತಿದ್ದ ಬಂದೀಖಾನೆಯ ಬಾಗಿಲನ್ನು ತೆಗೆಸಿ ಅಲ್ಲಿರುವ ವಿಪುಲ ಸಂಸ್ಕೃತ ಹಸ್ತಪ್ರತಿಗಳನ್ನು ಕಂಡು ಆಶ್ಚರ್ಯಪಟ್ಟನು. ೬ನೇ ಶತಮಾನದಿಂದಲೂ ಕೂಡಿದ್ದ ೫೦,೦೦೦ ಹಸ್ತಪ್ರತಿಗಳನ್ನು ಬ್ರಿಟಿಷ್ ಪುರಾತತ್ವವಿದ Aurel Stein ೧೯೦೭ರಲ್ಲಿ ಡನ್ ಹ್ಯಾಂಗ್‌ನಲ್ಲಿ ಸಂಗ್ರಹಿಸಿದನು. ಇದಲ್ಲದೆ Dunhuang ಮುಖಾಂತರ ಭಾಷೆ ಹಾಗೂ ಲಿಪಿಗಳನ್ನು ಹಸ್ತಪ್ರತಿಗಳಲ್ಲಿ ಅವಲೋಕಿಸದೆ ೯೦೦೦ ಹಸ್ತಪ್ರತಿಗಳು ವಿಪುಲ ಪರಿಶ್ರಮದಿಂದ ಸಂಗ್ರಹಿಸಲಾಯಿತು. ಇವುಗಳೆಲ್ಲವೂ ಲಂಡನ್‌ನಲ್ಲಿವೆ. ಕರ್ನಾಟಕದಲ್ಲಿ ಸಂಚರಿಸಿದ ಫಾಹಿಯಾನ್-ಹ್ಯೂಯೆನ್‌ತ್ಸಾಂಗ್ ಕ್ರಿ.ಶ. ೬೩೦-೬೪೪ ಕೊಂಡೊಯ್ದ ಹಸ್ತಪ್ರತಿಗಳೂ ಇದರಲ್ಲಿ ಸೇರಿವೆ.

ಕ್ರಿ.ಶ. ೫೬೦ರಿಂದ ೧೨೭೯ರವರೆಗೆ ಆಳಿದ ಚೀನಾದ ದೊರೆಗಳಲ್ಲಿ Sir Tang ಮತ್ತು ಸುಂಗನು ಹಸ್ತಪ್ರತಿಗಳ ಅಧ್ಯಯನಕ್ಕಾಗಿಯೇ ನಿರ್ಮಿಸಿದ ಕಟ್ಟಡ, ಉದ್ಯೋಗ ಮುಂತಾದ ಯೋಚನೆಗಳು ಸರಕಾರಕ್ಕೆ ಕಣ್ಣು ತೆರೆಸುವಂತಿವೆ.

The chief translators job was to dictate the Indian text. To his left sat the assistant translator of philosophy with whom the chief translat or discussed the meaning of the orginal sanskrit text. To the right of the chief translator sat the assistant translator of literature. He discussed with the chief translator grammatical and textual questions. The fourth chair was occupied by a sanskrit scholar and recorder who listaned to the Sanskrit reading of the chief translator and recorded the sanskrit text in chinese transcription but the language was still sanskrit. In the fifth seat sat the assistant translator cum scribe who translated sanskrit words into chinese, The literary editor occupied the sixth chair. His job was to edit the literary translation into sentenes from the grammatical point of view.

The work of translation was done according to the principes of division of labour. Some studied the original text; some studied the meaning ; some beautified the style ; some corected the errors ; and some supervised the whole work. Thus the work translation was caried on with great care and caution usually under the auspices of the emperrors themselves.

ಇದು ಗುರುಕುಲ ಹಾಗೂ ಸಹೃದಯ ಗೋಷ್ಠಿ ಮುಖಾಂತರ ಅಧ್ಯಯನಾದಿಗಳಿಗೆ ವೈಜ್ಞಾನಿಕ ರೀತಿಯಲ್ಲಿ ತಳಹದಿಯಾಗಿದೆ. ಕೆಳದಿ ಆಸ್ಥಾನದಲ್ಲಿಯೂ ಇಂತಹ ಮಾದರಿ ಕಂಡುಬರುತ್ತದೆ. ಪಾಂಡಿಚೇರಿಯ The Francise-de Indology ಯವರು (ಡಾ. ಗ್ರಿಮಾಲ್) ಅಲ್ಲಿಯ ಅಧ್ಯಯನ ಕ್ರಮವನ್ನು ನನಗೆ ತೋರಿಸಿದ್ದರು. (ಸಿದ್ಧಪಡಿಸಿದ ನಕ್ಷೆ ನೋಡಿರಿ).



ಚೀನೀಯರ ವೇದಾಧ್ಯಯನ ಕುರಿತ ಪ್ರಕಟಣೆ

July 28 PTI

Closeted in his study at Shanghai, Prof Huang xinchuang ponders wheter the vedas sustained the chinese dynasties. The Chief Editor of chinese encylopedia now being compiled, Prof Huang told visiting researchers of the institute of oriental study from Thane, Recently that vertually every chinese dynasty got the vedas translated from sanskrit to classical chinese, "Manuscripts on yoga and 'Ayurveda' including pathanjalis 'yoga sutra' and the 'sushsruta' and 'Charaka Samhita' were similarly translated, the Prof. said and claimed that over 5000

such manuscripts are availble in china, serveral of them predating manuscripts extant in India.

ಇದಕ್ಕೆ ಭಾರತೀಯ ವಿದ್ವಾಂಸರನ್ನೂ ಆಹ್ವಾನಿಸಿದ್ದರು. ಭಾರತದಲ್ಲಿರುವ ಶೃಂಗೇರಿ ಶ್ರೀ ವಿದ್ಯಾಶಂಕರ ದೇವಾಲದಲ್ಲಿ ಸುಮಾರು ೨೦ಕ್ಕೂ ಮೇಲ್ಪಟ್ಟು ಹಸ್ತಪ್ರತಿ ಅಧ್ಯಯನ ಕುರಿತ ಶಿಲ್ಪವು ಸುಮಾರು ೯ನೇ ಶತಮಾನಕ್ಕೆ ಸೇರಿದೆ. ಫ್ರೆಂಚ್‌ನಲ್ಲಿಯೂ ರಾಮಾಯಣ ಪ್ರಕಟವಾಗಿದೆ.

ಭಾರತದಲ್ಲಿರುವ ಹಸ್ತಪ್ರತಿಗಳು

ಸಿಪಾಯಿದಂಗೆ ಪೂರ್ವದಲ್ಲಿ ಟಿಪ್ಪುವನ್ನು ಸೋಲಿಸಿದ್ದ ಮ್ಯಾಥ್ಯೂಸ್ ಕೆಳದಿಯ ರಾಜಧಾನಿಯಾಗಿದ್ದ ನಗರದ ಹೆಸರಿನಲ್ಲಿ ಶಿವಮೊಗ್ಗದಲ್ಲಿ ಮುಖ್ಯಾಧಿಕಾರಿಯಾಗಿದ್ದನು. ದಿವಾನ್ ಪೂರ್ಣಯ್ಯನ ಮುಖಾಂತರ ಅಪರಿಮಿತ ಹಸ್ತಪ್ರತಿಗಳನ್ನು ಬಂಗಾಳ ಗೌರ್ನರ್ ಡೆವರೋಕ್ಸನು ಲಂಡನ್‌ಗೆ ಸಾಗಿಸಿದನು. ನಮ್ಮ ಮನೆತನದಲ್ಲಿದ್ದ "ಕೆಳದಿ ರಾಯಪದ್ಧತಿ"ಯೂ ಒಳಗೊಂಡಿತ್ತು. ಸ್ವೀಡನ್ ಲಂಡ್ ವಿಶ್ವವಿದ್ಯಾನಿಲಯದ ಪ್ರೊ. ನೀಲಾಂಬರ ಕಾಟಿರವರು ನನ್ನ ಮಾರ್ಗದರ್ಶನದಲ್ಲಿ ಯಳಂದೂರಲ್ಲಿದ್ದ ದಿವಾನ್ ಪೂರ್ಣಯ್ಯನಿಗೆ ಸೇರಿದ ಸಮಗ್ರ ಕಡತಗಳ ಮೈಕ್ರೋಫಿಲ್ಮ್‌ನಲ್ಲಿ ಅಳವಡಿಸಿದ್ದಾರೆ. ಇವುಗಳ ಅಧ್ಯಯನವೇ ಆಗಿರುವುದಿಲ್ಲ. ಕರ್ನಾಟಕ ರಾಜ್ಯ ಪತ್ರಾಗಾರದ ಸಂಸ್ಥಾಪಕ ಸದಸ್ಯನಾಗಿದ್ದು ನಾನು ವಿಧಾನಸೌಧ ಆದಿಯಾಗಿ ಕರ್ನಾಟಕದ ನೂರಾರು ಅಧಿಕಾರಿಗಳಿಗೆ ವಿಧಾನಸೌಧದಲ್ಲಿ ಮೋಡಿ ಲಿಪಿ ತರಬೇತಿಯಿತ್ತುದೂ ಈಗ ಇತಿಹಾಸ. ಇದೇ ರೀತಿಯಲ್ಲಿ catalogue ನಿರ್ವಹಣೆಯಲ್ಲಿ ಪ್ರಪ್ರಥಮನಾಗಿದ್ದು ಹುಬ್ಬಳ್ಳಿ ೩೦೦೦ ಜಗದ್ಗುರು ಮಠದ ಹಸ್ತಪ್ರತಿಯನ್ನು ನಿರ್ವಹಿಸಿಕೊಟ್ಟುದಲ್ಲದೆ Mycrofilmಗೂ ನವದೆಹಲಿಯ IGNCA ದಿಂದ ದಾರಿ ಮಾಡಿಕೊಟ್ಟುದೂ ಈಗ ಇತಿಹಾಸ, ಆದರೆ ಈಗ ಅಲ್ಲಿ catalogue ನಂತೆ ಹಸ್ತಪ್ರತಿಗಳೇ ಇಲ್ಲ. Catalogue ಮುದ್ರಣಗೊಂಡು ಪ್ರಕಟವಾಗಿ ಒಳ್ಳೆಯ ವಿಮರ್ಶೆಯೂ ಆಗಿದೆ.

ವೈಜ್ಞಾನಿಕ ಹಸ್ತಪ್ರತಿಗಳು

ನಮ್ಮ ಹಿರಿಯರು ವೇದ, ಪುರಾಣ, ತತ್ತಶಾಸ್ತ್ರ, ಇತಿಹಾಸಗಳಲ್ಲದೆ ವಿಜ್ಞಾನದಲ್ಲಿಯೂ ಜ್ಞಾನಿಗಳಾಗಿದ್ದುದನ್ನು ಹಸ್ತಪ್ರತಿಗಳು ಉಲ್ಲೇಖಿಸಿವೆ, ಕ್ರಿ.ಪೂ. ೬೦೦೦ಕ್ಕೂ ಮುಂಚಿನ ಇಂಜಿನಿಯರಿಂಗ್, ವೈಮಾನಿಕ ಶಾಸ್ತ್ರ, ಗಣಿತ, ಭೌತಶಾಸ್ತ್ರ, ರಸಾಯನ ಶಾಸ್ತ್ರ, ಭೂಗೋಳ, ವೈದ್ಯ ಶಾಸ್ತ್ರ ಮುಂತಾದವು ಗೋಚರಿಸಿವೆ. Astronomy ಕುರಿತ ಗ್ರಹಲಾಘವವನ್ನು ಆಧಾರವಾಗಿಟ್ಟುಕೊಂಡು ಆರ್ಮಸ್ಟ್ರಾಂಗನು ಚಂದ್ರಲೋಕಕ್ಕೆ ಕಾಲಿರಿಸಿದ ದೂರ ಪ್ರಮಾಣವು, ಭಾರತೀಯರ ಜ್ಞಾನಕ್ಕೆ ಸಾಕ್ಷಿ. ಚೀನೀಯರು ಭಾರತೀಯ ಆಯುರ್ವೇದವನ್ನೇ ದೇಶಾದ್ಯಂತ ಅನುಸರಿಸುತ್ತಿದ್ದಾರೆ. ಬಿಹಾರ ಸಂಸ್ಕೃತ ವಿಶ್ವವಿದ್ಯಾಲಯ ಕುಲಪತಿ ಖ್ಯಾತ ಅಂತರರಾಷ್ಟ್ರೀಯ ವಿದ್ವಾಂಸ ಡಾ. ಕುಟುಂಬ ಶಾಸ್ತ್ರಿಗಳು ಪ್ರಕಟಿಸಿದ ವೈಜ್ಞಾನಿಕ ಹಸ್ತಪ್ರತಿಗಳ ವಿವರ ಇಂತಿದೆ.

ಕೇವಲ ಚೆನ್ನೈ ಮತ್ತು ಕೇರಳ ಮಾತ್ರ

Astronomy & Mathematics	936
Astrology	1574
Medicine	585
Veterinery Science	33
Chemistry	61
Physics, Musics Theory	82
Botany	8
Engnieering of Architecture	201
	3479
ಸಮೀಕ್ಷಾಧ್ಯಯನದಲ್ಲಿ ಕೇರಳ	98717
ತಮಿಳುನಾಡು	110035
	212221

ವೈಯಕ್ತಿಕ ಒಡೆತನದಲ್ಲಿ ಸುಮಾರು ೨ ಲಕ್ಷಕ್ಕೂ ಹೆಚ್ಚಾದ ಹಸ್ತಪ್ರತಿಗಳಿರುವುದಾಗಿ ಅಭಿಪ್ರಾಯಪಟ್ಟಿದ್ದಾರೆ.

ಇತರೆ ಹಸ್ತಪ್ರತಿಗಳು (KMRC ಸೇರಿ)

ವೈದ್ಯ ಚಿಂತಾಮಣಿ, ವೈದ್ಯ ನಿಘಂಟು, ಏಕಾಕ್ಷರ ನಿಘಂಟು (ಇದರ ೨೭ ಹಸ್ತಪ್ರತಿಗಳು ಗುಜರಾತಿನಲ್ಲಿವೆ), ಕೃಷಿ ಸಂಹಿತೆ, ರಸರತ್ನಾಕರ ಮನುಷ್ಯಾಲಯ (Chemistry), ಮನುಷ್ಯಾಲಯ ಚಂದ್ರಿಕಾ (Architecture) ಮನುಸ್ಮೃತಿ, ಶಿಲ್ಪಶಾಸ್ತ್ರ, ನಾಟ್ಯಶಾಸ್ತ್ರ, ತಾಂಬೂಲ ಚರ್ವಣೋಪನಿಷತ್, ಗಣಿತ ಮಹಾಭಾರತದ ಸರ್ಪಾಸ್ತ್ರ, ಬ್ರಹ್ಮಾಸ್ತ್ರ, ಪಾಶುಪತಾಸ್ತ್ರ, ಕೆಳದಿ ಇತಿಹಾಸ ಕುರಿತ (ಇಟಲಿಯಲ್ಲಿ) ಚಿತ್ರರಾಮಾಯಣ, ಇತ್ಯಾದಿ, ಗೀತಗೌರೀವರ (ಅಲಹಬಾದ್) ಹೃದಯಸೂತ್ರ ವಿಜಯಧಾರಿಣಿ (ಬರೋಡ) Japan ೭ನೇ ಶತಮಾನದ ಸ್ಕಾಂದಪುರಾಣ (ನೇಪಾಳ) ಇತ್ಯಾದಿ.

ಚೋಳರ ಕಾಲದಲ್ಲಿ ಅರಮನೆಗೆ ಸೇರಿದಂತೆ ತಾಳೆಯೋಲೆ ಸಂಗ್ರಹವೊಂದಿತ್ತು. ಕ್ರಿ.ಶ. ೧೬೩೭ರಲ್ಲಿ ಕೆಳದಿ ಅರಮನೆಗೆ ಭೇಟಿಯಿತ್ತ ಇಂಗ್ಲೆಂಡ್ ಪ್ರವಾಸಿ ಪೀಟರ್ ಮಂಡಿಯು ತಾನು ಕಣ್ಣಾರೆ ಕಂಡ ಹಸ್ತಪ್ರತಿ ಭಾಂಡಾಗಾರವನ್ನು ತನ್ನ old english ನಲ್ಲಿ–

All my beeing at Eecary I was att the kings secretarics, where in his house, I say many hundred (I may say thousands) of those written palme leaves, beeing very long and narrow, handsomely rouled uppe, those againe tied into bundles, hung uppe in order about his roome or office, soe thatt hee may (not properly) bee styled Master of the Roules).

ಹೀಗೆ ಉಲ್ಲೇಖಿಸಿದ್ದು ಗಮನಾರ್ಹವಾಗಿದೆ. ಇದರ ಮಾದರಿ ನನಗೆ ಲಭಿಸಿದ್ದು ಕೆಳದಿ ವಸ್ತುಸಂಗ್ರಹಾಲಯದಲ್ಲಿದೆ. ಇಟಲಿಯಲ್ಲಿರುವ ಡೆಲ್ಲವಲ್ಲೆಯ ಹಸ್ತಪ್ರತಿ ರಾಜಧಾನಿಯ ಕೋಟೆ ಉತ್ಖನನಕ್ಕೆ ಮಾರ್ಗದರ್ಶಿಯಾಗಬಲ್ಲುದು.

ಅಮೂಲ್ಯ ಹಸ್ತಪ್ರತಿಗಳು

ಪರ್ಷಿಯಾ ಲಿಪಿಯಲ್ಲಿರುವ ರಾಮಾಯಣ, ಮಹಾಭಾರತ ಹಸ್ತಪ್ರತಿಗಳು ಹೈದರಾಬಾದ್ ಸರ್ ಸಾಲಾರ್‌ಜಂಗ್ ಮ್ಯೂಜಿಯಂನಲ್ಲಿವೆ. ಪರ್ಚನಿಯ ಮ್ಯೂಜಿಯಂನಲ್ಲಿರುವ ೧೬೭೦ ಹಸ್ತಪ್ರತಿಗಳಲ್ಲಿ ಒಂದು ಗರಿಯಲ್ಲಿರುವ ಮಹಾಭಾರತ ಹಸ್ತಪ್ರತಿ ಗಣನೀಯವಾದುದು. ಫ್ರೆಂಚ್ ಭಾಷೆಯಲ್ಲಿ ಪ್ರಕಟವಾದ ರಾಮಾಯಣವೂ ಗಣನೀಯ. ಪತ್ರಾಗಾರದ ಉನ್ನತ ಸಮಿತಿ ಸದಸ್ಯನಾಗಿದ್ದಾಗ ಸಂಗ್ರಹಿಸಿದ ರಾಬರ್ಟ್ ಸೀವೆಲ್ ಸ್ವಹಸ್ತಾಕ್ಷರ ಹಸ್ತಪ್ರತಿ Never to forgotten empire, ಶಿವಾಜಿ ಹುಟ್ಟಿದ ತಾಲ್ಲೂಕಿನಲ್ಲಿದ್ದ ಕನ್ನಡ ಆಡಳಿತಾತ್ಮಕ ದಾಖಲೆಗಳು ಮುಂತಾದವು ಪತ್ರಾಗಾರದಲ್ಲಿವೆ. ಇವುಗಳಲ್ಲಿ ಗೋಕರ್ಣದ ಹಾಗೂ Nagar Division Records ಗಳೂ ಸೇರಿವೆ. ಸರಕಾರಕ್ಕೆ ನಾನು ಸಲ್ಲಿಸಿದ್ದ ಗೋವಾ ಪರ್ತಗಾಳಿ ಮಠದ catalogue ಹಾಗೂ ಧರ್ಮಸ್ಥಳದ catalogue ಯಾವುದೋ ಬೀರುವಿನಲ್ಲಿ ಬಂದಿಯಾಗಿವೆ. ಬನಾರೆಸ್‌ನ ಕಾಶೀ ಮಠದಲ್ಲಿರುವ ಪಂಚತಂತ್ರ ಸಮಗ್ರ ಕನ್ನಡ ಹಸ್ತಪ್ರತಿಯು ಈಗ ಕೇರಳದಲ್ಲಿದೆ. (ಅಪ್ರಕಟಿತ) ವಿಜಯನಗರದ ಸೋಮನಾಥನ ನಾಟ್ಯ ಚೂಡಾಮಣಿ ಅಪ್ರಕಟಿತ ಹಸ್ತಪ್ರತಿ ಕುರಿತು ಉತ್ತರ ಭಾರತ ವಿಶ್ವವಿದ್ಯಾಲಯದಲ್ಲಿ ಮಹಾಪ್ರಬಂಧವಿದೆ. ಮುಂಬೈ ಹೆರಾಸ್ ಇನ್‌ಸ್ಟಿಟ್ಯೂಟ್ ಹಾಲೆಂಡ್ ಪತ್ರಾಗಾರಗಳಲ್ಲಿ ಕೆಳದಿ ಇತಿಹಾಸ ಕುರಿತ ಅಪ್ರಕಟಿತ ಹಸ್ತಪ್ರತಿಗಳು ವಿಪುಲವಾಗಿವೆ. ೧೮೪೯ರಿಂದಲೂ ಕೆಳದಿಯಲ್ಲಿ ವಾಸವಾಗಿರುವ ನಮ್ಮ ಹಿರಿಯರಿಂದ ಕೊಂಡೊಯ್ದ ಕೆಳದಿ ನೃಪವಿಜಯ ಓಲೆಗರಿ ಹಸ್ತಪ್ರತಿ ಲಂಡನ್‌ನಲ್ಲಿದೆ. ಇದರ ತುಂಡುಗರಿಯಲ್ಲಿರುವ ಉಪೋದ್ಘಾತ ನಮ್ಮಲ್ಲಿವೆ. ಪ್ರಕಟವಾಗಿದೆ.

ಪೂರ್ವಾಗ್ರಹ ಪೀಡಿತ ಹಸ್ತಪ್ರತಿಗಳ ಅವ್ಯವಸ್ಥೆ

ನವಾಬ್ ಹೈದರಾಲಿ ಜ್ಯೋತಿಷ್ಯ ಪ್ರೇಮಿ. ಜ್ಯೋತಿಷಿಗೆ ಉದ್ಯೋಗವಿತ್ತು ಅವರ ಸಲಹೆಯಂತೆಯೇ ನಡೆಯುತ್ತಿದ್ದನು. ೧೭೭೯ರಲ್ಲಿನ ಪಂಚಾಂಗದಲ್ಲಿ ಸಾಹಿತ್ಯದೊಂದಿಗೆ ತನ್ನ ಚಿತ್ರವನ್ನು ಪ್ರಕಟಿಸಿದನು. ೧೭೮೪ರಲ್ಲಿ ಟಿಪ್ಪು ತನ್ನದೇ ಆದ ಪಂಚಾಂಗ ಜಾರಿಗೆ ತಂದನು. ಇದರ ಅನ್ವೇಷಣೆಗೆ ನಡೆಸಿದ ನನ್ನ ಪ್ರಯತ್ನ ಮುಂದುವರಿದೇ ಇದೆ. ವಿಜಯನಗರ ಚಕ್ರವರ್ತಿ (ಶ್ರೀರಂಗಪಟ್ಟಣದಲ್ಲಿ) ಅರಮನೆಯಲ್ಲಿದ್ದ ಹಸ್ತಪ್ರತಿ ಭಾಂಡಾಗಾರದಲ್ಲಿ

It was with reference to the valuable contents of the literary at this palace that Tipu gave the direction that those contents may be sent over his stables. It was reported to him that several large apartments in it were full of old books, chiefly palm leaves...

ಇವುಗಳು ಸೈನಿಕರ ಕುದುರೆಯ ಆಹಾರಕ್ಕಾಗಿ ಅಗ್ನಿಗಾಹುತಿಯಾದವು. ಸೈನ್ಯದ ವಿವಿಧ ವಿಷಯಗಳ ಹಸ್ತಪ್ರತಿಗಳು ಹ್ಯಾರಿಸ್‌ನಿಂದ ವೆಲ್ಲಸ್ಲಿಯ ಕೈ ಸೇರಿತು. ಆಶ್ಚರ್ಯವೆಂದರೆ ನನ್ನ ಸರ್ವೇಕ್ಷಣೆಯಲ್ಲಿ ಶ್ರೀರಂಗಪಟ್ಟಣದಲ್ಲಿ ಲಭಿಸಿದ ಓಲೆಗರಿ ಹಸ್ತಪ್ರತಿಯೊಂದರಲ್ಲಿ ಮಧುರೆ, ಗೋಲ್ಕೊಂಡ, ತಂಜಾವೂರು ತಿರುವನಂತಪುರ, ಇಕ್ಕೇರಿ ಕೈಫಿಯತ್ತುಗಳು ಒಳಗೊಂಡಿತ್ತು. ಟಿಪ್ಪುಕಾಲದ Stewart ನ catalogue ನ ಗ್ರಂಥ ಪರಿಚಯ part V ಇನ್ನೂ ಸಿಕ್ಕಿಲ್ಲ.

ವೈಜ್ಞಾನಿಕವಾಗಿ ಸಂಶೋಧನೆ ಕಾಣದ ಹಸ್ತಪ್ರತಿಗಳು ವಿಪುಲವಾಗಿವೆ. ಕೆಳದಿ ಆಸ್ಥಾನದ ವೀರಶೈವ ಧರ್ಮಶಿರೋಮಣಿ ಹಸ್ತಪ್ರತಿ ಅಧ್ಯಯನಕ್ಕಾಗಿ ಕೆಳದಿಗೆ ಬಂದಿದ್ದ ಇಟಲಿ ತಿಝಿಯಾನಾ ರಿಪೆಪಿರವರು ಪೂರ್ವಾಗ್ರಹ ಪೀಡಿತರಿಂದ ಉಂಟಾದ ಸಮಸ್ಯೆಗೆ ಬೇಸತ್ತು ಪೂರ್ತಿ ಮಾಡದೇ ಹಿಂದಿರುಗಿದುದು ದುರ್ದೈವ, ಬೆಂಗಳೂರಿನ MLC ದಿ. ಎಂ.ಪಿ.ಎಲ್. ಶಾಸ್ತ್ರಿಗಳಲ್ಲಿದ್ದ ಕೆಳದಿ ಆಸ್ಥಾನದ ಭಟ್ಟೋಜೀ ದೀಕ್ಷಿತನ 'ತತ್ವಕೌಸ್ತುಭ' ಹಸ್ತಪ್ರತಿಗೂ ಇದೇ ಅವಸ್ಥೆಯುಂಟಾದುದು ಹಸ್ತಪ್ರತಿಗೇ ಅವಮಾನವೆಸಗಿದಂತಾಗಿದೆ. ನೂರಾರು ವರ್ಷದ ಸಂಶೋಧನಾತ್ಮಕ ಹಸ್ತಪ್ರತಿ ಹಾಗೂ ವಿದೇಶೀ ವಿದ್ವಾಂಸರ ಅಪೂರ್ವ ಪ್ರಕಟಣೆಗಳು ನನ್ನ ಕಣ್ಣಮುಂದೆಯೇ ಅಗ್ನಿಗಾಹುತಿಯಾಗಿರುವುದಕ್ಕೆ ವಿಪುಲ ದುಃಖವುಂಟಾಗಿದೆ. ಮೈಸೂರು ಅರಮನೆ, ಮೂಡಬಿದರೆ ಮುಂತಾದ ಹಸ್ತಪ್ರತಿ ಭಂಡಾರಗಳಲ್ಲಿರುವ ಹಸ್ತಪ್ರತಿಗಳು ಬಂದಿಯಾಗಿದ್ದು ಅಧ್ಯಯನಗಳಿಗೆ ಬಿಡಿಸಿಕೊಳ್ಳುವುದು ದುರ್ಲಭ. ಧರ್ಮಸಂಸ್ಥೆಗಳೂ ಇದಕ್ಕೆ ಹೊರತಾಗಿಲ್ಲ.

ತುಳು–ತಿಗಳಾರಿ ಹಸ್ತಪ್ರತಿ ವಿವಾದ

ಇದು ಪೂರ್ವಾಗ್ರಹ ಪೀಡಿತ ವಿವಾದವಾಗಿದ್ದು ತುಳುವಿಗೆ ಲಿಪಿಯಿಲ್ಲವೆಂಬುದನ್ನು ಕಿಟ್ಟೆಲ್ ಹಾಗೂ ಡಾ. ಕು.ಶಿ. ಹರಿದಾಸಭಟ್ಟರು, ಡಾ. ಗುರುರಾಜ ಭಟ್ಟರೇ ತೋರಿಸಿಕೊಟ್ಟಿದ್ದಾರೆ. ತುಳು ತಿಗಳಾರಿಯನ್ನು ಕಣ್ಮರೆಯಾಗಿಸಲು ಪ್ರಯತ್ನಿಸಿದ್ದು ದುರ್ದೈವ, ಬರ್ನೆಲ್ ಈಗ ಇದ್ದಿದ್ದರೆ ಇದನ್ನು ಖಂಡಿಸುತ್ತಿದ್ದರು. ನನ್ನ The Catalogue of Ancient Tigalagri palm leaf Manuscripts ದೆಹಲಿಯೊಂದರಲ್ಲಿಯೇ ೫೦೦ ಪ್ರತಿ ಖರ್ಚಾಗಿದ್ದು ಜಪಾನ್ ಸರಕಾರದ ಪತ್ರಾಗಾರದಿಂದ ವಿಮರ್ಶೆಯಾಗಿರುವುದೂ ಹೆಗ್ಗಳಿಕೆ, ಹೀಗಿದ್ದೂ ಪತ್ರಾಗಾರದಿಂದ ಪ್ರಕಟವಾದ ಧರ್ಮಸ್ಥಳದ catalogue ನಲ್ಲಿ ಸಂಸ್ಕೃತ ಸಾಹಿತ್ಯವೆಲ್ಲವೂ "ತುಳುಲಿಪಿಯೆಂದು ದಾಖಲಿಸಿರುವುದು ದುರ್ದೈವ, ಮಂಗಳೂರಿನ ವಿಶ್ವವಿದ್ಯಾಲಯದಲ್ಲಿರುವ ತುಳುಭಾಗವತೋ" ಕೃತಿಯ ಲಿಪಿಯು ತಿಗಳಾರಿಯಾಗಿದ್ದು ಭಾಷೆ ಮಾತ್ರ ತುಳುವೇ ಹೊರತು ಲಿಪಿಯಲ್ಲ, ಇದು ಹಸ್ತಪ್ರತಿ ಶಾಸ್ತ್ರಜ್ಞರ ಪ್ರಾಮಾಣಿಕ ಸಂಶೋಧನೆ, ಪೂರ್ವಾಗ್ರಹ ಪೀಡಿತತೆಯಿಂದ ಬರ್ನಲ್‌ರವರನ್ನು ತಪ್ಪು ದಾರಿಗೆ ತಂದು ಅವರಿಗೆ ಹಾಗೂ ಸಂಶೋಧನೆಗೆ ಅವಮಾನಿಸಿದಂತಾಗಿರುವುದೂ ದುರ್ದೈವ.

ಉಪಸಂಹಾರ

ಅಪೂರ್ವಜ್ಞಾನ ಭಂಡಾರಗಳಿಂದ ಕೂಡಿದ ಪುರಾತನ ಹಸ್ತಪ್ರತಿಗಳು ವಿಶ್ವಕ್ಕೆ ಶಾಂತಿ ಬೆಳಕನ್ನು ನೀಡುವ ಆಸ್ತಿಯೆಂಬುದನ್ನು ಮರೆಯಬಾರದು, ಭಾರತದಲ್ಲಿದ್ದ ಸಂಪದ್ಭರಿತ ಆಸ್ತಿಯನ್ನು ಮೌಢ್ಯವೆಂದು ಜರಿಯುವಂತೆ ಮಾಡಿ ವಿದೇಶಗಳಲ್ಲಿರುವ ಭಾರತದ ಹಸ್ತಪ್ರತಿಗಳು ಭಾರತದ ಆಸ್ತಿಯೇ ಹೊರತು ಅವರದ್ದಲ್ಲವೆಂಬುದನ್ನು ಮರೆಯಬಾರದು. ವೈಜ್ಞಾನಿಕ ಪ್ರಯೋಗಗಳಿಂದ ಇವುಗಳ ಮಹತ್ವವನ್ನು ತೋರಿಸಿಕೊಟ್ಟಿರುವುದಕ್ಕೆ ಅವರಿಗೆ ಅಭಿನಂದನೆಗಳು, ಅವರ ಅಭಿಪ್ರಾಯದಲ್ಲಿ ಕಂಡುಬಂದಿರುವ Most of the Research in the manuscripts in the south India is prejudice as such it is not considered for source materials ಎಂದಿರುವುದು ಜ್ಞಾನನಿಧಿ ಋಷಿಗಳಿಗೆ ಅವಮಾನಿಸಿದಂತಾಗಿದೆ. ಮೂಲ ಹಸ್ತಪ್ರತಿ ಜ್ಞಾನಗಳನ್ನು ತಮಗೆ ಬೇಕಾದಂತೆ ಪೂರ್ವಾಗ್ರಹ ಪೀಡಿತತೆಯಿಂದ ವ್ಯಾಖ್ಯಾನಿಸಿ ಸಂಶೋಧಕರೆನ್ನಿಸಿಕೊಂಡವರೂ ಕೃತಿಕಾರನನ್ನು ಅವಮಾನಿಸಿದಂತಾಗಿದೆ. ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕವಾಗಿ ವಿಶ್ವಶಾಂತಿಗೆ ಇದು ಅಪಾಯವನ್ನು ತಂದೊಡ್ಡುತ್ತಿರುವುದು ಈಗಲೂ ಕಣ್ಣಿಗೇ ಗೋಚರಿಸುತ್ತಿದೆ ಹಾಗೂ ಸತ್ಯಶೋಧನೆಗೆ ಅಪರಾಧವುಂಟಾಗುತ್ತದೆ. ರಾಜ್ಯಪತ್ರಾಗಾರ ಸ್ಥಾಪಕ ಸದಸ್ಯನಾಗಿದ್ದ ನಾನು ಪತ್ರಾಗಾರವನ್ನು Gezetreer ಇಲಾಖೆಗೆ ಸರಕಾರ ವಿಲೀನಗೊಳಿಸುವುದನ್ನು ತಪ್ಪಿಸಲು ಹೋರಾಡುವಂತಾಯಿತು. ಕೆಳದಿ ಸಂಶೋಧನಾ ಕೇಂದ್ರಕ್ಕೆ ಜಿಲ್ಲಾ ಪತ್ರಾಗಾರ ಕೇಂದ್ರವನ್ನಾಗಿಸಲು ನೀಡಿದ್ದ ಸರಕಾರದ ಆದೇಶವು ಕೈಗೂಡದಿದ್ದುದು ದುರ್ದೈವ, ಇವುಗಳು ಪೂರ್ವಾಗ್ರಹ ಪೀಡಿತ ದುಷ್ಫಲ.

ದಿ. ಡಾ. ಹಾ.ಮಾ.ನಾರವರು ನನಗೆ ತುಂಬ ಆತ್ಮೀಯರಾಗಿದ್ದರು. ಅವರ ಸೂಚನೆಯಿಂದ ಮಾನ್ಯ ದಿ. ಕುವೆಂಪುರವರೊಂದಿಗೆ ಒಂದು ದಿನ ಕಳೆಯುವ ಸುಯೋಗ ನನಗೆ ಲಭಿಸಿತು. ಬೆಳಗಿನ ವಾಯುವಿಹಾರಕ್ಕೆ ನನ್ನನ್ನು ಜೊತೆಗೂಡಿಸಿಕೊಂಡು ಹೋಗುತ್ತಿದ್ದಾಗ ಕುವೆಂಪು ಮಾತನ್ನಾಡುತ್ತಾ ಕೆಳದಿ ಇತಿಹಾಸ ಸಂಸ್ಕೃತಿ ವಿಶ್ವವಿಖ್ಯಾತಿ ಗಳಿಸಲು ಅರ್ಹತೆಯಿದ್ದು ಈ ಇತಿಹಾಸಕಾರ ಲಿಂಗಣ್ಣ ಕವಿಯ ಪೀಳಿಗೆಗೆ ನೀವೇ ಸೇರಿದವರಾಗಿದ್ದುದನ್ನು ಶ್ಲಾಘಿಸಿ ಸ್ಥಾಪಿಸಿದ ಕೆಳದಿ ಸಂಶೋಧನಾ ಕೇಂದ್ರವನ್ನು "ಕೆಳದಿ ಶಾಂತಿನಿಕೇತನ"ವನ್ನಾಗಿ ದಕ್ಷಿಣ ಭಾರತದಲ್ಲಿ ಪ್ರಜ್ವಲಿಸುವಂತೆ ಕೈಗೂಡಿಸಿಕೊಳ್ಳಿರಿ ಎಂದು ನನಗೆ ಬೆನ್ನು ತಟ್ಟಿದರು. ಹಾಮಾನಾರವರೂ ಉತ್ತರ ಭಾರತದಲ್ಲಿ ಟ್ಯಾಗೂರರ ಶಾಂತಿನಿಕೇತನದಲ್ಲಿರುವ ಗುರುಕುಲ ಪದ್ಧತಿ ರೂಪದಲ್ಲಿ ಅಭಿವೃದ್ಧಿಪಡಿಸಲೂ ಸಲಹೆ ನೀಡಿದ್ದರು. ಚೈನಾದ ಇತಿಹಾಸದಲ್ಲಿ ಕಂಡುಬರುವ ನಾನು ಸಿದ್ಧಪಡಿಸಿದ ಮಾದರಿಯಲ್ಲಿ 'ಕೆಳದಿ ಶಾಂತಿನಿಕೇತನ' ರೂಪಿಸಿ ಬೆಳೆಸಿದಲ್ಲಿ ಕುವೆಂಪುರವರ ಆತ್ಮಕ್ಕೆ ಶಾಂತಿಯುಂಟಾಗುವುದಲ್ಲದೆ ಕುವೆಂಪು ವಿಶ್ವವಿದ್ಯಾಲಯ ಖ್ಯಾತಿಯೂ ವಿಶ್ವವ್ಯಾಪಿಯಾಗುವುದರಲ್ಲಿ ಎರಡು ಮಾತಿಲ್ಲ. ಇದಕ್ಕಾಗಿಯೇ ಕುಲಸಚಿವರಾಗಿದ್ದ ದಿ. ಪಾಂಡೆರವರು ಹಾಗೂ ಶ್ರೀ ಚಿರಂಜೀವಿ ಸಿಂಗ್ ಸೇರಿ ಮ್ಯೂಜಿಯಂನ ಅಭಿವೃದ್ಧಿಗಾಗಿ Guest House ನಿರ್ಮಿಸಿದ್ದು ಈಗ

ಅದು ದನದ ದೊಡ್ಡಿಯಂತಾಗಿದೆ. ಈಗಲಾದರೂ ವ್ಯವಸ್ಥಿತವಾಗಿ ನಿರ್ಮಿಸಿಕೊಡಲು ವಿನಂತಿ.

ಹಸ್ತಪ್ರತಿ ನಿರ್ದೇಶನಾಲಯ ಆವಶ್ಯಕತೆ

ವಿಶಾಲ ಜಗತ್ತಿನಲ್ಲಿರುವ ವೈವಿಧ್ಯಮಯ ಹಸ್ತಪ್ರತಿಗಳ ಸಂರಕ್ಷಣೆ ಅಧ್ಯಯನಾದಿಗಳಿಗೆ ಸ್ವಂತ ನಿರ್ದೇಶನಾಲಯದ ಆವಶ್ಯಕತೆ ಎಂದಿಗಿಂತ ಇಂದು ಹೆಚ್ಚಾಗಿದೆ, ಸರಕಾರ ಹಾಗೂ ಸರಕಾರೇತರ ಸಂಸ್ಥೆಗಳಲ್ಲಿರುವ ಕನ್ನಡ ಮೋಡೀ ಲಿಪಿ ದಾಖಲೆ ಹಸ್ತಪ್ರತಿಗಳು ಅಪರಿಮಿತವಾಗಿವೆ. ಇವುಗಳನ್ನು ಓದಲು, ಬರೆಯಲು ತಜ್ಞರ ಅಭಾವವಂತೂ ಹೇಳತೀರದು. ಮಾನ್ಯ ಕುಲಪತಿ ಪ್ರೊ. ಜೋಗನ್ ಶಂಕರ್‌ರವರು ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಉದ್ಯೋಗ ನಿರ್ಮಿತಿ ಸಭೆಯ ಉದ್ಘಾಟನಾ ಭಾಷಣದಲ್ಲಿ ಪ್ರಸ್ತಾಪಿಸಿದಂತೆ ಈ ದಿಸೆಯಲ್ಲಿ ಮುಂದಿನ ನಿರುದ್ಯೋಗಗಳಿಗೆ ಸ್ನಾತಕೋತ್ತರ ಆದಿಯಾಗಿ ಇತರರಿಗೆ ಪುಷ್ಕಲ ಅವಕಾಶವಿದೆ. ನೂರಾರು ಉದ್ಯೋಗಗಳು ಲಭಿಸುವಲ್ಲಿಯೂ ಪ್ರಯತ್ನಶೀಲ ರಾಗಬಹುದು. ಇದರಿಂದ ನಮ್ಮ ಪೂರ್ವಿಕರ ಜ್ಞಾನಭಂಡಾರಗಳನ್ನು ಮುಂದಿನ ಪೀಳಿಗೆಗೆ ರಕ್ಷಿಸಿದಂತಾಗುತ್ತದೆ.

Preventive Conservation and Qurative consevation ನಲ್ಲಿ ಈ ಕಾರಣಗಳಿಂದ ತರಬೇತು ನೀಡಲಾಗುತ್ತಿದೆ. Preventive conservation ನಲ್ಲಿ ಹಸ್ತಪ್ರತಿಗಳ ವೈಜ್ಞಾನಿಕ ಸ್ವಚ್ಛತೆಗಳು, Curative Conservation ನಲ್ಲಿ ಹಸ್ತಪ್ರತಿಯಲ್ಲಿರುವ ಕೃತಿಗಳ ಸಂಪನ್ಮೂಲ ತಜ್ಞರಿಂದ ವೈಜ್ಞಾನಿಕ ರೀತಿಯಲ್ಲಿ ಪರಿಷ್ಕರಿಸುವ ತರಬೇತಿ ನೀಡಲಾಗುತ್ತದೆ. ಇದರ ಸದುಪಯೋಗ ಪಡೆಯುವರೆಂದು ಆಶಿಸಲಾಗಿದೆ.

ಮರೆಯುವ ಮುನ್ನ–ನನಗೆ ಈಗ ೮೭ ವರ್ಷ ನಡೆಯುತ್ತಿದೆ. ಕುವೆಂಪು ವಿಶ್ವವಿದ್ಯಾಲಯಕ್ಕೆ ಯಾವ ಪ್ರತಿಫಲವೂ ಇಲ್ಲದೆ ಅಭಿವೃದ್ಧಿ ಹಾಗೂ ವಿಶ್ವವಿದ್ಯಾಲಯದ ಕೀರ್ತಿ ವಿಶ್ವವ್ಯಾಪಿಯಾಗಲು ಮಾಡಬೇಕಾದ ವಿಪುಲ ಅಧ್ಯಯನ ಸಂಶೋಧನೆಗಳಿವೆ ಹಾಗೂ ಇದನ್ನು ವಿಶ್ವವಿದ್ಯಾನಿಲಯ ಕುವೆಂಪುರವರ ಆಶಯದಂತೆ ಕೆಳದಿ ಶಾಂತಿನಿಕೇತನ* ಹಾಗೂ ಕೆಳದಿ ರಾಣಿ ಚೆನ್ನಮ್ಮಾಜಿ ಪೀಠಗಳ ಮುಖಾಂತರ ಕನ್ನಡ ಮೋಡಿ ದಾಖಲೆ ತರಗತಿ ಆರಂಭಿಸಿ ಸ್ನಾತಕೋತ್ತರ ಕೇಂದ್ರದ ಸರ್ಟಿಫಿಕೇಟ್ ನೀಡುವಂತಾಗಲು ಕ್ರಮ ಕೈಗೊಳ್ಳಲು ವಿನಂತಿ, ಉಳಿದ ಆಯುಸ್ಸಿನಲ್ಲಿ ಇದನ್ನು ನಾನು ಕಣ್ಣಾರೆ ನೋಡುವಂತಾದರೆ ನನಗೆ ಧನ್ಯತೆ.

---

* ಟ್ಯಾಗೂರ್ ಶಾಂತಿನಿಕೇತನದ ಡಾ. ದೀಪಕ್ ಭಟ್ಟಾಚಾರ್ಯರು ಅಥರ್ವಣ ವೇದದ Recitation ಸಂಶೋಧನೆಗೆ ಬಂದಿದ್ದರು. ಅವರೊಂದಿಗೆ ಗೋಕರ್ಣ, ಕೊಲ್ಲೂರು ಇತ್ಯಾದಿ ವಿದ್ವಾಂಸರಲ್ಲಿ ಸಂಪರ್ಕಿಸಿದರೂ ಫಲ ದೊರೆಯಲಿಲ್ಲ. ಯಜುರ್ವೇದದ ಸಂಪೂರ್ಣ ಘನಾಂತ–ಕ್ರಮಾಂತ ಪರಿಣತರಾದ ಡಾ. ಕೃಷ್ಣಜೋಯ್ಸರ ಜ್ಞಾನಾರ್ಜನೆ ಮುಂದಿನ ಪೀಳಿಗೆಗೆ ಉಳಿಸಲು ಪ್ರಯತ್ನಿಸುತ್ತಿದ್ದೇನೆ.

ಈ ಉದ್ಘಾಟನೆಗೆ ನನ್ನನ್ನು ಗೌರವಿಸಿದ್ದಕ್ಕಾಗಿ ಮತ್ತೊಮ್ಮೆ ಕೃತಜ್ಞತೆಗಳು.

ನಮಸ್ಕಾರ.

ತೈಲಾದ್ರಕ್ಷೇತ್ ಜಲಾದ್ರಕ್ಷೇತ್ ರಕ್ಷೇತ್ ಶಿಥಿಲಬಂಧನಾತ್ ।
ಮೂರ್ಖ ಹಸ್ತೇನದಾತವ್ಯಮೇವ ವದತಿ ಪುಸ್ತಕಮ್ ॥

■

ರಂಗಪ್ರಯೋಗದ ದೃಷ್ಟಿಯಿಂದ ಪು.ತಿ.ನ. ಅವರ ಗೀತನಾಟಕಗಳು

◆

ಕ.ವೆಂ. ರಾಜಗೋಪಾಲ್

ಒಂದು

ಹೊಸಗನ್ನಡ ಕಾವ್ಯಲೋಕದಲ್ಲಿ 'ಪುತಿನ' ಒಬ್ಬರು ಅತ್ಯಂತ ಕುತೂಹಲಕಾರಿ ಕವಿ. ಇವರ ನಿಲುವು–ಒಲವುಗಳು ನಿಜಕ್ಕೂ ಆಶ್ಚರ್ಯವನ್ನುಂಟು ಮಾಡುತ್ತವೆ. ಭಕ್ತಿ ಮತ್ತು ಶೃಂಗಾರಗಳೆರಡನ್ನೂ ಏಕಕಾಲದಲ್ಲಿ ಒಪ್ಪಿಕೊಳ್ಳಬಲ್ಲ ಕವಿಯಾಗಿ ಸಾಕಷ್ಟು ಯಶಸ್ವಿಯಾಗಿದ್ದಾರೆ ಎನ್ನಬಹುದು. ಲಯರಹಿತವಾದ ಒಳ್ಳೆಯ ಗದ್ಯವನ್ನು ಬರೆಯಬಲ್ಲವರಾಗಿರುವಂತೆಯೇ ಸಂಗೀತದ ಪಲುಕುಗಳನ್ನೂ ತಾಳಲಯಬದ್ಧ 'ಕಂಪನ'ವನ್ನೂ (Resonance) ಸಹಜವಾಗಿ ಅರಿತಂತೆ ಗೀತೆಗಳನ್ನು ರಚಿಸಬಲ್ಲ ಈ ಕವಿಗೆ ಸಂಗೀತದ ಹಾದಿಗಿಂತ Romantic ಸಂವೇದನೆಯ ಕವಿಯಾಗಿರಲು ಆಸೆಯೂ ಬಲವಾಗಿರುವಂತೆ, ಇಂದಿಗೂ ತೋರುತ್ತದೆ.

ನಮ್ಮ ಸಂಗೀತದ ಪ್ರಪಂಚವನ್ನು ಗಮನಿಸಿದರೆ ಪುತಿನ ವಾಗ್ಗೇಯಕಾರರಾಗಿದ್ದರೆ, ಚೆನ್ನಾಗಿರುತ್ತಿತ್ತು : ಏಕೆಂದರೆ ಈ ಶತಮಾನದ ಪ್ರಾರಂಭದಲ್ಲಿ ರಾಜಾಶ್ರಯವನ್ನು ಪಡೆದಿದ್ದ ಸಂಗೀತಜ್ಞರೂ ವಾಗ್ಗೇಯಕಾರರೂ ತಮಗಿದ್ದ ಸದವಕಾಶವನ್ನು ಬಿಟ್ಟುಕೊಟ್ಟು ಕನ್ನಡೇತರ ರಚನೆಗಳಿಗೇ ಮಾರುಹೋಗಿದ್ದರೆನ್ನಬೇಕಾಗಿದೆ. ಏಕೆಂದರೆ ಅವರಾರಿಗೂ ಚಿಕ್ಕದೇವ ಭೂಪಾಲನಿಗೆ ಅನ್ನಿಸಿದಂತೆ ಕನ್ನಡಾಭಿಮಾನವಿದ್ದಿರಲಾರದಷ್ಟೆ ಅದುದರಿಂದ ನಮ್ಮ ಅರಮನೆಯ ನೆರಳಿನಲ್ಲೂ ಕನ್ನಡ ಸಂಗೀತದ ಸಂಪ್ರದಾಯ ಊರ್ಜಿತವಾದಂತೆ ತೋರುವುದಿಲ್ಲ. ಚಿಕ್ಕದೇವ ಭೂಪಾಲನ 'ಗೀತಗೋಪಾಲ'ವು ಅನುವಾದವಾಗಿದ್ದರೂ ಹಳಗನ್ನಡದಲ್ಲಿದ್ದರೂ ಕನ್ನಡಿಗರಿಗೆ 'ಅಷ್ಟಪದಿ'ಯಲ್ಲಿ ಭಕ್ತಿಕಾವ್ಯದ ಅನುಭವವನ್ನು ನೀಡಿದ ಮತ್ತು 'ಸಂಗೀತ' (ಇದರಲ್ಲಿ ನೃತ್ಯವೂ ಒಂದು ಅಂಗವೆಂಬುದನ್ನು ಮರೆಯಬಾರದು) ರಚನೆಗಳಾಗಿ ಒಂದು ಸಂಪ್ರದಾಯವನ್ನೇ ಬೆಳೆಸಬಹುದಾಗಿದ್ದಿತು. ಇದಕ್ಕೆ ಕಾಲವು ಅನುಕೂಲವಾಗಲಿಲ್ಲವೆಂದರೆ ಅದೊಂದು ಸಬೂಬಲ್ಲದೇ ಬೇರೆಯಿರಲಾರದು. ಒಟ್ಟಿನಲ್ಲಿ

ಅದು ಕಡಿದುಹೋಯಿತು ಮತ್ತು ೨೦ನೇ ಶತಮಾನದ ಸಂಗೀತಜ್ಞರೂ ಅದರ ಸಂಬಂಧವನ್ನೂ ಆಸಕ್ತಿಯನ್ನೂ ಪಡೆದಂತೆ ತೋರುವುದೇ ಇಲ್ಲ.

ನಮ್ಮ ಸಂಗೀತಗಾರರು ಇಂದಿಗೂ ೧೯ನೇ ಶತಮಾನದವರೆನ್ನುವಂತೆ ತ್ಯಾಗರಾಜ ಪರಂಪರೆಯನ್ನು ಊರ್ಜಿತಗೊಳಿಸುವುದರಲ್ಲಿಯೇ ಕೃತಾರ್ಥರಾಗಿರುತ್ತಾರೆನ್ನಬಹುದು. ಸಾಂಪ್ರದಾಯಿಕ ಸಂಗೀತಗಾರರು, ಹೊಸತನ್ನಾಗಲಿ ಕನ್ನಡ ಭಾಷೆಯು ಸಾಂಸ್ಕೃತಿಕವಾಗಿ ಕಲೆಗಳಿಗೆ ಬಳಕೆಯಾಗಬೇಕೆಂಬ ಆಶಯವನ್ನಾಗಲಿ ಪಡೆದವರಾದರೂ ಇದ್ದಿರಲಾರರೆಂದು ಅನ್ನಿಸಿದರೆ ಆಶ್ಚರ್ಯಪಡಬೇಕಾದುದಿಲ್ಲ.

ಬಿವಿಕೆ ಶಾಸ್ತ್ರಿಗಳು ಒಮ್ಮೆ ಪುತಿನ ಅವರ ರಚನೆಗಳನ್ನು ಕುರಿತು 'ಈ ಕವಿಗೆ ಕನ್ನಡ ಭಾಷೆಯು ಗೀತರೂಪದಲ್ಲಿ ಮಾಲೆ ಮಾಲೆಯಾಗಿ ದೊರಕುವಂತಿದೆ' ಎಂಬ ಅಭಿಪ್ರಾಯವನ್ನು ಪತ್ರಿಕೆಯಲ್ಲಿ ಬರೆದಿದ್ದುಂಟು. ಇಂತಹ ಮೆಚ್ಚಿಗೆಗೆ ಪುತಿನ ಅವರ ಗೀತರೂಪಕಗಳೆಲ್ಲಾ ಉದಾಹರಣೆಯಾಗುತ್ತವೆ. ಅವರ ಗೋಕುಲ ನಿರ್ಗಮನ (೧೯೪೫) ಪ್ರಕಟವಾದ ಸ್ವಲ್ಪ ಕಾಲದ ನಂತರ (ಸುಮಾರು ೧೯೫೦ರ ನಂತರದಲ್ಲಿ) ಮತ್ತೆ ಅವರು ಗೀತರೂಪಕಗಳನ್ನು ರಚಿಸತೊಡಗಿದರೆಂದು ತೋರುತ್ತದೆ. ಇದಕ್ಕೆ ಇವರ 'ಗೋಕುಲ ನಿರ್ಗಮನ'ವು ತಂದ 'ಪ್ರಸಿದ್ಧಿ'ಯೇ ಕಾರಣವಿರಬೇಕಷ್ಟೆ. ಇದರಲ್ಲಿ ಕೆಲವಾದರೂ ಭಾವಗೀತೆಗಳು ಸ್ವತಂತ್ರವಾಗಿ ನಿಲ್ಲಬಲ್ಲವು. ಏಕೆಂದರೆ ಇವುಗಳಲ್ಲಿನ ಭಾವಗೀತೆಯ ಬಿಸಿಯು ಹೆಚ್ಚು ಜನಪ್ರಿಯತೆಯನ್ನು ಪಡೆದುಕೊಂಡಿವೆ. ಇಂದಿಗೂ 'ಕೃಷ್ಣನಾ ಕೊಳಲಿನಾ ಕರೆ', 'ಶರಣೆನುವೆಂ ಶರಣೆನುವೆಂ ಬೃಂದಾವನ ಚರಚರಣಕೆ ನಾಂ' ಮತ್ತು ಇದರ ಪ್ರೇರಣೆಯಿಂದ ಬಂದಂತೆ ತೋರುವ 'ನಿಲ್ಲಸದಿರು ವನಮಾಲಿ ಕೊಳಲ ಗಾನವ' ಮತ್ತು 'ಪ್ರತೀಕ್ಷೆ'. ಇತ್ಯಾದಿ ರಚನೆಗಳು ಪುತಿನ ಕವಿಯನ್ನು ಪ್ರತಿ ತಲೆಮಾರಿನಲ್ಲೂ ನೆನಪಿಸುವ ಸಾಮರ್ಥ್ಯವನ್ನು ಪಡೆದುಕೊಂಡಿವೆಯಷ್ಟೆ.

ಇವುಗಳಲ್ಲಿ 'ಭಕ್ತಿ'ಯು ಕವಿಯ ಧೋರಣೆಯಾಗಿರುವುದಲ್ಲದೆ ಅದರ ಗೂಡಿಂದ ಚಿಗಿದಂತೆ 'ಶೃಂಗಾರ' ಕೂಡ ಹಿತವಾಗುತ್ತದೆ. ಪುತಿನ ಕವಿಯೆಂದು ಗುರುತಿಸುವಲ್ಲಿ 'ಗಾಂಧಿ' ಯಾಗಲಿ 'ಮಳೆ'ಯಾಗಲಿ ಇದೇ ಆಸ್ತಿಕವಾದವನ್ನು ಸಮರ್ಥಿಸುತ್ತಿದೆಯಷ್ಟೆ. ಆದರೆ ಈ ಕವಿಯ ಇಂಥ ರಚನೆಗಳಲ್ಲಿ ಅಸಲಿಯಾದ ಭಕ್ತಿಯನ್ನು ಪುರಂದರ ದಾಸರಂತೆ ತೀವ್ರಾನುಭವವನ್ನಾಗಿ ಒದಗಿಸಬಲ್ಲ 'ರಾಗರಂಜನೆ'ಯೂ ಸೇರುವುದನ್ನು ಯಾರು ಬೇಕಾದರೂ ಅರಿಯಬಹುದು. ನಮ್ಮ ಸಂಗೀತಜ್ಞರಿಗೂ ಇದು ತಿಳಿದಿರಬೇಕಷ್ಟೆ ಒಟ್ಟಿನಲ್ಲಿ ನಮ್ಮ ಕಾವ್ಯವಿಮರ್ಶಕರು ಪುತಿನ ಅವರ ಕೃತಿಗಳಲ್ಲಿರುವ ಭಾವ–ರಾಗಗಳ ಸಂಯೋಗವನ್ನು ಮೆಚ್ಚಿಕೊಂಡಿರುತ್ತಾರೆ. ಕೆಲವು ವೇಳೆ ಕಾವ್ಯಾನುಭವಕ್ಕೆ ಬೇಕಿಲ್ಲದಷ್ಟು ರಾಗಾನುಭವವು–ಪುತಿನ ಕವಿತೆಗಳಲ್ಲಿದೆ ಎಂದವರೂ ಉಂಟು. ಒಟ್ಟಿನಲ್ಲಿ ಪುತಿನ ತಮ್ಮ ಗೀತರೂಪಕಗಳಲ್ಲಿ ಇಂಥ 'ರಾಗರಂಜನೆ'ಯನ್ನು ಹಲವಾರು ರೀತಿಯ ಪ್ರಯೋಗಗಳೆನ್ನುವಂತೆ ಸಾಧಿಸಿದ್ದಾರೆ ಎನ್ನಬಹುದು. ಇದನ್ನು ಕುರಿತು ಗುರುತಿಸುವಾಗ form ದೃಷ್ಟಿಯಿಂದ 'ಪುತಿನ' ಅವರದು ಕೀರ್ತನ ಪ್ರಜ್ಞೆ ಎನ್ನಬಹುದು.

ಪುತಿನ ಅವರು ತಮ್ಮ ಕಾವ್ಯಪ್ರಜ್ಞೆಯನ್ನು opera ಗಳ ರಚನೆಯಲ್ಲೂ ಆಧರಿಸಿದ್ದಾರೆ. ಇದನ್ನು ಮೇಲೆ ಹೇಳಿದಂತೆ ಕೀರ್ತನಪ್ರಜ್ಞೆ ಎನ್ನುವಂತೆಯೇ opera ಪ್ರಜ್ಞೆ ಎಂದರೂ ಅಂತಹ ಬದಲಾವಣೆಯೇ ಕಾಣಲಾರದು. ಏಕೆಂದರೆ ಇವರ 'ಅಹಲ್ಯೆ' ಮತ್ತು 'ಗೋಕುಲ ನಿರ್ಗಮನ'ಗಳನ್ನು ಗಮನಿಸಿದಲ್ಲಿ ನಾಟ್ಯ ವಸ್ತುವಿನಲ್ಲಿ ಸಂಭಾಷಣೆಗಳು ಹೆಚ್ಚಾಗಿ opera ಗೀತೆಗಳ ಕಡೆಗೆ ವಾಲುತ್ತವೆ.

ಎರಡು

ನಾನು ಪು.ತಿ.ನ. ಅವರ ಎದುರಿಗೆ ಕುಳಿತು ಗೋಕುಲ ನಿರ್ಗಮನದ ಕೆಲವು ಪದಗಳನ್ನು ಕೇಳಿದ್ದೇನೆ. (ಇದು ತೀನಂಶ್ರೀಯವರು ಧಾರವಾಡದಲ್ಲಿದ್ದಾಗ ಅವರ ನಿವಾಸದಲ್ಲಿ ನಡೆಯಿತು.) ಅವರು ಗಟ್ಟಿಯಾಗಿ ಹಾಡುವುದಿಲ್ಲ. ಅವರ ದನಿ ಮೈಕಿಗೆ ಕೂಡ ಎಟಕುವಂಥದಲ್ಲ ! ಅವರು ಶಾಸ್ತ್ರೀಯ ರಾಗಗಳನ್ನು ನಮ್ಮ ಸಂಗೀತಗಾರರು ಗಮಕಾದಿಗಳಿಂದ ಸಾಧಿಸುವಂತೆ ಶ್ರವ್ಯಗೊಳಿಸುವಂತೆ ಮಾಡುವುದಿಲ್ಲ. ಆದರೆ ಭಾವಗೀತೆಗಳನ್ನು ಭಾವುಕಗೊಳಿಸುವಂತೆ 'ಅನ್ನು'ತ್ತಾರೆ. ಇಂಥ ಮನೋಧರ್ಮವೇ ನನಗೆ ಅಚ್ಚರಿಯನ್ನುಂಟು ಮಾಡಿದೆ.

ಪ್ರೊ. ತೀನಂಶ್ರೀಯವರು ಹೇಳುತ್ತಿದ್ದ ಒಂದು ಮಾತು ನೆನಪಿದೆ. ಪುತಿನ ಒಬ್ಬ ವಾಗ್ಗೇಯಕಾರ ಕವಿ. ಇವರಲ್ಲಿ ಗೇಯತೆಗೇ ಹೆಚ್ಚು ಒಲವಿದೆ ಎನ್ನುವುದಾದರೆ ಪುತಿನ ಅದನ್ನು ಮೆಚ್ಚಿಕೊಳ್ಳುವುದಿಲ್ಲ. ಅವರನ್ನು ಹೊಸಗನ್ನಡದ ಶ್ರೇಷ್ಠ ಕವಿ ಎಂದರೆ "ಒಂದು ಒಪ್ಪಂದ ಸಾಧ್ಯ" ಎಂಬುದು ಮುಖ್ಯ. ಈ ಮಾತನ್ನು ಸಮರ್ಥಿಸುವುದಕ್ಕಾಗಲಿ ಚರ್ಚಿಸುವುದಾಗಲಿ ನನ್ನ ಉದ್ದಿಶ್ಯವಿಲ್ಲ. ಆದರೆ ಇವರ 'ಗೀತರೂಪಕ'ಗಳನ್ನು (ಅವರೇ ಹಾಗೆ ಕರೆದಿರುತ್ತಾರೆ) ಮೇಲಿಂದ ಮೇಲೆ ಪರಿಶೀಲಿಸಿದಾಗ ಇವುಗಳ ಸಾಹಿತ್ಯದಲ್ಲಿ ತಕಳತೆ, ಛಂದೋಗತಿಯ ಮಂದಗುಣ, ಅಲಂಕಾರಿಕ ಭಾಷೆಗಿಂತ ರಾಗರಂಜಿತ ಪಲುಕುಗಳು ಇವುಗಳಿಂದ ಒಂದು ರೀತಿಯಲ್ಲಿ ಅಸ್ಪಷ್ಟವೇ ಅಲ್ಲದ ಅರ್ಥಕ್ಕೆ ಅಡ್ಡಿಯಾಗದ ಆದರೆ ಜೀವನದ ಸ್ವಾರಸ್ಯಸವನ್ನು ಗಂಭೀರವಾಗಿ (ಬೇಕಾದರೆ ಇದನ್ನು ಮಡಿವಂತಿಕೆ ಎನ್ನಬಹುದು) ಒಳಗೊಳ್ಳುವ ಕೃತಿಗಳ ರಚನೆಯನ್ನು ಸಾಧಿಸಿದ್ದಾರೆ. ಇದಕ್ಕೆ ಅವರ 'ವಸಂತ ಚಂದನ' ಒಂದು ಒಳ್ಳೆಯ ಉದಾ ಎನ್ನಬಹುದು.

ಇವರ ಒಳ್ಳೆಯ ಭಾವಗೀತೆಗಳನ್ನೆಲ್ಲಾ ಪರಿಶೀಲಿಸಿದಾಗ ಈ ಕವಿತೆಗಳಲ್ಲಿ ನಾಟಕಾಂಶದಿಂದ ಬೆಂಬಲಿಸಿದ ವಸ್ತು ಕಂಡುಬರುತ್ತದೆ. ಇವುಗಳನ್ನು ಹಾಡಿದಾಗಲಂತೂ ಈ ಅಂಶವು ಖಚಿತವಾಗುತ್ತದೆ. ಹಾಗಾಗದಿದ್ದರೆ ಅದು 'ರಾಗದ ಮೋಹಕತೆ'ಯಾಗುತ್ತದೆ. ಕೆಲವು ವೇಳೆ ಅಥವಾ ಹಲವಾರು ವೇಳೆ ಈತ ಕವಿಯಾಗಿ ದಟ್ಟವಾದ ಮತ್ತು ಸದಾ ಕಾಲದ ಅಥವಾ ನಿತ್ಯಹರಿದ್ವರ್ಣದ (Evargreen Quality) 'ರುಚಿ'ಯನ್ನು ಅರಿತವರು, ಎನ್ನಿಸಿದರೂ ರಾಗಗಳಿಗೆ ಮಾರುಹೋದವರೆಂಬುದಂತೂ ಸ್ಪಷ್ಟವಾಗುತ್ತದೆ.

ಮೇಲಿನ ಅಭಿಪ್ರಾಯವನ್ನು ಸ್ಪಷ್ಟಪಡಿಸಲು ಯತ್ನಿಸುತ್ತೇನೆ. ನನಗೆ ಅನ್ನಿಸಿದಂತೆ ಸಂಗೀತದ ಗತಿಯು ತಾಳಬದ್ಧವಾಗಿ ನಿಯುಕ್ತವಾಗಿ ಕಂಡೂ ಛಂದೋಗತಿಯು

ಮುಖ್ಯವಾಗಿರುವ ಸಾಹಿತ್ಯದ ಸ್ವರೂಪಕ್ಕೆ ದೂರವಾಗಿರುತ್ತದೆ ಅಥವಾ ಹೊರಚ್ಚಾಗಿರುತ್ತದೆ. ಇದನ್ನೇ ಸಾಹಿತ್ಯಿಕವಾದ ಛಂದೋಗತಿಗೂ ರಾಗದ ಗತಿಗೂ ಯಾವುದೇ ಸಂಬಂಧವೂ ಇರಬೇಕಾದುದಿಲ್ಲ. ಏಕೆಂದರೆ ರಾಗವು ಅರ್ಥದ ಅಭಿವ್ಯಕ್ತಿಯನ್ನು ಸಮರ್ಥಿಸುವುದಿಲ್ಲ. ಮುಖ್ಯವಾಗಿ ಇವೆರಡೂ ಭಿನ್ನ ರೀತಿಯ ಕಲೆಗಳಷ್ಟೆ. ಉದಾ: ಅಠಾಣ ರಾಗದ ಬಳಕೆಗೆಂದು ಸೂಚಿತವಾಗಿರುವ ಡಿ.ವಿ.ಜಿ. ಅವರ 'ವನಸುಮದೊಲೆನ್ನ ಜೀವನವು' ಕವಿತೆಯನ್ನೇ ಪರಿಶೀಲಿಸಬಹುದು. ಇಲ್ಲಿ ಕವಿಗೆ ಈ ರಾಗದ ಓಟವು ಚೆನ್ನಾಗಿ ತಿಳಿದಿರುವುದರಿಂದ ಛಂದೋಗತಿಯನ್ನು ಬಿಟ್ಟ ರಾಗದ ತಾಳದ ಗತಿಗೆ ಈ ಪದವು ಒಗ್ಗುವುದನ್ನು ಹಾಡಿದಾಗ ಮಾತ್ರ ಅರಿಯಬಹುದು. ಬರಿಯ ಅರ್ಥವ್ಯಂಜಕತೆಗಾಗಿ ಓದಿದಾಗ ನಮಗೆ ಛಂದೋಗತಿಯೊಂದೇ ನೆರವಾಗುತ್ತದೆ. ಅಲ್ಲದೆ ಅಠಾಣ ರಾಗದ ವೈಖರಿಗೂ ನಾವು ಸೋಲುವಂತಾದಾಗ, ಹಾಡುವ ಕಂಠಮಾಧುರ್ಯವೂ ಕೂಡಿಕೊಂಡು, ಇದನ್ನೇ ಅತ್ಯಂತ ಶ್ರೇಷ್ಠ ಕಾವ್ಯವೆಂದೂ ಹೇಳಬಹುದು. ಆದರೆ ಕೊನೆಯ ಮಾತು ಸಾಧುವಾಗಲಾರದು ಏಕೆಂದರೆ ಬದುಕಿನ ಭಾವಸತ್ವವು ಆಗ ಹಾಡಿಕೊಳ್ಳಲಾರದವರಿಗೆ ಎಟಕುವಂತೆಯೇ ಇರುವುದಿಲ್ಲ. ಅಥವಾ ಅದರ ಅರ್ಥದ ಸಾಮರ್ಥ್ಯದಿಂದಲೇ 'ರುಚಿ' ಯಾಗುವಂಥದಲ್ಲ. ಇಲ್ಲಿ ಯಾವುದೇ ಸಾಹಿತ್ಯ ರಚನೆಯಾಗಲಿ ಅದು ಮತ್ತೊಂದು ಕಲೆಯ ನೆರವಿಲ್ಲದೇ 'ರುಚಿಕಟ್ಟಾ'ಗಬೇಕಾದುದು ಒಂದು ಸಹಜ ಲಕ್ಷಣ. ಆದುದರಿಂದ ಡಿವಿಜಿಯವರ ಭಾವಗೀತೆಗೆ ಕೇವಲ ಅಠಾಣದ ಛಾಯೆ ಮಾತ್ರ ಬಳಕೆಯಾಗಿರುತ್ತದೆ ಅದರ ಗಮಕಾದಿಗಳಲ್ಲ ಎಂದರೂ ಅಂತಹ ಗುಣವೇ ಸಂಗೀತ ಕಲೆಗೆ ಸೇರಿದುದು ಎಂಬುದನ್ನೂ ಮರೆಯಬಾರದು.

ಇದನ್ನು ಮತ್ತೊಂದು ರೀತಿಯಲ್ಲಿಯೂ ಪರಿಶೀಲಿಸಬಹುದು-ಒಂದು ಭಾವಗೀತೆಯನ್ನು ಮೂರು ನಾಲ್ಕು ರಾಗಗಳ 'ಹೋರೆ'ಯಲ್ಲಿ ಅಂದರೆ ಆಶ್ರಯದಲ್ಲಿ ಭಾವುಕಗೊಳಿಸಬಹುದಷ್ಟೆ. (ಸಾಹಿತ್ಯ ಕೃತಿಗಳಿಗೆ ಮಾತ್ರ ಇದು ಅನ್ವಯಿಸುತ್ತದೆ. ಎಲ್ಲೆಲ್ಲಿ ಸಾಹಿತ್ಯದ ವ್ಯಂಜಕತೆ ಮುಖ್ಯವಾಗುತ್ತದೋ ಅಲ್ಲೆಲ್ಲಾ ಇದು ಸಾಧ್ಯವಿರುತ್ತದೆ. ಉದಾ: ಹೊಸಗನ್ನಡದ ಭಾವಗೀತೆಗಳಂತೆಯೇ ದಾಸರ ಪದಗಳನ್ನೂ ವಚನಗಳನ್ನೂ ಹೀಗೆ ಅನುಭವ ವೇದ್ಯಗೊಳಿಸಬಹುದು.)

ಈ ಇಬ್ಬಗೆಯ ಧೋರಣೆಯಿಂದ ಪುತಿನ ತಮ್ಮ ರಚನೆಗಳನ್ನು ಸಾಧಿಸಿರಬಹುದಾದ ಗುಮಾನಿಯೂ ಇಲ್ಲಿ ಬರಬಹುದು. ಇವರಿಗೆ ಸಂಗೀತಜ್ಞಾನವಿರುವ ಕಾರಣದಿಂದ ರಾಗಗಳನ್ನು ಅಧರಿಸಿಯೇ ಭಾವಗೀತೆಗಳನ್ನು ರಚಿಸಿರುವ ಸಾಧ್ಯತೆ ಕಂಡುಬರುತ್ತಿದೆ. ಅಂದರೆ ಪುತಿನ ತಮ್ಮ ರಚನೆಗಳನ್ನು ಸಂಗೀತ ಮತ್ತು ನಾಟಕೀಯ ವಸ್ತುವಿನ ಸಂದರ್ಭದಲ್ಲಿ ಬೇಂದ್ರೆಯವರಂತೆ ಕೆಲವು ಕವಿತೆಗಳ ಸಂದರ್ಭದಲ್ಲಿ (ಅಂದರೆ 'ತುಂಬಿ ಬಂದಿತ್ತ', ಮತ್ತು 'ಮಾಯಕಿನ್ನರಿ') ಯಶಸ್ವಿಯೂ ಆಗಿದ್ದಾರೆ. ಆದುದರಿಂದ ಪುತಿನ ಅವರ ರೂಪಕಗಳು 'ಪ್ರತೀಕ್ಷೆ' ಮತ್ತು 'ಬಾನ್‌ದಿಳಿದಿತ್ತು' 'ಕಾಳಗದ ಪದ' (ಇದೊಂದು Marching song) ಏನು ಗೆಳೆಯಾ ಕಾಳಗಕ್ಕೆ ಮನಮಾಡಿ ಮರೆ ಮನೆಯಾ ಮರೆ ಮನೆಯಾ) ಇಂಥವೆಲ್ಲಾ ಹಾಡಿನ ರೂಪದಲ್ಲಿ ಮನೋಜ್ಞವಾಗುತ್ತವೆ. ಇವುಗಳ ಅರ್ಥವೇಕೆ

ಕಟುವಾಗಿದೆಯಲ್ಲಾ ಎಂದು ಅಚ್ಚರಿಯೂ ಆಗಬಹುದು. ಇಲ್ಲೆಲ್ಲಾ 'ಚಮತ್ಕಾರ' ಮಾಡಿದ್ದಾರೆ. ಸಂಗೀತ ಮತ್ತು ಸಾಹಿತ್ಯಗಳ ಇಬ್ಬಗೆಯ ರಚನೆಯನ್ನು ತಾವೇ ಕಂಡುಕೊಂಡಿದ್ದಾರೆನ್ನ ಬೇಕಾಗುತ್ತದೆ.

ಈ ರೀತಿಯಲ್ಲಿ ಪುತಿನ ಅವರು Golden mean ಆಧರಿಸಿಯೇ ಅವರ ಉಳಿದ ಕವಿತೆಗಳನ್ನೂ ಹಿಂದುಳಿಸುವಷ್ಟು ಭಾವತೀತಾತ್ಮಕವಾದ opera ಗಳನ್ನು ರಚಿಸಿದ್ದಾರೆ. ಈ ಗೀತರೂಪಕಗಳಿಗೆ ಪುತಿನ ನಾಟ್ಯರೂಪದ 'ಅರಿವ'ನ್ನು ಬಳಸಿದಂತೆ ಕಾಣುವುದೇ ಇಲ್ಲ. ಯಾರಾದರೂ ನಾಟ್ಯಾಚಾರ್ಯರು ಪುತಿನ ಅವರ ಭಾವಗೀತೆಗಳಿಗೆ ನೃತ್ಯರೂಪವನ್ನು ಅಳವಡಿಸಲು ಯತ್ನಿಸಿದಲ್ಲಿ ನಿಜವಾದ ಗೊಂದಲವೂ ಬೆಳಕಿಗೆ ಬರಬಹುದಾಗಿದೆ. ಹೇಗೆಂದರೆ ನೃತ್ಯಕ್ಕೆ ಬಳಸುವ ಗೀತೆಗಳು ಛಂದೋಗತಿಯನ್ನೂ ರಾಗಾಲಾಪನೆಯ ಚೌಕಟ್ಟನ್ನೂ ಬಿಟ್ಟುಕೊಡುವ ತಾಳಗತಿಯನ್ನು ಬಳಸುತ್ತದೆಯೆಂದು ನನ್ನ ಅನಿಸಿಕೆ. ಯಾವುದೇ ಭಾವಗೀತೆಯನ್ನು ನೃತ್ಯರೂಪಕ್ಕೆ ತರುವಾಗ ನೃತ್ಯವೇ ಪ್ರಧಾನವೂ ಸತ್ವಯುತವೂ ಆಗಿರುತ್ತದೆ. ಉಳಿದವು ನಂತರದ ಅಂಶಗಳು (ಇದೇ ಕಾರಣದಿಂದ ಇರಬಹುದು. ಸಂಗೀತಜ್ಞರೂ ಸಂಗೀತಗಾರರೂ ತಮ್ಮ 'ಸಂಗೀತ'ವನ್ನು ನೃತ್ಯಕ್ಕೆ ಅಳವಡಿಸಲು ಇಚ್ಛಿಸುವುದಿಲ್ಲ. ಇವರು ಹಾಡುವ 'ತಿಲ್ಲಾಣ'ಕ್ಕೂ ನೃತ್ಯ ರೂಪಕ್ಕೆ ಅಳವಟ್ಟಿರುವ ತಿಲ್ಲಾಣಕ್ಕೂ ವ್ಯತ್ಯಾಸಗಳಿರುವುದನ್ನು ಗಮನಿಸಿದ್ದೇನೆ. ಆದುದರಿಂದ ಪುತಿನ ತಮ್ಮ ರೂಪಕಗಳನ್ನು ಅಭಿಯನಕ್ಕೆ ಮಾತ್ರ ಬಯಸಿದಂತೆ ಕಂಡುಬರುತ್ತದೆ. ತಮ್ಮ opera ಬಲವನ್ನು ಪುತಿನ ತಮ್ಮ ಗೋಕುಲ ನಿರ್ಗಮನದ ಪರಿವಿಡಿಯಲ್ಲಿ ಹೇಳಿಕೊಂಡಿದ್ದರಷ್ಟೆ. ಇದರಿಂದ ಇವರ 'ಗೀತ ರೂಪಕ'ಗಳು ಶ್ರವ್ಯವಾಗುವುದರಲ್ಲಿ ಯಶಸ್ವಿಯಾಗುತ್ತವೆ. ರೇಡಿಯೋ ರೂಪಕಗಳಾಗಿ ನಿಜಕ್ಕೂ ಯಶಸ್ವಿಯಾಗಿರುತ್ತವೆ. ಇವರ 'ಹರಿಣಾಭಿಸರಣ', 'ವಸಂತ ಚಂದನ' ಮತ್ತು 'ಹರ್ಷ–ವರ್ಷ'ಗಳನ್ನೂ ನಾನು ಕೇಳಿದ್ದೇನೆ' ಮನಸೋತಿದ್ದೇನೆ.

ಇವುಗಳನ್ನು opera ಗಳಂತೆ ಪ್ರದರ್ಶಿಸುವ ಸಾಧ್ಯತೆಯನ್ನು ಕುರಿತು ಒಂದೆರಡು ಮಾತಾಡಬಹುದು. ಅಹಲ್ಯೆ, ವಿಕಟಕವಿ ವಿಜಯ ಮತ್ತು ಸತ್ಯಾಯನ ಹರಿಶ್ಚಂದ್ರ ಇವುಗಳನ್ನು ಪರಿಶೀಲಿಸಿದರೆ ಮತ್ತು ಗೋಕುಲ ನಿರ್ಗಮನ, ಹರಿಣಾಭಿಸರಣ, ವಸಂತ ಚಂದನ, ಹಂಸದಮಯಂತಿ ಮೊದಲಾದ ಇತರ ಗೀತರೂಪಕಗಳೊಡನೆ ವಿಚಾರ ಮಾಡಿದರೆ ಈ ಕವಿಯು ಪ್ರಾಯೋಗಿಕ ಮನೋಧರ್ಮವೂ ಅರಿವಾಗುತ್ತದೆ.

ಅಹಲ್ಯೆಯಲ್ಲಿ 'ಪೂರ್ವಾಂಕ'ವು ಮನಸೆಳೆಯುತ್ತದೆಯಷ್ಟೆ. ಉಳಿದ ಭಾಗಗಳಲ್ಲಿ (ಮಧ್ಯಮಾಂಕ ಮತ್ತು ಉತ್ತರಾಂಕ) ನಾಟಕದ ಅನುಭವವು ತೆಳ್ಳಗಾಗಿ ಶ್ರವ್ಯಸಾಮರ್ಥ್ಯಕ್ಕಷ್ಟೇ ಗಮನವಿರಿಸಿರುವಂತೆ ತೋರುತ್ತದೆ. ಮೊದಲ ಭಾಗದ ವಸ್ತು ಹಂದರ ಅಥವಾ ಶಿಲ್ಪವನ್ನು ಯಾವುದೇ ಶ್ರೇಷ್ಠ 'ದುರಂತ' ನಾಟಕದೊಡನೆ ತೂಗಿ ನೋಡಬಹುದಾಗಿದೆ. ಆದರೆ ಮುಂದಕ್ಕೆ ಅಂತಹ ತೀವ್ರತೆಯಾಗಲಿ ವಿಚಾರ ವೈಖರಿಯಾಗಲಿ ಕಂಡುಬರುವುದಿಲ್ಲ. ಅವರ 'ಗೋಕುಲ ನಿರ್ಗಮನ'ವು ಒಂದು ಪರಿಪೂರ್ಣ opera ಎಂದೂ ಅದರ

ಭಾವಗೀತೆಗಳಿಗಿರುವ ಸಾಮರ್ಥ್ಯವು ಆಶ್ಚರ್ಯಕರವಾದುದು ಎಂದೂ ತೋರಬಹುದು. ಆದರೆ ಕವಿಯು ಇದನ್ನು ದೃಶ್ಯಕಾವ್ಯವಾಗಿರುವಂತೆ ರಚಿಸಿದ್ದಾರೆನ್ನಲಾಗುವುದಿಲ್ಲ. ಏಕೆಂದರೆ ಇಲ್ಲಿಯ ಪದಗಳ ಮಾಲೆಯಲ್ಲಿ ದೃಶ್ಯಕ್ರಿಯೆಯು ಮಂದಗತಿಯಲ್ಲಿ ಮತ್ತು ಕೆಲವು ಪದಗಳ ಭಾವುಕತೆಯಲ್ಲಿ ಬೆಳೆಯುತ್ತದೆ.

ಅವರ 'ಗೋಕುಲ ನಿರ್ಗಮನ'ವಾಗಲಿ 'ಅಹಲ್ಯೆಯ'ಯಾಗಲಿ ಅವರ 'ವಸಂತ ಚಂದನ'ದಷ್ಟು ಶ್ರೇಷ್ಠವಾಗಿಲ್ಲವೆಂದು ನನಗನ್ನಿಸಲು ಕಾರಣಗಳನ್ನು ಮುಂದೆ ವಿವರಿಸಬಯಸುತ್ತೇನೆ. ಈ ಕವಿ ಪುತಿನ ಅವರ ಸಾಮರ್ಥ್ಯವಿರುವುದೇ ಜೀವನದ ಸ್ವಾರಸ್ಯವನ್ನು ಮಾತ್ರ ಅಯ್ದುಕೊಳ್ಳುವುದರಲ್ಲಿ ಎಂಬುದಕ್ಕೆ ವಿವಾದವಿರಲಾರದು. ಅವರ 'ಗಣೇಶ ದರ್ಶನ' ಸಂಗ್ರಹದ ಪ್ರತಿಯೊಂದು ರಚನೆಯೂ ಇದಕ್ಕೆ ಆಧಾರವಾಗಬಹುದು. ಅವರ ಮೊಟ್ಟಮೊದಲ ಗಮನಾರ್ಹ ರಚನೆಯಾದ 'ರಂಗವಲ್ಲಿ' ಸಾಮಾನ್ಯವಾಗಿ ಓದುಗರ ಮನಸ್ಸಿನಲ್ಲಿ ಉಳಿಯುವ ಸಾಮರ್ಥ್ಯ ಕೂಡ ಇಂತಹ ಕುತೂಹಲಕಾರಿ ವಸ್ತುವಿನಿಂದ ಸುಮಾರು '೫೦ ಪಾಲು' ಆಗಿಬಿಡುತ್ತದೆ. ಇದರಿಂದ ಬಳಕೆಯಾಗುವ ಭಾಷೆಯು ತನ್ನ 'ಸುಸಂಸ್ಕೃತ ಹಂತ' ದಲ್ಲಿಯೇ ಉಳಿಯುತ್ತದೆ. ಅದರ ಛಂದೋಗತಿ ಕೂಡ ಸರಳವಾಗುತ್ತದೆ ಇತ್ಯಾದಿ. ಮುಖ್ಯವಾಗಿ ಕೃತಿಯ emotional impact ಕೂಡ ಸರಳವಾಗುತ್ತದೆ. ಈ ಕವಿಗೆ ಜೀವನಾಸಕ್ತಿ ತೀವ್ರವಾಗಿರುವ ಒಂದೇ ಕಾರಣದಿಂದ ಈ ಕೃತಿಗಳು ಜೀವನಕ್ಕೆ ಸಮತೂಕವಾಗಿ ಬೆಲೆಯುಳ್ಳವಾಗುತ್ತವೆ. ಇದರಿಂದಾಚೆಗೆ ಪುತಿನ ಕೃತಿಗಳು ಓದುಗನನ್ನು ಕೆರಳಿಸುವುದಿಲ್ಲ ಅಥವಾ ಪ್ರಚೋದಿಸುವುದೂ ಇಲ್ಲ. ಆದುದರಿಂದಲೇ ಈ ಕವಿ 'ಸೌಂದರ್ಯಾರಾಧಕ'ನಿರಬೇಕೆಂಬ ಗುಮಾನಿಯಾಗುತ್ತದೆ.

ಈ ಕವಿಗೆ ಭಾವುಕತೆಯು ಸಹಜವಾಗಿ 'ಅಂಗೈನೆಲ್ಲಿ'ಯಾಗಿರುತ್ತದಲ್ಲಾ ಇದು ಶ್ರೇಷ್ಠ ಲಕ್ಷಣವಲ್ಲವೇ ? ಎನ್ನುವವರಿರಬಹುದು. ಆದರೆ ಅದೇ ಈ ಕವಿಯನ್ನು ಮೋಹಗೊಳಿಸುವ ಮೂಲಕ ಭಾವಾತಿರೇಕಗಳ ಕಡೆಗೆ ಒಯ್ಯುವ ಅಂಶ ಅಥವಾ ವಿಷಯವೂ ಆಗಿದೆ. ಇಲ್ಲಿ ವಿಷಯ ಎಂದರೆ ವಸ್ತು ಮತ್ತು ಆಸಕ್ತಿ ಎಂಬ ಎರಡೂ ಅರ್ಥವಾಗಬಹುದು. ಆದುದರಿಂದ ಇವರ ಭಾವುಕತೆಯ ಸ್ತರವನ್ನು (emotional span) ಗಮನಿಸಿದರೆ 'ಮಳೆ' ಮತ್ತು 'ಶಾರದಯಾಮಿನಿ' ಅಥವಾ ಮಲೆದೇಗುಲದ ಕೆಲವು 'ಸುನೀತ'ಗಳು ಒಟ್ಟಾರೆ 'ಮನಂಬುಗುವಂಥ' ರಮ್ಯಕೃತಿಗಳಾಗುತ್ತವೆ. ಇಲ್ಲಿಯ ಸುಸಂಸ್ಕೃತ 'ರುಚಿ'ಯನ್ನು ಕವಿಯಂತೆಯೇ ಒಪ್ಪಿಕೊಂಡಿರುವವರಿಗೆ ಮಾತ್ರ ಆಪ್ಯಾಯಮಾನತೆ ಕಂಡುಬರಬಹುದಾಗಿದೆ. ಇದನ್ನೇ ನಾನು Romantic experience ಎನ್ನುತ್ತೇನೆ. ಇದನ್ನು ಒಂದು ಸಂವೇದನೆಯೆಂದು ಪರಿಗಣಿಸುವಲ್ಲಿ ಈ ಕವಿ ಸಾರ್ಥಕತೆಯನ್ನು ಪಡೆಯುತ್ತಾರೆ.

'ಹಂಸದಮಯಂತಿ' ಮತ್ತು ಇತರ ಗೀತರೂಪಕಗಳು ಬೇರೆ ಬೇರೆ ವಸ್ತುಗಳ ಒಂದೊಂದು ಅಂಕಗಳಂತೆ ಕಂಡುಬರುತ್ತವೆ. ಆದರೂ ಇವರ ಋತುವೈಭವವನ್ನು ಕುರಿತ ಕೃತಿಗಳಲ್ಲಿ 'ವಸಂತ ಚಂದನ'ವು ಪುತಿನ ಅವರ ಗೇಯರೂಪಕಗಳಲ್ಲಿ

ಶ್ರೇಷ್ಠವಾದುದೆಂದು ಹೇಳಬಹುದು. ಇದರ ರಚನೆಗೆ ಕವಿಯು ಕೊಟ್ಟಿರುವಷ್ಟು ಮಾನಸಿಕ ಪರಿಪಕ್ವತೆಯನ್ನು ಬೇರಾವುದಕ್ಕೂ ಕೊಟ್ಟಿರಲಾರರು. ವಸಂತ ಕಾಲದಲ್ಲಿ ಹುಣ್ಣಿಮೆಯ ಸಮೀಪದ ಒಂದು ರಾತ್ರಿಯ ಸೌಕುಮಾರ್ಯ ಅನುಭವವೇ ಇವರ ಭಾವುಕತೆಗೆ ಆಧಾರವಾದಂತಿದೆ.

ಉದಾ:ಗೆ. ಚಂದ್ರೋದಯದ ವರ್ಣನೆ:

ಸಹಚರಿ ಬಾನ ಬಣ್ಣವ ಮಾಗಿಸಿ ಶಶಿ
ಮೂಡುತಿಹನದೊ ।

ವೃಂದ (ಅದೇ)

ಸಹಚರಿ ಉದ್ಯಾನದ ಪುಷ್ಪವೃಂದ
ಲಜ್ಜೆಯ ಸಿರಿ ಹೊಂದಿದಂದ
ತೆಳು ಬೆಳಕಿನ ಮೇಲುದುವನು
ತಳೆಯುವಂತಿಗೋ–

ವೃಂದ ತಳೆಯುವಂತಿಗೋ
ಬಾನಬಣ್ಣವ ಮಾಗಿಸಿ ಶಶಿ
ಮೂಡುತಿಹನಿಗೋ–

ಸಹಚರಿ ತಮವನುಳಿದವೆನುವ ತೆರದಿ
ಸಿಡಿದು ನೆಳಲ ಬಿಸುಟು ನೆಲದಿ
ತರುಗಳೆದ್ದು ಬೇರೆ ತರವ
ತೋರುವಂತಿಗೋ–

ವೃಂದ ತೋರುವಂತಿಗೋ
ಬಾನ ಬಣ್ಣವ ಮಾಗಿಸಿ ಶಶಿ
ಮೂಡುತಿಹನಿಗೋ

ಸಹಚರಿ ನೆಳಲು ಬೆಳಕಿನೆಂಥ ಆಟ
ಶ್ಯಾಮಗೋಪಿಯರ ಕೂಟ
ಎಲ್ಲೋ ಎಂದೋ ಎನಿಸುವಂಥ
ಚಂದವಾಯ್ತಿಗೋ–

ಭಾವುಕ ಎಲ್ಲೋ ಎಂದೋ ಎನಿಸುವಂಥ
ಮಾಟವಾಯ್ತಿಗೋ
ಬಾನಬಣ್ಣವ ಮಾಗಿಸಿ ಶಶಿ ಏರುತಿಹನಿಗೋ

ಇಲ್ಲಿಯ ಆವರ್ತಗಳು ಚೆನ್ನಾಗಿ ವಿಚಾರ ಮಾಡಿದುದರಿಂದ ಬಂದಂತಿವೆ. ಅಲ್ಲದೆ ಇದರ ರಾಗರಂಜನೆಯಲ್ಲಿ ಕವಿಯು mystic quality ಯನ್ನು ಬೆರೆಸುವುದರಿಂದ ಗೀತವು ಹೆಚ್ಚು ರಂಜಕವಾಗುತ್ತದೆ. ಹೀಗೆಯೇ ಇಡೀ ರಚನೆಯಾಗಿ 'ವಸಂತ ಚಂದನ'ವು ಮನಮುಟ್ಟಬಹುದಾಗಿದೆ. ಗೀತೆಯ ಉಳಿದ ಗುಣಗಳೂ ಸೇರಿತೆಂದರೆ (ಕಂಠಮಾಧುರ್ಯ, ತಾಳಗತಿ ಮತ್ತು ರಾಗದ ಅಚ್ಚುಕಟ್ಟು ಇತ್ಯಾದಿ) ಈ ಕೃತಿಯು ರೋಮಾಂಚನಕಾರಿಯಾಗಬಲ್ಲುದು.

ಕವಿ 'ಪುತಿನ' ಅವರ ಈ ಗುಣವನ್ನೇ ನಾನು ಇಂದಿನ ವಾಗ್ಗೇಯಕಾರರ ಮತ್ತು ಸಂಗೀತದ ವಿಮರ್ಶಕರ ಗಮನಕ್ಕೆ ತರಲು ಬಯಸುತ್ತೇನೆ. Roamntic ಕಾವ್ಯದ ಸಂಪ್ರದಾಯದಿಂದ ಕನ್ನಡ ಸಂಗೀತಕ್ಕೆ ವಿಶಿಷ್ಟವೂ ಆಧುನಿಕವೂ ಅದೊಂದು 'ಗುಣ'ವು ವಸ್ತುತಃ ಸೇರಬೇಕಾಗಿದೆಯಷ್ಟೆ (ಇದನ್ನೇ ಪುರಂದರದಾಸರೂ ಕನಕದಾಸರೂ ತ್ಯಾಗರಾಜರೂ ಮಾಡಿದುದುವೆನ್ನುತ್ತೇವೆ).

ಪುತಿನ ಸ್ವತಃ ಸಾಂಪ್ರದಾಯಿಕ ಮನೋಧರ್ಮದ ಕವಿ. ಭಕ್ತಿಯು ಇವರ ಕೃತಿಗಳಲ್ಲಿ ಲೀಲಾಜಾಲವಾಗಿ ಹರಿಯುತ್ತದೆ. ಅಹಲ್ಯೆಯ ಉತ್ತರಾಂಕದ ರಚನೆಯಲ್ಲಿ ಇದು ಸಮಾಪ್ತಿಗೊಂಡಂತಿದೆ. ಅಥವಾ ಕವಿಯು 'ಇದನ್ನು' ನಿರ್ಧರಿಸಿಕೊಂಡಂತೆ ತೋರುತ್ತದೆ. ಇವರ ಕಾವ್ಯದಲ್ಲಿ ಭಕ್ತಿಯು ಕೇವಲ mysteryಯ ಹಂತವನ್ನು ಮುಟ್ಟಿದಾಗ ಮಾತ್ರ ಅನುಭವದ ತುದಿಯನ್ನು ಮುಟ್ಟುತ್ತದೆ. ನಿಜಕ್ಕೂ ಪುತಿನ ಅವರ ಕಾವ್ಯದಲ್ಲಿ mysteryಯ ಅಂಶವು ಹೊಳೆದು ಹರಿದಾಡುತ್ತಾ ಸಾಗಿದಂತೆ ಅವರ 'ಭಕ್ತಿ'ಯೆಂಬ ಲೌಕಿಕ ವಸ್ತುವು ಅಲೌಕಿವಾಗಿ ಬಿಡುವಂತೆ ಇರುತ್ತದೆ. ಇದಕ್ಕೆ ಜಾತ್ಯಾತೀತವಾದ ಬಳಕೆಯಿರುವುದರಿಂದ ಪುತಿನ ಅವರ ಕಾವ್ಯವಾಗಲಿ, ಕವಿತೆಯಾಗಲಿ, ಗೀತವಾಗಲಿ ಎಂಥವರಿಗೂ ಬೇಕಾಗಬಹುದಾಗಿವೆ.

ನಮ್ಮ ಸಂಗೀತದಲ್ಲಿ ಪುರಂದರದಾಸ, ತ್ಯಾಗರಾಜ ಮತ್ತು ವಚನಗಳ ಹಾಡುವಿಕೆಗೆ ಪುತಿನ ಅವರ ಭಕ್ತಿಭಾವುಕತೆಯೂ ಸಹಜವಾಗಿ ಸೇರುತ್ತದೆ. ಇದನ್ನು ಅವರು ಹೊಸಗನ್ನಡದಲ್ಲಿ ರಚಿಸಿರುವುದರಿಂದ ಇಂದಿನ ಕನ್ನಡಕ್ಕೆ ಸಂಗೀತದ 'ಗೆಲುವು' ಕೂಡಿದಂತೆ ಆದೀತು.

ಕವಿಯಾಗಿ ಪುತಿನ ಪ್ರಸಿದ್ಧರಾಗಿರುವುದನ್ನು ಮತ್ತೊಮ್ಮೆ ಪರಿಶೀಲಿಸಿದಲ್ಲಿ ಅವರು ಗೀತಕಾರರಾಗಿ ತೋರುತ್ತಾರೆ. ಇವರಲ್ಲಿ ಅರಳುವ 'ಲೌಕಿಕ'ವನ್ನು ಪಾಶ್ಚಾತ್ಯ ಕವಿಗಳ 'ಲೌಕಿಕ'ದೊಡನೆ ಅದರಲ್ಲೂ Romantic ಕವಿಗಳ ರಚನೆಗಳೊಡನೆ ಹೋಲಿಸಿದಲ್ಲಿ ಅಲ್ಲಿಯಂತಹ 'ಸಂಕೀರ್ಣತೆ'ಯು ಪುತಿನ ಅವರಲ್ಲಿ ಕಂಡುಬರುವುದಿಲ್ಲ. ಅವರ Romantic ಸಂವೇದನೆಯನ್ನು ತುಂಬಿಕೊಳ್ಳುವ ಕವಿಯ ಸ್ವಾತಂತ್ರವನ್ನು ಪುತಿನ ಅವರಲ್ಲಿ ನಾವು ಕಾಣುವುದಿಲ್ಲ. ಕುವೆಂಪು ಹಾಗೂ ಬೇಂದ್ರೆಯವರಲ್ಲಿ ಅದೇ ಸಂವೇದನೆಯು ಹೊಳೆಯುವಷ್ಟು ತೀಕ್ಷ್ಣತೆಯು ಕೂಡ ಪುತಿನ ಅವರಲ್ಲಿ ಕಂಡುಬರುವುದಿಲ್ಲ. ಏಕೆನ್ನುವ

ಪ್ರಶ್ನೆಗೆ ಉತ್ತರವೇನೂ ಕಠಿಣವಾಗಲಾರದು. ಮೊದಲೇ ಹೇಳಿರುವಂತೆ ಈ ಕವಿ ತನಗೇ ಗಂಭೀರತೆಯ ಅಥವಾ ಮಡಿವಂತಿಕೆಯ ಕಡಿವಾಣವನ್ನು ಹಾಕಿಕೊಂಡೇ ಕಾವ್ಯರಚನೆಯನ್ನು ಸಾಧಿಸುತ್ತಾರೆ. ಆದುದರಿಂದ ಹೀಗೆ ಎನ್ನುವುದು ಒಂದು ತಕ್ಷಣದ ಉತ್ತರವಾದರೆ ಈ ಕವಿಯ ಕೃತಿಗಳ ಪುನಃಪರಿಶೀಲನೆಯು ಮತ್ತೊಂದನ್ನು ದೊರಕಿಸುವ ಸಾಧ್ಯತೆಯಿದೆ.

ನಮ್ಮ ಸಂಗೀತಗಾರರು (classical musicians) ಭಾವಗೀತೆಗಳನ್ನು ಕೀರ್ತನೆಗಳ ಹಗುರವಾದ ಹಂತಕ್ಕೆ ಕೂಡ ಸ್ವೀಕರಿಸುವುದಿಲ್ಲ. ಆದರೆ ಸುಗಮ ಸಂಗೀತಗಾರರು ಒಂದು ರೀತಿಯಲ್ಲಿ ಸ್ವೀಕರಿಸಿದ್ದಾರೆ ಎನ್ನಬಹುದು. ಅಷ್ಟರಿಂದ ಭಾವಗೀತೆಗಳ 'ಸಾಹಿತ್ಯಕ ಮೌಲ್ಯ'ಕ್ಕೆ ನ್ಯಾಯ ದೊರಕುತ್ತಿದೆ ಎಂದು ಧೈರ್ಯವಾಗಿ ಹೇಳಲಾಗುವುದೂ ಇಲ್ಲ. ವಾಸ್ತವಾಗಿ ಭಾವಗೀತೆಗೆ ರಾಗಸಂಯೋಜನೆ ಮಾಡುವವರು ಅದರದರ 'ಗೀತಿಕೆ'ಗೆ ಮಾತ್ರ ಸಂಯೋಜನೆಯನ್ನು ಅಳವಡಿಸುವುದನ್ನೇ ಸಾಮಾನ್ಯವಾಗಿ ಕೇಳುತ್ತಿದ್ದೇವೆ. ರಾಗವು ಕೆಡಬಾರದೆಂಬುದು ಅವರ ಉದ್ದಿಶ್ಯವೂ ಆಗಿರುತ್ತದೆಯಷ್ಟೆ. ಆದುದರಿಂದ ನಮ್ಮ ಭಾವಗೀತೆ ಸಂಕೀರ್ಣವಾದ ಭಾವವನ್ನು ಒಳಗೊಂಡಾಗಲೆಲ್ಲಾ ಅದರ ಹಾಡುವಿಕೆಯು ಅಸಾಧುವಾಗುತ್ತಿದೆ. ಅಥವಾ ಭಾವಗೀತೆಗೆ ಅರ್ಥದ ಹಂತದಲ್ಲಿ ಪೆಟ್ಟು ಬೀಳುತ್ತದೆ. ಇಂತಹ ತೊಡಕು ದಾಸರ ಪದಗಳಿಗಾಗಲಿ ಶುದ್ಧಕೀರ್ತನೆಗಳಿಗಾಗಲಿ ಆಗುವುದಿಲ್ಲ. ಇಂತಹ ಸ್ಥಿತಿಗತಿಯ ನ್ಯಾಯವಾದ ಚಾಲನೆಗೆ ನಮ್ಮ ಸಂಗೀತಜ್ಞರೂ ಸಂಗೀತಗಾರರೂ ಮನಸ್ಸಿಟ್ಟು ಪುತಿನ ರೂಪಕಗಳಲ್ಲಿ ಶೋಭಿಸುವ ರಚನೆಗಳನ್ನು ಹಳೆಯ ಕೀರ್ತನೆಗಳ ಹಂತದಲ್ಲಿ (ಸಾಧ್ಯವಾದಷ್ಟು ಮಟ್ಟಿಗೆ) ಸ್ವೀಕರಿಸುವುದರಿಂದ ಪ್ರಗತಿಯನ್ನು ಸಾಧಿಸಿದಂತಾಗುತ್ತದೆ. ಗೋಕುಲ ನಿರ್ಗಮನದ 'ಕೃಷ್ಣನ ಕೊಳಲಿನ ಕರೆ'ಯಾಗಲಿ 'ನಿಲ್ಲಿಸದಿರು ವನಮಾಲಿ ಕೊಳಲಗಾನವ' ಇತ್ಯಾದಿ ಆಯ್ದ ಭಾವಗೀತೆಗಳನ್ನು ರಾಗಸಂಯೋಜನೆಯಿಂದ ಮಧುರವಾದ ಕಂಠದಲ್ಲಿ ಸಂಗೀತವಾಗಿಸಿದಲ್ಲಿ ಯಾರಿಗೆ ತಾನೆ ಬೇಕಾಗುವುದಿಲ್ಲ? ಇವರ ಗೀತರೂಪಕಗಳ ಕೃತಿಗಳಿಗೆ ಡಾ. ದೊರೆಸ್ವಾಮಿ ಅಯ್ಯಂಗಾರ್ ಅವರು ಸ್ವರ ಸಂಯೋಜನೆಯನ್ನು ಮಾಡಿರುವುದನ್ನೇ ಬಳಸಿಕೊಳ್ಳಲೂ ಅಡ್ಡಿಯಿರಬೇಕಾದುದಿಲ್ಲ.

ಒಟ್ಟಿನಲ್ಲಿ ಪುತಿನ ತಮ್ಮ ಗೀತೆಗಳ ರಚನೆಯಲ್ಲಿ ರಾಗದ ಕಡೆಗೂ ನಾಟಕೀಯತೆಯ ನೆಲೆಗೂ ಮನಸ್ಸು ಮಾಡುವುದಲ್ಲದೆ ಭಾವಗೀತೆಗಳ ರಚನೆಯಾಗಲಿ ಕವಿತೆಗಳ ರಚನೆಯಲ್ಲಾಗಲಿ ಭಾಷೆಯ ಲಾಲಿತ್ಯವನ್ನು ಸಾಧಿಸುತ್ತಾರೆ. ಆದುದರಿಂದ ಈ ಕವಿಯ ಪ್ರತಿಭೆಯು ಗೀತ ಪ್ರೇರಣೆಯಿಂದ ಜಾಗೃತವಾಗಿರುವಂಥದು ಎಂದು ಹೇಳಬಹುದಾಗಿದೆ. 'ಈ ತೂಗುಯ್ಯಲಾಟವಿರದಿದ್ದರೆ?' ಎಂಬ ಪ್ರಶ್ನೆಗೆ ಸರಿಯಾದ ಉತ್ತರವಂತೂ ಇಲ್ಲ.

ಪುತಿನ ಸಹಜವಾಗಿ 'ಪುರಾಣಪ್ರಜ್ಞೆ'ಯ ಕವಿ. ಇದರ ಬಲದಿಂದಲೇ ಅವರು ನಾಟಕಕಾರರಾಗಿದ್ದಾರೆ. ಆದರೆ ರಂಗಭೂಮಿಯ ಸಾಧ್ಯತೆಯನ್ನು ಚೆನ್ನಾಗಿ ಅರಿತ ನಾಟಕಕಾರರಂತೆ ಅಲ್ಲ. ಕಲ್ಪನೆಯನ್ನೆಲ್ಲಾ ರಂಗಭೂಮಿಯಲ್ಲಿ ಸಾಧಿಸಬಹುದು ಎಂಬ

ಒಂದು ವಿಶಾಲ ಧೋರಣೆ (Broad attitude) ಯಿಂದ ಇವರು ನಾಟಕದ ಪ್ರಕಾರಕ್ಕೆ ಕೈಹಚ್ಚಿದ್ದಾರೆಂಬುದನ್ನು ಇವರ 'ಅಹಲ್ಯೆ'ಯಂಥ ಕೃತಿಯ ಅಧ್ಯಯನದಿಂದಲೇ ಸಾಬೀತು ಪಡಿಸಬಹುದಾಗಿದೆ.

'ಅಹಲ್ಯೆ'ಯಲ್ಲಿ ಸಮಕಾಲೀನ ಲೌಕಿಕ ಸತ್ಯವನ್ನು ಧ್ವನಿಸಬಲ್ಲ ಸಾಮರ್ಥ್ಯವಿದೆ. (ಇದಕ್ಕೆ ಕೈಲಾಸಂ ಅವರ ಗಂಡಸ್ಕತ್ರಿಯನ್ನು ಹೋಲಿಸಿ ನೋಡಬಹುದು.) ಇದನ್ನು 'ಗೀತನಾಟಕ' ಎಂದು ಅವರೇ ಕರೆದಿದ್ದಾರೆ. ಪುರಾಣ ಪ್ರತಿಜ್ಞೆಯ ಕಥಾವಸ್ತುವನ್ನೇ ಇಲ್ಲಿ ಬಳಸಿಕೊಳ್ಳಲಾಗಿದೆಯಷ್ಟೆ. ಯಯಾತಿ (ಗಿರೀಶ್ ಕಾರ್ನಾಡರ ಕೃತಿ) ಯಂಥ ಪೌರಾಣಿಕ ವಸ್ತುವು ನಿಜವಾದ ನಾಟಕಕಾರರ ಕೈಲಿ ರೂಪವಾಳುವುದನ್ನು ಅರ್ಥ ಮಾಡಿಕೊಂಡಲ್ಲಿ ಪುತಿನ (ಅಥವಾ ಅಂಥ ಕವಿಗಳು) ಅವರ ಪುರಾಣ ಪ್ರಜ್ಞೆಯಿಂದ ಮೂಡಿಬರುವ 'ರೂಪಕ'ಗಳಿಗೂ 'ನಾಟಕ'ಕ್ಕೂ ಇರುವ ವ್ಯತ್ಯಾಸಗಳನ್ನು ಅರಿತುಕೊಳ್ಳಬಹುದಾಗಿದೆ. ವಾಸ್ತವವಾಗಿ ನಾಟಕಕ್ಕೆ ಎಂಥ ವಸ್ತುವಾದರೂ ಚಿಂತೆಯಿಲ್ಲ. ಆದರೆ ಅದಕ್ಕೆ ಪ್ರದರ್ಶನ ಸಾಧ್ಯತೆ ಮತ್ತು ರಂಗಪರಿಕರಗಳ ಪ್ರಜ್ಞೆ ಇರಲೇಬೇಕಾಗುತ್ತದೆ. ಹಾಗಿಲ್ಲದಿದ್ದರ ರೂಪಕಗಳು ಪ್ರದರ್ಶನಕ್ಕೆ ತಕ್ಕುವಾಗದೆ ಕೇವಲ ಓದಿಕೊಳ್ಳುವುದಕ್ಕೂ ವಾಚನಕ್ಕೂ (ಆದುದರಿಂದ ರೇಡಿಯೋ ರೂಪಕಗಳಾಗಲು) ಯೋಗ್ಯವಾಗುವುದುಂಟು. ಪುತಿನ ಅವರ ರೂಪಕಗಳಿಗೆ ಈ ಮಾತು ಚೆನ್ನಾಗಿ ಅನ್ವಯಿಸುತ್ತದೆ.

ಓದುವುದಕ್ಕೆ 'ಅಹಲ್ಯೆ' ಒಂದು ಆಶ್ಚರ್ಯಕರ ಕೃತಿಯಾಗಿದೆ. ಅದರ 'ಪೂರ್ವಾಂಕ'ವನ್ನು ಷೇಕ್ಸ್‌ಪಿಯರನ ದುರಂತಕ್ಕೆ ಸಮಾನವೆಂದು ಸಮರ್ಥಿಸಲೂ ಆಗುತ್ತದೆ. ಇದರ ಮಧ್ಯಮಾಂಕವಾಗಲಿ ಉತ್ತರಾಂಕವಾಗಲಿ ರಚನೆಯಲ್ಲಿ ಕೂಡ ಬೇರೆಯಾಗುವುದರಿಂದ 'ಅಹಲ್ಯೆ'ಯಲ್ಲಿ ಎರಡು ನಾಟಕ (ರೂಪಕ)ಗಳ ಜೋಡಣೆಯಿದೆ. ಭಾರತೀಯ ಜೀವನದ ಹಿನ್ನೆಲೆಯಲ್ಲಿ ಪೂರ್ಣ ತೃಪ್ತಿ ಕೊಡುವ ರೂಪಕ, ಇದು.

ಅಹಲ್ಯೆಯ ರಚನೆಯಲ್ಲಿ ಪ್ರದರ್ಶನಕ್ಕೆ ಅಡ್ಡಿಯಾಗುವ ಆತಂಕಗಳಿವೆ ಎಂದರೆ ಕಾವ್ಯಪ್ರೇಮಿಗಳಿಗೆ ಬೇಸರವೂ ಆಗಬಹುದಷ್ಟೆ. ಇದರಲ್ಲಿ ಕಾವ್ಯ ವಸ್ತು ದೃಶ್ಯಗಳಲ್ಲಿ ಅಳವಟ್ಟಂತೆ ಮೋಹಕವಾಗಿದೆ, ನಿಜ. ಆದರೆ ಅಹಲ್ಯೆಯ ಪಾತ್ರವನ್ನು ಪರಿಶೀಲಿಸಿದಲ್ಲಿ ಆತಂಕಗಳ ಅರಿವಾಗಬಹುದು.

ಟಿಪ್ಪಣಿ-ಒಂದು

೧. ಅಹಲ್ಯೆಯ ಮಾತುಗಳನ್ನು ಗದ್ಯಕ್ಕೆ ಹತ್ತಿರವಾಗಿ ಸಾಧಿಸಬಹುದು. ಇದೇ ಇಲ್ಲಿಯ ಉತ್ತಮ, ಪ್ರದರ್ಶನ ಗುಣವಾಗಿದೆ. ಆದರೆ ಆಕೆ ದೃಶ್ಯ ೩ರಲ್ಲಿ ಒಮ್ಮೆ ಮಾಧವಿಯ ಮುಂದೆ ೨೮ ಸಾಲುಗಳಲ್ಲಿ ತನ್ನ ಮತ್ತು ಇಂದ್ರನ ಸಂಬಂಧವನ್ನೂ ಉಂಟಾಗಿರುವ ಆತಂಕವನ್ನೂ ಬಿಡಿಸಿ ಹೇಳಿಕೊಳ್ಳುತ್ತಾಳೆ. ಇಲ್ಲಿಯ ವಿವರವೇ 'ರಂಗಕ್ರಿಯೆ'ಯನ್ನು ನಿಧಾನಗೊಳಿಸಿಬಿಡುತ್ತದೆ. ಪುರಾಣದಲ್ಲಿ ಇಂಥ ನಾಟಕೀಯ ವಿವರದಿಂದ ರಂಜಕವಾಗುತ್ತದೆ ಎಂಬುದನ್ನು ಮರೆಯಬಾದರು. ಆದರ ಪ್ರದರ್ಶನಕ್ಕೆ

ಮಾತ್ರ ಇದು ಅನುಕೂಲವಾಗುವುದಿಲ್ಲ. ಇಲ್ಲಿ ಮೂಡುವ 'ಅಹಲ್ಯೆಯ ಭಯ'ವನ್ನು ಬೇರೆ ರೀತಿಯಲ್ಲಿ ರಂಗದ ಮೇಲೆ ಯಶಸ್ವಿಗೊಳಿಸಬಹುದು.

ಈ ಉದಾಹರಣೆಯನ್ನು ಹಿನ್ನೆಲೆ ಗಾಯನದಿಂದ ಮೂಕಾಭಿನಯಕ್ಕೆ ಅಳವಡಿಸುವುದೂ ಕಷ್ಟ. ಏಕೆಂದರೆ ಸಾಹಿತ್ಯದ ಭಾರವೇ ಹೆಚ್ಚಾಗುತ್ತದೆ. ಅಲ್ಲದೆ ಇಲ್ಲಿಯ ಏಳು ನುಡಿಗಳಿಗೆ ರಾಗಸಂಯೋಜನೆ ಮಾಡುವುದಾದರೆ ರಾಗಮಾಲಿಕೆಗೇ ಶರಣಾಗಬೇಕು. ಇಲ್ಲದಿದ್ದರೆ ಹಾಡನ್ನು ತಡೆದುಕೊಳ್ಳಲಾಗುವುದಿಲ್ಲ. ಇಲ್ಲಿ ಪಾತ್ರದ ಸ್ವಾರಸ್ಯ ಮಡುಗಟ್ಟಿದೆ. ಆದರೆ ಶೈಲಿಯ ಬಿಗಿಯಿಂದಾಗಿ ಮಾತಿನ ಅಥವಾ ಗದ್ಯದ ಹತ್ತಿರಕ್ಕೆ ತರುವುದಕ್ಕೂ ಅಡ್ಡಿಯಾಗುತ್ತದೆ. ಮಾತಿನಂತೆ ಇರುವುದರಿಂದ ಹಾಡಿನ ರೂಪದಲ್ಲಿ 'ನಿಲುಗಡೆ'ಗಳನ್ನು ಸಾಧಿಸುವುದಕ್ಕೂ ಅಡ್ಡಿಯಾಗುತ್ತದೆ. ಅರ್ಥವನ್ನು ಸಾಧಿಸಬಲ್ಲ ಹಾಡುಗಾರಿಕೆಗೆ ಮಾತ್ರ ನೃತ್ಯವನ್ನೂ ಅಭಿನಯವನ್ನೂ ಸರಾಗವಾಗಿ ಸಾಧಿಸಬಹುದು. ಇಲ್ಲದಿದ್ದರೆ 'ನಾಟಕ'ವಾಗುವುದಿಲ್ಲ.

೨. ಹೀಗೆಯೇ 'ಇಂದ್ರ'ನ ಪಾತ್ರದಲ್ಲೂ ಆಗಿದೆ. ಮೇಲಿನದನ್ನು ನಾನು ಸಾಹಿತ್ಯದ ಭಾರವೆಂದಿದ್ದೇನೆ. ಮಾತಿನ ಸರಳತೆಯನ್ನು ಕವಿ ಮರತಂತೆ ತೋರುತ್ತದೆ. ಕೆಲವೆಡೆ ಇಂಥ ರಚನೆಗಳು ಅಡ್ಡಿಯಾಗುತ್ತದೆ. ದೃಶ್ಯ ೬ರಲ್ಲಿ ಇಂದ್ರನು ಅಹಲ್ಯೆಯ ಸಂಗಡ ಮಾತಾಡುತ್ತಾನೆ ಆಗ:

ಇಂದ್ರ – ನಾ ಬಂದುದಚ್ಚರಿಯೆ, ಪ್ರಿಯೆ, ಇಲ್ಲಿ ಬೆರಗೇನು ?
ನನ್ನೊಳಗನಿಂದರಿತೆ, ಏ ವೇಳ್ವೆನದ ನಾನು ?
ಪೆರೆಗಣ್ಣ ನಿಶೆತೆರೆದಳರಳರಳಿ ಕಂಪಾಯ್ತು,
ತಂಗಾಳಿ ಮೈಮೇಲೆ ತಣುವಾಗಿ ಹರಿಯಿತ್ತು.
... ...

ಅಹಲ್ಯೆ – ಬಾರೊಲವೇ ಬಾ ಮುದವೇ
ಬಾ ಬಚ್ಚಿಟ್ಟಾಸೆ–
ಎಲ್ಲವ ಕೊಳ್ಳಿನ್ನಿಲ್ಲೆನೆ
ಎನೆ, ಮುಕ್ತಿ ಇದ್ಯೆಸೆ
ನಿನ್ನವಳಾಂ ಇನ್ನಿಲ್ಲಾಂ
ಇಂದಳಿದಳಹಲ್ಯೆ–
ಬಾಳ್ ಮಿಗುವೀ ಅನುರಾಗಕೆ
ಇಗೊ ಮೀಸಲಹಲ್ಯೆ !
(ಹೋಗುವರು)

(ಸಂಗೀತವಾಗುತ್ತಿರುವುದು ಒಂದು ಗಳಿಗೆ ರಂಗಸ್ಥಲವು ನಿರ್ಜನವಾಗಿರುವುದು. ಬಳಿಕ ಗೌತಮನು ಪ್ರವೇಶಿಸುವನು. ಸಂಗೀತವು ಬೇರೆಯ ರಾಗಕ್ಕೆ ಬದಲಾಯಿಸುವುದು)

ಇಲ್ಲಿನ ರಂಗಸೂಚನೆಗಳು ಪುತಿನ ಅವರದ್ದು–ಅವರಿಗೆ ಸಂಗೀತವು ವಾದ್ಯವೃಂದದಿಂದ ಎನ್ನುವಂತೆ ಗುರುತಿಸಿ ಅದು ಕೇವಲ ರಂಗದ ಮೇಲಿನ 'ಶೂನ್ಯ'ವನ್ನು ತುಂಬಲು ಬಳಸುವಂತೆ ತೋರುತ್ತಿದೆ. ಇದು ತುಂಬ ಸರಳವಾದ ಬಾಲಿಶ ಸೂಚನೆಯಷ್ಟೆ ಆದರೂ ಅನುಸರಿಸಬಹುದಾಗಿದೆ. ಆದರೆ ಮಾತಿಗೆ ಮೀರುವ ನಾಟಕೀಯ ಸಂದರ್ಭದಲ್ಲಿ ಕೇವಲ ಅಭಿನಯಕ್ಕೆ ಮಾತ್ರ ಪುಷ್ಟಿಯುಂಟಾಗುವಾಗ ಮಾತಿನ ಅಥವಾ ಹಾಡಿನ ಬಳಕೆಯಿದೆ ಎಂಬುದನ್ನು ಹೇಳಬಯಸುತ್ತೇನೆ. ಈ ಮಾತುಗಳು ತುಂಬ ಸೊಗಸಾಗಿಯೂ ಇವೆ ಎಂಬುದನ್ನು ಓದಿದ ಕೂಡಲೇ ಅನ್ನಿಸುತ್ತದೆ. ಆದರೆ ಅಭಿನಯವು, ಮಾತನ್ನು ಮೀರಿದಾಗ ಪರಿಣಾಮಕಾರಿ 'ನಾಟಕ'ವಾಗುತ್ತದೆ. (ಸಂಭಾಷಣೆಯು ಇಂಥ ಸ್ವಾರಸ್ಯಕ್ಕೆ ಎಡೆಗೊಡಬೇಕಾದಲ್ಲಿ 'ನಾಟಕ'ವು ಸತ್ವಯುತವಾಗುತ್ತದೆ.) ಮೇಲಿನ ಸಂದರ್ಭದಲ್ಲಿ ಮಾತನ್ನು ಸ್ವಾರಸ್ಯ ಉಳಿಯದಂತೆ ಬಳಸಲೂಬಹುದು ಅದಕ್ಕೆ–

ಇಂದ್ರ – ಸುರಪಥದೊಳು ಸೌರಭದೊಲು ತೇಲಿಪೆ ಬಾನಿನ್ನ !

ಅಹಲ್ಯೆ – ನಿನ್ನವಳಾಂ ಇನ್ನಿಲ್ಲಾಂ ಇಂದಳಿದಳಹಲ್ಯೆ
ಬಾಳ್ ಮಿಗುವೀ ಅನುರಾಗಕೆ ಇದೊ ಮೀಸಲಹಲ್ಯೆ !
ಅಪ್ಸರೆಯ ಗೀತಕೂ ಇನಿದಾದ ಹಾಡೊಂದು
ಧ್ಯಾನದಾಳದೊಳಿದ್ದ ಮನಕೆ ಎಚ್ಚರ ತಂದು,
ಇಂತೆಂದಿತೆಲೆ ಮರುಳೆ, ನಿನ್ನಿನಿಯಳಿಂದೊಂಟಿ,
ಇಂದಿಂತು ಅಗಲುವರೆ ? ಎನಲೆದ್ದೆ ಕಲಕಂಠಿ
ಈ ಚೆಲುವಿನಿರುಳಿನೊಳು ಬಾ, ಒಲವನರ್ಜಿಸುವ,
ಬಾ, ಇಂದು ನಮ್ಮುದಕೆ ತನುಮನವನೊಪ್ಪಿಸುವ !

ಅಹಲ್ಯೆ : ಎಂದುಮಿಲ್ಲದ ರೀತಿ, ಎಂದುಮಿಲ್ಲದ ಮಾತು !
ನಂಬಲೇ, ಬಂದನೆನೆ ನನ್ನಿನಿಯ ನನಗೋತು ?

ಇಂದ್ರ : ನಿನ್ನಿಯ ನಾನ್ನೈಸೆ. ಇಲ್ಲಿ ಸಂದೆಗವೇಕೆ ?
ಪೂರ್ಣೇಂದು ವದನೆ ಬಾ, ಸಲಿಸೆನ್ನ ಹಾರೈಕೆ.
(ಮುಂದೆ ಮುಟ್ಟ ಹೋಗುವನು)

ಇದೊಂದು ಅತ್ಯಂತ ಸ್ವಾರಸ್ಯಕರ ಸನ್ನಿವೇಶ. ರಂಗದ ಮೇಲೆ ಕೂಡ ಇದು ನಿಶ್ಚಿತ. ಆದರೆ ಇಂದ್ರನು 'ಈ ಚೆಲುವಿರುಳಿನೊಳು' ಎಂದು ಹೇಳಬೇಕಿಲ್ಲ. ಆದರೆ ಇದೇ ಸಂಭಾಷಣೆಯ ಸೊಗಸು ಕಡಿಯುವಂತೆ ಮಾತು, ಹಾಡಿನ ರೂಪ ತಾಳುವುದು. ಅಹಲ್ಯೆ ಹಾಗೂ ಇಂದ್ರ ಇಬ್ಬರೂ ಹಾಡಬೇಕಾಗುತ್ತದೆ.

ವಾಸ್ತವವಾಗಿ ಇಲ್ಲಿಯು ಮಾತಿನ ಧಾಟಿಯು ಸಂಭಾಷಣೆಯುನ್ನು ಸಾಧಿಸಲೇಬೇಕಾದಲ್ಲಿ ಮುಂದಿನ ಹಾಡಿನ ಭಾಗವನ್ನು ಮೂಕಾಭಿನಯಕ್ಕೆ ಅಳವಡಿಸಬೇಕಾಗುತ್ತದೆ. ನೋಡಿ ದೃಶ್ಯ ೬ರಲ್ಲಿ.

ಇಂದ್ರ (ಕಾಣಿಸಿಕೊಂಡು) ಬಂದೆನಿದೋ ಬಂದೆನಿದೋ
ತಿರೆಯರಳೇ, ಇಂತೆ
ಉಲ್ಲಸದೊಳು ಬನವೊಲಿಪೀ
ಚೈತ್ರಾನಿಲನಂತೆ
ಕಟ್ಟಿಲ್ಲದೆ ನಿಟ್ಟಿಲ್ಲದೆ
ಬರಿಸೊಗವಪ್ಪನ್ನ
ಸುರ ಪಥದೊಳು ಸೌರಭದೊಲು
ತೇಲಿಪೆ ಬಾ ನಿನ್ನ !

ಹೀಗೆ ಮೊಟಕು ಮಾಡಿ ನಾಟಕ ಕ್ರಿಯೆಯಲ್ಲಿ 'ನಿಯುಕ್ತ ಗತಿ'ಯನ್ನು ಸಾಧಿಸಬೇಕಾಗುತ್ತದೆ ಎನ್ನುವಾಗ ಅನೇಕ ಸ್ವಾರಸ್ಯದ ಸಂದರ್ಭಗಳೇ ಬರುತ್ತವೆ.

೩. ಇನ್ನೊಂದು ಬಗೆಯ ಅತಂಕವೂ ಇದೆ. ಉದಾ:ಗೆ ಉತ್ತರಾಂಕದಲ್ಲಿ ಅತ್ಯಂತ ಸ್ವಾರಸ್ಯಮಯ ಸನ್ನಿವೇಶದಲ್ಲಿ ಎಂದರೆ ತಪ್ಪಾಗಲಾರದು–ಯಾವುದು ಪಾತ್ರಧಾರಿಯ ಅಭಿನಯದಿಂದ 'ಅಹಾ' ಎನ್ನಿಸುವಂಥದಾಗಬೇಕೋ ಅಲ್ಲಿ ಸಾಹಿತ್ಯವಿದೆ.

(ಪತಿಯ ಆಗಮನದಿಂದ ಬೆರಗುಗೊಂಡು, ತನಗೆ ತಾನೆ) ಅಹಲ್ಯೆ–

ಇದೆ ಕನಸೋ ಅದೆ ಕನಸೋ
ನಾನರಿಯೆ – ಅಚ್ಚರಿಯೇ !

ರುದ್ರನ ಕಂಡಾ ಅಳಿವು !
ಭದ್ರನ ಕಾಂಬೀ ಉಳಿವು !
ಅಂದು ಬಯಕೆ ಸಂದಾ ತೆರ !
ಇಂದು ಬಯಕೆ ಸಲುವೀ ತೆರ !
ಅಂದಿನ ಅಳಲೇ ದಿಟವೋ !
ಇಂದಿನ ನಲವೇ ದಿಟವೋ !

(ಹತ್ತಿರ ಬಂದ ಗೌತಮನ ಪದತಲಕ್ಕೆ ಕುಸಿಯುತ್ತಾ)

ಕುಸಿಯಿತಂದು ಪೊಲ್ಲಮೆ ಹೊರೆ
ಕುಸಿವುದಿಂದು ನಲ್ಮೆಯ ಹೊರೆ.

ಇದಕ್ಕೆ ಗೌತಮ (ಆಕೆಯನ್ನು ಸಂತೈಸಿ)

ಏಳೌ ಸಖಿ ದುಸ್ವಪ್ನಕೆ
ಬೆಚ್ಚುತಲೆಚ್ಚತ್ತಂತೆ
ನಾವೆದ್ದೆವು ನಲ್ತಿಳಿವಿಗೆ
ಏಳೌ, ಬಾ, ಬಿಡು ಚಿಂತೆ

ನಮ್ಮಾಶ್ರಮವ್ವೈದಿರುವೀ
ಮಹಿಮರ ನಾವಾದರಿಸೆ
ಅರ್ಘ್ಯಾದಿಗಳನಣಿಗೈಯಲು
ಸಹಚರಿ ಸಮಯವಿದ್ದೈಸೆ.

ಅಹಲ್ಯೆ (ಮೆಲ್ದನಿಯಲ್ಲಿ)

ಬಯಸುವೆ ನಾ ಗಂಗೆಯ ತೆರ
ಪದದಿ ಕರಗಿ ಹರಿಯೆ,
ಇಲ್ಲದಿರಲು ಹಗುರಾಗಿ
ಕಂಪಿನಂತೆ ಸರಿಯೆ,

ಮೈಯೆ ಭಾರ ಮನವೆ ಭಾರ
ಬದುಕೆ ಭಾರವೆಂಬ
ಅಸರೆಯೇ ಬೇಡದಂಥ
ನಲವೆ ನನ್ನ ತುಂಬ.

ಇಲ್ಲಿಯ ಅಭಿನಯದ ತೀವ್ರತೆಯನ್ನು ಈ ಮಾತುಗಳು (ಮೋಹಕವಾಗಿವೆ) ಕುಗ್ಗಿಸಿಬಿಡುತ್ತವೆ. ಈ ಮಾತು ಕೇಳುವುದಕ್ಕೆ ಮತ್ತು ರಾಗಾನ್ವಯಕ್ಕೆ ತುಂಬ ಸೊಗಸಾಗಿದೆ. ಆದರೆ ಅಭಿನಯದ ಕ್ರಿಯೆಗೂ ಅಡ್ಡಿಯಾಗುತ್ತದೆ. ಅಹಲ್ಯೆಯು ತಲೆ ಬಾಗಿ ಏಳಲಾರದ ಬಿಡಲಾರದ ಸ್ಥಿತಿಯಲ್ಲಿರುವಾಗ ಈ ಹಾಡು ಬರುತ್ತಿದೆ. ಇಲ್ಲಿ ಸಹಜವಾದ ಅಭಿನಯವನ್ನು ಮಾತುಗಳಲ್ಲಿ ವಿವರಿಸಿರುವ ಕವಿ–'ನಾಟಕ'ವನ್ನು ಮರೆತಂತೆ ಆಗಿದೆ.

ಹೀಗೆ 'ಅಹಲ್ಯೆ' ಕೃತಿಯನ್ನು ಎಚ್ಚರಿಕೆಯಿಂದ ಪರಿಶೀಲಿಸಿದಲ್ಲಿ ನಾಟಕ ರಚನೆಗೆ ಸೇರಬೇಕಿಲ್ಲದ ವಿವರಗಳು ಪುರಾಣ ಪ್ರಜ್ಞೆಯಿಂದ ಸೇರಿಕೊಂಡಿರುವುದನ್ನು ಅರಿತುಕೊಳ್ಳಬಹುದು. ಇಲ್ಲದಿದ್ದರೆ ನಾಟಕದ ಪ್ರದರ್ಶನದಲ್ಲಿ ಒಡಮೂಡುವ ದೌರ್ಬಲ್ಯಗಳನ್ನೂ ಪುತಿನ ಒಳ್ಳೆಯ ಕವಿ ಎಂಬ ಕಾರಣದಿಂದ ಕ್ಷಮಿಸಬೇಕಾಗುತ್ತದೆ.

೪. ಆದರೆ ಈ ಕೃತಿಯ ಕೆಲವು ಭಾಗಗಳನ್ನು ಮಾತ್ರ ನೃತ್ಯ ರೂಪಕಗಳಾಗಿಸಿ ಪ್ರದರ್ಶಿಸಬಹುದು. ಆಗಲೂ ಇಡೀ ನಾಟಕವೇ ಹಾಗಾಗಬಹುದೆಂದು ಆಸೆಪಡುವುದಾದರೆ, ೧. ಅದನ್ನು ಸಹಿಸಿಕೊಳ್ಳುವ ಪ್ರೇಕ್ಷಕರು ಪಂಡಿತರೇ ಆಗಬೇಕಾದೀತು. ೨. ಆಗಲೂ ನಾಟ್ಯಕ್ಕೆ ಸೇರದ ಅಂಶಗಳನ್ನು ಗಮನಿಸಬೇಕಾಗುತ್ತದೆ. ೩. ಅಷ್ಟಾದರೂ ಎಷ್ಟರಮಟ್ಟಿಗೆ ಸಾರ್ಥಕವಾದೀತೆಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಅಂತಹ ಬುದ್ಧಿವಂತಿಕೆಯೂ ರಂಗಪ್ರದರ್ಶನದಲ್ಲಿ ಸೋಲಬೇಕಾಗುತ್ತದೆ.

ಟಿಪ್ಪಣಿ–ಎರಡು

'ಗೋಕುಲನಿರ್ಗಮನ' : ಪುತಿನ ಇದರ ಮೊದಲಿನಲ್ಲಿ ಒಂದು ಮುಖ್ಯ ಸೂಚನೆಯಿತ್ತಿದ್ದಾರೆ. [ನೃತ್ಯ ಪ್ರಧಾನವಾದ ನಾಟಕವಿದು. ಇಲ್ಲಿನ ಹಾಡುಗಳ ಅನೇಕವನ್ನು ಮೇಳದ ಗಾಯಕರು ಸಂದರ್ಭಕ್ಕೆ ತಕ್ಕಂತೆ ಪಾತ್ರಗಳ ಜೊತೆಯಲ್ಲಿಯೂ ಅವರ ನರ್ತನಾಂಗವಾಗಿಯೂ ಹಾಡುತ್ತಾರೆ.]

೧. ನಾಂದಿ ಪದ್ಯ ಸುಂದರವಾಗಿದೆ.

೨. ನಂತರ 'ಅಕ್ರೂರಾಗಮನ'ಕ್ಕೆ ಸೂಚನೆಯಿದೆಯಷ್ಟೆ–('ಮೋಡ ಕವಿದಿರುವ ರಾತ್ರಿ ಕವಿ ತನ್ನ ಮನೆಯಲ್ಲಿ ಇದ್ದಾನೆ. ಮರೆಯಲ್ಲಿ ಗೊಲ್ಲ ಹುಡುಗರು ಊದುವಂಥ ಕೊಳಲ ನಾದವು ಆಗಾಗ ಕೇಳಿಬರುತ್ತದೆ.)

ಇಲ್ಲಿಯ ವಾಸ್ತವ ಸಂದರ್ಭದಲ್ಲಿ ಕವಿ ಮಾತನಾಡಿದಲ್ಲಿ ಮತ್ತೊಂದು ಸೂಚನೆಯಿದೆ. ಇದು ರಂಗನಿರ್ದೇಶನ. (ಒಳತೆರೆ ಎದ್ದು ಬೆಳುದಿಂಗಳಾಗುವುದು) –ಕವಿಯ ಮಾತು ಮುಂದುವರಿಯುತ್ತದೆ. ಮತ್ತೆ ರಂಗನಿರ್ದೇಶನವಿದೆ–('ಮುರಳೀನಾದ ಮಧುರತರವಾಗುವುದು. ಕವಿ ಮರೆಯಾಗುತ್ತಾನೆ. ಹಾಡುತ್ತಾ ಗೋಪಿಯರು ಬರುತ್ತಾರೆ') ಎಂದಿದೆ.)

ಆದುದರಿಂದ ಈ ರೂಪಕವು ಒಂದು fantasy ಯಂತೆ ರೂಪ ತಾಳುತ್ತದೆ.

೩. ಮುಂದೆ ೫ ನುಡಿಗಳ ಒಂದು ಹಾಡನ್ನು ಗೋಪಿಯರು (ಬಹುಶಃ ೫ ಮಂದಿ) ಹಾಡುತ್ತಾರೆ. ನೃತ್ಯಗೈಯುತ್ತಾರೆ ! ಆದರೆ ಅಭಿನಯ ಪ್ರಧಾನವಾಗಬೇಕಾಗುತ್ತದೆ. ಇದರ ಕೊನೆಗೆ (ಹಾಡಿಕೊಂಡು ಹೋಗುತ್ತಾರೆ) ಎಂಬ ಸೂಚನೆಯೂ ಇದೆ. ನಂತರ (ಗೋಪಾಲಕರ ಗುಂಪು ಹಾಡಿಕೊಂಡು ಬರುತ್ತದೆ) ಎಂಬುದೂ ಇದೆ. ಇದರಲ್ಲೂ ೫ ನುಡಿಗಳಿವೆ. (೫ ಮಂದಿ ಇರಬಹುದು). ಇವರು ಹಾಡಿಕೊಂಡು ಹೋಗುವರು. ಕೊನೆಗೆ ಗೋಪಿಯರ ಮತ್ತೊಂದು ತಂಡ ಹಾಡಿಕೊಂಡು ಬರುವುದು ಎಂದಿದೆ. ಆದುದರಿಂದ ಈ ಸಂದರ್ಭಕ್ಕೆ ಪೂರಕವಾಗಿ ಮತ್ತೊಂದು ಹಾಡು ಬರುತ್ತದೆ. ಇದರಲ್ಲಿಯೂ ೪ ನುಡಿಗಳು (೫ ಮಂದಿ ಇರಬಹುದು). ಇದರ ಕೊನೆಗೂ '(ಹಾಡುತ್ತಾ ಹೋಗುತ್ತಾರೆ)' ಎಂದೂ (ಊರಿನ ಹಿರಿಯರು ಪ್ರವೇಶಿಸುತ್ತಾರೆ. ಇವರ ಜತೆಗೆ ರಾಧೆಯ ತಂದೆ ಸುದಾಸ, ಆಕೆಯ ಸಖಿಯ ತಂದೆ ಸುಬಲ ಇವರೂ ಬರುತ್ತಾರೆ) ಎಂದಿರುವುದಲ್ಲದೆ ಹಿರಿಯರು, (ಒಬ್ಬೊಬ್ಬರೂ ಒಂದೊಂದು ಮಾತು ಹೇಳುತ್ತಾರೆ)– ಎಂದಿದೆ. ಸಂಭಾಷಣೆ ಬೆಳೆಯುತ್ತದೆ. ಇದು ಗದ್ಯಕ್ಕೆ ಸಮೀಪವಾದ ರಚನೆ.

೪. ಮುಂದೆ ಇವರು ಅಂದರೆ ಹಿರಿಯರು ಹಿಂದೆ ಹಿಂದೆ ನೋಡಿಕೊಂಡು ಹೊರಡುತ್ತಾರೆ ಎಂದಾದ ಕೂಡಲೇ ಅಕ್ರೂರನ ಪ್ರವೇಶ ಮತ್ತು ಮುರಲೀನಾದದ ವರ್ಣನೆಯು ಶ್ಲೋಕರೂಪದಲ್ಲಿ ಬರುತ್ತದೆ. ನಿರ್ದೇಶಕನಿಗೆ ಇಲ್ಲಿ ಎಚ್ಚರಿಸಬೇಕಾಗಿದೆ.

೧. ಈವರೆಗೂ ಈ ಮುರಲೀನಾದವೇನಾಗಿರಬೇಕು ? ಏಕೆಂದರೆ ಮೂರು ಹಾಡುಗಳು ನಂತರ ಸುಮಾರು ೧೦ ನಿಮಿಷಗಳ ಕಾಲದ ಸಂಭಾಷಣೆ ಜರುಗಿಸಬೇಕಾಗುತ್ತದೆ.

೨. ನಾಟಕದ ಮೊದಲಿಗೆ ತೋರಿದ ಮುರಳೀವಾದನವನ್ನು ಗೌಣ ಮಾಡಿಯೇ ನಾಟಕ ಕ್ರಿಯೆಯನ್ನು ಸಾಧಿಸಬೇಕಾಗುತ್ತದೆ.

ಓದಿಕೊಳ್ಳುವವರಿಗೆ ಪ್ರದರ್ಶನದ ಈ ತೊಡಕು ತಿಳಿಯಲಾರದು. ಪ್ರೇಕ್ಷಕರಿಗಾಗಿ ಮಧ್ಯೆ ಮಧ್ಯೆ ಮುರಳೀನಾದವನ್ನು ಕೇಳಿಸಬಹುದಲ್ಲ ! ಅದು ಇನ್ನೂ continuous ಅಗಿದೆಯೆಂಬುದನ್ನು remind ಮಾಡುವುದಕ್ಕಾಗಿಯೇ ಹೀಗೆ ಮಾಡಬೇಕಾಗುತ್ತದೆ. ಇದರ ಪರಿಣಾಮಕ್ಕೆ ಯಾರು ಹೊಣೆ ? ಓದಿಕೊಳ್ಳುವವರಿಗೆ ತೊಡಕಿಲ್ಲ. ನೋಡುವವರಿಗೆ ಮಾತ್ರ ಇದು ಅಸಂಬದ್ಧವಲ್ಲವೇ ? ಆದರೆ ಎಲ್ಲಾ ಹಾಡುಗಳಿಗೂ ಮುರಳೀನಾದವನ್ನು ಸಹವಾದ್ಯ ಅಥವಾ ಒಂದೇ ವಾದ್ಯವನ್ನು, ಮುರಲಿಯನ್ನು ಬಳಸಿದರೆ ?

೩. ಮುರಳೀನಾದವೊಂದೇ constant ಆಗಿರಬೇಕಾಗುತ್ತದೆಯಷ್ಟೆ ಆದರೆ ಉಳಿದ ಹಾಡುಗಳ ಅರ್ಥವು 'ಕೃಷ್ಣನ ಕೊಳಲಿನ ಕರೆ'ಯನ್ನೇ ವಿವರಿಸುವ ಕಾರಣ ಅವುಗಳನ್ನು ತೆಗೆದುಬಿಟ್ಟರೆ ನಾಟ್ಯಾರ್ಥವು 'ಕೊಳಲಿನ ಕರೆ' ಎಂಬುದರಲ್ಲಿಯೇ ಹೆಚ್ಚು ಪರಿಣಾಮಕಾರಿಯಾಗುತ್ತದೆ. ಇದೇ ದೃಶ್ಯದಲ್ಲಿ ಅಕ್ರೂರ ಹಾಡಬೇಕಾದ ಹಾಡುಗಳ ಸಂಖ್ಯೆಯನ್ನು ಗಮನಿಸಬೇಕು. ಒಟ್ಟು ಆರು ರಾಗಗಳಲ್ಲಿ ಆರು ಹಾಡುಗಳು. ಅದರಲ್ಲಿ ಒಂದು ಕಮಾಜ್ ರಾಗದಲ್ಲಿ ದೀರ್ಘವಾದುದು (೫ ನಿಮಿಷಗಳೇ ಬರಬೇಕಾದೀತು). ನುಡಿಗಳನ್ನೂ ಪಲ್ಲವಿಯನ್ನೂ ಕೂಡಿಸಿಯೇ ತೀರಬೇಕು. ಇದನ್ನು ನೃತ್ಯ ರೂಪ ಮಾಡಬಹುದೆನ್ನಿ. ಆದರೆ ?

೪. ರಂಗದ ಮೇಲೆ ಅಕ್ರೂರನೊಬ್ಬನೇ ಇದ್ದು ತೆರೆಯ ಹಿಂದಿನಿಂದ ಗೋಪಿಯರ ಹಾಡು ಕೇಳಿಬರುತ್ತದೆ. ಈಗ ಅಕ್ರೂರ ಕೇಳಿಸಿಕೊಂಡು ಪ್ರೇಕ್ಷಕರಿಗಾಗಿ ಒಂದು ಪದ ಹಾಡಿ (ಮರೆಗೆ ಹೋಗಿ ನಿಲ್ಲುತ್ತಾನೆ) ಎಂದಿದೆ. ನಂತರ (ಗೋಪಿಯರು ಹಾಡಿಕೊಂಡು ಗುಂಪು ಗುಂಪಾಗಿ ಬರುತ್ತಾರೆ) ಸೂಚನೆ. ಅವರ ಹಾಡಿನ ನಂತರ ಗೋಪಾಲಕ ಎಂದು ಪ್ರವೇಶ. ಅವರೂ ಹಾಡುತ್ತಾರೆ. ಎಲ್ಲರೂ ಒಂದು ಪದ (ಕೊಳಲುಲಿವಾಲಿಪೆವೆಲ್ಲ ಆದೊಡೆ ಮುರಳೀಧರ ಕಾಣಲೊಲ್ಲ) ವನ್ನು ಹಾಡಿ ಹೋಗುತ್ತಾರೆ. ಇಲ್ಲಿಯ ತೊಡಕನ್ನು ಮರೆಯಲಾಗುವುದಿಲ್ಲವಷ್ಟೆ ಇಲ್ಲಿಂದ ಮುಂದೆ ಅಕ್ರೂರ ಹಾಡಿದ ಕೂಡಲೇ ಬಲರಾಮ ಮತ್ತು ಕೃಷ್ಣರ ಪ್ರವೇಶವಾಗುತ್ತದೆ. ಈಗ ಮಾತ್ರ ನಾಟಕದ ಸಂದರ್ಭವು ಒದಗುತ್ತದೆ (ಇದಕ್ಕೆ ಮುಂಚೆ ರಾಧೆಯ ತಂದೆ ಮತ್ತು ಪುರಜನರು ಬಂದಾಗ ಇಂಥ ಸಂದರ್ಭವಿತ್ತು) ಇಲ್ಲಿಯೂ ಅಕ್ರೂರನು ಇನ್ನೂ ಕೃಷ್ಣ ಬಲರಾಮರನ್ನು ಎದುರಿಸುವಂತಿಲ್ಲ. ಬಂದ ಕೃಷ್ಣ ಬಲರಾಮರು ತಕ್ಷಣ ಹಾಡುವುದಿಲ್ಲ. ಪದ್ಯವನ್ನು ಮಾತಾಡುತ್ತಾರೆ. ಕೃಷ್ಣ ಬೇರೆ (ತಟಕ್ಕನೆ ಕುಣಿಯುತ್ತಾನೆ) ಎಂಬ ಸೂಚನೆಯಿದೆ. ಅಲ್ಲದೆ ಅವನು ಬಲರಾಮನಿಗಾಗಿ

ಹಾಡಬೇಕಾಗುತ್ತದೆ. ಆದರೆ ಬಲರಾಮ ಹಾಡುವುದಿಲ್ಲ. ಮತ್ತೆ ಕೃಷ್ಣನ ೨ ಪದಗಳ ನಂತರ (ಒಂದು ಸಿಂಹೇಂದ್ರ ಮಧ್ಯಮ ಎರಡು ತೋಡಿಯಲ್ಲಿದೆ.) ಒಂದಾದ ಮೇಲೊಂದು ಕೂಡಲೇ ಬರಬೇಕು.

೫. ಮುಂದೆ ಅಕ್ರೂರ ಕಾಣಿಸಿಕೊಳ್ಳುವವರೆಗೂ ಇವರ ಮಾತು ಜರುಗುತ್ತದೆ. ಮರೆಯಾದ ಕೂಡಲೆ ಅಕ್ರೂರ ಕಾಣಿಸಿಕೊಳ್ಳುತ್ತಾನೆ. ಹೀಗೆ ಅಕ್ರೂರಾಗಮನದಲ್ಲಿ ಮುಖಾಮುಖಿ ಆತನಿಗೇ ಇಲ್ಲ. ಅಲ್ಲದೆ ಇಷ್ಟೆಲ್ಲಾ ಜರುಗುತ್ತಿರುವಾಗ ಮುರಲೀನಾದಕ್ಕೆ ಗತಿಯೇನು ?

೬. ಮುಂದಿನ ದೃಶ್ಯದಲ್ಲಿ 'ವೇಣು ವಿಸರ್ಜನೆ' ಎಂದಿದೆ. ಇಲ್ಲಿ ಮತ್ತೆ ಕವಿ ಬರುತ್ತಾನೆ. 'ಶರಣು' ಹಾಡುತ್ತಾನೆ. ಮರೆಯಾಗುತ್ತಾನೆ. (ತೆರೆ ಎದ್ದು ರಾಧೆಯನ್ನೂ ಸಖಿ ನಾಗವೇಣಿಯನ್ನೂ ತೋರುತ್ತದೆ) ಎಂದಿದೆ ಸೂಚನೆ.

ಈಗ ರಂಗದ ಮೇಲೆ ಮುಖಾಮುಖಿಯಾಗದಂತೆ ಮೂರು ಗುಂಪುಗಳು ಕಾಣಿಸಿಕೊಂಡು ಹಾಡಿ, ರಾಧೆ-ಕೃಷ್ಣರ ಸಂಬಂಧವನ್ನುಂಟು ಮಾಡಲು ಅವಕಾಶವಾಗುತ್ತದೆ. ಕೃಷ್ಣವಶಳಾಗುವ ಈ ಸಂದರ್ಭವೇ ತುಂಬ ಅಕರ್ಷಕವಾಗಿದೆ ನಿಜ. ಆದರೆ ಹಾಡುಗಳೂ passioate ಆಗಿವೆ. ಆದರೆ ಕೃಷ್ಣವಶಳಾಗುವಲ್ಲೇ 'ನಾಟಕುರಂಜಿ'ಯಲ್ಲಿ ೫ ನುಡಿಗಳ 'ಆಡು ಬಾ ಮುದ ಊಡು ಬಾ ಭಯ ದೂಡು ಬಾ ಒಲವೇ' ಎಂಬ ಹಾಡು ಬರುತ್ತದೆ. ಇದು ಅವಳದೇ ಹಾಡು ಬೇರೆ. ಕೃಷ್ಣನು ಒಂದು ಕೇದಾರಗೌಳ ಪದ ಅಂದು ಮತ್ತೆ 'ಕಲ್ಯಾಣಿ'ಯಲ್ಲಿ 'ಎದೆಗೆ ಬರುತಿದೆ ಜಗದಮುದ ಕುಣಿದಲ್ಲದೆ ನಾ ತಾಳೆನಿದ' ಎಂದು ಹಾಡುತ್ತಾನೆ. ಇಲ್ಲಿಯ ವಿಚಿತ್ರವೆಂದರೆ ಈತನು ಹಾಡಿ ಮುಗಿಸಿಯೇ ಕುಣಿಯಬೇಕಷ್ಟೆ ಕುಣಿತವನ್ನು (ನೃತ್ಯವನ್ನು) ಬೆರಸಿದರೆ? ಎಂಥದು ಅದು ?

ಇಲ್ಲಿ ಮತ್ತೊಂದು ಸೂಚನೆಯಿದೆ. ಇದು ಪ್ರದರ್ಶನದ ದೃಷ್ಟಿಯಿಂದ ಮುಖ್ಯ. -(ರಾಧಾಕೃಷ್ಣರ ನೃತ್ಯ ಅನಂದೋನ್ಮಾದದಲ್ಲಿ ಸಾಗುತ್ತಿರುವಾಗ ಅರಸುತ್ತಿದ್ದ ಗೋಪಿಕಾಬೃಂದವು ನಾಗವೇಣಿ ಮುಂದಾಗಿ ಕ್ರಮೇಣ ನೆರೆದು ರಾಸಕ್ರೀಡೆಗೆ ಆರಂಭವಾಗುತ್ತದೆ) ಎಂದಿದೆ.

ಈಗ ನಾಗವೇಣಿ 'ಅದೆಕೊ ಶ್ಯಾಮ ಅವಳೆ ರಾಧೆ ನಲಿಯುತಿಹರು ಕಾಣಿರೇ' ಎಂದು ತೋರಿಸುವಾಗಿನ ಗತಿಯೇನಾದೀತು ? ಮತ್ತೆ ಬೇರೆಯ ಸಂಗೀತಕ್ಕೆ ಅವರು ಉನ್ಮಾದದ ನೃತ್ಯ ಮಾಡಬಹುದು. ಆದರೆ ಎಲ್ಲ ಗೋಪಿಯರೂ ಹಾಡಬೇಕಾಗಿರುವ ಮತ್ತೊಂದು ಪದವಿದೆ. ಅದೂ 'ಅಕ್ಕೋ ಶ್ಯಾಮ ಅವಳೆ ರಾಧೆ' ಪಲ್ಲವಿಗೆ ಸೇರಿದುದು. ಅದುದರಿಂದ ರಂಗದ ಮೇಲೆ ಇವೆರಡೂ ಕ್ರಿಯೆಗಳು ಜರುಗುವಂತೆಯೇ ಇಲ್ಲ. ನಿಜಕ್ಕೂ ರಾಧೇ ಶ್ಯಾಮರ ಉನ್ಮಾದದ ಕುಣಿತ ಕಾಣುವಂತೆಯೇ ಇಲ್ಲ.

ಇನ್ನೂ ಒಂದು ಅಂಶವನ್ನೂ ಮರೆಯುವಂತಿಲ್ಲ. ರಾಸ ಪೂಜಾ ನೃತ್ಯದಲ್ಲಿ ಎಲ್ಲರೂ ತೊಡಗಬೇಕಂತೆ. ಎಲ್ಲರೂ ಹಾಡಲೂ ಬೇಕಂತೆ. ಇವರ ನೃತ್ಯ ನೋಡಲು ಬಂದ ಋಷಿಗಳು ಬೆರಗಾಗಿ ಹಾಡುತ್ತಾರೆ. ಆಗ ನೃತ್ಯದ ಗತಿಯೇನು ? ಋಷಿಗಳ ಹಾಡಿಗೂ ಅದಕ್ಕೂ ಏನು ಸಂಬಂಧ ಉಳಿದೀತು?

ಈ ಗೊಂದಲದಿಂದ ಮುಕ್ತಿಯಿರಲಾರದು. ಏಕೆಂದರೆ ಋಷಿಗಳ ಹಾಡು ಬೇಕಾದರೆ ನೃತ್ಯ ನಿಲ್ಲಬೇಕು. ಈ ಹಾಡುಗಳು ಉಪಯುಕ್ತವಾಗುವುದಾದರೆ ಕ್ರೀಡೆಯ ಸ್ವರೂಪವೇನಾದೀತು? ರಂಗದ ಮೇಲೆ ಒಂದು ಕ್ರಿಯೆ ಮಾತ್ರ ಜರುಗಬಹುದು. ಇದು ಮುಖ್ಯ ಸೂತ್ರ. ಎರಡು ಮೂರನ್ನು ಜೋಡಿಸಬಹುದೆಂದರೂ ಅವು ಒಂದಕ್ಕೊಂದು ಪೂರಕವಾದರೂ ಕ್ಷಚಿತ್ತಾಗಿ ಮಾತ್ರ ಸಾಧ್ಯ. ಪುತಿನ ಇದನ್ನು fantasy ಯಲ್ಲಿ ಒಂದುಗೂಡಿಸಿ ಬಿಟ್ಟಿದ್ದಾರೆ.

ಇದನ್ನೇ ಅವರು ಕವಿಯ ಕಲ್ಪನೆ ಎಂದು ಸಂಯೋಜಿಸಿದ್ದಾರಷ್ಟೆ. ಇದನ್ನು ಪ್ರದರ್ಶಿಸಲು ಹೊರಟರೆ ಗತಿಯೇನಾದೀತು– ಕವಿ ಚಿಂತಿಸಿರಲಾರರು.

ಒಟ್ಟಿನಲ್ಲಿ ಪ್ರದರ್ಶನದ ಟಿಪ್ಪಣಿಯನ್ನು ಹೀಗೆಯೇ ನಿಲ್ಲಿಸಬೇಕಾಗಿದೆ. ನನ್ನ ಮಿತ್ರರಿಗೆ ಇದು ಉಪಯೋಗಕ್ಕೆ ಬರುವುದೆಂದು ನಂಬಿ ಇಂತಹ ಸಮಸ್ಯೆಗಳನ್ನು ಪರಿಹರಿಸಿಕೊಂಡು ಇದರ ನ್ಯಾಯವಾದ ಪ್ರದರ್ಶನವನ್ನು ಸಾಧಿಸಬಹುದೆಂದು ಅನ್ನುತ್ತೇನೆ.

ಇದರ ಭಾವಗೀತೆಗಳು ಅದ್ಭುತವಾಗಿವೆ. ಇದರ ವಸ್ತು ಕೂಡ ಒಂದು ಮಹತ್ವದ ಸಂದರ್ಭವನ್ನು ತೋರಿಸುತ್ತದೆ. ಇದನ್ನು ವಾಚನ ಮಾಡಿದರೆ ಮತ್ತು ಸಮಾಧಾನದಿಂದ ಕಿವಿಗೊಟ್ಟರೆ ಸಂತೋಷವಾಗುವುದರಲ್ಲಿ ಅಭ್ಯಂತರವೇನೂ ಇರಲಾರದು.

ಟಿಪ್ಪಣಿ–ಮೂರು : ವಿಕಟಕವಿ ವಿಜಯ (ರಾಜಕೀಯ ಪ್ರಹಸನ)

೧. ಇದರ ಮುನ್ನುಡಿಯಲ್ಲಿ ಈ ಕವಿ ಎಂಥ ಕನಸುಗಾರರೆಂದೂ ಅವರ ಪ್ರಾಮಾಣಿಕ ವಲಯದಲ್ಲಿ ಮುಳುಗಿದ ಕಾರಣ 'ರಂಗಭೂಮಿಯ ಎಚ್ಚರ' ತಪ್ಪಿದವರೆಂಬುದೂ ತಿಳಿಯುವಂತಿದೆ. ಇಲ್ಲಿ, ಅಂದರೆ ಈ ಪ್ರಹಸನದಲ್ಲಿ 'ವಿಕಟಕವಿ'ಯ ಚೋದ್ಯವಿರದಿದ್ದರೆ ರಂಗರಂಜನೆಗೆ ಬೇರೊಂದು ಪಾತ್ರವಿಲ್ಲದಂತಿದೆ.

ಇಲ್ಲಿ ದೃಶ್ಯ ೧ರಲ್ಲಿ ವಿಕಟಕವಿ ಹೀಗೆ ಹೇಳುತ್ತಾನೆ–ಇಲ್ಲಿ ಇವನು = ಕವಿ

ಏನೆಂದುಕೊಂಡೆ ನಮ್ಮನು ನೀನು
ಪದ ಬೇಕಾದರೆ ಇವನು
ನಗೆ ಬೇಕಾದರೆ ನಾನು
ನಮ್ಮನು ಬಿಟ್ಟರೆ ದೊರೆಗಿನ್ನಿಲ್ಲ
ಇದ ದೇವರೆ ಬಲ್ಲ.

ಈ ಮಾತಿಗೆ ಉತ್ತರವಾಗಿ ಸೈನಿಕನು.

ಹಂಗಾ, ನೀನ್ ಬಲು ದೊಡ್ಡ್ ಮನುಸ ಕಣಪ್ಪಾ,
ದೊರೆಗೇ ಪದ ಹೇಳೋನು ನಮಗೂ ಒಂದು ಹೇಳಪ್ಪಾ

ವಿಕಟ ಕವಿ : ನಿಮಗೂ ಹಾಡಿದೆ ಒಂದು.
ಕೋಣೆಯ ಕವಿ ಇವ ; ಹಾಡಲು ಬಾರದು.
ನಾ ಹಾಡುವೆನಿಂದು (ಸಾಭಿನಯವಾಗಿ ಹಾಡುವನು)
ಲೆಫ್ಟ್‌ರೈಟ್ ಲೆಫ್ಟ್‌ರೈಟ್ ಎನುಗೆಣೆಯಾ (ಇತ್ಯಾದಿ)

ಈ ಮನರಂಜನೆಯ ಸಂದರ್ಭ ಕೇವಲ 'ಪ್ರಹಸನ'ಕ್ಕಾಗಿದೆ !

೨. ರಾಜನ ದರ್ಬಾರಿನಲ್ಲಿ ವಿಕಟಕವಿಯು ಜನಪದ ಚಳುವಳಿಯನ್ನು ವರ್ಣಿಸುತ್ತಾನೆ. ಈ report ದುರ್ಬಲವಾದುದು. ಏಕೆಂದರೆ ನಮ್ಮ ಜನಕ್ಕೆ ಇಂಥ ವರ್ಣನೆಗಿಂತ ಮಿಗಿಲಾದ ಅಥವಾ ಹಸಿಹಸಿಯಾದ ಚಳುವಳಿಯು ಅನುಭವ ಮೊದಲೇ ಇರುತ್ತದೆ. ಅದುದರಿಂದ ರಂಗದ ಮೇಲೆ ವಿಶಿಷ್ಟವಾದ selected ಮತ್ತು creative ಅದ ಸನ್ನಿವೇಶವನ್ನು ತೋರಿಸಬೇಕಾಗುತ್ತದೆ.

೩. ಈ ನಾಟಕದ ಉದ್ದಕ್ಕೂ ಈ ಬಗೆಯೇ ತುಂಬಿದೆ. ಅದುದರಿಂದ ನಾಟಕ ಕ್ರಿಯೆಯು ಕುಂಟುತ್ತಾ ವರ್ಣನೆಯ ಹಂತದಲ್ಲಿಯೇ ಬೆಳೆಯುತ್ತದೆ.

೪. ನಮ್ಮ ಸ್ವಾತಂತ್ರ್ಯ ಚಳುವಳಿಯನ್ನು ರೂಪಕ ಮಾಡಿರುವುದರಿಂದ ಈ ಕೃತಿಯಲ್ಲಿ ವೈವಿಧ್ಯವೇನೂ ಕಂಡುಬರುವುದಿಲ್ಲ ಅಥವಾ ಇದೊಂದು ಗಮನಾರ್ಹವಾದ Historic event ಆಗುವುದಿಲ್ಲ.

೫. ಇದರ ಶೈಲಿ ಮಾತ್ರ ಸರಳವಾಗಿದೆ. ಇದನ್ನು ಸಂಭಾಷಣೆಗೆ ಬಳಸಲು ಯಾವ ಅಡ್ಡಿಯೂ ಆಗಲಾರದು.

ಒಟ್ಟಾರೆ ಇದೊಂದು ರಂಗಪ್ರದರ್ಶನವನ್ನು ಕಾಣಲೇಬೇಕಾದ ಕೃತಿಯಂತೂ ಆಗಿರುವುದಿಲ್ಲ. ಅಂಥ ಸಂಕೀರ್ಣತೆಯಿರುವುದಿಲ್ಲ.

ಟಿಪ್ಪಣಿ–ನಾಲ್ಕು: ಸತ್ಯಾಯನ ಹರಿಶ್ಚಂದ್ರ

೧. ಸಂಗೀತ ನಾಟಕವಾದ 'ಸತ್ಯಹರಿಶ್ಚಂದ್ರ'ಕ್ಕಿಂತೇನೂ ಉತ್ತಮವಾಗಿಲ್ಲ.

೨. ಪುತಿನ ಕೂಡ ರಾಘವಾಂಕನನ್ನು ಬಿಟ್ಟುಬಿಡಲು ಸಾಧ್ಯವಾಗಿಲ್ಲ.

೩. 'ಸತ್ಯಾಯನ ಹರಿಶ್ಚಂದ್ರ'ದಲ್ಲಿ ನಾಯಕನನ್ನು ನಾವು ೨೩ ಪುಟಗಳ ನಂತರ ಕಾಣುತ್ತೇವೆ.

೪. ನಾಟಕದ ಸಂಭಾಷಣೆ ಕೂಡ ಪುತಿನ ಅವರಿಗೆ ಸಾಧ್ಯವಾಗಿಲ್ಲ.

ಉದಾ : ಉಪಾಸಿ ಪ್ರಧಾನ

(ದೂರದರ್ಶಿಯ ಬಗೆಯಲ್ಲಿಯೇ)
ಹೊರಟಿಹವ್ವೆ ಕೇಡಿನ ಪಡೆ ಪುರದೆಡೆಗೆ
ಇವಕಾಯಿತು ಜನದನುಕಂಪೆಯ ಸುಲಿಗೆ
ಏವೇಳ್ವೆನೇವೇಳ್ವೆನ್ನೆ,
ಕೈಸಾಗದವರ ಕಡೆಗೋಡುತಿದೆ ಮರುಕ
ಲೇಸಿನಾಸರೆಗಿಲ್ಲವಾದನಲ ಧನಿಕ
ಬರುಗೈಯೊಳಟ್ಟುವನು ವಿಪ್ರನಾ ತಾಯ
ಪುರವಾಯಿತಿವಳ ಪಾಲಿಗೆ ಮೃತ್ಯುಪ್ರಾಯ

ನಕ್ಷತ್ರಕ–

ತೊಡೆವಿರಾ ಸಾಧ್ವಿಯೀಕೆಯ ಕಣ್ಣ ನೀರ ?
ಗರವಿಳಿಸಬಲ್ಲಿರಾ ಜೀವಿಸೆ ಕುಮಾರ ?
ಅರಸೇನಗೆಯನಿಂದಣುಗನೆದ್ದು ಬರೆ
ವಿಷ ನೀಗುತಿಸಿರಾಡಿ 'ಅಪ್ಪ' ಎಂದುಸಿರೆ !

ಉಪಾಸಿಪ್ರಧಾನ–
ಅಂತೆಸಗಬಲ್ಲವೇ ಕಲ್ಪಗಳ ಬಲವೊಡ್ಡಿ ?

ನಕ್ಷತ್ರಕ–

ದ್ರವ್ಯಗಳ ದೊರೆಯಿಂದ ಪಡೆಯೆ ಅದಕೇನಡ್ಡಿ ?

ಇಲ್ಲಿ ಉಪಾಸಿಪ್ರಧಾನಿಯ ಒಂದು ಮಾತನ್ನು ಬಿಟ್ಟರೆ ಉಳಿದವೆಲ್ಲಾ ಷಟ್ಪದಿಯ 'ರಾಗಸಹಿತ' ಓಟದಲ್ಲಿದೆಯಲ್ಲವೆ ? ಅಲ್ಲದೆ ಇಲ್ಲಿಯ ಸಾಹಿತ್ಯಕ ಭಾಷೆಯಂತೂ ಸಂಭಾಷಣೆಗೆ ಸೇರದಂಥದಾಗಿದೆ–

ಹರಿಶ್ಚಂದ್ರ ಕೂಡ ೭೪ನೇ ಪುಟದಲ್ಲಿ–

ಕೆಟ್ಟೆ ನಾ ಕೆಟ್ಟೆ ನಾ ಏಗೆಯ್ವೆನೀಗ ?

ಎಂಬ ಉದ್ಗಾರವೆತ್ತುತ್ತಾನೆ. ಇಂಥದನ್ನು 'ಮಾತಿಗೆ' ತಿರುಗಿಸುವುದೇ ಕಷ್ಟ.

೫. ಪುತಿನ ಅವರಿಗೆ ಹರಿಚಂದನುಳಿಸಿದಳು ಹರಿಚಂದನರಸಿ–ಇಲ್ಲಿಯ ಚಮತ್ಕಾರಕೆ ಮರುಳಾದಂತೆ ತೋರುತ್ತದೆ.

ಆದರೆ 'ಚಂದ್ರಮತಿ ರಾಜಕುಮಾರನ ರಕ್ತ ಕುಡಿದಳು' ಎಂಬ ಆರೋಪವಿರುವುದನ್ನು ಒಪ್ಪಲಾಗುವುದಿಲ್ಲ. ಏಕೆಂದರೆ ಮುಂದೆ ಊರ ದೊರೆಯೇ ಬಂದು

ಮುಚ್ಚೆವೋದೆನ್ನಮಗನೆಚ್ಚರಕೆ ಬಂದನೈ
ಅಪರಾಧಿ, ಅವಿಚಾರಿ, ಕ್ಷಮೆಯೆರೆದು ನಿಂದೆನೈ

ಎಂದು ಹೇಳುವುದನ್ನು ಗಮನಿಸಬೇಕಾಗುತ್ತದೆ.

೬. ಮುಖ್ಯವಾಗಿ ಚಂದ್ರಮತಿಯ ಪಾತ್ರಕ್ಕೆ ಗೆಲುವನ್ನು ಹೆಚ್ಚಿಸುವುದಕ್ಕಾಗಿ ಪುತಿನ ಪ್ರಯತ್ನಿಸಿದಂತಿದೆ. ಆದರೆ ಹಾವು ಕಡಿದು ಸತ್ತ ರೋಹಿತಾಶ್ವನು ಬದುಕಿ ಬರುವುದನ್ನು ಸುಮ್ಮನೇ ಒಪ್ಪಿಕೊಳ್ಳುತ್ತಾರೆ. ವಾಸ್ತವಾಗಿ ಹರಿಶ್ಚಂದ್ರ ಕಾವ್ಯದ ಮಹತ್ವದ ವಿಚಾರವನ್ನು ಮೀರಿದ ಲೌಕಿಕ ಸಾಮರ್ಥ್ಯವನ್ನು ಪುತಿನ ಸಾಧಿಸಲು ಆಗಿರುವುದಿಲ್ಲ. ಗಾಣರಾಣಿಯರ ಸಂದರ್ಭವನ್ನು ಬಿಟ್ಟಿರುವುದರಿಂದ ಸತ್ಯಹರಿಶ್ಚಂದ್ರ ನಾಟಕವು ಹರಿಶ್ಚಂದ್ರನನ್ನು ಲೌಕಿಕ ಸ್ತರದಲ್ಲಿಯೇ ಪರೀಕ್ಷೆಗೊಡ್ಡುವ ಒಂದು ಅತ್ಯಂತ ಮಹತ್ವ ಪೂರ್ಣ ಸನ್ನಿವೇಶವನ್ನೇ ಬಿಟ್ಟಂತಾಗಿದೆ.

ಸತ್ಯಾಯನ ಹರಿಶ್ಚಂದ್ರ ಮತ್ತು ಸತ್ಯಹರಿಶ್ಚಂದ್ರ ಎರಡೂ ಒಂದೇ ಅರ್ಥಕ್ಕೆ ಸೇರಿದರೂ ಪುತಿನ ಅವರ ರಚನೆಯಲ್ಲಿ ಹೆಚ್ಚಿನದೇನೂ ಸಾಧ್ಯವಾಗಿಲ್ಲ. ಇದರಿಂದ ರಾಘವಾಂಕನಿಗೂ ಅನ್ಯಾಯ ಮಾಡಿದಂತಾಗಿದೆ. ಹರಿಶ್ಚಂದ್ರನನ್ನು ದುರ್ಬಲಗೊಳಿಸಿದಂತಾಗಿದೆ.

ಒಟ್ಟಿನಲ್ಲಿ ಪುತಿನ ಅವರಿಗೇಕೆ ನಾಟಕದ ನಿಜವಾದ ಸ್ವರೂಪದ ಅರಿವಾಗಿಲ್ಲ ? –ಎನ್ನಿಸಿಬಿಡುತ್ತದೆ.

■

‘ಗಡಿಯಾರದಂಗಡಿಯ ಮುಂದೆ’–ಒಂದು ಹೊಸ ಓದು

◆

ಡಾ. ಟಿ. ಯಲ್ಲಪ್ಪ

‘ಗಡಿಯಾರದಂಗಡಿಯ ಮುಂದೆ’–ಕೆ.ಎಸ್. ನರಸಿಂಹಸ್ವಾಮಿಯವರ ‘ಶಿಲಾಲತೆ’ ಕವನ ಸಂಕಲನದದಲ್ಲಿರುವ ಕವಿತೆ, ಕೆ.ಎಸ್.ನ ಅವರ ಕಾವ್ಯಯಾನದಲ್ಲಿ ‘ಶಿಲಾಲತೆ’ ಸಂಕಲನ ಅವರ ಅದುವರೆಗಿನ ಕಾವ್ಯಾಭಿವ್ಯಕ್ತಿಯ ಸ್ವರೂಪದಲ್ಲಾದ ಕ್ರಾಂತಿಕಾರಕವಾದ ಬದಲಾವಣೆಯ ಕಾರಣದಿಂದ ಮಹತ್ತರವಾದ ಕಾವ್ಯಸಂಕಲನವೂ ಆಗಿದೆ. ತಮ್ಮ ‘ಇರುವಂತಿಗೆ’ (೧೯೫೨) ಕವಿತಾ ಸಂಕಲನದವರೆಗೂ ಜನರ ಆಡುಮಾತು. ಸ್ವಭಾವೋಕ್ತಿ. ಸುಂದರ ಶಬ್ದಚಿತ್ರಗಳ ಮೂಲಕವೇ ಕನ್ನಡ ಜನಮಾನಸವನ್ನು ಗೆದ್ದಿದ್ದ ಕೆ.ಎಸ್.ನ ‘ಶಿಲಾಲತೆ’ (೧೯೫೮) ಯ ಕವಿತೆಗಳು ಹೆಚ್ಚು ಪ್ರತಿಮಾನಿಷ್ಠವಾಗುವಂತೆ ಮಾಡಿದ್ದು ಏಕಕಾಲಕ್ಕೆ ಓದುಗರ ಹಾಗೂ ವಿಮರ್ಶಕರ ಹುಬ್ಬೇರುವಂತೆ ಮಾಡಿತು. ಕೆ.ಎಸ್.ನ ಅವರ ಕವಿತೆಯ ಅಭಿವ್ಯಕ್ತಿಯಲ್ಲಾದ ಈ ಬದಲಾವಣೆ ಏಕಾಏಕಿಯಾಗಿ ಆದದ್ದು ಅಲ್ಲವೆನ್ನಿಸುತ್ತದೆ. ಕೆ.ಎಸ್.ನ ಅವರ ಬದಲಾದ ಈ ಕಾವ್ಯಮಾರ್ಗದ ತುಡಿತ ಅವರ ‘ಇರುವಂತಿಗೆ’ (೧೯೫೨) ಸಂಕಲನದ ಹೊತ್ತಿಗೆ ಬೀಜರೂಪದಲ್ಲಿ ಮೊಳಕೆ ಒಡೆಯಲು ಬೇಕಾದ ಒಂದು ಪರಿಸ್ಥಿತಿ ಕನ್ನಡ ಕಾವ್ಯಸಂದರ್ಭದಲ್ಲೇ ನಿರ್ಮಾಣವಾಗಿದ್ದನ್ನು ಯಾರೂ ಮರೆಯಲಾರರು. ಇದೇ ಕಾಲಘಟ್ಟದಲ್ಲಿ ಅಡಿಗರ ‘ನಡೆದು ಬಂದ ದಾರಿ’ ಸಹ ಪ್ರಕಟವಾಗಿತ್ತು. ನವ್ಯ ಕವಿತೆಯ ಸಾಂಕೇತಿಕತೆ, ಕ್ಲಿಷ್ಟತೆ, ಮೇಲುಗೈ ಸಾಧಿಸಿತ್ತು. ಹೊಸ ಕಾವ್ಯಮಾರ್ಗದ ಅಗತ್ಯವನ್ನು ಪ್ರಬಲವಾಗಿ ಪ್ರತಿಪಾದಿಸಿದ್ದ ಅಡಿಗರು ಕೆ.ಎಸ್.ನ ಅವರ ಸುಕೋಮಲ ಭಾವದ ಸರಳ ಅಭಿವ್ಯಕ್ತಿ ವಿಧಾನವನ್ನೇ ಕೇಂದ್ರವಾಗಿಟ್ಟುಕೊಂಡು ‘ಪುಷ್ಪಕವಿಯ ಪರಾಕು’ ಎಂಬ ಕವಿತೆಯನ್ನೇ ಬರೆದು ಹಿಂದಿನ ಕಾವ್ಯದ ಅಭಿವ್ಯಕ್ತಿ ಮಾದರಿಯನ್ನೂ ಕೆ.ಎಸ್.ನ ಅವರನ್ನೂ ಒಟ್ಟಿಗೆ ಗೇಲಿ ಮಾಡಿದ್ದರು.

ಈ ಬದಲಾದ ಕಾವ್ಯಮಾರ್ಗವನ್ನು ಎಚ್ಚರದಿಂದ ಗಮನಿಸುತ್ತಿದ್ದ ಕೆ.ಎಸ್.ನ ಅವರು ಇದಕ್ಕೆ ಉತ್ತರವೆಂಬಂತೆ ಹಾಗೂ ಹೊಸ ರೀತಿಯ ಕಾವ್ಯಾಭಿವ್ಯಕ್ತಿಗೆ ಇದು ಒಂದು ಚಾರಿತ್ರಿಕ ಅನಿವಾರ್ಯವೂ ಆಗಿದೆ ಎಂಬುದನ್ನೇ ಮನಗಂಡೇ ಮಲ್ಲಿಗೆಯ

ಮಾಲೆಯಂತಿದ್ದ ತಮ್ಮ ಕಾವ್ಯಾಭಿವ್ಯಕ್ತಿಯನ್ನು 'ಶಿಲಾಲತೆ'ಯ ಸಂಕೀರ್ಣತೆಯಲ್ಲಿ ಪರಿವರ್ತಿಸಿಕೊಂಡರೆಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಸಂದರ್ಭದಲ್ಲಿ ಎಚ್.ಎಸ್. ರಾಘವೇಂದ್ರರಾವ್ ಅವರು ಕೆ.ಎಸ್.ನ ಅವರ ಸಮಗ್ರ ಕಾವ್ಯ 'ಮಲ್ಲಿಗೆಯ ಮಾಲೆ'ಗೆ ಬರೆದ ಮುನ್ನುಡಿಯಲ್ಲಿ ಆಡಿರುವ ಈ ಮಾತುಗಳು ಹೆಚ್ಚು ಪ್ರಸ್ತುತವೆಂದು ತೋರುತ್ತವೆ. “ಶಿಲಾಲತೆ” ಮೂಡಿ ಬಂದ ಕಾಲಘಟ್ಟ ಒಂದು ಸಂಕೀರ್ಣ ಕಾಲಘಟ್ಟ. ಇಲ್ಲಿನ ಸಂಕೀರ್ಣ ರಚನೆಗಳ ಹಿಂದೆ ಅಡಿಗರ ಕಾವ್ಯವು ಒಡ್ಡಿದ ಸವಾಲುಗಳಿಗೆ ಕೆ.ಎಸ್.ನ ಅವರು ಮುಖಾಮುಖಿಯಾದದ್ದು ಪ್ರಭಾವ. ಯುರೋಪಿಯನ್ ಕಾವ್ಯದ ನಿಕಟ ಪರಿಚಯ ಹೊಂದಿದ್ದ ವೀ.ಸಿ. ಅವರ ಗರಡಿಯಲ್ಲಿ ಪಳಗಿದ್ದು; ಎಲಿಯಟ್‌ಗಿಂತ ಅವನ ನಂತರದ ಕವಿಗಳಾದ ಆಡೆನ್, ಲೂಯಿ ಮೆಕ್‌ನೀಸ್ ಅವರುಗಳ ಕಾವ್ಯದ ಪ್ರಭಾವಗಳ ಪರಿಣಾಮವಾಗಿ ನವ್ಯದ ಅಭಿವ್ಯಕ್ತಿ ವಿಧಾನಗಳನ್ನು ಬಳಸಿಕೊಂಡೂ ಅದಕ್ಕಿಂತ ಭಿನ್ನವಾದ ಆಶಯ ಮತ್ತು ಮನೋಧರ್ಮಗಳನ್ನು ಭಿನ್ನವಾದ ಆಕೃತಿಗಳಲ್ಲಿ ತಳೆಯಲು ಅವರಿಗೆ ಸಾಧ್ಯವಾಯಿತು.

ಕೆ.ಎಸ್.ನ ಅವರು 'ಗಡಿಯಾರದಂಗಡಿಯ ಮುಂದೆ' ಕವಿತೆ ರಚನೆಯಾದ ಹಿನ್ನೆಲೆಯನ್ನು ಕುರಿತು “ಒಂದು ಸಲ ಶರ್ಮ ಹೇಳಿದ್ದರು–ನಿಮ್ಮ ಕವನಗಳು ತುಂಬ ಸರಳ, complexity ಯೇ ಇಲ್ಲಾಂತ. ಸರಿ ಬಿಡಿ ಅಂದೆ. ಆಗ ಅಂದ್ರೆ ಜೀದ್ ಓದ್ತಾ ಇದ್ದೆ ವೀ.ಸಿ. ಕೊಟ್ಟಿದ್ರು. ಒಂದು ವಾರ ಬಿಟ್ಟು 'ಗಡಿಯಾರದಂಗಡಿಯ ಮುಂದೆ' ಬರೆದೆ. 'ಪ್ರಜಾವಾಣೀ'ಲಿ ಅಚ್ಚಾಯ್ತು. ಶರ್ಮ ಅದನ್ನು ಹಿಡಿದುಕೊಂಡು ಬಂದು 'ಇದು ಸರಿಯಾಗಿದೆ' ಅಂದರು. ವೀ.ಸಿ. ಅವರು ಅದನ್ನು ಓದಿ 'ಪದ್ಯ ಏನೋ ಚೆನ್ನಾಗಿದೆ, ಆದರೆ ತುಂಬ complicated ಆಗಿದೆ. ನಮ್ಮ ಜನ ಏನಂತಾರೋ ಗೊತ್ತಿಲ್ಲ' ಅಂದರು. ನಾನು ಆಗ 'ಬಿಡಿ ಸಾರ್, ಈ ತರಹದ್ದು ಒಂದು ಇರಲಿ, ಸಂಕೀರ್ಣವಾದದ್ದು ಬರ್ದಿದೀಯಾ ಅಂದ್ರೆ ಇದೆ ಅಂತ ತೋರಿಸಬೇಕಾಗುತ್ತೆ' ಅಂದೆ.” ಕೆ.ಎಸ್.ನ ಅವರ ಈ ಮಾತುಗಳನ್ನು ಗಮನಿಸಿದರೆ ಹೊಸ ರೀತಿಯ ಅಭಿವ್ಯಕ್ತಿ ಕ್ರಮವನ್ನು ಸವಾಲಿನಂತೆ ಸ್ವೀಕರಿಸಿ ಅಳವಡಿಸಿಕೊಂಡಂತೆ ತೋರುತ್ತದೆ.

ಹೀಗೆ ಬದಲಾದ ಕಾವ್ಯಮಾರ್ಗದ ಹಿನ್ನೆಲೆಯಲ್ಲಿ, ಬದಲಾದ ಅವರ ಕಾವ್ಯಾಭಿವ್ಯಕ್ತಿಯ ಮನೋಧರ್ಮದ ಹಿನ್ನೆಲೆಯಲ್ಲಿಯಲ್ಲೂ ಕೆ.ಎಸ್.ನ ಅವರ 'ಗಡಿಯಾರದಂಗಡಿಯ ಮುಂದೆ 'ಕವಿತೆ'ಯನ್ನು ಚರ್ಚಿಸಬೇಕಾಗುತ್ತದೆ. ಈ ಕವಿತೆ ಕೆ.ಎಸ್.ನ ಅವರ ಕವಿತೆಗಳಲ್ಲೇ ಹೆಚ್ಚು ಚರ್ಚೆಗೆ ಒಳಗಾದ ಸಂಕೀರ್ಣವಾದ ಕವಿತೆಯೂ ಆಗಿದೆ. ವಿ.ಸೀ. ಕೀರ್ತಿನಾಥ ಕುರ್ತಕೋಟಿ, ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ, ಸುಮತೀಂದ್ರ ನಾಡಿಗ, ಎಚ್.ಎಂ. ಚೆನ್ನಯ್ಯ, ಕಿ.ರಂ. ನಾಗರಾಜ್, ಕೆ.ವಿ. ನಾರಾಯಣ, ಡಿ.ಆರ್. ನಾಗರಾಜ್, ಎಚ್.ಎಸ್. ರಾಘವೇಂದ್ರರಾವ್, ನರಹಳ್ಳಿ ಬಾಲಸುಬ್ರಮಣ್ಯ ಮುಂತಾದ ವಿಮರ್ಶಕರು ಚಿಂತಕರು ಈ ಕವಿತೆಯ ಬಗ್ಗೆ ಸಾಕಷ್ಟು ಚರ್ಚೆಯನ್ನು ನಡೆಸಿದ್ದಾರೆ. ಆದರೂ ಈ ಕವಿತೆ ಇಂದಿಗೂ ಅದು ತನ್ನ ನಿಗೂಢತೆಯನ್ನು ತನ್ನ

ಒಡಲಿನಲ್ಲಿ ಇಟ್ಟುಕೊಂಡೇ ಹೊಸ ಹೊಸ ಅರ್ಥಗಳಿಗೆ ವ್ಯಾಖ್ಯಾನಗಳಿಗೆ ಆಹ್ವಾನಿಸುತ್ತಲೇ ಇದೆ. ಇದು ಈ ಕವಿತೆಯ ವಿಶೇಷ.

ಕಾಲವನ್ನು ಕುರಿತ ಚಿಂತನೆ ಕನ್ನಡ ಕಾವ್ಯದ ಉದ್ದಕ್ಕೂ ನಡೆದೇ ಬಂದಿದೆ. ಆಧುನಿಕ ಕನ್ನಡ ಕಾವ್ಯದಲ್ಲಂತೂ ಇದೊಂದು ಪ್ರಮುಖ ಚಿಂತನೆಯಾಗಿ ಮೂಡಿಬಂದಿದೆ. ಹೊಸಗನ್ನಡದ ಪ್ರಮುಖ ಕವಿಗಳೆಲ್ಲರೂ ಕಾಲದ ಬಗೆಗಿನ ತಮ್ಮ ಚಿಂತನೆಯನ್ನು ಮುಂದುವರಿಸಿದ್ದಾರೆ. ಈ ಕುರಿತು ಡಿ.ಆರ್. ನಾಗರಾಜ ಅವರು ತಮ್ಮ 'ಶಕ್ತಿಶಾರದೆಯ ಮೇಳ' ಎಂಬ ಸಂಶೋಧನಾ ಮಹಾಪ್ರಬಂಧದಲ್ಲಿ ಒಂದು ಭಾಗವನ್ನು ರಚಿಸಿದ್ದರು ಎಂಬುದೂ ಗಮನಾರ್ಹವಾದ ಸಂಗತಿ.

ಕೆ.ಎಸ್.ನ ಅವರ 'ಗಡಿಯಾರದಂಗಡಿಯ ಮುಂದೆ' ಕವಿತೆ ಹಾಗೆ ನೋಡಿದರೆ ಅದು ಕೇವಲ ಕಾಲವನ್ನು ಕುರಿತ ಚಿಂತನೆ ಮಾತ್ರ ಅಲ್ಲ. ಕಾಲದ ಅಮೂರ್ತ ಚಲನೆಯ ಮುಂದೆ ಮನುಷ್ಯನ ಬದುಕಿನ ಮೂರ್ತ ಚಲನೆಯ ಗತಿಯನ್ನೂ ಎದುರು ಬದಿರಾಗಿ ಇರಿಸಿ ಚಿಂತಿಸುವ ಪ್ರಯತ್ನ ಇಲ್ಲಿದೆ ಎಂದು ಈ ಕವಿತೆಯ ಮೊದಲ ಚರಣದಿಂದ ಕೊನೆಯ ಪಾದದವರೆಗೂ ಸೂಕ್ಷ್ಮವಾಗಿ ಗಮನಿಸಿದರೆ ತಿಳಿಯುತ್ತದೆ. ಕವಿತೆಯ ಪ್ರಾರಂಭದಲ್ಲಿ ಒಂದೊಂದೂ ಒಂದೊಂದು ಕಾಲವನ್ನು ಸೂಚಿಸುತ್ತಿರುವ ಅಸಂಖ್ಯ ಗಡಿಯಾರಗಳಿರುವ ಅಂಗಡಿಯ ಮುಂದೆ ಗಡಿಯಾರದಂಗಡಿಯ ಕನ್ನಡಿಯಲ್ಲಿ ಕಣ್‌ಪಟ್ಟಿ ಹಾಕಿಸಿಕೊಂಡು ಚದರಿ ನಿಂತಿರುವ ಕುದುರೆಯ ಚಿತ್ರವಿದೆ. ಈ ದೃಶ್ಯ ಅದೆಷ್ಟು ಪರಸ್ಪರ ವೈರುಧ್ಯವೂ ಅಸಂಗತವೂ ಆದ ಸಂಗತಿಗಳನ್ನು ಬೆಸೆದುಕೊಂಡಿದೆ ಎಂದರೆ 'ಗಡಿಯಾರ' ಎಂಬ ಯಾಂತ್ರಿಕ ವಸ್ತುವಿನ ಮೂಲಕ 'ಕಾಲ' ಎನ್ನುವ ಅಮೂರ್ತವಾದ ಸಂಗತಿಯನ್ನು ಹಿಡಿಯಲು ಹೊರಟಿರುವ ಮನುಷ್ಯ ಪ್ರಯತ್ನ ಕಾಲದ ಗ್ರಹಿಕೆಯಲ್ಲಿ ಅಯೋಮಯವೂ ಗೊಂದಲದಿಂದಲೂ ಕೂಡಿದೆ ಎಂಬುದನ್ನು ಇದು ಸೂಚಿಸುತ್ತಿದೆ. ಹಾಗೆಯೇ ಒಂದೊಂದು ಗಡಿಯಾರವೂ ಒಂದೊಂದು ಸಮಯವನ್ನು ಸೂಚಿಸುತ್ತಿರುವುದು ಕಾಲ–ದೇಶ–ವ್ಯಕ್ತಿಗಳಿಗೆ ಅನುಗುಣವಾಗಿ ಅದು ಬೇರೆಯೇ ಆಗಿದೆ.

ಅದು ಏಕರೂಪಿಯಾಗಿ ಅಥವಾ ಅದೊಂದು ಯೂನಿವರ್ಸಲ್ ಆದ ಏಕರೂಪಿಯಾದ ಗ್ರಹಿಕೆಗೆ ನಿಲುಕದ ಸಂಗತಿ ಅಲ್ಲ ಎಂಬುದನ್ನು ಪ್ರತಿಪಾದಿಸುವಂತಿದೆ. ಜೀವಚೈತನ್ಯದ ಅಥವಾ ಶಕ್ತಿಯ ಸಂಕೇತವಾದ ಕುದುರೆಯೂ ಇಲ್ಲಿ ಬೆದರಿದೆ. ಈ ಬೆದರಿಕೆ ತನ್ನ ಕಣ್‌ಪಟ್ಟಿಯನ್ನು ಕಂಡೂ ಇರಬಹುದು. ಅಥವಾ ತನ್ನ ಅಶ್ವಶಕ್ತಿಯ, ವೇಗದ ಕಾಲದ ಮುಂದಿನ ಪರಿಮಿತವಾದದ್ದೂ ಎಂಬ ಅರಿವಾಗಿಯೂ ಹೆಗ್ಗಳಿಕೆಗಳು ಇರಬಹುದು. ಹೀಗೆ ಕಾಲಸೂಚಿಯಾದ ಗಡಿಯಾರವೇ ಮನುಷ್ಯನನ್ನು ಕಾಲದ ಗ್ರಹಿಕೆಯಲ್ಲಿ ಗೊಂದಲಕ್ಕೆ ದೂಡಿರುವುದನ್ನು ಮೊದಲ ಭಾಗದಲ್ಲಿ ಕಾಣಬಹುದು. "ಈ ಭಾಗದಲ್ಲಿ ವಸ್ತುನಿಷ್ಠ ಕಾಲದ ಅನುಭವವನ್ನು ಮೂರ್ತೀಕರಿಸಲು ಪ್ರಯತ್ನಿಸಲಾಗಿದೆ" (ಡಿ.ಆರ್. ನಾಗರಾಜ್ : "ಶಕ್ತಿ ಶಾರದೆಯ ಮೇಳ") "ನಿರ್ದಯವಾಗಿ ಹರಿಯುತ್ತಿರುವ

ಕಾಲವನ್ನು ಅರ್ಥ ಮಾಡಿಕೊಳ್ಳುವ ಪ್ರಾಥಮಿಕ ಅನುಭವ ಯಾವಾಗಲೂ ಭಯವೇ. ಕಾಲದ ನಿರ್ದಯತೆಯೂ ಈ ಭೀತಿಗೆ ಒಂದು ಕಾರಣವಾದರೆ ಅದರ ಗ್ರಹಿಕೆಯಲ್ಲಿರುವ ಅಸಂಖ್ಯ ಅಂತರಗಳೂ ಹಲವು ಕಾರಣಗಳು"–(ಡಿ.ಆರ್. ನಾಗರಾಜ್: "ಶಕ್ತಿ ಶಾರದೆಯ ಮೇಳ").

ಹೀಗೆ ವಸ್ತುನಿಷ್ಠ ಕಾಲದ ಮೂಲಕ ಕಾಲವೆಂಬುದು ಮೂರ್ತ ಸತ್ಯವಲ್ಲ ಎಂಬ ಅರಿವನ್ನು ಕವಿತೆಯ ಮೊದಲ ಭಾಗದಲ್ಲಿ ತಿಳಿಸಲು ಪ್ರಯತ್ನಿಸಿದಂತೆ ತೋರುತ್ತದೆ. ಈ ಅರಿವಿನ ಆಧಾರದಿಂದಲೇ ವ್ಯಕ್ತಿನಿಷ್ಠ, ಭಾವನಿಷ್ಠ ಕಾಲಗಳ ಜಿಜ್ಞಾಸೆಗೆ ತೊಡಗಲಾಗಿದೆ. ಇಂತಹ ಕಾಲದ ಬಗೆಗಿನ ಗೊಂದಲ ಮತ್ತು ದಿಕ್ಕು ತಪ್ಪಿಸುವ ಗಡಿಯಾರದಂಗಡಿಯ ಮುಂದೆ ನಿಂತು ಬಾಳ ಮುಂಜಾವಿನಿಂದ ಹಿಡಿದು ಮುಪ್ಪಿನ ತನಕದ ಚಿಂತನೆಯನ್ನು ಕವಿತೆ ಮಂಡಿಸುತ್ತದೆ. ಇದು ಕಾಲದ ಜೊತೆಗಿನ ಮನುಷ್ಯನ ನಡೆಯ ಸಮೀಕರಣವೂ ಹೌದು ಏಕಕಾಲಕ್ಕೆ ಋತುಗಳ ಜೊತೆಯಲ್ಲಿ ಸಾಗುವ ಮಾನವನ ಜೀವನದ ಗತಿಯನ್ನೂ ಈ ಕವಿತೆ ಚಿಂತಿಸುತ್ತದೆ. ಕಾಲದ ನಡೆ ಅಮೂರ್ತವಾದರೂ ಅದರ ಅಸ್ತಿತ್ವವನ್ನು ನಾವು ಅನುಭವಿಸಬಲ್ಲೆವು. ಈ ಕವಿತೆ ಅಮೂರ್ತವಾಗಿರುವ ಕಾಲದ ಸ್ವರೂಪವನ್ನು ಮೂರ್ತವಾದ ಪ್ರಾಕೃತಿಕ ವ್ಯಾಪಾರಗಳ ಮೂಲಕ ಮನುಷ್ಯನ ಅವಸ್ಥಾಂತರಗಳನ್ನು, ಋತುಮಾನಗಳ ವರ್ಣವಿಲಾಸಗಳನ್ನು ಅವು ಮಾನವ ನಿರ್ಮಿತ ಸಮಾಜ ಸಂರಚನೆ ಹಾಗೂ ಮಾನವನ ಸಾಧನೆಯ ಮೇಲೆ ನಿರಂತರವಾದ ಸವಾಲನ್ನು ಒಡ್ಡುತ್ತಾ ತನ್ನ ಭೀಕರ ಸ್ವರೂಪದೊಂದಿಗೆ ಮನುಷ್ಯನ ಮಿತಿಯನ್ನು, ಕಾಲ ಮತ್ತು ಪ್ರಕೃತಿಯ ಚಿರಂತನತೆಯನ್ನು ಸಾಬೀತುಗೊಳಿಸುತ್ತಲೇ ಬಂದದ್ದನ್ನು ಮುಂದಿನ ಚರಣಗಳಲ್ಲಿ ಹೇಳುತ್ತದೆ. ಕಾಲದ ಚಿರನೂತನತೆ ಮತ್ತು ನಿಸರ್ಗ ರಮಣೀಯತೆಗಳು ಮನುಷ್ಯನ ಬದುಕಿನಲ್ಲಿಯೂ ಬೆರೆತಂತೆ ಭಾಸವಾದರೂ ಅಂತಿಮವಾಗಿ ಅವನಿಗೆ ಪ್ರಾಪ್ತವಾಗಿರುವ ಬದುಕಿನಲ್ಲಿ ನಿಸರ್ಗ ಮತ್ತು ಕಾಲಗಳಿಗೆ ಇಲ್ಲದಿರುವ ಮುಪ್ಪು, ಅಸಹಾಯಕತೆ, ಅನಿಶ್ಚಿತತೆ, ಕ್ಷಣಿಕಗಳ ನೆರಳು ಅವನ ಬಾಳಿನುದ್ದಕ್ಕೂ ಹಿಂಬಾಲಿಸುವ ಕಟು ವಾಸ್ತವ ಸತ್ಯದ ಅರಿವೂ ಕಾಲದ ಮುಖೇನವೇ ಮನುಷ್ಯನಿಗೆ ಲಭ್ಯವಾಗುವುದನ್ನು ಸಾಬೀತುಪಡಿಸಲಾಗಿದೆ.

ಕವಿತೆಯ ಮುಂದಿನ ಭಾಗದಲ್ಲಿ ಕಾಲದ ಚಾರಿತ್ರಿಕ ರೂಪವನ್ನು ಅರ್ಥೈಸುವ ಪ್ರಯತ್ನವಿದೆ. ಇಲ್ಲಿ (೩ನೆಯ ಸ್ಟಾಂಜಾದಲ್ಲಿ) ಕಾಲದ ನಿರ್ದಯತೆ ಅದರ ಕ್ರೂರ ಮುಖಗಳನ್ನು ಚಿತ್ರಿಸುವ ಪ್ರತಿಮೆಗಳಿವೆ. ಈಗಾಗಲೇ ಸಾವಿರಾರು ವರ್ಷಗಳ ಇತಿಹಾಸ ಹೊಂದಿದ್ದ ಮಾನವ ನಾಗರಿಕತೆಗಳೆಲ್ಲವೂ ನಿರ್ನಾಮವಾಗಿರುವ ಅಥವಾ ಮಣ್ಣುಗೂಡಿರುವ ಚಿತ್ರಣವನ್ನು 'ನಿರ್ನಾಮವಾಗಿರುವ ನೀಲ ನಗರಾವಳಿ 'ರೂಪಕ ಧ್ವನಿಸುತ್ತದೆ. ಈ ಸಂದರ್ಭದಲ್ಲಿ 'Death is the only leveller' ಎಂಬ ಆಂಗ್ಲ ಕವಿಯೊಬ್ಬರ ಸಾಲು ನೆನಪಾಗುತ್ತದೆ. ಇಲ್ಲಿನ ಹೆಬ್ಬಾವಿನ 'ಉಬ್ಬಸ' ಎಂಬ ಪ್ರತಿಮೆ ಕೂಡಾ ಕಾಲದ ಹಸಿವನ್ನು–ಕಾಲನೆಂಬ ಹೆಬ್ಬಾವಿನ ಗರ್ಭದಲ್ಲಿ ಪ್ರಯಾಸ ಪೂರ್ವಕವಾಗಿಯಾದರೂ ಸರಿ ಎಲ್ಲವೂ ಜೀರ್ಣವಾಗಿಯೇ ತೀರಬೇಕೆಂಬುದನ್ನು ಧ್ವನಿಸುತ್ತದೆ. 'ಕೋಳಿ ಕೂಗಿತು ಬಾಳ ಮುಂದೆಲೆಯಲ್ಲಿ, ಎಂಬ ಸಾಲು "ಸಾವಿನಲಿ ಹೊಸ ಬಾಳು ಹುದುಗಿಹುದು"

ಎಂಬ ಕುವೆಂಪು ಅವರ 'ಸ್ಮಶಾನ ಕುರುಕ್ಷೇತ್ರಂ' ನಾಟಕದ ಸಾಲಿನ ಅರ್ಥಕ್ಕೆ ತುಡಿಯುತ್ತದೆ. ಇಲ್ಲಿಯ 'ಕೋಳಿಯ ಕೂಗು' ಹಾಗೂ "ಬಾಳ ಮುಂದಲೆ" ಎಂಬ ರೂಪಕಗಳೂ ಇದಕ್ಕೆ ಸಾಥ್ ನೀಡುತ್ತವೆ. ಕಾಲಸಾಕ್ಷಿಯ ಎದಿರು ಅಳಿವು-ಉಳಿವುಗಳು ಮಾತ್ರ ನಿರಂತರ ಎಂಬುದನ್ನು ಧ್ವನಿಸುತ್ತವೆ.

ಕವಿತೆಯ ಮುಂದಿನ ಭಾಗದಲ್ಲಿ ಪ್ರಕೃತಿಯ ಮೇಲೆ ಕಾಲ ನಡೆಸಿರುವ ನಿರ್ದಯ ದಾಳಿಯನ್ನೂ ಕಾಲದ ನಿರ್ಭಾವುಕತೆಯನ್ನೂ ಹೇಳಲಾಗಿದೆ. 'ಕತ್ತು ಹಿಸುಕಿದ ಬಳ್ಳಿ ಕಳೆದ ಬೆಳಗು' "ಸಂಜೆ ತೀರದ ಸಾಲ ಹಡಗು ಮುಳುಗು' ರೂಪಕಗಳು ಸೂಚಿಸಿದರೆ "ಬಿಡುಗಣ್ಣ ನೋಟ" ಕ್ರೂರ ನೋಟವನ್ನು, 'ಜೇನು ತಲೆ ಹೊಕ್ಕ ತನಿಗುದುರೆಯೋಟ' ದಿಗ್ಭ್ರಾಂತಗೊಂಡ ಕಾಲದ ನಡಿಗೆಯನ್ನೂ ಸೂಚಿಸುತ್ತದೆ. ಕವಿತೆಯ ಪ್ರಾರಂಭದಲ್ಲಿ ಕಣ್ಣಪಟ್ಟಿ ಕಟ್ಟಿಸಿಕೊಂಡು ಕನ್ನಡಿಯಲ್ಲಿ ತನ್ನ ಮುಖವನ್ನು ಕಂಡು ಬೆದರಿದ್ದ ಕುದುರೆ ಇಲ್ಲಿ ಕಿವಿಗೆ ಜೇನಹುಳ ಹುಗಿಸಿಕೊಂಡು ದಿಗ್ಭ್ರಾಂತ ಸ್ಥಿತಿಯಲ್ಲಿದೆ. ಕಾಲದ ನಾಗಾಲೋಟ (ಅಶ್ವಗತಿ)ವೂ ಇಲ್ಲಿ ದಿಕ್ಕೆಟ್ಟಿದೆ. ಪ್ರಕೃತಿಯ ನಿರ್ದಯ ದಾಳಿ, ಬಿರುಗಾಳಿಯ ದಾಳಿಯ ರೂಪದಲ್ಲಿಯೂ ಎರಗಿದೆ. ಪ್ರಕೃತಿಯನ್ನು ಹೆದರಿಸಲಾಗದ, ಎದುರಾಗಿ ನಿಲ್ಲಲು ಆಗದ ನಿರಂತರ ಸಾಹಸದಲ್ಲಿ ತೊಡಗುವ ಮನುಷ್ಯನ ಶ್ರಮ ವ್ಯರ್ಥವೆಂದೇ ತೋರುತ್ತದೆ. ಅದಕ್ಕಾಗಿಯೇ ಕಾಲದ ಜೊತೆಗಿನ ಅವನ ಈ ಓಟ, ಪ್ರಕೃತಿಯ ಜೊತೆಗಿನ ಈ ಹೋರಾಟಗಳಿಂದ ಅವನ ದುಃಖ ಮಾತ್ರ ನಿರಂತರವಾದುದು ಎಂಬುದೇ ಸತ್ಯ ಎಂಬುದನ್ನು 'ಅಲ್ಲೊಂದು ಅಳುವ ಮಗು ಒಂದೇ ಸಮನೆ ಎಂಬ ಸಾಲು ಸೂಚಿಸುತ್ತದೆ.

ಬೇರೆ ಬೇರೆ ದೇಶದಲ್ಲಿ ಬೇರೆ ಬೇರೆ ರೀತಿಯಲ್ಲಿ ಕಾಲಗ್ರಹಿಕೆಯ ಮನುಷ್ಯ ಪ್ರಯತ್ನ ಮಾತ್ರ ನಡೆದೇ ಇದೆ. 'ಸೀಮೆ ಸೀಮೆಯ ಲೆಕ್ಕ ಕಪ್ಪು ಚುಕ್ಕೆಯ ಸೋನೆ ಎಂಬ ಸಾಲುಗಳಲ್ಲಿಯ 'ಕಪ್ಪು ಚುಕ್ಕೆ' ಕೂಡಾ ಕಾಲಗ್ರಹಿಕೆಯಲ್ಲಿನ ಅಸ್ಪಷ್ಟತೆಯನ್ನು ಹೇಳುತ್ತಿದೆ. ಈ ಕಾಲಗಣನೆಯ ಹಂಬಲ ಹವಾಸ್ಯಗಳು ನಿರಂತವಾಗಿ ಭೌಗೋಳಿಕ ಗಡಿ ಗೆರೆಗಳನ್ನು ದಾಟಿ ನಡೆಯುತ್ತಿದ್ದರೂ ಅದರ ಫಲಿತ ಮಾತ್ರ ಸೊನ್ನೆಯೇ ಆಗಿದೆ ಎಂಬುದನ್ನೂ ಕಾಲದ ಗಣನೆ ಸೊನ್ನೆಯಿಂದಲೇ ಎಂಬುದನ್ನೂ ಸೂಚಿಸುವಂತಿದೆ. ಮನುಷ್ಯನಿಗೆ ಪ್ರಕೃತಿಯ ಮುಂದೆ ತನ್ನ ಶಕ್ತಿ ಅಲ್ಪ ಎಂದು ತಿಳಿದಿದ್ದರೂ ಮತ್ತೆ ಮತ್ತೆ ಅದರೊಂದಿಗೆ ಸ್ಪರ್ಧೆಗಿಳಿಯುವ ಹುಚ್ಚು ಸಾಹಸವನ್ನು ತನ್ನ ಸಾಮರ್ಥ್ಯವನ್ನು ಒರೆಗೆ ಹಚ್ಚುವ ವಿಫಲ ಪ್ರಯತ್ನವನ್ನು ಮಾಡುತ್ತಲೇ ಇರುತ್ತಾನೆ. ಇಡೀ ಪ್ರಕೃತಿಯನ್ನು ತನಗೆ ಬೇಕಾದಂತೆ ಬದಲಿಸುವ ಆಸೆ ಹೊತ್ತು 'ಮೂಳೆಬಿಲ್ಲನು' ಹಿಡಿದು ಮುಂದೆ ನುಗ್ಗುತ್ತಾನೆ. ('ಮೂಳೆ ಬಿಲ್ಲು' ತನ್ನ ಶಕ್ತಿಯಲ್ಲಿ ನಂಬಿಕೆ ಇಟ್ಟ ಎಂಬರ್ಥದಲ್ಲಿ). ಆದರೆ ತನಗಿಂತ ಮೊದಲೇ ನೂರು ರೂಪಗಳಲ್ಲಿ ಬದಲಾಗಿ ಬಂಡೆಯಂತೆ ದೃಢವಾಗಿ ನಿಲ್ಲುವ ಅದರ ಶಕ್ತಿಯ ಎದಿರು ತಾನು ಅಸಮರ್ಥನೆಂಬುದನ್ನು ಮನುಷ್ಯ ತನ್ನ ಒಳ-ಹೊರಗಿನ ಆತ್ಮಪರೀಕ್ಷೆ ಹಾಗೂ ಬಾಹ್ಯಸಾಮರ್ಥ್ಯಗಳ ಪರಿಶೀಲನೆಗಳ ಮೂಲಕ ಕಂಡುಕೊಳ್ಳುತ್ತಾನೆ ತನ್ನ ಮಿತಿಯನ್ನು.

ಕವಿತೆಯ ಮುಂದಿನ ಭಾಗದಲ್ಲಿ ಪ್ರಾಕೃತಿಕ ಸನ್ನಿವೇಶಗಳ ಮೂಲಕ ಋತುಗಳ ಬದಲಾವಣೆಯ ಮೂಲಕ ಕಾಲದ ಗತಿಯನ್ನು ಅದರ ಸ್ವರೂಪವನ್ನು ಸುಂದರವಾದ ಶಬ್ದಚಿತ್ರಗಳ ಮೂಲಕ ಹಿಡಿಯುವ ಪ್ರಯತ್ನವನ್ನು ಮಾಡಲಾಗಿದೆ. ಇಲ್ಲಿ ಚೈತ್ರದ ಮಾವು ಜೂಲು ನಾಯಿಯ ಜೋಲಿಯ ಹಾಗೆ, ಕೆಂಪನೆಯ ತಳಿರು ಕೆನ್ನಾಲಗೆಯ ಬೆಂಕಿಪರದೆಯ ಹಾಗೆ ಕಂಗೊಳಿಸುತ್ತದೆ. ಹುಚ್ಚು ಬೇವಿನ ಮರದಲ್ಲೂ ಹಾಡು ಗುನುಗುವ ವಸಂತ, ಮಳೆಗಾಲದ ಮುನ್ಸೂಚನೆಯಾಗಿ ಮೋಡದೊಳಗೆ ಮಿಂಚಿನ ಅಂಗಾಲಿಟ್ಟು ಮುಂಗಾರ ಕಂಬನಿಯು ಜಿನುಗಿ ಕಾಡು ಹೊಳೆಗಳೆಲ್ಲಾ ಹೊಸನೀರ ರಂಗಲ್ಲಿ ಕಂಗೊಳಿಸುವ ಚಿತ್ರ ಮುಂದೆ ಮಳೆಗಾಲ ಹೋಗಿ ಚಳಿಗಾಲ ಕಾಲಿಟ್ಟು ಎಲ್ಲ ಕಡೆ ಇಬ್ಬನಿಯ ಬಿಳುಪು ಪ್ರಕೃತಿಯ ಮಾಗಿದ ಹರೆಯವನ್ನು ಮಾಘವಿ ಮನುಷ್ಯನ ಮುಪ್ಪಿನ ಬಿಳುಪನ್ನು ಒಟ್ಟಿಗೆ ಧ್ವನಿಸುತ್ತದೆ– 'ಗಲ್ಲಬೆಳ್ಳಗೆ ಹುಡುಗಿ ಬಿಳಿ ಹೂವ ಮುಟ್ಟಿಸಿದೆ ನನ್ನ ತುಟಿಗೆ'. ಈ ಭಾಗದ ಮೂರ್ನಾಲ್ಕು ಚರಣಗಳ ಉದ್ದಕ್ಕೂ ಪ್ರಕೃತಿಯ ಋತುಚಕ್ರವನ್ನು ಋತುಗಳ ಜೊತೆಯಲ್ಲಿನ ಮನುಷ್ಯನ ಬಾಲ್ಯ, ಯೌವನ, ಮುಪ್ಪಿನ ಹಲ ಅವಸ್ಥೆಗಳ ನಡೆಯನ್ನು ಸುಂದರವಾದ ಶಬ್ದಚಿತ್ರಗಳ ಮೂಲಕ ಧ್ವನಿಸಲಾಗಿದೆ. ಗಲ್ಲಬೆಳ್ಳಗೆ, ಕೆಂಪಾದ ಹರೆಯದ ತುಟಿ ಮುಪ್ಪಿನ ಕಾರಣದಿಂದ ಬಿಳುಚಿಕೊಂಡು ರಕ್ತಹೀನ (ಪೇಲವ) ವಾಗುವ, ದೈಹಿಕ ಚಹರೆಗಳಲ್ಲಾದ ತೀವ್ರ ಮುಪ್ಪಿನ ಪರಿಣಾಮಗಳನ್ನು ಹೇಳುತ್ತಲೇ ಪ್ರಕೃತಿ ಮಾತ್ರ ಮುಪ್ಪಿಲ್ಲದ ಚಿರಂತನ ಶಕ್ತಿಯುಳ್ಳದ್ದು ಎಂಬುದನ್ನು ಹೇಳಲಾಗಿದೆ. ಈ ಭಾಗದಲ್ಲಿ ಬರುವ 'ಸಂಜೆಗೊಬ್ಬಳು ಮುದುಕಿ, ಕೊನೆಯ ಕೆಂಡವ ಕೆದಕಿ/ಎತ್ತಿ ಮುಡಿದಳು ಇದ್ದ ಗಂಟುಜಡೆಗೆ' ಎಂಬ ಸಾಲಿನ ಬಗ್ಗೆ ಅದೆಷ್ಟು ಜನ ವಿಮರ್ಶಕರು ತಲೆ ಕೆಡಿಸಿಕೊಂಡು ಪುಟಗಟ್ಟಲೆ ಬರೆದಿಲ್ಲ!

ಇಲ್ಲಿ ಬರುವ ಸಂಜೆ, ಮುದುಕಿ, ಕೊನೆಯ ಕೆಂಡ ಇವೆಲ್ಲವೂ ಮುಪ್ಪನ್ನು ಸೂಚಿಸುವ ಸೂಚಕಗಳೇ ಆಗಿವೆ. ಸಂಜೆ ದಿವಸದ ಮುಪ್ಪು, ಮುಪ್ಪು ಜೀವನದ ಸಂಜೆ. ಸಂಜೆಯ ಬಣ್ಣ, ಕೆಂಡದ ಬಣ್ಣ ಎರಡರದ್ದೂ ಕೆಂಪೆ. ಇದು ಬರೀ ಕೆಂಪಲ್ಲ. ಮುಪ್ಪು ಜೀವನದ ಮೇಲಿನ ಕೆಂಗಣ್ಣು ಕೆಂಡಗಣ್ಣು. ಅದರ ಸುಡುವ ತಾಪ, ದಿನದ ಅಂತ್ಯಕ್ಕೆ ಸಂಜೆಯಾಗಿ, ಮಾನವ ಬದುಕಿನ ಸಂಜೆಗೆ ಮುಪ್ಪಾಗಿ ಸುಡುತ್ತದೆ. ಪಾರಾಗಲು ಸಾಧ್ಯವೇ ಇಲ್ಲ. ಕಟು ವಾಸ್ತವ ! ಕೊನೆಯ ಕೆಂಡ ಪಂಚಭೂತಗಳಲ್ಲಿ ಒಂದಾದ ಬೆಂಕಿಯ ಋಣವನ್ನು ತೀರಿಸಿಕೊಳ್ಳಲು ಇದು ಪ್ರಶಸ್ತ ಕಾಲ. ಮುಪ್ಪು, ಸಂಜೆಯ ಸೂರ್ಯನ ಚಿತ್ರ ಆಕಾಶದಲ್ಲಿ ಕಾಣುವುದು ಕೂಡಾ ಹೀಗೆಯೇ ಮುದುಕಿಯ ಗಂಟು ಜತೆಗೆ ಮುಡಿದ ಕೆಂಡದ ಹೂವಿನಂತೆ ! ಕೆ.ಎಸ್.ನ ಅವರ ಪ್ರತಿಮೆಗಳಲ್ಲಿ ಸಾವಯವ ಶಿಲ್ಪದ ಸಮಗ್ರೀಕರಣ ಅಥವಾ ಸಾವಯವ ಸಂಬಂಧ ಇಲ್ಲ ಎಂದವರ ಬಗೆಗೆ ಮರುಗಬೇಕು.

"ಅಮೂರ್ತವಾದುದನ್ನು ಮೂರ್ತ ವಿವರಗಳ ತೆಕ್ಕೆಯಲ್ಲಿ ಹಿಡಿದಿಡುವುದು ಹಾಗೂ ಅದಕ್ಕೆ ಸೂಕ್ತವಾದ ಕಾವ್ಯ ಶರೀರವನ್ನು ರೂಪಿಸುವುದು ಎಲ್ಲ ಪ್ರಧಾನ ಕವಿಗಳೂ ಎದುರಿಸುವ ಸವಾಲುಗಳು. ಕಾಲ, ಚರಿತ್ರೆ, ಸಾವು, ಪ್ರಕೃತಿ, ದೇವರು

ಮುಂತಾದ ಸಂಗತಿಗಳ ಬೆನ್ನ ಹಿಡಿದಾಗ ಬೇರೆಯದೇ ಪರಿಕರಗಳು ಬೇಕಾಗುತ್ತವೆ" (ಡಾ. ಎಚ್.ಎಸ್. ರಾಘವೇಂದ್ರರಾವ್–ಕೆ.ಎಸ್.ನ ಸಮಗ್ರ ಕಾವ್ಯದ ಮುನ್ನುಡಿಯಲ್ಲಿ) ಎಂಬ ಈ ಮಾತುಗಳು ಕೆ.ಎಸ್.ನ ಈ ಕವಿತೆಯಲ್ಲಿ ಬಳಸಲಾಗಿರುವ ಪ್ರತಿಮೆಗಳ ಗ್ರಹಿಕೆಯ ದೃಷ್ಟಿಯಿಂದ ಅತ್ಯಂತ ಪ್ರಸ್ತುತವೆಂದು ಅನ್ನಿಸುತ್ತದೆ.

ಕವಿತೆಯ ಒಂಬತ್ತನೆಯ ಚರಣದಲ್ಲಿ ಕಾಲದ ಜೊತೆಗಿನ ನಿರಂತರವಾದ ಪಯಣದ ಮೂಲಕ ಮನುಷ್ಯನಿಗೆ ಉಂಟಾದ ದಣಿವನ್ನು ; ಅದರ ಜೊತೆಗಿನ ಅವನ ಪಯಣದ ಅರ್ಥಪೂರ್ಣತೆಯನ್ನು ಪ್ರಶ್ನೆ ಮಾಡಿಕೊಳ್ಳಲಾಗಿದೆ. 'ಹೊತ್ತ ಮೂಟೆಗಳು, 'ಹಿಡಿದ ಗಿಂಡಿಗಳು' ಇವೆಲ್ಲ ಬಾಳ ಪಯಣದಲ್ಲಿ ಒದಗಿದ ಅನುಭವಗಳ ಭಾರವನ್ನೂ, 'ನಾರಾಯಣ' ಎಂಬ ಹೆಸರು ಪಯಣದ ದಣಿವನ್ನು, ದೈವದ ಸ್ಮರಣೆಯನ್ನು ಒಟ್ಟಿಗೆ ಮಾಡುವಂತಿದೆ.

ಕವಿತೆಯ ಕೊನೆಯ ಮೂರು ಚರಣಗಳಲ್ಲಿ ಕಾಲದ ಬಗ್ಗೆ ಇದ್ದ ಉದ್ವಿಗ್ನತೆ ಮಾಯವಾಗಿರುವುದು ತಿಳಿಯುತ್ತದೆ. ಕಾಲದ ಜೊತೆಗಿನ ಈ ಸುದೀರ್ಘ ನಡಿಗೆಯ ನಂತರವೂ ಗಂಟೆ ಎಷ್ಟೆಂದು ಅದರ ನಿಖರತೆಯ ಬಗ್ಗೆ ಯಾರನ್ನಾದರೂ ಮತ್ತೆ ಕೇಳಿಕೊಳ್ಳುವುದೆಂದರೆ ಅದು ಮೂರ್ಖತನದ ಪ್ರಶ್ನೆಯೇ ಆದೀತು ! ಸಾವಿನ ಅಂಚಿಗೆ ತಂದು ನಿಲ್ಲಿಸಿರುವ ಮುಪ್ಪನ್ನು ಇಡೀ ಮೈಯಾಗಿ ಹೊತ್ತುಕೊಂಡು, ಹೊದ್ದುಕೊಂಡಿರುವ ಮನುಷ್ಯನಿಗೆ ಈ ಹಂತದಲ್ಲಿ ಸಾವಿನ ಬಗ್ಗೆಯಾಗಲಿ, ಕಾಲದ ಬಗ್ಗೆಯಾಗಲಿ ಅದು ಒಂದು ಪವಿತ್ರ ಅಥವಾ 'ಪಾವನ' ಎಂಬ ಭಾವನೆ ಮೂಡಲು ಸಾಧ್ಯವೆ ? ಅದು ಪ್ರಶ್ನಾರ್ಥಕವೂ ಹೌದು, ಆಶ್ಚರ್ಯದಾಯಕವೂ ಹೌದು.

ಕವಿತೆಯ ಕೊನೆಯ ಭಾಗ ಮತ್ತೆ ಅಸ್ಪಷ್ಟತೆಯಿಂದ ಕೂಡಿದೆ. ಕಾಲ, ಮುಪ್ಪು, ಹಾಗೂ ಸಾವಿನ ಬಗೆಗಿರುವ ಅಸ್ಪಷ್ಟವಾದ ಭಾವಗಳನ್ನೂ, ವೈಚಾರಿಕ ಗೊಂದಲಗಳನ್ನೂ ಅಮೂರ್ತವಾಗಿಯೇ ಅಭಿವ್ಯಕ್ತಿಸುವ ಮೂಲಕ ಕಾಲ ಮತ್ತು ಸಾವು ಇವುಗಳ ಬಗೆಗೆ ಖಚಿತವಾದ ನಿಲುವಿಗೆ ಬರುವುದು ಅಸಾಧ್ಯ ಎಂಬ ಧೋರಣೆಯನ್ನು ಕವಿ ತಳೆದಂತಿದೆ. 'ಚಿತಾಗ್ನಿಯಿಂದ ಚಂದ್ರಿಕೆಗೆ ನೆಲದ ಕಲ್ಲು ಹೊರಳಿದೆ' ಎಂಬ ಸಾಲಿನಲ್ಲಿ 'ನೆಲದ ಕಲ್ಲು' 'ನೆಲದ ಕಣ್ಣಾಗಿದ್ದಿರಬಹುದೆ? ಮುದ್ರಣದ ದೋಷ ಇದ್ದಿರಬಹುದೆ? ಎಂಬ ಅನುಮಾನ ಮೂಡುತ್ತದೆ. 'ಚಿತಾಗ್ನಿಯಿಂದ ಚಂದ್ರಿಕೆಯ ಕಡೆಗೆ (ಸ್ವರ್ಗದ ಕಡೆಗೆ) ಮನುಷ್ಯನ ನೆಲದ ಕಣ್ಣು ಹೊರಳವುದು ಅರ್ಥಪೂರ್ಣವಾದೀತು. (ಅಡಿಗರ 'ಮೋಹನ ಮುರಳಿ' ಕವಿತೆಯಲ್ಲಿನ 'ಮೋಹನ ಮುರಳಿಯ ಕರೆಗೆ ಓಗೊಟ್ಟು ಬೃಂದಾವನದ ಕಡೆಗೆ ಹೊರಳುವ ಮಣ್ಣಿನ ಕಣ್ಣಿನ ಹಾಗೆ). ಮುಪ್ಪಿನ ಜೀವ ಬಯಸುವ ಸಗ್ಗದ ಬಯಕೆಯ ಹಿನ್ನೆಲೆಯಲ್ಲಿಯೇ ಇದನ್ನು ಪರಿಭಾವಿಸಬಹುದು. ಹಾಗೆಯೇ ಈ ಚರಣದಲ್ಲಿ ಬರುವ 'ನೀರ ಮೇಲೂ ನೆಲದ ಮೇಲೂ ಬೆರಳೈದರ ನೆರಳಿದೆ' ಎಂಬ ಸಾಲುಗಳ ಹಿಂದಿನ ಭಾವವನ್ನು ಲಕ್ಷಿಸಿ. 'ಬೆರಳೈದರ ನೆರಳು' ಡಿ.ಆರ್. ನಾಗರಾಜ್ ಅವರು 'ಶಕ್ತಿ ಶಾರದೆಯ ಮೇಳ'ದಲ್ಲಿ ಗುರುತಿಸುವ ಹಾಗೆ "ಭಾರತೀಯ ನಂಬಿಕೆಗಳ 'ವರದ ಹಸ್ತ' ಅಥವಾ 'ಅಭಯ ಹಸ್ತ'ದ ಸೂಚನೆಯನ್ನು ಸ್ಪಷ್ಟಪಡಿಸುತ್ತದೆ. ನನಗನ್ನಿಸುವಂತೆ ಈ ಹಂತದಲ್ಲಿ

ಮನುಷ್ಯ, ಮುಪ್ಪು ಸಾವುಗಳ ಭಯದಿಂದ ಮುಕ್ತನಾಗಲು (ಅಥವಾ ಮೋಕ್ಷ ಸಾಧನೆಗಾಗಿ) ಪರೋಕ್ಷವಾಗಿ ದೈವದ ಮೊರೆ ಹೋಗುವ ಸಹಜ ಪ್ರವೃತ್ತಿಯನ್ನೂ ಇದು ಧ್ವನಿಸುತ್ತಿದೆ ಎಂದೆನ್ನಿಸುತ್ತದೆ.

ಈ ಕವಿತೆಯ ಕೊನೆಯ ಎರಡು ಚರಣಗಳಲ್ಲಿನ ತಮ್ಮ ಅಸ್ಪಷ್ಟತೆಯಿಂದಾಗಿ ಅಥವಾ ಈಗಾಗಲೇ ಕನ್ನಡದ ಪ್ರಮುಖ ವಿಮರ್ಶಕರೆಲ್ಲ ಗುರುತಿಸುವ ಹಾಗೆ ಈ ಭಾಗದಲ್ಲಿ ಕವಿ ಬಳಸಿರುವ ಪ್ರತಿಮೆಗಳು ಕವಿತೆಯ ಕೇಂದ್ರ ಭಾವವನ್ನು ಪೋಷಿಸುವುದಕ್ಕೆ ಸಹಕಾರಿಯಾಗಿಲ್ಲ ಮತ್ತು ಅವು ಕವಿತೆಯ ಒಟ್ಟು ಶಿಲ್ಪದ ಜೊತೆಗೆ ಸಾವಯವ ಸಂಬಂಧವನ್ನು ಹೊಂದಿರುವಂತೆ ಕಂಡುಬರದ ಕಾರಣಗಳಿಂದಲೂ ಯಾರೂ ಈ ಭಾಗದ ಬಗೆಗಿನ ಚರ್ಚೆಯನ್ನು ಮುಂದುವರೆಸುವುದಿಲ್ಲ. ವಿಶೇಷವಾಗಿ ಕವಿತೆಯ ಕೊನೆಯಲ್ಲಿ ಮತ್ತೆ ಮತ್ತೆ ಪುನಾರಾವರ್ತಿತವಾಗಿ ಬಳಕೆಯಾಗಿರುವ ಸಂಖ್ಯೆ ಐದರ ಸಾಂಕೇತಿಕತೆ. ಉದಾ: 'ಐದಾಗಿ ಬಿರಿದ ದಾಳಿಂಬೆ ನಗೆ', 'ಬೆರಳೈದರ ನೆರಳು', 'ಗೋರಿ ದೀಪದ ಕೆಳಗೆ ಹಲ್ಲಿ ಐದರ ಹರಕೆ', 'ತಳವಿರದ ತಟ್ಟೆಯಲ್ಲಿ ಐದು ಗೆಜ್ಜೆ', 'ಐದು ಬಣ್ಣದ ಹಸೆ', ಇವೆಲ್ಲವೂ ಪ್ರಸ್ತಾಪವಾಗಿರುವ ಸಂದರ್ಭವನ್ನು ಗಮನಿಸಿದರೆ ವಿಶೇಷವಾಗಿ ಮುಪ್ಪಿನ ಅಂಚಿನಲ್ಲಿರುವ ಮನುಷ್ಯ ಸಾವಿನ ಬಗೆಗಿನ ತನ್ನ ಉದ್ವಿಗ್ನತೆಯನ್ನು ಕಳೆದುಕೊಂಡು ದೈವದ ಬಗೆಗಿನ ಅಭಯಹಸ್ತವನ್ನು ನೆಚ್ಚಿಕೊಂಡು ಮೋಕ್ಷದ ಕಡೆಗೆ ಕಣ್ಣು ನೆಟ್ಟಿರುವ ಸಂದರ್ಭದಲ್ಲಿ ಇಲ್ಲಿ ಬಳಕೆಯಾಗಿರುವ 'ಐದು' ಸಂಖ್ಯೆಯ ಸಾಂಕೇತಿಕತೆಯನ್ನು ಪಂಚೇಂದ್ರಿಯಗಳ ಹಿನ್ನೆಲೆಯಲ್ಲಿ, ಪಂಚಭೂತಗಳ ಹಿನ್ನೆಲೆಯಲ್ಲಿ ಪಂಚಗವ್ಯ (ಹಸು-ಕರು ತುಳಿದ ಕಣ್ಣು-ಇಲ್ಲೂ ಕೂಡಾ 'ತುಳಿದ ಕಣ್ಣು' ಬದಲಿಗೆ 'ಮಣ್ಣು' ಇದ್ದಿದ್ದರೆ ಹೆಚ್ಚು ಔಚಿತ್ಯಪೂರ್ಣವಾಗಿರುತ್ತಿತ್ತು).

ಇಲ್ಲಿ ಅಂದರೆ ಮುಪ್ಪಿನ ಕಡೆಗಾಲದಲ್ಲಿ ಪಂಚೇಂದ್ರಿಯಗಳ ಶಕ್ತಿ, ಹೊಳಪು, ಆಕರ್ಷಣೆ, ಕ್ರಿಯಾಶೀಲತೆ ಮಸುಕಾಗಿ ಅವುಗಳಿಗಿದ್ದ ಪಂಚಭೂತಗಳ ಬಗೆಗಿನ ಮೋಹವೂ ಋಣವೂ ತೀರಿದ್ದರ ಸಾಂಕೇತಿಕತೆಯನ್ನು ಈ 'ಐದು' ಸೂಚಿಸುತ್ತಿರಬಹುದಲ್ಲವೆ? ಬೇಂದ್ರೆಯವರ 'ನಾಕುತಂತಿ'ಯ ಸಾಂಖ್ಯದ ಸಾಂಕೇತಿಕತೆಯಂತೆ ಕೆ.ಎಸ್.ನ ಅವರ ಈ ಕವಿತೆಯಲ್ಲಿನ ಸಂಖ್ಯೆ ಐದರ ಸಾಂಕೇತಿಕತೆಯನ್ನು ಸಾಂಖ್ಯದ ಹಿನ್ನೆಲೆಯಲ್ಲಿ, ಭಾರತೀಯ ದರ್ಶನ ಶಾಸ್ತ್ರಗಳ ಹಲವು ಸಾಂಕೇತಿಕ ಅರ್ಥಗಳ ಕಡೆಗೆ ಈ ಕವಿತೆಯ ಸಂಖ್ಯೆ ಐದರ ಸಾಂಕೇತಿಕತೆ ನಮ್ಮನ್ನು ಕೊಂಡೊಯ್ಯುವ ಸಾಧ್ಯತೆಗಳ ಕಡೆಗೆ ನಮ್ಮ ಅರಿವನ್ನು ವಿಸ್ತರಿಸುವ ಬಹುಮುಖೀ ಆಯಾಮಗಳೂ ಈ ಕವಿತೆಗೆ ಇದೇ ಇದೆ ಎನ್ನುವುದಂತೂ ಸತ್ಯ.

'ಹಳದಿಯಲ್ಲಿ ಕೆಂಪರಳುವ', 'ಬೆರಳೈದರ ನೆರಳು' (ಅದು ಸಾವಿನ ಕರಿನೆರಳೂ ಆದೀತು !) 'ಗೋರಿ ದೀಪದ ಕೆಳಗಿನ ಹಲ್ಲಿ ಐದರ ಹರಕೆ', 'ತಳವಿರದ ತಟ್ಟೆಯಲ್ಲಿನ ಐದು ಗೆಜ್ಜೆ', 'ಪಳೆಯುಳಿಕೆ' ಇಂತಹ ಈ ಎಲ್ಲಾ ಪ್ರತಿಮೆಗಳು ಬೇಡುವ ವ್ಯಾಖ್ಯಾನವನ್ನು ಸಮರ್ಥವಾಗಿ ಅರ್ಥೈಸಲು 'ಭಾರತೀಯ ಮರಣ ಮೀಮಾಂಸೆ'ಯ ಆನ್ವಯಿಕತೆಯಿಂದ

ಈ ಪ್ರತಿಮೆಗಳನ್ನು ಪರಿಶೀಲಿಸುವ ಹಾಗೂ ಮರು ಓದಿಗೆ ಒಳಪಡಿಸುವ ಅಗತ್ಯವೂ ಇದೆ. "ಕೆ.ಎಸ್.ನ ಅವರ ಈ ಕವಿತೆಯಲ್ಲಿ ಕಂಡುಬರುವ ಕ್ಲಿಷ್ಟತೆ ಆಲೋಚನೆಯ ನೆಲೆಯದ್ದು. ಅಭಿವ್ಯಕ್ತಿಯದಂತೂ ಅಲ್ಲ. ಹಾಗಾಗಿದ್ದರೆ ಅವರ ಶಬ್ದ ಚಿತ್ರಗಳಲ್ಲಿ ಸೊಗಸು ಸಾಧ್ಯವಾಗುತ್ತಿರಲಿಲ್ಲ. ಗಡಿಯಾರದಂಗಡಿಯ ಮುಂದೆ ಕವಿತೆ. ಆಲೋಚನೆಯ ಅಸ್ಪಷ್ಟತೆಯಿಂದ ಕ್ಲಿಷ್ಟವಾಗಿರುವ ಕವಿತೆ ಗಮನಿಸಿ ಅಲ್ಲಿ ಬರುವ 'ಐದು' ಭಿನ್ನ ಪ್ರತಿಕ್ರಿಯೆಗಳಿಗೆ ಕಾರಣವಾಗಿದೆ" (ಕೆ.ವಿ. ನಾರಾಯಣ : ಬೇರು ಕಾಂಡ ಚಿಗುರು, ಪುಟ ೨೨೫) ಕೆ.ವಿ.ಎನ್. ಅವರ ಈ ವ್ಯಾಖ್ಯಾನಕ್ಕೆ ಮುಖಾಮುಖಿಯಾಗಿ ಕೆ.ಎಸ್.ನ ಅವರ ಈ ಮುಂದಿನ ಮಾತುಗಳನ್ನು ಪರಿಶೀಲಿಸಬಹುದು. ನವ್ಯತೆಯ ಅಭಿವ್ಯಕ್ತಿ ತಂತ್ರಕ್ಕೆ ತಮ್ಮ ಕವಿತೆಯನ್ನು ಒಗ್ಗಿಸಿಕೊಳ್ಳುತ್ತಿದ್ದ ಸಂಕೀರ್ಣ ಕಾವ್ಯ ಸಂದರ್ಭದಲ್ಲಿ ಕ್ಲಿಷ್ಟತೆಯನ್ನು ಅಳವಡಿಸಿಕೊಂಡ ಅಡಿಗರೇ ಒಂದು ಕಡೆ ಹೇಳಿರುವ "ಒಂದೇ ಕವನ ಕನಿಷ್ಠ ಎರಡಾದರೂ ಮಟ್ಟಗಳಿಂದ ಮಾತಾಡಬೇಕು ಎನ್ನುವ ಸೂತ್ರದಿಂದ ಈ ಕ್ಲಿಷ್ಟತೆ ಹುಟ್ಟುತ್ತದೆ" ಎಂಬ ಈ ಧೋರಣೆಯನ್ನು ಕೆ.ವಿ.ಎನ್. ಅವರ ಅಭಿಪ್ರಾಯದೊಂದಿಗೆ ಪರಿಶೀಲಿಸಬಹುದೆಂದು ತೋರುತ್ತದೆ.

ಡಿ.ಆರ್. ನಾಗರಾಜ ಅವರು 'ಶಕ್ತಿ ಶಾರದೆಯ ಮೇಳ' ಕೃತಿಯಲ್ಲಿ ಈ ಕವನದ ಪ್ರಧಾನ ಗುಣವೇ ಸಮೃದ್ಧವಾಗಿ ಹರಡಿರುವ ಪ್ರತಿಮೆಗಳು. ಈ ಕವನದ ಬೆಳವಣಿಗೆಯನ್ನು ಸ್ಪಷ್ಟ ನೇರ ತರ್ಕಕ್ಕೆ ಸಿಕ್ಕಿಸಲು ಸಾಧ್ಯವಿಲ್ಲ. ಹೀಗೆ ಚೆಲ್ಲಿರುವ ಪ್ರತಿಮೆಗಳನ್ನು ಕೂಡಿಸುವ ಸೂತ್ರವೊಂದೇ : ಅದು ಕವಿಯ ಭಾವ. ಇಲ್ಲಿ ಮುಖ್ಯವಾದದ್ದೆಂದರೆ ಪ್ರತಿಮೆಗಳ ಮೋಹಕತೆ ಮತ್ತು ಅವು ಸೃಷ್ಟಿಸುವ ವಾತಾವರಣ.

ಕವಿತೆಯ ಕೊನೆಯಲ್ಲಿ

it is not an explaination of things
it is something better

ಇದು ವಸ್ತು ವಿವರಣೆಯಲ್ಲ ಅದಕ್ಕಿಂತ ಹೆಚ್ಚಿನದು ಎಂಬ ಅಂದ್ರೆ ಜೇಡ್‌ನ ವಾಕ್ಯದೊಂದಿಗೆ ಕವಿತೆ ಮುಕ್ತಾಯವಾಗುತ್ತದೆ. "ಲಯಗಾರಿಕೆ ಮತ್ತು ಆಕಾರದ ಭಾವನಿಷ್ಠ ಅನುಭವವೊಂದಕ್ಕೆ ರೂಪ ಕೊಡುವ ಪ್ರಯತ್ನವಾಗಿ ಈ ಕವನವನ್ನು ನೋಡಬೇಕು" ಎಂಬ ಕಿ.ರಂ. ನಾಗರಾಜ (ಚಂದನ, ಕೆ.ಎಸ್.ನ ಅಭಿನಂದನಾ ಗ್ರಂಥ) ಅವರ ಈ ಮಾತುಗಳು ಕವಿತೆಯ ಶಿಲ್ಪದ ದೃಷ್ಟಿಯಿಂದ ಮಹತ್ವದ್ದೆಂದು ತೋರುತ್ತವೆ.

ಗ್ರಂಥಋಣ

೧. ಶಕ್ತಿ ಶಾರದೆಯ ಮೇಳ, ಡಾ. ಡಿ.ಆರ್. ನಾಗರಾಜ, ಅಕ್ಷರ ಪ್ರಕಾಶನ.
೨. ಇಹದ ಪರಿಮಳದ ಹಾದಿ, ಡಾ. ನರಹಳ್ಳಿ ಬಾಲಸುಬ್ರಮಣ್ಯ, ಅಂಕಿತ ಪುಸ್ತಕ.
೩. ಮಲ್ಲಿಗೆಯ ಮಾಲೆ, 'ಮುನ್ನುಡಿ', ಡಾ. ಎಚ್.ಎಸ್. ರಾಘವೇಂದ್ರರಾವ್, ಲಿಪಿ ಪ್ರಕಾಶನ.
೪. ಬೇರು ಕಾಂಡ ಚಿಗುರು, ಡಾ. ಕೆ.ವಿ. ನಾರಾಯಣ, ವಿವೇಕ ಪ್ರಕಾಶನ.

■

ತಾಯ್ಮಾತಿನಲ್ಲಿ ಶಿಕ್ಷಣ

◆

ಬಸವರಾಜ ಕೋಡಗುಂಟಿ

ತಾಯ್ನುಡಿ ಎಂದರೆ ಮಗುವಿನ ಮೊದಲ ಮಾತು, ಮಗು ಮೊದಲಿಗೆ ಕಲಿಯುವ ಮಾತು, ಮಗು ಯೋಚಿಸುವ, ಕನಸುವ ಮತ್ತು ಎಣಿಸುವ ಮಾತು. ಸಮುದಾಯದ, ಸಮುದಾಯದ ಸಂಸ್ಕೃತಿಯ ನಂಟಸ್ತಿಕೆ ಕೊಡುವ ಮಾತು. ಕೆಲವೆಡೆ ಸಮುದಾಯದ ಸದಸ್ಯತ್ವವನ್ನು ಗುರುತಿಸುವುದಕ್ಕೂ ಆ ಸಮುದಾಯದ ಮಾತನ್ನು ಎಲ್ಲ ಸದಸ್ಯರ ತಾಯ್ನುಡಿ ಎಂದು ಹೇಳಲಾಗುತ್ತದೆ. ಕೆಲವೆಡೆ ಆ ಸಮುದಾಯದ ಸದಸ್ಯತ್ವವನ್ನು ಹೊಂದುವುದಕ್ಕಾಗಿ ಆ ಮಾತನ್ನು ಕಲಿಯದೆ ಇದ್ದರೂ ಅದನ್ನು ತಮ್ಮ ತಾಯ್ಮಾತು ಎಂದು ಹೇಳಿಕೊಳ್ಳುತ್ತಾರೆ. ಯುನೆಸ್ಕೊ (೨೦೦೩) ತಾಯ್ಮಾತನ್ನು ಹೀಗೆ ವ್ಯಾಕ್ಯಾನಿಸುತ್ತದೆ; ವ್ಯಕ್ತಿಯೊಬ್ಬ ಜೀವನದಲ್ಲಿ ಮೊದಮೊದಲಿಗೆ ಬಳಸುವ, ಆನಂತರದಲ್ಲಿ ದಿನಜೀವನದ ವ್ಯವಹಾರಕ್ಕೆ ಹೆಚ್ಚಾಗಿ ಬಳಸುವ, ಹೆಚ್ಚು ಪಳಗಿರುವ, ಆ ನಿರ್ದಿಶ್ಟ ಸಮುದಾಯದ ಗುರುತಿಕೆಯನ್ನು (ಅಯ್ಡೆಂಟಿಟಿ) ಕೊಡುವ ಇನ್ನೂ ಮುಂದುವರೆದು ವ್ಯಕ್ತಿಯೊಬ್ಬರ ಸಹಜ ಅಯ್ಡೆಂಟಿಟಿಯನ್ನು ಕೊಡುವ ಬಾಶೆ ತಾಯ್ಮಾತು.

ಮಗು ಈ ಜಗತ್ತನ್ನು ಅರಿತುಕೊಳ್ಳುವುದಕ್ಕೆ ಶುರು ಮಾಡುವಾಗ ಈ ಅರಿವಿನ ಪ್ರಕ್ರಿಯೆಗೆ ಪೂರಕವಾಗಿ ಇರುವಂತದ್ದು ತಾಯ್ಮಾತು. ತಾಯಿ–ತಂದೆಯರನ್ನು, ಮನೆಯವರನ್ನು, ಸಂಬಂಧ, ಪ್ರೀತಿ, ನಂಬಿಕೆ ಈ ಮೊದಲಾದ ಎಲ್ಲವನ್ನೂ ಮಗು ತನ್ನ ಎಳವೆಯಲ್ಲಿ ಕಲಿಯುತ್ತದೆ. ಈ ಎಲ್ಲವನ್ನೂ ಮಗು ತನ್ನ ತಾಯ್ಮಾತಿನಲ್ಲಿಯೆ ಕಲಿಯುತ್ತದೆ. ಮಗು ಈ ಜಗತ್ತನ್ನು ಮನೆಯ ಪರಿಸರದ ಮೂಲಕ, ಮನೆ ಮತ್ತು ಮಗುವಿನ ಪರಿಸರದಲ್ಲಿ ಸಹಜವಾಗಿ ಬಳಕೆಯಾಗುವ ಮಾತಿನಲ್ಲಿ ಕಲಿಯುತ್ತದೆ. ಆದ್ದರಿಂದಲೇ ಬಾಶಾವಿಗ್ನಾನಿಗಳು ಬಾಶೆಯ ರಚನೆ ಮಗುವಿನ ಮನೋರಚನೆಯನ್ನು ಕಟ್ಟುತ್ತದೆ ಇಲ್ಲವೆ ಪ್ರಭಾವಿಸುತ್ತದೆ ಎಂದು ಹೇಳುವುದು. ಒಂದು ಬಾಶೆಯಲ್ಲಿ ಮೂರು ಲಿಂಗಗಳು ಇದ್ದರೆ ಮಗು ಈ ಜಗತ್ತಿನಲ್ಲಿ ಮೂರು ಲಿಂಗಗಳನ್ನು ಅರ್ತ ಮಾಡಿಕೊಳ್ಳುತ್ತದೆ. ಎರಡು ಲಿಂಗಗಳು ಇರುವ ಮಾತಿನ ರಚನೆಯನ್ನು ಸಹಜವಾಗಿಯೆ ಮಗು

ಪರಿಭಾವಿಸಿಕೊಳ್ಳಲಾರದು. ಹೀಗೆ ಮಗು ಆಲೋಚಿಸುವುದು, ಚಿಂತಿಸುವುದು, ಪರಿಬಾವಿಸಿಕೊಳ್ಳುವುದು ಎಲ್ಲವೂ ಮಗುವಿನ ತಾಯ್ಮಾತಿನಲ್ಲಿ. ಅಂದರೆ ಈ ಜಗತ್ತಿನ ಪ್ರತಿಯೊಂದನ್ನು ಮಗು ತನ್ನ ತಾಯ್ಮಾತಿನಮೂಲಕ ಪಡೆದುಕೊಳ್ಳುತ್ತದೆ.

ಶಿಕ್ಶಣ ಎನ್ನುವುದು ಮಗುವಿಗೆ ಅಕ್ಶರ, ಬಾಶೆ, ಲೆಕ್ಕ ಕಲಿಸುವುದು ಮಾತ್ರವಲ್ಲದೆ ಮಗುವಿನ ಸುತ್ತ ಹೆಣೆದುಕೊಂಡಿರುವ ಬದುಕು, ಸಮಾಜ ಮತ್ತು ಪರಿಸರಗಳನ್ನು ಕಲಿಸಿಕೊಡುವಂತದ್ದಾಗಿದೆ. ಬದುಕು, ಸಮಾಜ ಮತ್ತು ಪರಿಸರ ಇವುಗಳನ್ನು ತಿಳಿದುಕೊಳ್ಳುವುದರಿಂದ ಮಕ್ಕಳಿಗೆ ಉತ್ತಮ ಬದುಕನ್ನು ಕಟ್ಟಿಕೊಳ್ಳುವುದಕ್ಕೆ, ಉತ್ತಮ ಸಮಾಜ ಕಟ್ಟುವುದಕ್ಕೆ, ಅದರಂತೆ ಪರಿಸರವನ್ನು ಕಾದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಶಿಕ್ಶಣ ಸಮಾಜದ ಅಲ್ಲದೆ ದೇಶದ ಬವಿಶ್ಯವನ್ನು ಕಟ್ಟುತ್ತದೆ. ಬವಿಶ್ಯವನ್ನು ನಿರ್ಮಿಸುವ ಮಕ್ಕಳನ್ನು ತಯಾರಿಸುತ್ತದೆ.

ಈ ಕಾರಣದಿಂದ ಮಗುವೊಂದಕ್ಕೆ ಶಿಕ್ಶಣವನ್ನು ಕೊಡುವಾಗ ಯಾವ ಮಾತಿನಲ್ಲಿ ಕೊಟ್ಟರೆ ಅನುಕೂಲ ಎಂಬುದು ಮುಕ್ಯ.

ಆಧುನಿಕ ಕಾಲದ ಹಲವಾರು ಪಲ್ಲಟಗಳು, ಬೆಳವಣಿಗೆಗಳು ಕಾರಣವಾಗಿ ಜಗತ್ತಿನ ಹೆಚ್ಚು ದೇಶಗಳಲ್ಲಿ ಇಂದು ಇಂಗ್ಲೀಶು ಮೊದಲುಗೊಂಡು ಕೆಲವು ಜಾಗತಿಕ ಬಾಶೆಗಳು ವ್ಯಾಪಿಸಿಕೊಂಡಿವೆ, ಮಾತ್ರವಲ್ಲದೆ ಪ್ರಬಾವಿಯಾಗಿವೆ. ವಸಾಹತು ದೇಶಗಳಲ್ಲಿ ಇದು ಹೆಚ್ಚು ಆಳವಾಗಿ ಬೇರು ಬಿಟ್ಟಿದೆ. ಇಂಗ್ಲೀಶಿಗೆ ಜಾಗತಿಕ ಬಾಶೆ ಎಂಬ ಪಟ್ಟ ಬೇರೆ ಇದೆ. ಹೀಗೆ ಹಲವಾರು ಕಾರಣಗಳಿಂದಾಗಿ ಜಗತ್ತಿನ ಹಲವೆಡೆ ಇಂಗ್ಲೀಶ್ ಮಾದ್ಯಮ ಶಿಕ್ಶಣ ವ್ಯಾಪಕವಾಗಿ ಕಂಡುಬರುತ್ತಿದೆ. ಇದರೊಂದಿಗೆ ಇನ್ನೂ ಹಲವು ಜಾಗತಿಕ ಪ್ರಬಾವಿ ಬಾಶೆಗಳನ್ನೂ ಕಾಣಬಹುದು. ಇವುಗಳ ಜೊತೆಗೆ ಬಾರತದಂತಾ ಬಹುಬಾಶಿಕ ಪರಿಸರಗಳಲ್ಲಿ ಸ್ಥಳೀಯ ಹಲವು ಬಾಶೆಗಳು ರಾಜಕೀಯ ಮೊದಲಾದ ಹಲವು ಕಾರಣಗಳಿಂದಾಗಿ ಪ್ರಬಾವಿ ಬಾಶೆಗಳಾಗಿ ಬೆಳೆದಿವೆ. ಹಿಂದಿ ಹೆಚ್ಚು ಪ್ರಬಾವವನ್ನು ಪಡೆದುಕೊಂಡಿದೆ. ಇದು ಸ್ಪಶ್ಟವಾಗಿ ರಾಜಕೀಯ ಕಾರಣದಿಂದ. ತೆಲುಗು, ತಮಿಳು, ಬೆಂಗಾಲಿ, ಕನ್ನಡ ಮೊದಲಾದ ಹಲವಾರು ಬಾಶೆಗಳೂ ಹೀಗೆ ಬಾರತದ ವಿವಿದ ರಾಜ್ಯಗಳಲ್ಲಿ ಪ್ರಬಾವಿ ಬಾಶೆಗಳಾಗಿ ಬೆಳೆದಿವೆ. ಈ ಪ್ರಬಾವಿ ಬಾಶೆಗಳಿಗೆ ರಾಜಕೀಯ ಬೆಂಬಲ, ಸಾಮಾಜಿಕ ಪ್ರತಿಶ್ಟೆ ಇದೆ. ಇಂಗ್ಲೀಶ್ ಮತ್ತು ಇತರ ಪ್ರಬಾವಿ ಬಾಶೆಗಳು ಶಿಕ್ಶಣ ಮಾದ್ಯಮಗಳಾಗಿ ಬಾರತದಲ್ಲಿ ಇವೆ. ಇದಕ್ಕೆ ಎದುರಾಗಿ ಬಾರತದಾಗ ನೂರಾರು ಬಾಶೆಗಳು ಇವೆ. ಇವುಗಳಲ್ಲಿ ಹಲವು ಬಾಶೆಗಳಿಗೆ ಕೆಲವು ನೂರು ಮಂದಿ, ಇನ್ನೂ ಕೆಲವಕ್ಕೆ ಅದಕ್ಕಿಂತ ಕಮ್ಮಿ ಮಾತುಗರು ಇದ್ದಾರೆ. ಇನ್ನು ಕೆಲವು ಬಾಶೆಗಳಿಗೆ ಇರುವ ಸಾವಿರಾರು ಮಾತುಗರು ದೇಶದ ವಿವಿದೆಡೆ ಹರಡಿಕೊಂಡಿದ್ದಾರೆ.

ಇದನ್ನು ಗಮನಿಸಿದಾಗ ಬಾರತದ ಕೋಟ್ಯಾಂತರ ಮಕ್ಕಳು ತಮ್ಮ ತಾಯ್ಮಾತಿನಲ್ಲಿ ಶಿಕ್ಶಣವನ್ನು ಪಡೆಯುತ್ತಿಲ್ಲ ಎಂಬುದು ಸ್ಪಶ್ಟವಾಗಿ ತಿಳಿಯುತ್ತದೆ. ಇತ್ತೀಚಿನ ದಿನಗಳಲ್ಲಿಯಂತೂ ಇಂಗ್ಲೀಶ್ ಮಾದ್ಯಮ ಶಿಕ್ಶಣದ ಮೇಲಿನ ವ್ಯಾಮೋಹ ವ್ಯಾಪಕವಾಗಿ

ಸಾಮಾಜಿಕ ವ್ಯಸನವಾಗಿ ಬೆಳೆಯುತ್ತಿದೆ. ಹೀಗಾಗಿ ದೇಶದೆಲ್ಲೆಡೆ ಇಂಗ್ಲೀಶ್ ಮಾದ್ಯಮ ಶಾಲೆಗಳು ತಲೆಎತ್ತಿವೆ.

ವಿಶ್ವ ಬ್ಯಾಂಕ್ ವರದಿಯೊಂದರ (೨೦೦೫) ಪ್ರಕಾರ ಶಾಲೆಯಿಂದ ಹೊರಗುಳಿಯುವ, ಶಾಲೆ ಬಿಡುವ ಜಗತ್ತಿನ ೫೦% ಮಂದಿ ಮಕ್ಕಳು ತಮ್ಮದಲ್ಲದ ಪೆರಮಾತಿನಲ್ಲಿ ಶಿಕ್ಶಣ ಪಡೆಯುತ್ತಿದ್ದಾರೆ. ತಮ್ಮದಲ್ಲದ ಮಾತಿನಲ್ಲಿ ಶಿಕ್ಶಣ ಪಡೆಯುವ ಮಕ್ಕಳುಮನೆಯ ಮಾತು ಮತ್ತು ಶಾಲೆಯ ಮಾತುಗಳ ನಡುವೆ ಹೊಂದಿಕೊಳ್ಳುವುದರಲ್ಲಿ ಸೋಲುತ್ತಾರೆ.ಹೀಗಾಗಿ ಶಿಕ್ಶಣದಲ್ಲಿ ಮಕ್ಕಳು ಹಿಂದುಳಿಯುತ್ತಾರೆ.

ಕರ್‍ನಾಟಕದ ಶಿಕ್ಶಣ ಮಾದ್ಯಮದ ಚಿತ್ರಣವನ್ನು ಪರಿಚಯಿಸಿಕೊಳ್ಳುವ ಪ್ರಯತ್ನವನ್ನು ಇಲ್ಲಿ ಮಾಡೋಣ. ಕರ್‍ನಾಟಕದಾಗ ಸುಮಾರು ೬೫% ಮಂದಿ ಕನ್ನಡ ಮನೆಮಾತಾಗಿ ಉಳ್ಳವರು. ಉಳಿದ ೩೫% ಮಂದಿ ಕನ್ನಡವಲ್ಲದ ಇತರ ಮಾತುಗಳನ್ನು ಆಡುವವರು. ಕರ್‍ನಾಟಕದಲ್ಲಿ ಹೆಚ್ಚು ಕನ್ನಡ ಮಾದ್ಯಮ ಶಾಲೆಗಳು ಇವೆ. ಆದರೂ ಕನ್ನಡ ಮನೆಮಾತಿನ ೬೫% ಮಂದಿ ಕನ್ನಡ ಮಾದ್ಯಮದಲ್ಲಿ ಶಿಕ್ಶಣ ಪಡೆಯುತ್ತಿದ್ದಾರೆ ಎಂದು ಹೇಳಲು ಸಾದ್ಯವಿಲ್ಲ. ಕರ್‍ನಾಟಕದಲ್ಲಿ ಇಂಗ್ಲೀಶ್ ಮಾದ್ಯಮ ಶಾಲೆಗಳೂ ಹೆಚ್ಚಿವೆ. ಅಲ್ಲದೆ ಕನ್ನಡ ಮಾದ್ಯಮ ಎಂದು ಸರಕಾರದ ಪರವಾನಿಗೆಯನ್ನು ತೆಗೆದುಕೊಂಡು ಇಂಗ್ಲೀಶ್ ಮಾದ್ಯಮದಾಗ ಕಲಿಸುತ್ತಿರುವ ಶಾಲೆಗಳೂ ತುಂಬಾ ಇವೆ. ಇಂಗ್ಲೀಶ್ ಮಾದ್ಯಮದ ಬ್ರಮೆಯಿಂದಾಗಿ ಇಂದು ಹಳ್ಳಿಹಳ್ಳಿಗಳಲ್ಲಿ ಕನ್ನಡ ಮನೆಮಾತಿನ ಪಾಲಕರು ತಮ್ಮ ಮಕ್ಕಳನ್ನು ಇಂಗ್ಲೀಶ್ ಮಾದ್ಯಮದ ಶಾಲೆಗಳಿಗೆ ಸೇರಿಸುತ್ತಿದ್ದಾರೆ. ಹಾಗಾಗಿ ಕನ್ನಡ ಮನೆಮಾತಿನ ಎಲ್ಲ ಮಕ್ಕಳಿಗೆ ಕನ್ನಡ ಇಲ್ಲವೆ ತಾಯ್ಮಾತಿನ ಮಾದ್ಯಮ ಶಿಕ್ಶಣ ಸಿಗುತ್ತಿಲ್ಲ.

ಇಲ್ಲಿ ಕನ್ನಡ ಮಾತಿನ ಬಗೆಗೆ ಇನ್ನೊಂದು ವಿಶಯವನ್ನೂ ಉಲ್ಲೇಕಿಸಬೇಕು. ವಿವಿದ ಕನ್ನಡಗಳ ಮತ್ತು ಪಟ್ಯಕನ್ನಡಗಳ ನಡುವಿನ ಬಿನ್ನತೆ ಬಗೆಗೆ. ಸಾವಿರಾರು ವರುಶಗಳಶ್ಟು ಹಿಂದಿನಿಂದಲೆ ಬಿನ್ನ ಬೆಳವಣಿಗೆಯನ್ನು ಪಡೆದುಕೊಂಡಿರುವ ಹಲವಾರು ಒಳನುಡಿಗಳು ತಮ್ಮದೆ ಆದ ವಿಶಿಶ್ಟ ಲಕ್ಶಣಗಳನ್ನು ಹೊಂದಿ ಬೆಳೆದಿವೆ. ಕಳೆದ ಸುಮಾರು ೧೫೦ ವರುಶಗಳಲ್ಲಿ ಬೆಳೆದ ಶಿಶ್ಟ ಕನ್ನಡ ಈ ಎಲ್ಲ ಒಳನುಡಿಗಳನ್ನೂ ದೂರ ಇಡುತ್ತದೆ. ಕನ್ನಡ ಮಾತನಾಡುವ ಯಾವುದೆ ಮಗು ಕನ್ನಡದ ಒಂದು ಒಳನುಡಿಯನ್ನು ಆಡುವಂತದ್ದೆ ಆಗಿರುತ್ತದೆ. ಶಿಶ್ಟಕನ್ನಡವನ್ನೆ ತಾಯ್ಮಾತಿನಂತೆ ಪಡೆದು ಬೆಳೆಯುವ ಮಕ್ಕಳ ಸಂಕೆ ಈಗೀಗ ಬೆಂಗಳೂರಿನಂತಾ ಊರುಗಳಲ್ಲಿ ಇದೆ ಎಂಬ ಬ್ರಮೆಯೊಂದಿದೆ. ವಾಸ್ತವದಲ್ಲಿ ಬೆಂಗಳೂರು ಕನ್ನಡ ಶಿಶ್ಟಕನ್ನಡಕ್ಕಿಂತ ವಿಬಿನ್ನ ರಚನೆಯನ್ನು ಪಡೆದುಕೊಂಡು ಬೆಳೆಯುತ್ತಿದೆ. ಹಾಗಾಗಿ, ಬಹುತೇಕ ಕನ್ನಡ ಮಾತನಾಡುವ ಮಕ್ಕಳು ಬೇರೆ ಬೇರೆ ಒಳನುಡಿಗಳನ್ನು ಆಡುವವರಾಗಿರುತ್ತಾರೆ. ಪಟ್ಯಪುಸ್ತಕಗಳ ಕನ್ನಡ ಈ ಒಳನುಡಿಗಳನ್ನು ತುಸು ಅವಮಾನಿಸಿಯೆ ನೋಡುತ್ತದೆ. ಶಿಶ್ಟಕನ್ನಡ ಮಾತನಾಡುವುದಕ್ಕೆ ಬಾರದ ಶಿಕ್ಶಕರೂ, ಪಾಲಕರೂ ಶಿಶ್ಟಕನ್ನಡ ಮಾತನಾಡುವುದಕ್ಕೆ ಮಕ್ಕಳಿಗೆ ಒತ್ತಾಯಿಸುತ್ತಾರೆ. ಪಟ್ಯಪುಸ್ತಕಗಳ ಕನ್ನಡ ಮಕ್ಕಳಿಗೆ ಬೇಗ ಅರ್‍ತ ಆಗುವುದಿಲ್ಲ. ಹೆಚ್ಚೂಕಡಿಮೆ ಪಟ್ಯಕನ್ನಡ ಮಕ್ಕಳಿಗೆ

ಒಂದು ವಿದೇಶಿ ಬಾಶೆಯಂತೆಯೆ ಆಗಿಬಿಡುತ್ತದೆ. ಮಕ್ಕಳನ್ನು ಅವರ ಆಡುನುಡಿಯಿಂದ ಪಟ್ಯದ ಬಾಶೆಗೆ ಜೋಡಿಸುವ ಕೆಲಸ ಅಗತ್ಯವಿದೆ. ಈ ಜೋಡಿಸುವ ಕೆಲಸ ಸಾಮಾನ್ಯವಾಗಿ ಎಲ್ಲೂ ನಡೆಯುವುದಿಲ್ಲ. ಆದ್ದರಿಂದಲೆ ಕನ್ನಡ ಮಾತನಾಡುವ ಮಕ್ಕಳು ಕನ್ನಡ ಮಾದ್ಯಮ ಶಾಲೆಗೆ ಬಂದೂ ಶಾಲೆಯಿಂದ ಹೊರಗೆ ಉಳಿಯುವುದು, ಶಾಲೆಯಲ್ಲಿ ಯಶಸ್ಸನ್ನು ಕಾಣದೆ ಹೋಗುವುದು ತುಂಬಾ ಸಹಜವಾಗಿ ಕಾಣುತ್ತದೆ. ಆದ್ದರಿಂದ ಈ ಬರವಣಿಗೆಯಲ್ಲಿ ತರುವ ವಿಚಾರಗಳನ್ನು ಪೆರಮಾತಿನಲ್ಲಿ ಶಿಕ್ಶಣ ಪಡೆಯುವ ಅದರಂತೆ ಶಿಶ್ಟಕನ್ನಡದಲ್ಲಿ ಶಿಕ್ಶಣ ಪಡೆಯುವ ಮಕ್ಕಳಿಗೂ ಒಟ್ಟಿಗೆ ಅನ್ವಯಿಸಿ ನೋಡಬಹುದು. ಕನ್ನಡದ ವಿವಿದ ಒಳನುಡಿಯ ಮಕ್ಕಳು ಶಿಶ್ಟಕನ್ನಡದಲ್ಲಿ ಶಿಕ್ಶಣ ಪಡೆಯುವುದು ಪೆರಮಾತಿನಲ್ಲಿ ಶಿಕ್ಶಣ ಪಡೆಯುವಶ್ಟು ಹಾನಿಕರ ಅಲ್ಲದಿದ್ದರೂ ಗಂಬೀರವಾಗಿರುವುದಂತು ನಿಜ. ಆದ್ದರಿಂದ ಈ ಅಂಶಗಳನ್ನು ಒಟ್ಟಿಗೆ ಗಮನಿಸದರೆ ತಪ್ಪಾಗಲಿಕ್ಕಿಲ್ಲ.

ಇನ್ನು ಕನ್ನಡವುಳಿದು ಇತರ ಮಾತುಗಳ ಮಾತುಗರಾದ ೩೫% ಮಂದಿಯ ಬಗೆಗೆ ಮಾತನಾಡುವುದಾದರೆ ಇವರಲ್ಲಿ ಉರ್ದು ಮಾತುಗರ ಸಂಕೆ ಸುಮಾರು ೧೦% ಇದೆ. ಕರ್ನಾಟಕದಾಗ ಕನ್ನಡ ಮತ್ತು ಇಂಗ್ಲೀಶ್ ಹೊರತಾಗಿ ಹೆಚ್ಚು ಸಂಕೆಯ ಶಾಲೆಗಳಲ್ಲಿ ಉರ್ದು ಮಾದ್ಯಮ ಇದೆ. ಆದರೆ, ಕರ್ನಾಟಕದಾಗ ಇರುವ ಉರ್ದು ಮಾತನಾಡುವ ಸುಮಾರು ೫೦ ಲಕ್ಶ ಮಂದಿಯ ಮಕ್ಕಳಿಗೆ ಎಲ್ಲೆಡೆ ಉರ್ದು ಮಾದ್ಯಮ ಶಾಲೆಗಳು ಸಿಗುವುದಿಲ್ಲ. ಅಲ್ಲದೆ ಇಂಗ್ಲೀಶಿನ ಬ್ರಮೆ ಇರುವುದರಿಂದ ಅವರಲ್ಲಿಯೂ ಪರಿಗಣಿಸುವಶ್ಟು ಮಂದಿ ಪಾಲಕರು ಇಂಗ್ಲೀಶ್ ಮಾದ್ಯಮದ ಶಾಲೆಗಳನ್ನು ಇಶ್ಟಪಡುತ್ತಾರೆ.

ಕನ್ನಡ ಮತ್ತು ಉರ್ದು ಹೊರತಾಗಿ ಕರ್ನಾಟಕದಾಗ ತಮಿಳು, ತೆಲುಗು, ಮರಾಟಿ ಮೊದಲಾದ ಮಾತುಗಳ ಪರಿಗಣಿಸುವಶ್ಟು ಸಂಕೆಯ ಮಾತುಗರು ಇದ್ದಾರೆ.ಆದರೆ ಈ ಬಾಶೆಗಳ ಕೇವಲ ಬೆರಳೆಣಿಕೆಯಶ್ಟು ಶಾಲೆಗಳು ಮಾತ್ರ ಕರ್ನಾಟಕದಾಗ ಅಲ್ಲಲ್ಲಿ ಇವೆ. ಹಾಗಾಗಿ ಈ ಮಾತುಗಳ ಮಾತುಗರಿಗೆ ಹೆಚ್ಚುಕಮ್ಮಿ ಅವರ ಮಾತಿನ ಮಾದ್ಯಮದ ಶಿಕ್ಶಣ ಇಲ್ಲ. ಇನ್ನು ಉಳಿದ ಮಾತುಗಳ ಬಗೆಗೆ ಚರ್ಚೆಯ ಅವಶ್ಯಕತೆಯೆ ಇಲ್ಲ. ತುಳು, ಮಲಯಾಳಂ ಇಂತಾ ಕೆಲವು ಮಾತುಗಳನ್ನು ಶಿಕ್ಶಣದಲ್ಲಿ ಬಾಶೆಯಾಗಿ ಕಲಿಯುವುದಕ್ಕೆ ಕೆಲವೆ ಕೆಲವು ಶಾಲೆಗಳಲ್ಲಿ ಅವಕಾಶ ಇದೆ. ಇನ್ನು ಲಕ್ಶಾಂತರ ಸಂಕೆಯ ಮಾತುಗರು ಇರುವ ಲಂಬಾಣಿ, ಗುಜರಾತಿ, ಕುಳು (ಕೊರವ)ದಂತಾ ಹಲವಾರು ಮಾತುಗಳು ಶಿಕ್ಶಣವಲಯದೊಳಗೆ ಇದುವರೆಗೆ ಚರ್ಚೆಗೂ ಬಂದಿಲ್ಲ.

ಈ ಒಟ್ಟು ಕರ್ನಾಟಕದ ಪರಿಸ್ತಿತಿಯನ್ನು ಅವಲೋಕಿಸಿದಾಗ ಕರ್ನಾಟಕದ ಅರ್ದದಶ್ಟು ಮಂದಿ ಕೂಡ ತಮ್ಮ ಮನೆಮಾತಿನಲ್ಲಿ ಶಿಕ್ಶಣ ಪಡೆಯುತ್ತಿಲ್ಲ ಎನ್ನುವುದು ಸ್ಪಶ್ಟವಾಗುತ್ತದೆ.

ಇಂಗ್ಲೀಶ್ ಮಾದ್ಯಮ ಕರ್ನಾಟಕದ ಎಲ್ಲ ಮಾತುಗಳ ಸಮಾನ ಶತ್ರು. ಸಮಾಜದಲ್ಲಿ ಇದನ್ನು ಮಿತ್ರ ಎಂದು ನೋಡಲಾಗುತ್ತಿದೆ. ಹಲವು ವಿದ್ವಾಂಸರು ಇದನ್ನು ಬೆಂಬಲಿಸುತ್ತಾರೆ ಕೂಡ. ಈ ನಿಲುವಿಗೆ ಮಕ್ಕಳ ಮಾನಸಿಕ ಸ್ತಿತಿ, ಪೆರಮಾತಿನ ಶಿಕ್ಶಣದಿಂದ ಮಕ್ಕಳ ಮನೊಸ್ತಿತಿಯ ಮೇಲೆ ಆಗುವ ಪರಿಣಾಮಗಳ ಅರಿವಿನ ಕೊರತೆಯಿಂದ ಬೆಳೆದವು.

ಜಗತ್ತಿನ ಹಲವಾರು ದೇಶಗಳಲ್ಲಿ ಮಕ್ಕಳು ತಮ್ಮದಲ್ಲದ ಮಾತಿನಲ್ಲಿ ಶಿಕ್ಶಣ ಪಡೆಯುತ್ತಿದ್ದಾರೆ. ಮಕ್ಕಳು ಅನುಬವಿಸುವುದು, ಆಲೋಚಿಸುವುದು ತಾಯ್ಮಾತಿನಲ್ಲಿ. ಶಿಕ್ಶಣ ಮಕ್ಕಳಿಗೆ ಅನುಬವವನ್ನು, ಆಲೋಚನೆಯನ್ನು ಕೊಡುತ್ತದೆ. ಮಕ್ಕಳಿಗೆ ಈ ಜಗತ್ತಿನ ಗ್ರಹಿಕೆ ದೊರೆಯುವುದು ತಾಯ್ಮಾತಿನಲ್ಲಿ. ಶಾಲೆಯಲ್ಲಿ ತಾಯ್ಮಾತಿನ ಅನುಪಸ್ತಿತಿ ಈ ಗ್ರಹಿಕೆಗೆ ಅನುವು ಮಾಡಿಕೊಡುವುದಿಲ್ಲ. ಅನುಬವ ಮತ್ತು ಆಲೋಚನೆ ಎಂದಾಗ ಮಕ್ಕಳು ಸಾಹಿತ್ಯವನ್ನು ಅನುಬವಿಸುವುದು, ಸಮಾಜವನ್ನು ತಿಳಿದುಕೊಳ್ಳುವುದು, ಪರಿಸರವನ್ನು ಗ್ರಹಿಸುವುದು, ಲೆಕ್ಕಗಳನ್ನು ಮಾಡುವುದು, ವಿಗ್ನಾನವನ್ನು ಅರ್ತ ಮಾಡಿಕೊಳ್ಳುವುದು ಹೀಗೆ ಎಲ್ಲವೂ ಒಳಗೊಳ್ಳುತ್ತವೆ. ಮಕ್ಕಳಿಗೆ ಒಳ್ಳೆಯ ಶಿಕ್ಶಣ ಎಂದರೆ ಈ ಎಲ್ಲವುಗಳನ್ನು ಸೂಕ್ತವಾಗಿ ಒದಗಿಸುವುದು ತಾನೆ. ಹಾಗಾದರೆ, ಮಕ್ಕಳಿಗೆ ಪೆರಮಾತಿನ ಶಿಕ್ಶಣ ಈ ಎಲ್ಲವನ್ನೂ ಒದಗಿಸುವುದಿಲ್ಲ ಆ ಮೂಲಕ ಮಕ್ಕಳನ್ನು ಶಿಕ್ಶಣದಿಂದ ದೂರ ಇಡುತ್ತದೆ.

ಈ ಪರಿಸ್ತಿತಿಯಿಂದಾಗಿ ಮಕ್ಕಳು ಶಾಲೆ ಬಿಡುತ್ತಾರೆ. ಜಗತ್ತಿನ ಅನೇಕ ದೇಶಗಳಲ್ಲಿ ಶಾಲೆ ಬಿಟ್ಟ ಮಕ್ಕಳನ್ನು ಅದ್ಯಯನ ಮಾಡಿರುವ ಹಲವಾರು ವಿದ್ವಾಂಸರು ಹೇಳುವುದೆಂದರೆ ಮಕ್ಕಳು ಶಾಲೆ ಬಿಟ್ಟಿರುವ ಬಹುತೇಕ ಸಂದರ್ಬಗಳಲ್ಲಿಯೂ ಹೆಚ್ಚಿನ ಸಂಕೆಯ ಮಕ್ಕಳಿಗೆ ತಾಯ್ಮಾತಿನ ಶಿಕ್ಶಣ ಇಲ್ಲ. ಶಾಲೆಯಲ್ಲಿ ಹೇಳುತ್ತಿರುವುದನ್ನು ಗ್ರಹಿಸುವುದಕ್ಕೆ ಮಕ್ಕಳಿಗೆ ಸಾದ್ಯವಿಲ್ಲ ಎಂದಾಗ ಹೇಗೆ ತಾನೆ ಮಕ್ಕಳು ಶಾಲೆಯಲ್ಲಿ ಮುಂದುವರೆಯಲು ಸಾದ್ಯ. ಪ್ರಾತಮಿಕ ಹಂತದಲ್ಲಿಯೆ ಹೆಚ್ಚಿನ ಮಕ್ಕಳು ಶಾಲೆಯಿಂದ ಹೊರಗೆ ಉಳಿಯುತ್ತಾರೆ. ಪ್ರಾತಮಿಕ ಹಂತವನ್ನು ಮುಗಿಸಿ ಮುಂದುವರೆಯುವ ಮಕ್ಕಳು ಮಾದ್ಯಮಿಕ ಹಂತದವರೆಗೆ ಬರಬಹುದು. ಆನಂತರ ಹೆಚ್ಚಿನ ಮಕ್ಕಳು ಶಾಲೆಯಿಂದ ಹೊರಗೆ ಉಳಿಯುತ್ತಾರೆ. ಬಾರತದ ಪರಿಸ್ತಿತಿಯಲ್ಲಿ ಹತ್ತನೆ ತರಗತಿಯ ನಂತರ ಅರ್ದದಶ್ಟು ಇಲ್ಲವೆ ಅರ್ದಕ್ಕೂ ಹೆಚ್ಚು ಮಕ್ಕಳು ಶಾಲೆಯಿಂದ ಹೊರಗೆ ಉಳಿಯುವುದನ್ನು ಗಮನಿಸಬಹುದು. ಇಲ್ಲಿ ಹತ್ತನೆ ತರಗತಿಯ ಪರೀಕ್ಶೆಯಲ್ಲಿ ಸೋಲುವ ಮಕ್ಕಳು ಮಾತ್ರವಲ್ಲದೆ ಕಂಟಪಾಟ ಮತ್ತು ಇನ್ನಿತರ ಬಗೆಯ ಪ್ರಯತ್ನಗಳನ್ನು ಮಾಡಿ ಉತ್ತೀರ್ಣರಾಗುವ ಹಲವು ಮಕ್ಕಳೂ ಶಿಕ್ಶಣ ಮುಂದುವರೆಸುವುದಿಲ್ಲ. ಇದನ್ನು ಬಾರತದ ಪ್ರತಿಯೊಂದು ಹಳ್ಳಿಯಲ್ಲಿಯೂ ಗಮನಿಸಬಹುದು. ಇಲ್ಲಿ ಮಕ್ಕಳಿಗೆ ಶಾಲೆ ಮತ್ತು ಶಾಲೆಯ ಪರಿಸರಗಳೆ ಶಾಲೆ ಬಿಡುವುದಕ್ಕೆ ಕಾರಣವಾಗುತ್ತವೆ ಎಂಬುದು ಸ್ಪಶ್ಟ. ಇಂತಾ ಮಕ್ಕಳ ಮೇಲೆ ಜಗತ್ತಿನ ಹಲವೆಡೆ ಬಂದಿರುವ ಅದ್ಯಯನಗಳು ಈ ವಿಶಯವನ್ನು ಸ್ಪಶ್ಟವಾಗಿ ತೋರಿಸುತ್ತಿವೆ. ಬಾರತದಲ್ಲಿಯೂ ಇಂತಾ ಅದ್ಯಯನಗಳು ಬಂದಿವೆ. ಹೆಚ್ಚು ಬುಡಕಟ್ಟು ಬಾಶೆಗಳು ಇರುವ ರಾಜ್ಯಗಳಲ್ಲಿ ಒಂದಾದ ಒರಿಸ್ಸಾದಲ್ಲಿ ಶಿಕ್ಶಣ ಇರುವುದು ಒಡಿಯಾ, ಹಿಂದಿ ಮತ್ತು ಇಂಗ್ಲೀಶು ಮಾತುಗಳಲ್ಲಿ. ಹಾಗಾಗಿ ಈ ಮೂರೂ ಮಾತುಗಳನ್ನು ಆಡದ ಅಲ್ಲಿನ ಬಹುತೇಕ ಬುಡಕಟ್ಟು ಮಕ್ಕಳು ಶಾಲೆಯಿಂದ ದೊಡ್ಡ ಸಂಕೆಯಲ್ಲಿ ಹೊರಗೆ ಉಳಿಯುತ್ತಿದ್ದಾರೆ.

ಶಾಲೆಯಲ್ಲಿ ಮುಂದುವರೆಯುವ ಮಕ್ಕಳಲ್ಲಿ ಕೂಡ ಹಲವರು ಹತ್ತನೆ ತರಗತಿ ನಂತರ ಶಿಕ್ಶಣ ಮುಂದುವರೆಸುವುದಿಲ್ಲ. ಈ ಮಕ್ಕಳು ಶಾಲೆಯಲ್ಲಿ ಹೆಚ್ಚು ಸಕ್ರಿಯವಾಗಿರುವುದಿಲ್ಲ ಮತ್ತು ಕಡಿಮೆ ಅಂಕಗಳನ್ನು ಪಡೆದುಕೊಂಡು ಶಾಲೆಯಲ್ಲಿ ಮುಂದುವರೆಯುತ್ತಾರೆ. ಈ ಮಕ್ಕಳ ಪ್ರತಿಬೆ ಅನಾವರಣಕ್ಕೆ ಶಾಲೆಯಲ್ಲಿ ಪರಿಸರ ಇರುವುದೆ ಇಲ್ಲ. ಹೀಗೆ ನೀರಸ ಪ್ರತಿಕ್ರಿಯೆ ತೋರಿಸಿಕೊಂಡು ಮುಂದುವರೆಯುವ ಮಕ್ಕಳನ್ನು ಇತರ ಮಕ್ಕಳು ಮತ್ತು ಮುಕ್ಯವಾಗಿ ಶಿಕ್ಶಕರು ಶಾಲೆಯಲ್ಲಿ ನಕಾರಾತ್ಮಕ ನೋಟದಿಂದ ನೋಡುತ್ತಾರೆ. ಇದು ಮಕ್ಕಳ ಮಾನಸಿಕ ಸ್ತಿತಿಯನ್ನು ಅಲುಗಾಡಿಸುತ್ತದೆ. ಮಕ್ಕಳಿಗೆ ತಮ್ಮ ಬಗೆಗೆ ಸ್ವಂತ ನಂಬಿಕೆ ಕುಸಿಯುವಂತೆ ಮಾಡುತ್ತದೆ. ಶಿಕ್ಶಣ ಮಕ್ಕಳಿಗೆ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಅನುವು ಮಾಡಿಕೊಡಬೇಕು. ಆದರೆ ಇಲ್ಲಿ ಶಿಕ್ಶಣದಿಂದಾಗಿ ಮಕ್ಕಳು ತಮ್ಮ ಮೇಲಿನ ನಂಬಿಕೆಯನ್ನು ಕಳೆದುಕೊಳ್ಳುತ್ತಾರೆ. ಇದು ಅವರ ಬದುಕಿನ ಮೇಲೂ ಪರಿಣಾಮ ಬೀರುತ್ತದೆ. ಸೋತುಹೋದ ಜೀವನಕ್ಕೆ ಅವರನ್ನು ತಳ್ಳುತ್ತದೆ. ಶಾಲೆಯಲ್ಲಿ ಮುಂದುವರೆದಶ್ಟೂ ಕಾಲ ಅವರು ಅನುಬವಿಸುವ ಕೀಳರಿಮೆ ಅವರ ಜೀವನದಲ್ಲಿಯೂ ಸೇರಿಕೊಳ್ಳುತ್ತದೆ. ಇದನ್ನು ಶಾಲೆಗೆ ಬಂದು ಹಾಗೂ ಹೀಗೂ ಶಿಕ್ಶಣ ಪಡೆದಮತ್ತು ಶಾಲೆಗೆ ಬರದೆ ಬೆಳೆದ ಬಡ, ಬುಡಕಟ್ಟು ಮಕ್ಕಳನ್ನು ಹೋಲಿಸಿ ನೋಡಿದಾಗ ಸ್ಪಶ್ಟವಾಗಿ ತಿಳಿದುಕೊಳ್ಳಬಹುದು. ಇಲ್ಲಿ ಈ ಎರಡು ಗುಂಪಿನ ಮಕ್ಕಳ ನಡುವೆ ಬದುಕನ್ನು ಅನುಬವಿಸುವಿಕೆ, ತಮ್ಮ ಮೇಲಿನ ನಂಬಿಕೆ ತೋರಿಸುವುದು, ಸೂಕ್ಶ್ಮ ಸಮಯಗಳಲ್ಲಿ ನಿರ್ಣಯ ತೆಗೆದುಕೊಳ್ಳುವುದು ಮೊದಲಾದ ಹಂತಗಳಲ್ಲಿ ವ್ಯತ್ಯಾಸವನ್ನು ಗಮನಿಸಬಹುದು. ತಮ್ಮದಲ್ಲದ ಮಾತಿನಲ್ಲಿ ಶಿಕ್ಶಣ ಪಡೆದ ಮಕ್ಕಳು ಶಾಲೆಗೆ ಬಂದಿರದ ಮಕ್ಕಳಿಗಿಂತ ಮಾನಸಿಕ ಸಾಮರ್ತ್ಯದಲ್ಲಿ ಕೆಳಮಟ್ಟದಲ್ಲಿ ಇರುತ್ತಾರೆ.

ಇನ್ನೂ ಹಲವು ಅದ್ಯಯನಗಳು ಮಕ್ಕಳ ಕಡಿಮೆ ಪಲಿತಾಂಶದ ಕುರಿತೂ ಬಂದಿವೆ. ಕಡಿಮೆ ಅಂಕಗಳನ್ನು ಪಡೆಯುವ ಮಕ್ಕಳಲ್ಲಿ ಹೆಚ್ಚಿನ ಮಕ್ಕಳಿಗೆ ಅವರ ತಾಯ್ಮಾತಿನಲ್ಲಿ ಶಿಕ್ಶಣ ಸಿಗುತ್ತಿಲ್ಲ. ಅದರೊಂದಿಗೆ ಗಣಿತ, ವಿಗ್ನಾನ ವಿಶಯಗಳಲ್ಲಿ ನಿರ್ದಿಶ್ಟವಾಗಿ ಕಡಿಮೆ ಅಂಕ ಗಳಿಕೆಗೆ ಕಾರಣ ಹುಡುಕುವ ಪ್ರಯತ್ನ ಮಾಡಿದ ವಿದ್ವಾಂಸರು ಇಂತಾ ಮಕ್ಕಳ ಸಂದರ್ಬದಲ್ಲಿ ಹೆಚ್ಚಿನವರಿಗೆ ಅವರ ತಾಯ್ಮಾತಿನಲ್ಲಿ ಶಿಕ್ಶಣ ಸಿಕ್ಕಿಲ್ಲ ಎಂಬುದನ್ನು ಕಂಡುಕೊಂಡಿದ್ದಾರೆ.

ಬಹುಮುಕ್ಯವಾಗಿ ಮಕ್ಕಳು ತಮ್ಮ ಮಾತಿನ ದ್ವನಿ ಮತ್ತು ಲಿಪಿಗಳನ್ನು, ಪದ ಮತ್ತು ಪರಿಕಲ್ಪನೆಗಳನ್ನು, ವಾಕ್ಯ ಮತ್ತು ಅರ್ತಗಳನ್ನು ಪರಸ್ಪರ ಹೊಂದಿಸಬೇಕಾಗುತ್ತದೆ. ತಾಯ್ಮಾತಿನಲ್ಲಿ ಶಿಕ್ಶಣ ಪಡೆಯುವ ಮಕ್ಕಳಿಗೆ ಇದು ಸರಳ. ಆದರೆ ಪೆರಮಾತಿನಲ್ಲಿ ಶಿಕ್ಶಣ ಪಡೆಯುವ ಮಕ್ಕಳಿಗೆ ಇದು ಕಶ್ಟ. ಇಂತಾ ಮಕ್ಕಳ ಬಹುತೇಕ ಶ್ರಮ ತಮ್ಮದಲ್ಲದ ಇನ್ನೊಂದು ಬಾಶೆಯನ್ನು ಕಲಿಯುವುದರ ಕಡೆಗೆ ಇರುತ್ತದೆ. ಆ ಬಾಶೆಯನ್ನು ಕಲಿಯುವ ವೇಳೆಗೆ ಮಕ್ಕಳು ಪ್ರಾತಮಿಕ ಹಂತವನ್ನು ದಾಟಿಬಿಡುತ್ತಾರೆ. ಪ್ರಾತಮಿಕ ಹಂತದಲ್ಲಿ ಬಾಶೆಯನ್ನು, ಕಲಿಕೆಯನ್ನು, ಕಲಿಕೆಯ ಮೇಲಿನ ಹಿಡಿತವನ್ನು ಪಡೆದುಕೊಳ್ಳದ ಮಕ್ಕಳು ಪ್ರಾತಮಿಕ ಹಂತದ ನಂತರ ಪಡೆದುಕೊಳ್ಳುವುದು ಕಶ್ಟ ಇಲ್ಲವೆ ಬಹುತೇಕ ಅಸಾದ್ಯ.

ಇದು ಶಿಕ್ಶಣದಲ್ಲಿ ಮಕ್ಕಳನಕಾರಾತ್ಮಕ ಸಾದನೆಗೆ, ಶಾಲೆ ಬಗೆಗೆ ನಕಾರಾತ್ಮಕ ದೋರಣೆ ಬೆಳೆಸಿಕೊಳ್ಳುವುದಕ್ಕೆ, ಶಾಲೆ ಬಿಡುವುದಕ್ಕೆ, ಬದುಕಿನಲ್ಲಿ ಸೋಲುವುದಕ್ಕೆ ಹೀಗೆ ಒಂದರಿಂದ ಇನ್ನೊಂದಕ್ಕೆ ಕೊಂಡಿಯಂತೆ ಕಾರಣವಾಗುತ್ತಾ ಹೋಗುತ್ತದೆ. ಇದು ಒಟ್ಟು ಸಾಮಾಜಿಕ ವ್ಯವಸ್ತೆಯ ಸೋಲಿಗೆ ಕಾರಣವಾಗುತ್ತದೆ.

ತಾಯ್ಮಾತಿನ ಶಿಕ್ಶಣ ಬಾರತದಂತಾ ಬಹುಬಾಶಿಕ ದೇಶದಲ್ಲಿ ಕಶ್ಟ ಎಂದು ಎಲ್ಲರೂ ಸಹಜವಾಗಿ ಹೇಳಬಹುದು. ಕೆಲವು ನೂರು ಮಂದಿ ಮಾತನಾಡುವ ಹಲವಾರು ಬಾಶೆಗಳು ಕರ್ನಾಟಕದಲ್ಲಿ ಇವೆ. ಅಲ್ಲದೆ ಕೆಲವು ಸಣ್ಣ ಸಣ್ಣ ಬಾಶೆಗಳನ್ನು ಆಡುವ ಮಂದಿ ವಿವಿದ ಪ್ರದೇಶಗಳಲ್ಲಿ ಹರಡಿಕೊಂಡಿದ್ದಾರೆ. ಇನ್ನೂ ಮುಂದುವರೆದು ದೊಡ್ಡ ದೊಡ್ಡ ಮಾತುಗಳ ಮಾತುಗರೂ ಒಂದೆಡೆ ದೊಡ್ಡ ಸಂಕೆಯಲ್ಲಿ ಕಂಡುಬರುವರಾದರೂ ಅವರಲ್ಲಿ ಕೆಲವರು ಸಣ್ಣ ಸಣ್ಣ ಸಂಕೆಯಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ನೆಲೆಗೊಂಡಿದ್ದಾರೆ. ಹೀಗಿರುವ ಸ್ತಿತಿಯಲ್ಲಿ ಎಲ್ಲರಿಗೂ ತಾಯ್ಮಾತಿನ ಶಿಕ್ಶಣ ಎನ್ನುವುದು ಸಾದ್ಯವಿಲ್ಲ ಎಂಬ ನಿಲುವನ್ನು ಹಲವರು ವ್ಯಕ್ತಪಡಿಸುತ್ತಾರೆ. ಆದರೆ ಪ್ರತಿಯೊಂದಕ್ಕೂ ದಾರಿಗಳು ಇರುತ್ತವೆ ಇಲ್ಲವೆ ದಾರಿಗಳನ್ನು ಕಂಡುಕೊಳ್ಳಬೇಕಲ್ಲವೆ.

ಕರ್ನಾಟಕದ ಉದಾಹರಣೆಯನ್ನೆ ಇಟ್ಟುಕೊಂಡು ಮಾತುಕತೆಯನ್ನು ಮುಂದುವರೆಸೋಣ. ಕರ್ನಾಟಕದ ಯಾವುದೆ ಜಿಲ್ಲೆಯನ್ನು ಹೀಗೆ ಉದಾಹರಣೆಯಾಗಿ ತೆಗೆದುಕೊಂಡರೂ ಅಲ್ಲಿ ಬಹುಬಾಶಿಕರು, ಹಲವು ಮಾತುಗಳು ಕಂಡುಬರುತ್ತವೆ. ರಾಯಚೂರು ಜಿಲ್ಲೆಯನ್ನು ಹೀಗೆ ಉದಾಹರಣೆಗೆ ಎತ್ತಿಕೊಳ್ಳೋಣ. ಇಲ್ಲಿ, ಕನ್ನಡ ಮಾತನಾಡುವವರ ಸಂಕೆ ಹೆಚ್ಚು. ಕನ್ನಡದ ನಂತರ ಉರ್ದು-ಹಿಂದಿ, ತೆಲುಗು, ಮರಾಟಿ, ಲಂಬಾಣಿ, ಮತ್ತು (ಕುಳು) ಕೊರವ ಮಾತನಾಡುವವರ ಸಂಕೆ ಹೆಚ್ಚು. ಅವರ ನಂತರಬೆಂಗಾಲಿ, ರಾಜಸ್ತಾನಿ, ಮಾರ್ವಾಡಿ, ಕೊರಚ, ಗುಜರಾತಿ ಮಾತನಾಡುವ ಮಂದಿ ಸಾವಿರದಶ್ಟು ಕಂಡುಬರುತ್ತಾರೆ. ನೂರಾರು ಮಂದಿ ಇರುವ ತಮಿಳು, ಮಲಯಾಳಂ, ಪಂಜಾಬಿ, ನೇಪಾಲಿ ಇನ್ನೂ ಮೊದಲಾದ ಮಾತುಗಳೂ ಇವೆ. ಇವುಗಳ ಜೊತೆಗೆ ಇನ್ನೂ ಹಲವಾರು ಬಾಶೆಗಳನ್ನು ಆಡುವ ಸಾಕಶ್ಟು ಮಂದಿ ಇಲ್ಲಿ ಕಂಡುಬರುತ್ತಾರೆ. ಕಮ್ಮಿಯೆಂದರೂ ಸುಮಾರು ೨೫-೩೦ ಮಾತುಗಳು ಜಿಲ್ಲೆಯೊಂದರಲ್ಲಿ ಬಳಕೆಯಲ್ಲಿ ಇವೆ ಎನ್ನಬಹುದು. ಇಂತಾ ಪರಿಸ್ತಿತಿಯಲ್ಲಿ ತಾಯ್ಮಾತಿನ ಶಿಕ್ಶಣ ಎನ್ನುವುದು ಹೇಗೆ ಸಾದ್ಯ ಮಾಡಬಹುದು ಎನ್ನುವುದನ್ನು ನೋಡೋಣ.

ಇಲ್ಲಿ ಕನ್ನಡ ಪ್ರದಾನ ಬಾಶೆ ಮತ್ತು ಉನ್ನತ ಹಂತದ ಶಿಕ್ಶಣಕ್ಕೆ ಬರುವಾಗ ಮಕ್ಕಳು ಕನ್ನಡ ಇಲ್ಲವೆ ಇಂಗ್ಲೀಶ್ ಮಾದ್ಯಮಕ್ಕೆ ಬರಬೇಕು ಎಂಬ ನಿರೀಕ್ಶೆ ಇರುವುದನ್ನೂ ಇಲ್ಲಿ ಸದ್ಯಕ್ಕೆ ಒಪ್ಪಿತವೆಂದು ಇಟ್ಟುಕೊಂಡೆ ಚರ್ಚೆ ಮುಂದುವರೆಸೋಣ. ರಾಯಚೂರು ಜಿಲ್ಲೆಯಲ್ಲಿ ಕನ್ನಡ, ಉರ್ದು-ಹಿಂದಿ, ತೆಲುಗು, ಮರಾಟಿ, ಲಂಬಾಣಿ, ಕುಳು, ಬೆಂಗಾಲಿ ಮಾದ್ಯಮಗಳನ್ನು ಕೊಡುವುದಕ್ಕೆ ಸಾದ್ಯ. ಇಲ್ಲಿ ಲಂಬಾಣಿ, ಕುಳುಮಾತುಗರ ಹಂಚಿಕೆ ಉಳಿದ ಮಾತುಗರಂತೆ ಇರದೆ ಹಲವೆಡೆ ಹಂಚಿಕೊಂಡಿದೆ. ಈ ಸಣ್ಣಪುಟ್ಟ ಸಮಸ್ಯೆಗಳನ್ನು

ಸ್ತಳೀಯ ಹಂತದಾಗ ಅವರ ಮಾತಿನ ಶಿಕ್ಶಣ ಜಾರಿಯ ಸಂದರ್ಬದಲ್ಲಿ ಪರಿಹರಿಸಿಕೊಳ್ಳಬೇಕು. ಇದಕ್ಕೆ ಒಟ್ಟು ಆ ಪರಿಸರದ ಬಾಶಿಕ ಬೂಪಟವನ್ನು ತಯಾರಿಸಿಕೊಂಡು ಸಮಸ್ಯೆಗಳನ್ನು ಸುಲಬವಾಗಿ ಪರಿಹರಿಸಿಕೊಳ್ಳುವುದಕ್ಕೆ ಸಾದ್ಯವಾಗುತ್ತದೆ.

ಈ ಎಲ್ಲ ಬಾಶೆಗಳಲ್ಲಿ ಸುಮಾರು ೪-೫ ಇಲ್ಲವೆ ೫-೬ ತರಗತಿವರೆಗೆ ಅವರ ಮಾದ್ಯಮದಲ್ಲಿ ಶಿಕ್ಶಣ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇಲ್ಲಿ ಒಂದರಿಂದ ಮೂರನೆಯ ತರಗತಿವರೆಗೆ ಸಂಪೂರ್ಣವಾಗಿ ಅವರ ಮಾತಿನ ಮಾದ್ಯಮವನ್ನೆ ಒದಗಿಸಬೇಕು. ಇಲ್ಲಿ ಅವರು ಬದುಕಿರುವ ಪರಿಸರ, ಆ ಪರಿಸರದ ಪ್ರದಾನ ಬಾಶೆಯಾದ ಕನ್ನಡ ಇವುಗಳ ಬಗ್ಗೆ ಪ್ರಾತಮಿಕ ಮಾಹಿತಿಯನ್ನು ಅವರವರ ಮಾತುಗಳಲ್ಲಿಯೆ ಮೂರನೆಯ ತರಗತಿ ವೇಳೆಗೆ ಒದಗಿಸಬೇಕು. ನಾಲ್ಕನೆಯ ತರಗತಿಯಿಂದ ಕನ್ನಡ ಮತ್ತು ಇಂಗ್ಲೀಶುಗಳನ್ನು ಪರಿಚಯಿಸುವ ಕೆಲಸ ಮಾಡಬಹುದು. ಇದು ಮುಂದೆ ಅಯ್ದನೆಯ ತರಗತಿಯಲ್ಲಿ ಹೆಚ್ಚಾಗಿ ಆರನೆಯ ತರಗತಿಗೆ ಇನ್ನೂ ಹೆಚ್ಚು ಮಾಡುವ ಮತ್ತು ಕನ್ನಡ ಇಲ್ಲವೆ ಇಂಗ್ಲೀಶ್ ಮಾದ್ಯಮಕ್ಕೆ ಮಕ್ಕಳನ್ನು ತರುವ ಪ್ರಯತ್ನ ಮಾಡಬೇಕು. ಈ ಮೂಲಕ ಮಕ್ಕಳಿಗೆ ಪ್ರಾತಮಿಕ ಶಿಕ್ಶಣ ಅವರವರ ಮಾತಿನಲ್ಲಿ ಸಿಗುತ್ತದೆ. ಶಾಲೆಗೆ, ಶಿಕ್ಶಣಕ್ಕೆ ಅವರು ಹೊಂದಿಕೊಳ್ಳುತ್ತಾರೆ. ಆನಂತರ ಆ ಮಕ್ಕಳನ್ನು ಪೆರಮಾತಿನ ಮಾದ್ಯಮಕ್ಕೆ ತರುವುದು ಸುಲಬ. ಮಾನಸಿಕ ಸಾಮರ್ತ್ಯವನ್ನು ಬೆಳೆಸಿಕೊಂಡ ಮಕ್ಕಳು ಶಿಕ್ಶಣದಲ್ಲಿ ಹೆಚ್ಚು ಯಶ ಗಳಿಸುವುದು ಸಾದ್ಯ.

ಇನ್ನು ತುಂಬಾ ಕಮ್ಮಿ ಸಂಕೆಯ ಮಕ್ಕಳು ದೊರೆಯುವ ಮಾತುಗಳಿಗೆ ಆ ಮಾತುಗಳಲ್ಲಿ ಶಿಕ್ಶಣ ಮಾದ್ಯಮ ಒದಗಿಸುವುದು ಕಶ್ಟ. ಆದರೆ ಅಸಾದ್ಯ ಆಗಬೇಕಿಲ್ಲ. ಇಂದಿನ ತಾಂತ್ರಿಕ ಬೆಳವಣಿಗೆಗಳನ್ನು ಬಳಸಿಕೊಂಡು ಅದನ್ನೂ ಸಾದ್ಯ ಮಾಡಬಹುದು. ಆದರೆ, ಸದ್ಯಕ್ಕೆ ಆಯಾ ಬಾಶೆಗಳನ್ನು ಅದ್ಯಯನ ಮಾಡಿ, ಅವುಗಳನ್ನು ಬಾಶೆಯಾಗಿ ಕಲಿಸುವ ಪ್ರಯತ್ನವನ್ನಾದರೂ ಮಾಡಬಹುದು.ಹೀಗೆ ಒಂದು ಬಹುಬಾಶಿಕ ಪರಿಸರದಲ್ಲಿ ಮನೆಮಾತಿನ ಶಿಕ್ಶಣ ಒದಗಿಸುವುದಕ್ಕೆ ಪ್ರಯತ್ನಗಳನ್ನು ಮಾಡಬಹುದು.

ಈ ಪ್ರಕ್ರಿಯೆಯಲ್ಲಿ ಎಲ್ಲ ಮಾತುಗಳ ವ್ಯಾಕರಣ, ನಿಗಂಟು, ಪಟ್ಯ ತಯಾರಿ, ಶಿಕ್ಶಕರ ತಯಾರಿ ಹೀಗೆ ಇನ್ನೂ ಹಲವು ಪ್ರದಾನ ಕೆಲಸಗಳನ್ನು ತುರ್ತಾಗಿ ಮಾಡಬೇಕಿದೆ. ಆನಂತರ ಮಾತ್ರ ಆ ಆ ಮಾತಿನ ಮಾದ್ಯಮದ ಕನಸನ್ನು ಸಾಕಾರಗೊಳಿಸಲು ಸಾದ್ಯ. ಈ ಪ್ರಯತ್ನಗಳನ್ನು ಇಂದೆ ಮೊದಲು ಮಾಡಬಹುದು.

ವಿಶ್ವಸಂಸ್ತೆ ಇತ್ತೀಚಿನ ವರುಶಗಳಲ್ಲಿ ಇರ್ಮಾತಿನ (ಎರಡು ಮಾತಿನ) ಶಿಕ್ಶಣಕ್ಕೆ ಹೆಚ್ಚು ಒತ್ತುಕೊಡುತ್ತಿದೆ. ಈ ಮೇಲೆ ಪ್ರಸ್ತಾಪಿಸಿರುವ ವಿಚಾರಗಳು ವಿಶ್ವಸಂಸ್ತೆಯ ಇರ್ಮಾತಿನ ಶಿಕ್ಶಣ ಪರಿಕಲ್ಪನೆಯೊಟ್ಟಿಗೆ ಬಂದವಾಗಿವೆ. ಇದರಿಂದ ಮಕ್ಕಳ ಮನೆಮಾತಿನ ಮೂಲಕ ಅವರನ್ನು ಶಿಕ್ಶಣಕ್ಕೆ ಅಂಟಿಸಿಕೊಳ್ಳುವ ಮತ್ತು ಆ ಮೂಲಕ ಸಮಾಜದ ಮತ್ತು ದೇಶದ ಏಳಿಗೆಗೆ ದುಡಿಯುವ ಪ್ರತಿಬೆಗಳನ್ನು ಪೋಶಿಸುವ ಕೆಲಸ ಸಾದ್ಯವಾಗಬಹುದು.

ಈ ರೀತಿ ಮಕ್ಕಳಿಗೆ ಅವರವರ ಮಾತುಗಳಲ್ಲಿ ಪ್ರಾತಮಿಕ ಶಿಕ್ಶಣವನ್ನು ಒದಗಿಸಿ ಆನಂತರ ಅವರನ್ನು ನಾಡಿನ ಪ್ರದಾನ ಬಾಶೆಯ ಮಾದ್ಯಮಕ್ಕೆ ತರುವುದು ಬಹು ದೊಡ್ಡ ಪ್ರಯತ್ನ. ಇಂತಾ ಪ್ರಯತ್ನಗಳು ವಿಶ್ವದ ಹಲವೆಡೆ ಸಕಾರಾತ್ಮಕ ಪಲಿತಾಂಶವನ್ನು ಕೊಟ್ಟಿವೆ. ಮನೆಮಾತಿನ ಪ್ರಾತಮಿಕ ಶಿಕ್ಶಣ ನಾಡಿನ ಪ್ರದಾನ ಬಾಶೆಯ ಕಲಿಕೆಗೆ ಹೆಚ್ಚು ಪೂರಕವಾಗುತ್ತದೆ. ಎರಡನೆ ಮಾತಿನ ಕಲಿಕೆಯ ಹಲವಾರು ಅದ್ಯಯನಗಳು ಇದನ್ನು ಕಂಡುಕೊಂಡಿವೆ. ಹಾಗಾದರೆ ಕರ್‍ನಾಟಕದ ಸಂದರ್‍ಬದಲ್ಲಿ ಕನ್ನಡ ಮನೆಮಾತಲ್ಲದ ೩೫% ಮಂದಿಗೆಕನ್ನಡ ಕಲಿಸುವುದಕ್ಕೆ ಇರುವ ಸರಳವಾದ ದಾರಿ ಎಂದರೆ ಅವರವರ ಮನೆತಮಾತಿನಲ್ಲಿ ಪ್ರಾತಮಿಕ ಶಿಕ್ಶಣ ಒದಗಿಸುವುದು. ಅದರಂತೆ ಒಟ್ಟು ಕರ್‍ನಾಟಕದ ಮಕ್ಕಳಿಗೆ ಅವಶ್ಯವೆಂದು ಬ್ರಮಿಸಿರುವ ಇಂಗ್ಲೀಶನ್ನು ಸರಿಯಾಗಿ ಕಲಿಸುವುದಕ್ಕೆ ಒಳ್ಳೆಯ ದಾರಿ ಎಂದರೆ ಅವರವರ ಮನೆ ಮಾತಿನಲ್ಲಿ ಶಿಕ್ಶಣವನ್ನು ಒದಗಿಸುವುದು. ಮನೆಮಾತಿನ ಶಿಕ್ಶಣ ಇಂಗ್ಲೀಶಿನಿಂದ ಬಾರತವನ್ನು ದೂರಕ್ಕೆ ತರುವುದೆಂಬ ಬ್ರಮೆ ಬೇಕಿಲ್ಲ.

ತಮ್ಮ ತಾಯ್ಮಾತಿನ ಶಿಕ್ಶಣಕ್ಕೆ ಇಡಿಯಾಗಿ ಒತ್ತು ಕೊಟ್ಟುಕೊಂಡು ಬಂದಿರುವ ಚೀನಾ, ಜಪಾನ್ ಮತ್ತು ಕೋರಿಯಾ ಇಂತಾ ದೇಶಗಳು ಸಮಾಜದ ಎಲ್ಲ ರಂಗಗಳಲ್ಲಿ ಸಾದಿಸಿರುವ ಸಾದನೆಯನ್ನು ಗಮನಿಸಿ. ಆದುನಿಕತೆ, ಯಾಂತ್ರಿಕತೆ ಹೀಗೆ ಎಲ್ಲದರಲ್ಲಿಯೂ ಈ ದೇಶಗಳು ಮುಂದಿವೆ. ಏಸಿಯಾ ಮತ್ತು ಆಪ್ರಿಕಾದ ಬಹುತೇಕ ದೇಶಗಳಲ್ಲಿ ವಸಾಹತು ಬಾಶೆಯ ವ್ಯಾಮೋಹ ವ್ಯಾಪಕವಾಗಿ ಬೆಳೆದು ಬಂದಿದೆ. ಇಂದಿಗೂ ಇಂಗ್ಲೀಶು ಮತ್ತು ಇತರ ವಸಾಹತು ಬಾಶೆಗಳು ಶಿಕ್ಶಣದಲ್ಲಿ ಗಟ್ಟಿಯಾಗಿ ಉಳಿದಿವೆ. ಇದರಿಂದಾಗಿ ಈ ದೇಶಗಳ ಬೆಳವಣಿಗೆ ಸೂಕ್ತವಾಗಿ ಆಗುತ್ತಿಲ್ಲ. ಇದನ್ನು ಹಲವಾರು ಅದ್ಯಯನಗಳು ತೋರಿಸಿಕೊಟ್ಟಿವೆ. ಅದಲ್ಲದೆ, ನ್ಯೂಗಿನಿಯಾದಂತಾ ಕೆಲವು ದೇಶಗಳು ವಸಾಹತು ಬಾಶಾ ಮಾದ್ಯಮ ಶಿಕ್ಶಣವನ್ನು ತೆಗೆದು ಮನೆಮಾತಿನ ಶಿಕ್ಶಣ ಮಾದ್ಯಮವನ್ನು ಜಾರಿಗೆ ತಂದು ಶಿಕ್ಶಣದಲ್ಲಿ ಹೆಚ್ಚು ಯಶಸ್ಸನ್ನೂ ಕಂಡುಕೊಂಡಿವೆ.

ತಾಯ್ಮಾತಿನ ಶಿಕ್ಶಣ ಕೊಡೋಣ, ಬನ್ನಿ.

■

ಧಾರವಾಡ ತಾಲೂಕಿನ ಶಾಸನೋಕ್ತ ಶೈವ ಮುನಿಗಳು

ಮಂಗಲಾ ಎಂ. ಗೌಡ

ಪೀಠಿಕೆ

ಕರ್ನಾಟಕ ರಾಜ್ಯದ ವಾಯುವ್ಯ ಭಾಗದಲ್ಲಿರುವ ಧಾರವಾಡ ಜಿಲ್ಲೆಯು ಐದು ತಾಲೂಕುಗಳನ್ನು ಒಳಗೊಂಡಿದೆ. ಅವುಗಳಲ್ಲಿ ಧಾರವಾಡ ತಾಲೂಕು ಕೂಡಾ ಒಂದಾಗಿದೆ. ಇಲ್ಲಿ ಆಳ್ವಿಕೆ ನಡೆಸಿದ ರಾಜಮನೆತನಗಳಾದ ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು ಕಲ್ಯಾಣ ಚಾಲುಕ್ಯರು, ಗೋವೆಯ ಕದಂಬರ ಕಲಚೂರಿ, ದೇವಗಿರಿಯ ಯಾದವ, ಹೊಯ್ಸಳರು, ವಿಜಯನಗರ ಅರಸರು ಕಾಲದ ಶಾಸನಗಳಿವೆ. ಹಲಸಿಗೆ–೧೨೦೦೦, ಕುಂದೂರು–೫೦೦, ಬೆಳ್ವೊಲ–೩೦೦, ಕೊಂಕಣ–೯೦೦. ಮುಂತಾದ ಪ್ರಾಚೀನ ಆಡಳಿತ ವಿಭಾಗಗಳ ಭಾಗವಾಗಿದೆ. ಇಲ್ಲಿ ರಾಜರಿಗೆ ಅಧಿನರಾಗಿ ಮಾಂಡಳಿಕರು, ಸಾಮಂತರು, ಅಧಿಕಾರಿಗಳು, ಗಾವುಂಡರು ವೃತ್ತಿ ಸಂಘಗಳು, ಸ್ತ್ರೀಯರು ಶೈವದೇವಾಲಯಗಳಿಗೆ ದಾನ–ದತ್ತಿ ನೀಡುವದರ ಮೂಲಕ ಶೈವಧರ್ಮಕ್ಕೆ ಪ್ರೋತ್ಸಾಹ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ರಾಜಕೀಯ ಆಳ್ವಕೆಗೊಳಪಟ್ಟ ಕಾಲಘಟ್ಟದಲ್ಲಿ ಬೆಳೆದು ಬಂದ ಶೈವ ಮುನಿಗಳನ್ನು ಕುರಿತು ಶಾಸನಗಳನ್ನಾದರಿಸಿ ವಿಶ್ಲೇಷಣೆಗೋಳಪಡಿಸಲಾಗಿದೆ.

ಶೈವ ಧರ್ಮದ ಉಗಮ ವಿಕಾಸ

ಪ್ರತಿಯೊಂದು ಧರ್ಮಕ್ಕೂ ತನ್ನದೆ ಆದ ಇತಿಹಾಸವಿದೆ. ಶೈವ ಧರ್ಮವು ಭಾರತದಲ್ಲಿಯೇ ಅತ್ಯಂತ ಪ್ರಾಚೀನ ಧರ್ಮ. ಈ ಧರ್ಮದ ಇತಿಹಾಸಕ್ಕೆ ಸಂಬಂಧಿಸಿದಂತೆ ಶಿವಪೂಜೆಯ ಮೂಲ ಮತ್ತು ಪ್ರಾಚೀನತೆಯನ್ನು ಅವಲೋಕಿಸುವಾಗ ಸಿಂಧೂ ನಾಗರಿಕತೆಯ ಹರಪ್ಪ, ಮಹೆಂಜೋದಾರೊ, ಕಾಲಿಬಂಗಾನ ಮೊದಲಾದ ನೆಲೆಗಳಲ್ಲಿ ಶಿವಲಿಂಗವನ್ನು ಹೋಲುವಂತಹ ಕುರುಹುಗಳು ದೊರೆತಿದ್ದು, ಅವುಗಳಲ್ಲಿ ನಟರಾಜನಮೂರ್ತಿ, ಯೋಗಮುದ್ರೆಯಲ್ಲಿರುವ ಪಶುಪತಿ, ಜೇಡಿಮಣ್ಣಿನ ಮೂರ್ತಿಗಳು, ಕೊಂಬುಗಳಿರುವ ದೇವತೆಯ ಮುದ್ರಿಕೆಗಳು ದೊರೆತಿದ್ದು, ಇಲ್ಲಿರುವ ಸ್ಥಂಡಿಲ, ಯೂಪಗಳು ರುದ್ರನ ಸಂಕೇತವಾಗಿ ರೂಪುಗೋಂಡು ತದನಂತರ ಯೂಪವೇ

ರುದ್ರನ ಪ್ರತೀಕವಾಗಿ ಲಿಂಗವೇನಿಸಿತು. ವೇದಗಳಲ್ಲಿ ರುದ್ರ ಎಂಬ ಹೆಸರಿನಿಂದ ಗೋಚರಿಸುವ ಉಗ್ರದೇವತೆ ಕ್ರಮೇಣ ಪಶುಪತಿ ಎಂಬ ಹೆಸರನ್ನು ಪಡೆಯುತ್ತದೆ. ಇವುಗಳ ಕುರಿತು ವೈದಿಕ ಸಾಹಿತ್ಯ, ಮಹಾಕಾವ್ಯಗಳು, ಹಾಗೂ ಪುರಾಣಗಳಲ್ಲಿ ಶೈವಧರ್ಮದ ಪ್ರಾಚೀನತೆ ಇರುವದು ತಿಳಿದುಬರುತ್ತದೆ. ನಂತರದ ಕಾಲಘಟ್ಟದಲ್ಲಿ ಆಳ್ವಿಕೆಮಾಡಿದ ಶಾತವಾಹನರು, ಬನವಾಸಿ ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು ವಿಜಯನಗರದ ಅರಸರು ಜೊತೆಗೆ ಮಹಾಮಂಡಳೇಶ್ವರರ ರಾಜಾಶ್ರಯ ಮತ್ತು ಪ್ರೋತ್ಸಾಹದಿಂದಾಗಿ ಈ ಧರ್ಮಕ್ಕೆ ಸಂಬಂಧಿಸಿದ ಶಾಸನಗಳು, ದೇವಾಲಯ, ಮೂರ್ತಿಶಿಲ್ಪಗಳು ದೋರೆತಿರುವದರಂದ ಶೈವಧರ್ಮಕ್ಕೆ ಪೋಷಣೆಯನ್ನು ನೀಡಿರುವದು ಶಾಸನಗಳಿಂದ ತಿಳಿದು ಬರುತ್ತದೆ.

ಧಾರವಾಡ ಜಿಲ್ಲೆಯಲ್ಲಿ ಕಂಡುಬರುವ ಮೊಟ್ಟ ಮೊದಲು ಕಂಡುಬರುವ ಶಾಸನೋಕ್ತ ಶೈವ ಮುನಿಗಳೆಂದರೆ ಎರೆಯಮ್ಮ ದೀಕ್ಷಿತನಾಗಿದ್ದಾನೆ.[೧] ಈ ಮುನಿಯ ಉಲ್ಲೆಖ ಕ್ರಿಶ. ೯೮೦ರ ನವಲಗುಂದ ತಾಲೂಕಿನ ಕುರಹಟ್ಟಿ ಗ್ರಾಮದ ಶಾಸನದಲ್ಲಿ ಉಲ್ಲೇಖವಿದೆ.[೨] ಧಾರವಾಡ ಸು. ೧೧ನೆಯ ಶತಮಾನದ ಶಾಸನದಲ್ಲಿ ಚಂದ್ರೇಶ್ವರ ಪಂಡಿತನ ಉಲ್ಲೇಖ ಇರುವದರಿಂದ ಇವರು ತಾಲೂಕಿನಲ್ಲಿ ಕಂಡುಬರುವ ಮೊದಲ ಶೈವ ಮುನಿಗಳಾಗಿದ್ದಾರೆ.[೩] ಈ ಹಿನ್ನಲೆಯಲ್ಲಿ ಶಾಸನೋಕ್ತ ಶೈವ ಮುನಿಗಳ ಕುರಿತು ಅಧ್ಯಯನ ಮಾಡುವದು ಈ ಲೇಖನದ ಉದ್ದೇಶವಾಗಿದೆ.

ಧಾರವಾಡ ತಾಲೂಕಿನ ಶಾಸನಗಳ ಯಾದಿ

ಕ್ರ.ಸಂ.	ಶಾಸನವಿರುವ ಗ್ರಾಮಗಳ ಸಂಖ್ಯೆ	ಶಾಸನಗಳು	ಶೈವ ಶಾಸನಗಳು	ಮುನಿಗಳನ್ನು ಉಲ್ಲೇಖಿಸುವ ಶಾಸನಗಳು
೧	೨೮	೬೬	೪೬	೧೪

ಈ ಮೇಲೆ ಉಲ್ಲೇಖಿಸಿದ ಶಾಸನಗಳ ಪಟ್ಟಿಗಳನ್ನು ಅವಲೋಕಿಸಿದಾಗ ತಿಳಿದುಬರುವ ಪ್ರಮುಖ ಅಂಶವೆಂದರೆ ತಾಲೂಕಿನಲ್ಲಿ ದೊರೆತ ಶಾಸನಗಳ ಸಂಖ್ಯೆ ೬೬, ಅವುಗಳಲ್ಲಿ ೪೬ ಶೈವ ಶಾಸನಗಳಿದ್ದು, ೧೪ ಮುನಿಗಳನ್ನು ಉಲ್ಲೇಖಿಸಿವ ಶೈವಶಾಸನಗಳಿವೆ. ಇದರಿಂದಾಗಿ ಶೈವಧರ್ಮವು ಈ ಭಾಗದಲ್ಲಿ ಪ್ರಚಲಿತದಲ್ಲಿತ್ತು ಎನ್ನುವದು ತಿಳಿದುಬರುತ್ತದೆ.

ಧಾರವಾಡ ತಾಲೂಕಿನ ಶಾಸನೋಕ್ತ ಶೈವ ಮುನಿಗಳ ಯಾದಿ

ಕ್ರಸಂ	ಮುನಿಗಳ ಹೆಸರು	ಊರು	ಕಾಲ	ಉಲ್ಲೇಖ
೧	ಚಂದ್ರೇಶ್ವರ ಸ್ಥಾನಾಚಾರ್ಯ	ಧಾರವಾಡ	ಕ್ರಿಶ ಸು. ೧೧ನೆಯ ಶತಮಾನ	ಧಾರವಾಡ ತಾಲೂಕಿನ ಶಾಸನಗಳು

೨	ಶಿವರಾಶಿ ಪಂಡಿತರು	ಧಾರವಾಡ	ಕ್ರಿ.ಶ. ೧೧೧೧	ಕೆ.ಆಯ್ ಸಂ. ೬. ನಂ. ೧೬
೩	ತೆಜೋರಾಸಿ ಪಂಡಿತರು	ನಿಗದಿ	ಕ್ರಿ.ಶ. ೧೧೧೧	ಎಸ್.ಆಯ್. ಆಯ್.ಸಂ.೧೧ ನಂ. ೧೬೦
೪	ಉತ್ತವರಾಶಿ ಪಂಡಿತರು ಮತ್ತು ಪದ್ಮರಾಶಿ ಪಂಡಿತರು	ಅಮ್ಮಿನಭಾವಿ	ಕ್ರಿ.ಶ. ೧೧೧೨	ಕೆ.ಆಯ್.ಸಂ. ೬. ನಂ. ೧೬
೫	ಸೋಮೇಶ್ವರ ಪಂಡಿತ	ಧಾರವಾಡ	ಕ್ರಿ.ಶ. ೧೧೧೭	ಕೆ.ಆಯ್.ಸಂ. ೫. ನಂ. ೧೬
೬	ನಾಗರಾಶಿ ಪಂಡಿತ	ಸಿದ್ದಾಪುರ	ಕ್ರಿ.ಶ. ೧೧೨೦	ಎಸ್.ಆಯ್. ಆಯ್.ಸಂ.೧೧ ನಂ. ೧೯೪
೭	ವಾಮಶಕ್ತಿ ಪಂಡಿತ	ಮಮ್ಮಿಗಟ್ಟಿ	ಕ್ರಿ.ಶ. ೧೧೨೪	ಕೆ.ಆಯ್. ಸಂ.ಇ.ಆಯ್ ಸಂ. ೧೭
೮	ಸ್ಥಾನಾಚಾರ್ಯ ದೇವರಾಶಿ ಪಂಡಿತರ ಪುತ್ರ ನಾಗರಾಶಿ ಪಂಡಿತ	ಸಿದ್ದಾಪುರ	ಕ್ರಿ.ಶ. ೧೧೩೫	ಎಸ್.ಆಯ್. ಆಯ್.ಸಂ. ೧೧–ನಂ. ೧೯೪
೯	ದೇವರಾಸಿ ಆಚಾರ್ಯರು	ವೆಂಕಟಾಪುರ	ಕ್ರಿ.ಶ. ೧೧೩೬	ಎಸ್.ಆಯ್. ಆಯ್.ಸಂ. ೧೫–ನಂ. ೨೨೭
೧೦	ಅಮ್ರತರಾಸಿ ಪಂಡಿತ	ಅಮ್ಮಿನಭಾವಿ	ಕ್ರಿ.ಶ. ೧೧೬೩	ಎಸ್.ಆಯ್. ಆಯ್.ಸಂ. ೧೫–ನಂ. ೨೨೮

೧೧	ಶಿವಶಕ್ತಿ ಪಂಡಿತರು	ಬೋಕ್ಯಾಪುರ	ಕ್ರಿ.ಶ. ೧೧೬೩	ಎಸ್.ಆಯ್. ಆಯ್.ಸಂ. ೧೫-ನಂ. ೨೩೦
೧೨	ಕಲ್ಯಾಣಶಕ್ತಿ ಪಂಡಿತ	ಧಾರವಾಡ	ಕ್ರಿ.ಶ. ೧೧೮೧ -೧೧೮೮	ಕೆ.ಆಯ್. ಸಂ. ೫. ನಂ. ೩೯
೧೩	ಚಂದ್ರಭೂಷಣ ಪಂಡಿತ	ಧಾರವಾಡ	ಕ್ರಿ.ಶ. ೧೨೧೧-೧೨೧೬	ಎಸ್.ಆಯ್. ಆಯ್.ಸಂ. ೧೫-ನಂ. ೨೩೩
೧೪	ಸಕಳೇಶ್ವರ ಪಂಡಿತ	ಮನಗುಂಡಿ	ಕ್ರಿ.ಶ. ೧೨೦೭-೧೨೧೮	ಕೆ.ಆಯ್. ಸಂ. ೫. ನಂ. ೩೧

ಶೈವಯತಿ ಪರಂಪರೆ

೧. ಚಂದ್ರಾಸಿಬೆ ಸ್ಥಾನಾಚಾರ್ಯ ಅಥವಾ ಚಂದ್ರೇಶ್ವರ ಸ್ಥಾನಾಚಾರ್ಯ

ಧಾರವಾಡ ಕ್ರಿ.ಶ. ೧೧ನೆಯ ಶತಮಾನದ ಶಾಸನದಲ್ಲಿ ಉಲ್ಲೇಖಿತವಾದಂತೆ ಚಂದ್ರಾಸಿಬೆ ಪಂಡಿತರು ಚಂದೇಶ್ವರದೇವಾಲಯದ ಸ್ಥಾನಾಚಾರ್ಯರಾಗಿದ್ದರು. ಇವರಿಗೆ ಮತ್ತಿಯರ ದೇಚಗಾವುಂಡನು, ಮತ್ತಿಯರ ನಾಗದೇವ ಮತ್ತು ಮೂಕಗಾವುಂಡರು ಸಕನೃಪಕಾಳಾತೀತ ಸಂವತ್ಸರದ ಪೌಷ್ಯ ಬಹುಳೇಕಾದಸಿ ಸೋಮವಾರದಂದು ಕೆರೆಯ ಕೆಳಗಣ ಭೂಮಿಯನ್ನು ದಾನ ನಿಡಿದ ಉಲ್ಲೆಖವಿದೆ.[೪]

೨. ಪದ್ಮರಾಶಿ ಪಂಡಿತರು

ಅಮ್ಮಿನಭಾವಿಯ ಕ್ರಿ.ಶ. ೧೧೧೨ರ ಶಾಸನದಲ್ಲಿ ಪದ್ಮರಾಶಿ ಪಂಡಿತರ ಉಲ್ಲೇಖವಿದೆ. ಇವರು ಆದಿತ್ಯ ದೇವಾಲಯದ ಸ್ಥಾನಾಚಾರ್ಯರಾಗಿದ್ದು, ಅಷ್ಟಾಂಗ ಯೋಗಸೂತ್ರ ಬಲ್ಲವರಾಗಿದ್ದರು. ಶಾಸನದಲ್ಲಿ-

"ಸ್ವಸ್ತಿ ಯಮನಿಯಮ ಸ್ವಾಧ್ಯಾಯಧ್ಯಾನ ಧಾರಣ (ಮೋ)
ನಾನುಷ್ಠಾಣ ಜಪಸಮಾಧಿ ಶೀಳ ಸಂಪನ್ನರಪ್ಪ
ಶ್ರೀ ಮದಾದಿತ್ಯ ದೇವರ ಸ್ಥಾನಾಚಾರ್ಯ ಪದ್ಮಪಂಡಿತರು ಸಕಾರುಣ್ಯದಿಂ॥"

ಎಂದು ಶಾಸನ ಅವರನ್ನು ಕುರಿತು ಹೇಳುತ್ತದೆ.[೫]

೩. ಉತ್ತವರಾಸಿ ಪಂಡಿತರು

ಅಮ್ಮಿನಭಾವಿಯ ಕ್ರಿ.ಶ. ೧೧೧೨ರ ಶಾಸನದಲ್ಲಿ ಉತ್ತವರಾಸಿ ಪಂಡಿತರ ಉಲ್ಲೇಖವಿದೆ. ಲಾಕುಳಾಗಮ ಪಂಡಿತರೆಂದೆ ಹೆಸರಾದ ಇವರು ಉಣಕಲ್ ವಾಸಿಯಾಗಿದ್ದರು.

ಇವರು ವಿದ್ವತ್ತು ಮತ್ತು ಆಧ್ಯಾತ್ಮಕ್ರಿಯಾ ಸಾಧನೆಯಲ್ಲಿ ತೊಡಗಿಕೊಂಡವರಾಗಿದ್ದರೆಂದು, ಶರಣಾಗತ ಜನರ ರಕ್ಷಣೆ, ಶೌಚಗುಣ, ಸನ್ನಡತೆ, ನಯವಿನಯಗಳಿಂದ ಕೂಡಿದ ವ್ಯಕ್ತಿತ್ವ, ಸದಾ ಈಶ್ವರ ಸೇವೆಯಲ್ಲಿ ತೊಡಗಿಕೊಂಡಿದ್ದವರು, ದೇವ, ದ್ವಿಜ, ಗುರು ವಂದನಾ ನಿರತರು ಹಾಗೂ ರಾಜರಿಂದ ಗೌರವಿಸಲ್ಪಟ್ಟವರಾಗಿದ್ದರು[೬] ಅವರ ಗುಣ ವಿಶೇಷಗಳ ಕುರಿತಾಗಿ ಶಾಸನ ವರ್ಣಿಸಿದೆ.

೪ ನಾಗರಾಸಿ ಪಂಡಿತ

ಧಾರವಾಡ ತಾಲೂಕಿನ ಸಿದ್ಧಾಪುರ ಗ್ರಾಮದ ಕ್ರಿ.ಶ. ೧೧೩೫ರ ಶಾಸನದಲ್ಲಿ ದೇವರಾಸಿ ಪಂಡಿತ ಮತ್ತು ವರ ಮಗ (ಶಿಷ್ಯ) ನಾಗರಾಸಿ ಪಂಡಿತರ ಉಲ್ಲೇಖವಿದೆ. ದೇವರಾಸಿ ಪಂಡಿತರ ಮಗ ನಾಗರಾಸಿ ಪಂಡಿತರೆಂದು ಶಾಸನ ಹೇಳುತ್ತಿದ್ದರು ನಾಗರಾಸಿ ಪಂಡಿತ ದೇವರಾಸಿ ಪಂಡಿತರ ಶಿಷ್ಯನಾಗಿದ್ದರೆಂದು ಹೇಳಬಹುದು. ಗುರುಪರಂಪರೆಯಲ್ಲಿ ಶಿಷ್ಯನನ್ನು ಮಗ ಎಂದು ಹೇಳುವ ಸಂಪ್ರದಾಯವಿದೆ. ಹೊಸವೊಳಲ ಮೂಲಸ್ಥಾನ ದೇವಾಲಯಕ್ಕೆ ಹಳ್ಳಗಾವುಂಡನೆಂಬವನು ತನ್ನ ವೃತ್ತಿಯ ಮೂಲಿಗವನ್ನು ನಾಗರಾಶಿ ಪಂಡಿತರ ಕಾಲಂ ಕರ್ಚಿ ದಾನವಾಗಿ ನೀಡಿದನು ಎನ್ನುವುದರಿಂದ ಈ ನಾಗರಾಶಿ ಪಂಡಿತನು ಆ ದೇವಾಲಯದ ಸ್ಥಾನಾಚಾರ್ಯನಾಗಿದ್ದನೆಂದು ತಿಳಿಯಬಹುದು.

೫ ದೇವರಾಶಿ ಪಂಡಿತರು

ದೇವರಾಶಿ ಪಂಡಿತರ ಕುರಿತು ಧಾರವಾಡ ಜಿಲ್ಲೆಯ ವೆಂಕಟಾಪುರ ಶಾಸನವು ತಿಳಿಸುತ್ತದೆ. ಇವರನ್ನು ಕಾಳಾತ್ರಯದ ಆಚಾರ್ಯರಾಗಿದ್ದು, ಕೆಸರುಕಲ್ಲಿನಿಂದ ಲಿಂಗಪ್ರತಿಷ್ಠೆ ಮಾಡಿದ ವಿಷಯವಿದೆ. ಶಾಸನದಲ್ಲಿ ಉಲ್ಲೇಖಿತವಾದಂತೆ "ಬೀರಬೋವ ಮಾಡಿಸಿದ ದೇವರುಮ್ಮಂ ದೇಗುಲಮುಮಂ ಕಾಳತ್ರಯ ದೇವರಾಸಿಯಾಚಾರ್ಯ್ಯ ಕೆಸರು ಕಲ್ಲಿಕ್ಕಿ ನಟ್ಟಲಿಂಗಪ್ರತಿಷ್ಠೆ ಇದು ಸಾಸ್ವತ ಭುಕ್ತಿ[೭] ಎಂದು ಉಲ್ಲೇಖಿಸಿದೆ.

೬ ತೇಜೋರಾಸಿ ಪಂಡಿತ

ಧಾರವಾಡ ತಾಲೂಕಿನ ನಿಗದಿ ಗ್ರಾಮದ ಕ್ರಿ.ಶ. ೧೧೧೧ರ ಶಾಸನದಲ್ಲಿ ಒಬ್ಬ ತೇಜೋರಶಿ ಪಂಡಿತರ ಉಲ್ಲೇಖವಿದ್ದರೆ ಕ್ರಿ.ಶ. ೧೧೨೯ರ ಕಲಘಟಗಿ ತಾಲೂಕಿನ ಕಾಮಧೇನು ಗ್ರಾಮದ ಶಾಸನದಲ್ಲಿ ಇನ್ನೊಬ್ಬ ತೇಜೋರಾಶಿ ಪಂಡಿತರ ಉಲ್ಲೇಖ ಬರುತ್ತದೆ. ನಿಗದಿ ಶಾಸನದ ತೇಜೋರಾಶಿ ಪಂಡಿತರು ಕ್ರಿಯಾಶಕ್ತಿ ಪಂಡಿತರ ಶಿಷ್ಯರಾಗಿದ್ದರೆ,

ಕಾಮಧೇನು ಶಾಸನದ ತೇಜೋರಶಿ ಪಂಡಿತರು ದೇವರಾಸಿ ಪಂಡಿತರ ಶಿಷ್ಯರು (ಪುತ್ರ). ಹೀಗಾಗಿ ಇವರಿಬ್ಬರು ಒಂದೇ ಹೆಸರಿನ ಬೇರೆ ಬೇರೆ ವ್ಯಕ್ತಿಗಳಾಗಿದ್ದಿರಬಹುದು. ಇವರಿಬ್ಬರ ಕಾಲಗಳಲ್ಲೂ ೨೮ ವರ್ಷಗಳ ಅಂತರವಿರುವುದೂ ಈ ಅಭಿಪ್ರಾಯಕ್ಕೆ ಕಾರಣವಾಗುತ್ತದೆ.

ನಿಗದಿಯ ಶಾಸನದಲ್ಲಿ ಕದಂಬ ಮನೆತನದ ಮಹಾಮಂಡಳೇಶ್ವರ ಗೂವಲದೇವನು ಕೊಂಕಣ ಮಂಡಲವನ್ನು ಗೋವೆ ರಾಜಧಾನಿಯಲ್ಲಿದ್ದು ಆಳುತ್ತಿರುವಾಗ ನಿಗುಂದೆ(ನಿಗದಿ)ಯ ಚಾವುಂಡ ಗಾವುಂಡನು ತೇಜೋರಾಶಿ ಪಂಡಿತರಿಗೆ ಭೂಮಿಯನ್ನು ಹಾಗೂ ಮಠವನ್ನು ದಾನವಾಗಿ ನೀಡಿದ್ದು ದಾಖಲಾಗಿದೆ. ತೇಜೋರಾಶಿ ಪಂಡಿತರನ್ನು ಮಠದ ಆಚಾರ್ಯರನ್ನಾಗಿಸಿ, ಅದರ ನಿರ್ವಹಣೆಗೆ ಭೂದಾನ ಮಾಡಿರಬಹುದು. ಶಾಸನದ ಆರಂಭದಲ್ಲೇ ಶಿವಸ್ತುತಿಯ ನಂತರದಲ್ಲೇ "ಕ್ರಿಯಾಸಕ್ತಿ ಪಂಡಿತರ ಶಿಷ್ಯ ತೇಜೋರಾಸಿ ಪಂಡಿತರ್ಗ್ಗೆ ಆ ಗದ್ದೆಯ ಹೊರೆಯ ಹಕ್ಕಲ" ಎಂದು ಹೇಳಿರುವುದು ಗಮನಾರ್ಹವಾಗಿದೆ. ಅನಂತರ ದಾನಭಾಗದಲ್ಲಿ "ನಿಗುನ್ದೆಯ ಮೂಲಸ್ಥಾನು ದೇವರು ಭಿನ್ನವಾದ ಕಾಲ ಹಿರಿಯ ಕೆಱೆಯ ನೀರೊತ್ತಿನ ಕೆಯ್ಯ ಎರಡು ಕೊಳನು ಮಠವು ತೇಜೋರಾಶಿ ಪಂಡಿತರ್ಗ್ಗೆ ಧಾರಾಪೂರ್ವಕಂ ಮಾಡಿ ಕಾಲಂ ಕರ್ಚ್ಚಿ ಕೊಟ್ಟಧರ್ಮ್ಮ ಸರ್ವ್ವ ಬಾಧೆ ಪರಿಹಾರವಾಗೆ ತಮ್ಮ ಬಿಟ್ಟಧರ್ಮ್ಮಮಂ ಸಲಿಸುವರು" ಎಂದು ಹೇಳಲಾಗಿದೆ.

೭. ಮೊದಲನೆಯ ವಾಮಶಕ್ತಿ ಪಂಡಿತ

ಮೊದಲನೆಯ ವಾಮಶಕ್ತಿಯ ಹೆಸರು ಕಲ್ಯಾಣ ಚಾಳುಕ್ಯ ಆರನೆಯ ವಿಕ್ರಮಾದಿತ್ಯ ಮತ್ತು ಗೋವೆಯ ಕದಂಬವಂಶದ ಮಹಾಮಂಡಳೇಶ್ವರ ಎರಡನೆಯ ಜಯಕೇಸಿಯರ ಆಡಳಿದ ಕಾಲದ ಧಾರವಾಡ ಜಿಲ್ಲೆಯ ಮಮ್ಮಿಗಟ್ಟಿ ಗ್ರಾಮದ ಕ್ರಿ.ಶ. ೧೧೨೪ರ ಶಾಸನದಲ್ಲಿ ಕಾಣಿಸಿಕೊಳ್ಳುತ್ತದೆ. ವಾಮಶಕ್ತಿಯು ಅಲ್ಲಿಯ ಕಲಿದೇವಸ್ವಾಮಿಯ ಸ್ಥಾನಾಚಾರ್ಯನಾಗಿದ್ದನು.

೮. ಅಮೃತರಾಶಿ ಪಂಡಿತರು

ಧಾರವಾಡ ಜಿಲ್ಲೆಯ ಅಮ್ಮಿನಭಾವಿಯ ಕ್ರಿ.ಶ. ೧೧೪೯ರ ಶಾಸನದಲ್ಲಿ ಕಾಣಿಸಿ ಕೊಳ್ಳುವ ಅಮೃತರಾಶಿ ಪಂಡಿತರು, ಅಲ್ಲಿಯ ಮಲ್ಲುಕಾರ್ಜುನ ದೇವಾಲಯದ ಸ್ಥಾನಾಚಾರ್ಯರಾಗಿದ್ದಂತೆ ಅಲ್ಲಿಯ ಎರಡು ಮಠ (ಹೆಸರು ಇಲ್ಲ)ಗಳ ಆಚಾರ್ಯರೂ ಆಗಿದ್ದರೆಂದು ತಿಳಿದು ಬರುತ್ತದೆ. "ದೇವರಂ ಆಡಂಬರೆಯಾಗಿ ಪೂಜಿಪ ಆಚಾರ್ಯ ಈಶಸ್ಥಾನಕ್ಕೊಡೆಯ, ಒಪ್ಪಂಬಡೆದ ಅಮ್ರಿತರಾಶಿ ಪಣ್ಡಿತದೇವ" ಎಂದು ಶಾಸನ ಈ ಆಚಾರ್ಯರನ್ನು ಕುರಿತು ಹೇಳುತ್ತದೆ. ಹಾಗೆಯೇ "ಒಪ್ಪಂಬಡೆದಿಪ್ಪ ಠಾವಿನಾಚಾರ್ಯ್ಯತ್ವ ವೀರ ರೂ.ಗಳ ಶಿಷ್ಯರೆಂದು ಹೇಳುವ ಶಾಸನ ದೇವಾಲಯ ಹಾಗೂ ಮಠಗಳನ್ನು ಒಪ್ಪಂಬಡೆದ ಠಾವುಗಳೆಂದು ಕರೆಯುತ್ತದಲ್ಲದೇ ಅಮೃತರಾಶಿ ಪಂಡಿತ ಗುರುಗಳನ್ನು ಹೆಸರಿಸಿದ್ದರೂ ಆ ಭಾಗ ತೃಟಿತಗೊಂಡಿರುವುದರಿಂದ ಅವರ ಪೂರ್ಣ ಹೆಸರು

ಗೊತ್ತಾಗುವುದಿಲ್ಲ. ಈ ದೇವಾಲಯ ಹಾಗೂ ಎರಡೂ ಮಠಗಳ ಚೈತ್ರಪವಿತ್ರದ ಗುಣ ಪೂಜೆಗೆ ಬೆಳವಾಡಿಗೇರಿಯ ವಲ್ಲಭರಿಂದ ಖರೀದಿಸಿದ್ದ ಭೂಮಿ ಹಾಗೂ ಎರಡು ಮನೆಗಳನ್ನು ಮಾಡ ಬೊಪ್ಪಣನೆಂಬವನು ನೀಡಿದ್ದಾನೆ.

ಅಮೃತರಾಶಿ ಪಂಡಿತರನೂ ಕುರಿತು ಧಾರವಾಡ ಜಿಲ್ಲಾ ಪ್ರದೇಶದ ನೆರೆಯ ಗದಗ ಮತ್ತು ಹಾವೇರಿ ಜಿಲ್ಲೆಯ ಗ್ರಾಮಗಳ ಶಾಸನಗಳು ಉಲ್ಲೇಖಿಸುತ್ತವೆ. ಅವುಗಳಲ್ಲಿ ಮುಳುಗುಂದದ ಕ್ರಿ.ಶ. ೧೧೨೪ರ ಶಾಸನ, ಎಲೆಶಿರೂರಿನ ಕ್ರಿ.ಶ. ೧೧೮೦ರ ಶಾಸನ ಹಾಗೂ ಕಣವಿಯ ಕ್ರಿ.ಶ. ೧೧೭೩ರ ಶಾಸನಗಳು ಪ್ರಮುಖವಾಗಿವೆ. ಇವು ಕ್ರಿ.ಶ. ೧೧೨೪ರಿಂದ ಕ್ರಿ.ಶ. ೧೧೭೩ರ ಮಧ್ಯದ ಅವಧಿಯ ಶಾಸನಗಳಾಗಿವೆ. ಈ ಶಾಸನಗಳಲ್ಲಿ ಉಕ್ತವಾಗಿರುವ ಅಮೃತರಾಶಿ ಪಂಡಿತದೇವ ಒಬ್ಬನೇ ಇಲ್ಲವೇ ಒಂದೇ ಹೆಸರಿನ ಬೇರೆ ಬೇರೆ ವ್ಯಕ್ತಿಗಳೋ ಎಂದು ಗುರುತಿಸಲು ಹೆಚ್ಚಿನ ಅಧ್ಯಯನದ ಅಗತ್ಯವಿದೆ.

೯. ರಾಜಗುರು ಕಲ್ಯಾಣಶಕ್ತಿ ಪಂಡಿತ

ಕಲ್ಯಾಣಶಕ್ತಿ ಪಂಡಿತನ ಕುರಿತಾಗಿ ಹಾವೇರಿ ಜಿಲ್ಲೆಯ ರಟ್ಟಿಹಳ್ಳಿಯ ಕ್ರಿ.ಶ. ೧೧೭೪ರ ಶಾಸನ, ಧಾರವಾಡದ ಕ್ರಿ.ಶ. ೧೧೮೮ರ ಶಾಸನ ಮತ್ತು ಇದೇ ಕಾಲಘಟ್ಟದ ೧೧೮೮ರ ಶಾಸನಗಳು ಉಲ್ಲೇಖಿಸುತ್ತದೆ. ಇವರು ಕಾಳಾಮುಖರ ಕಿಟ್ಟಗಾವಿ ಸಂತತಿಯಲ್ಲಿ ಪ್ರಮುಖರಾಗಿದ್ದಾರೆ. ಹಾಗೆಯೇ ಪರ್ವತಾವಳಿಯ ಮೂವರ ಕೋಣೆ ಸಂತತಿ ಮತ್ತು ಶಕ್ತಿಪರ್ಶೆಯ ಕಾಳಾಮುಖ ಸ್ಥಾನಾಚಾರ್ಯರಲ್ಲಿ ಒಬ್ಬನಾಗಿದ್ದಾನೆ. ಧಾರವಾಡದ ಕ್ರಿ.ಶ. ೧೧೮೮ರ ಶಾಸನದಲ್ಲಿ-

> "ಕುಲತನು ಮತಿ ವಿದ್ಯಾ ಶ್ರೀ ಬಲಸುಚರಿತಸುಭಗತಾತಿಶಯ
> ಮೀ ಮಾತನೊಳ್ನೆಲಸಿ ನಿಲೆ ದಾಸಿರಾಜಂ ನಲಿವ ಕಲ್ಯಾಣ ಶಕ್ತಿ
> ಮುನಿಪನ ದಯೆಯಂ॥ ಆ ಮುನಿಶ್ವರನ ಗುರುಕುಲ
> ಪ್ರಭಾವ ಮೆಂನ್ತೆನೆ॥ ವೃತತನು ಧಾತು ಕಿಟ್ಟ ಮಿಳಯಲ್ತ ಪದೊಷ್ಮೆಗೆ
> ಕಿಟ್ಟಗಾವೆ ಸನ್ತತಿಯದು ಪರ್ಬ ತಾವಳಿಯೆನಿಪ್ಪದು ನಿಶ್ಚಳ
> ವೃತ್ತಿಯಂ ನಿಯಾಮಿತ ನಿಯಮೋರ್ತ್ಥ ಕಾಳಾಮುಖದಿಂದಮೆ
> ಕಾಳಾಮುಖತ್ವಮೊಪ್ಪೆ ಶಕ್ತ್ಯತಿಶಯ ಶಕ್ತಿಪರ್ಷೆಯ ಮೃತೇಶ
> ಮುನೀಶನೊಳೊಪ್ಪ ತೋರುಗುಂ॥ ಎಂದು ಉಲ್ಲೇಖಿಸುತ್ತವೆ.[೮]

ಧಾರವಾಡದ ಕ್ರಿ.ಶ. ೧೧೮೮ರ ಶಾಸನದಲ್ಲಿ ಉಲ್ಲೇಖಿತವಾದಂತೆ ಶ್ರೀ ಮದ್ರಾಜಗುರು ಕಲ್ಯಾಣಶಕ್ತಿ ದೇವರು ಧಾರವಾಡದ ದಾಸೇಶ್ವರ ದೇವಾಲಯಕ್ಕೆ ಸ್ಥಾನಾಚಾರ್ಯರಾಗಿದ್ದುದು ತಿಳಿದು ಬರುತ್ತದೆ. ಶಕ ವರ್ಷ ೧೧೧೧ನೆಯ ಪ್ಲವಂಗ ಸಂವತ್ಸರದ ಫಾಲ್ಗುಣ ಶುದ್ಧ ೧೩ ಬ್ರಹಸ್ಪತಿವಾರದಂದು ದಾಸೇಸ್ವರ ದೇವರಂಗಬೋಗ, ರಂಗಭೋಗ, ಖಂಡಸ್ಪುಟಿತ, ಜೀರ್ಣೋದ್ಧಾರಕ್ಕಾಗಿ ದಾಸಿರಾಜ ದಂಡನಾಯಕರು ದಾನ ನೀಡಿದರು. ಅದೇ ರೀತಿಯಾಗಿ ಜಗದೇವ ಪಾಂಡ್ಯಂನು ತನ್ನ ಪಟ್ಟಬಂಧೋತ್ಸವದೊಳಾ ದಾಸಿರಾಜಂಗೆ ನೊಳಂಬವಾಡಿ ನಾಡ ಕೊಂಣಜಿಯ ಕೊಟ್ಬೊಡಾಯೂರ ದೇವರ್ಗ್ಗೆಂದಾ ಕಲ್ಯಾಣಶಕ್ತಿ ದೇವರ ಕರ್ಜಿ

ಸರ್ವನಯಸ್ಯವಾಗಿ ಮೊತ್ತ ಮೊಡೆಯರಸ ಕುಮಾರ ವಿಜಯ ಪಾಂಡ್ಯದೇವನ ಪಟ್ಟ ಬಂಧೋತ್ಸವದೋಳುಂಬಿಗೆಜಿೀಯು ಕಾಮಲದೇವಿ ದೇವರಸ ಸೆಟ್ಟಿ ಪ್ರಮುಖ ಪರಿವಾರದವರು ಕಲ್ಯಾಣಶಕ್ತಿ ದೇವರ ಪಾದ ಪೂಜೆ ಮಾಡಿ ಧಾರಾಪೂರ್ವಕವಾಗಿ ಸರ್ವನಮಸ್ಯ ಸರ್ವಬಾದಾ ಪರಿಹಾರವಾಗಿ ದಾನ ನೀಡಿದ ಕುರಿತು ವಿವರಣೆ ಇದೆ.[೯]

೧೦. ಸಕಳೇಶ್ವರ ಪಂಡಿತ

ಮನಗುಂಡಿಯ ಕ್ರಿ.ಶ. ೧೨೦೭, ೧೨೧೮ರ ಶಾಸನಗಳಲ್ಲಿ ಸಕಳೇಶ್ವರನ ಪಂಡಿತರು ಬೋಜಗೇಶ್ವರ ದೇವಾಲಯದ ಸ್ಥಾನಾಚಾರ್ಯರಾಗಿದ್ದರು. ಸಿದ್ಧೇಶ್ವರ ಮಠದಲ್ಲಿ ತಿಪ್ಪಗಾವುಂಡ ಮುಖ್ಯವಾಗಿ ಸಮಸ್ತ ಪ್ರಜೆಗಳು ಎಂಟ್ಟುಹಿಟ್ಟು ಪಂಚಮಠ [ಂಗಳ] ಮಹಾಸಭೆಯಾಗಿ ನೆರೆದಿರ್ದ್ದ [ಲ್ಲಿ] ಐನೋಜಿನಾಲ್ವರು ಆ ಸಕಳೇಶ್ವರ ಪಂಡಿತರಿಗೆ ಸಕವರ್ಷ ಸಾಸಿರದ ಪ್ರಭವ ಸಂವತ್ಸರದ ಪುಷ್ಯ ಶುದ್ಧ ಉತ್ತರಾಯಣ ಸಂಕ್ರಮಣ ಸ್ವಸ್ತಿ ಕಲಿಯುಗ ಸಂವತ್ಸರ ಮಾಘ ೬ ಶುಕ್ರವಾರದಂದು ಹಣವನ್ನು ಧಾರಾಪೂರ್ವಕಂ ಮಾಡಿದರು ಮತ್ತು ಬೋಜರಿಗೆ ಈಶ್ವರ ದೇವರಿಗೆ ಉಪಹಾರಕ್ಕೆ ಕೂಡ ದಾನ ನೀಡಿದರು.[೧೦] ಕ್ರಿ.ಶ. ೧೨೦೭-೧೨೧೮ರ ಮನಗುಂಡಿ ಶಾಸನದಲ್ಲಿ ಮೊದಲನೆಯ ದತ್ತಿಯು ಗೊವೆಯ ಕದಂಬ ವಂಶದ ಮೂರನೆಯ ಜಯಕೇಶಿಗೆ ಸಂಬಂಧಿಸಿದ್ದು, ಎರಡನೆಯ ದತ್ತಿಯು ಆತನ ಹಿರಿಯ ಮಗ ವಜ್ರದೇವನಿಗೆ ಸಂಬಂಧಿಸಿದೆ. ಈತನ ಕಾಲದಲ್ಲಿ ಮನಗುಂಡಿಯ ಮೂಲಸ್ಥಾನದಾಚಾರ್ಯ ಬೋಕರಾಸಿ ಶ್ರೀ ಗಾಮೇಶ್ವರದ ಚಂದ್ರಭೂಷಣ ದೇವರು, ಲಕ್ಷ್ಮಣೇಶ್ವರದಾಚಾರ್ಯ ಅಮರೇಶ್ವರ ದೇವರು, ಶ್ರೀ ಗೋಪಾಲ ದೇವರ ಸಚ್ಚಿತಾ (ದಾ) ನಂದಸ್ವಾಮಿ ಅಂತರವರು ಭಯ ಸನ್ಮೆತದಿಂ ಬರದ ಕುಲಕ [ರ] ಣಿ ಚಿದಯ್ಯ ಎಂದು ಉಲ್ಲೇಖಿಸಿದೆ.[೧೧]

೧೧. ಚಂದ್ರಭೂಷಣ ಪಂಡಿತರು

ಚಂದ್ರಭೂಷಣ ಪಂಡಿತರು ಮನಗುಂಡಿಯ ಎರಡು ದೇವಾಲಯಗಳಿಗೆ ಸ್ಥಾನಾಚಾರ್ಯರಾಗಿದ್ದರು ಎನ್ನುವ ಉಲ್ಲೇಖ ದೊರೆಯುತ್ತದೆ.

> "ಅಕ್ಷೀಣಿ ಆಗಾಮಿ ಸಹಿತ ಸಮಸ್ತ ಬದಿ ಸಹಿತ ಮಣಿಗುಂದಗೆಯ
> ಶ್ರೀ ಗಾಮೇಶ್ವರ ದೇವರಾಚಾರ್ಯ ಚಂದ್ರಭೂಷಣ ದೇವರ
> ಕೈಯಲು ಲೊಕ್ಕಿಯ ಪ್ರಿಯಣಶ್ರಾಹೆಯ ಗದ್ಯಾಣ ೫೨ ಮಂ
> ಕೊಂಡು ಆ ಗ್ರಾಮೇಶ್ವರ ದೇವರಿಗೆ ಕ್ರಯದಾನವಾಗಿ ಕೊಟ್ಟರ್ ॥"[೧೨]

ಎಂದು ತಿಳಿಸುತ್ತದೆ.

ಉಪಸಂಹಾರ:

ಧಾರವಾಡ ತಾಲೂಕಿನ ಒಟ್ಟು ೧೪ ಸ್ಥಾನಾಚಾರ್ಯರ ಉಲ್ಲೇಖವಿದ್ದು, ಆರನೇಯ ವಿಕ್ರಮಾಧಿತ್ಯನ ಕಾಲದಲ್ಲಿ ೭ ಮುನಿಗಳನ್ನು ಉಲ್ಲೇಕಿಸುತ್ತದೆ. ನಂತರ ಎರಡನೆಯ

ಜಯಕೇಶಿ ಕಾಲದಲ್ಲಿ ೨ ಮುನಿಗಳನ್ನು ಉಲ್ಲೇಖಿಸಿದರೆ, ಶಿವಚಿತ್ತಪೆರ್ಮಾಡಿ ಕಾಲದಲ್ಲಿ ೨ ಮುನಿಗಳನ್ನು ಉಲ್ಲೇಖಿಸುತ್ತದೆ. ಉಳಿದಂತೆ ವೀರ ವಿಕ್ರಮಾಧಿತ್ಯ, ನಾಲ್ಕನೆಯ ಸೋಮೇಶ್ವರ, ಮತ್ತು ಮೂರನೆಯ ಜಯಕೇಶಿಯರ ಕಾಲದಲ್ಲಿ ತಲಾ ಒಂದು ಶಾಸನಗಳು ಮುನಿಗಳನ್ನು ಉಲ್ಲೇಖಿಸುತ್ತದೆ. ಈ ಹಿನ್ನಲೆಯಲ್ಲಿ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಶೈವ ಧರ್ಮ ಪ್ರೋತ್ಸಾಹಿಸಿದ ಶೈವ ಸ್ಥಾನಾಚಾರ್ಯರಿಗೆ ಮತ್ತು ದೇವಾಲಯಗಳಿಗೆ ಹೇರಳವಾದ ದಾನ–ದತ್ತಿ ನೀಡಿರುವದರಿಂದ ಅವರ ಕಾಲದಲ್ಲಿ ಉತ್ತಮ ಸ್ಥಿತಿಯನ್ನು ಹೊಂದಿತ್ತು ಎಂಬುದು ತಿಳಿದು ಬರುತ್ತದೆ. ಒಟ್ಟಿನಲ್ಲಿ ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಧಾರವಾಡ ಜಿಲ್ಲೆಯಲ್ಲಿ ಶೈವಧರ್ಮಕ್ಕೆ ರಾಜಾಶ್ರಯ ದೊರೆತು, ಸಮೃದ್ಧವಾಗಿರುವದು ಶಾಸನಗಳಿಂದ ತಿಳಿದುಬರುತ್ತದೆ. ಅತಿ ಹೆಚ್ಚಿನ ಸಂಖ್ಯೆಯಲ್ಲಿ ದೊರೆತ ದೇವಾಲಯ ಮತ್ತು ದಾನ ಶಾಸನಗಳು ಇದಕ್ಕೆ ಸಾಕ್ಷಿಯಾಗಿದೆ.

ಅಡಿ ಟಿಪ್ಪಣಿಗಳು

೧. ಎಸ್.ಆಯ್.ಆಯ್. ಸಂ. ೧೧, ನಂ. ೪೫ ಕುರಹಟ್ಟಿ ಕ್ರಿ.ಶ. ೯೮೦.

೨. ಅದೇ.

೩. ಕಲಬುರ್ಗಿ ಎಂ.ಎಂ., ಧಾರವಾಡ ತಾಲೂಕಿನ ಶಾಸನಗಳು, ನಂ. ೩೧.

೪. ಕಲಬುರ್ಗಿ ಎಂ.ಎಂ., ಧಾರವಾಡ ಜಿಲ್ಲೆಯ ಶಾಸನಸೂಚಿ, ನಂ. ೩೦, ಕ್ರಿ.ಶ. ಸು. ೧೧ನೆಯ ಶತಮಾನ.

೫. ಎಸ್.ಆಯ್.ಆಯ್. ಸಂ. ೧೧–೨, ೧೯೧, ಪು. ೨೪೮–೨ ಅಮ್ಮಿನಭಾವಿ. ಕ್ರಿ.ಶ. ೧೧೧೨.

೬ ಅದೇ.

೭. ಎಸ್.ಆಯ್.ಆಯ್. ಸಂ. ೧೫–೨೨೭, ವೆಂಕಟಾಪುರ ಕ್ರಿ.ಶ. ೧೧೩೬ .

೮. ಕೆ.ಆರ್.ಐ. ನಂ. ೭೪, ಪು. ೨೨೬.

೯. ಕೆ.ಆರ್.ಐ. ನಂ. ೨೪, ಪು. ೨೨೬.

೧೦. ಕೆ.ಆಯ್. ಸಂ ೫. ನಂ. ೩೧ ಪು. ೧೨೨, ಧಾರವಾಡ.

೧೧. ಅದೇ. ಪುಟ.

೧೨. ಎಸ್. ಆಯ್.ಆಯ್. ಸಂ. ೧೫. ನಂ. ೨೩೩, ಪು. ೨೮೫–೨೯೦.

ಕನ್ನಡ ಕಡತಗಳಲ್ಲಿ ಜಾತಿ ವಿಚಾರ – ಒಂದು ಅವಲೋಕನ

◆

ಮೋಹನಕುಮಾರ್.ಕೆ.

ಪ್ರಸ್ತಾವನೆ

ಯಾವುದೇ ನಾಡಿನ ಸಾಂಸ್ಕೃತಿಕ ಚರಿತ್ರೆಯನ್ನು ಅರಿಯಲು ಆ ಸಂಸ್ಕೃತಿಯ ವಸ್ತು ಆಕರಗಳು ಲಿಖಿತ ಆಕರಗಳು ಮೌಖಿಕ ಸಾಹಿತ್ಯ ಹಾಗೂ ಆಚರಣಾ ಪರಂಪರೆಗಳು ಪ್ರಧಾನವಾಗುತ್ತವೆ. ಕರ್ನಾಟಕದ ಮಧ್ಯಯುಗೀನ ಮತ್ತು ಆಧುನಿಕ ಕಾಲದ ಚರಿತ್ರೆಯ ಮೇಲೆ ಬೆಳಕು ಬೀರುವ ಬಹಳ ಮುಖ್ಯ ಆಕರ ಸಾಮಾಗ್ರಿಗಳಾದ ಕನ್ನಡ ಕಡತಗಳಲ್ಲಿನ ವಿಷಯಗಳನ್ನು ಆಳವಾಗಿ ಅಧ್ಯಯನ ಮಾಡಿದಾಗ ನಾಡಿನ ಆ ಕಾಲದ ರಾಜಕೀಯ, ಆರ್ಥಿಕ, ಸಾಮಾಜಿಕ ಧಾರ್ಮಿಕ ಹಾಗೂ ಸಾಂಸ್ಕೃತಿಕ ವಿಷಯಗಳು ತಿಳಿದುಬರುತ್ತವೆ.

ಇಡೀ ನಮ್ಮ ಭಾರತೀಯ ಸಮಾಜ ವ್ಯವಸ್ಥೆಯಲ್ಲಿ ಜಾತೀಯತೆಯು ಇಂದು ಮತ್ತು ನಿನ್ನೆಯದಾಗಿರದೆ ಅನಾದಿಕಾಲದಿಂದಲೂ ಕೂಡ ಸಮಾಜದಲ್ಲಿ ತನ್ನದೆ ಆದ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ. ಈ ಜಾತೀಯತೆಯು ಒಂದು ಸಾಮಾಜಿಕ ಪಿಡುಗಾಗಿ ಪರಿಣಮಿಸಿದ್ದು, ಒಂದಲ್ಲಾ ಒಂದು ರೀತಿಯಲ್ಲಿ ಎಲ್ಲರೂ ಅದರ ಸುಳಿಯಲ್ಲಿ ಸಿಲುಕಿದವರೆ ಆಗಿದ್ದಾರೆ. ಇಂತಹ ಜಾತಿಪದ್ಧತಿಯು ನಮ್ಮ ಭಾರತ ದೇಶ ವಸಾಹತುಶಾಹಿ ಆಡಳಿತಕ್ಕೆ ಒಳಪಡುವುದಕ್ಕೂ ಮುಂಚಿನ ರಾಜರ ಆಡಳಿತ ಕಾಲಾವಧಿಯಲ್ಲಿ ಹೇಗಿತ್ತು ಎಂಬುದರ ಜೊತೆಯಲ್ಲಿಯೆ ಧಾರ್ಮಿಕ ಸ್ಥಳೀಯ ಸಂಸ್ಥೆಗಳು ಕೂಡ ಜಾತಿಪದ್ಧತಿಯ ವಿಚಾರದಲ್ಲಿ ಹೊಂದಿದ್ದ ನಿಲುವುಗಳು ಏನೆಂಬುದನ್ನು ಅರಿಯಲು ನಮಗೆ ಶಾಸನಗಳನ್ನು ಹೊರತುಪಡಿಸಿ ಅನೇಕ ದಾಖಲು ಸಾಮಾಗ್ರಿಗಳು ಲಭ್ಯವಾಗಿವೆ. ವಿಜಯನಗರೋತ್ತರ ಕಾಲದ ದಾಖಲೆಗಳಲ್ಲಿ ಕನ್ನಡ ಕಡತಗಳು ಜಾತಿವ್ಯವಸ್ಥೆ ಮತ್ತು ಅದು ಚಲಾವಣೆಗೊಳ್ಳುತ್ತಿದ್ದ ಪರಿ, ಆ ಸಂಬಂಧಿತವಾಗಿ ನಿರ್ಮಾಣವಾಗಿದ್ದ ಕೆಲವು ಬಿಕ್ಕಟ್ಟುಗಳು, ಸಮಸ್ಯೆಗಳು ಮತ್ತು ಅವುಗಳಿಗೆ ಯಾವ ಬಗೆಯ ಪರಿಹಾರಗಳನ್ನು ಕಂಡುಕೊಳ್ಳಲಾಗುತ್ತಿತ್ತು ಎಂಬ ಅನೇಕ ವಿಚಾರಗಳನ್ನು ತಮ್ಮೊಡಲಲ್ಲಿ ಇರಿಸಿಕೊಂಡಿವೆ. ಈ ಕಾಲದ ಸಮಾಜಿಕ ಪರಿಚಲನೆಯನ್ನು ಅರಿಯಲು ಇವು ಅತ್ಯುತ್ತಮವಾದ ಆಕರಗಳಾಗಿವೆ. ಇಂತಹ ಲಿಖಿತ

ಆಕರಗಳು ಆಯಾ ಕಾಲಮಾನದಲ್ಲಿಯೆ ಸಂಭವಿಸಿದ ಘಟನೆಗಳನ್ನು, ನಿರ್ಮಾಣಗೊಂಡ ಸನ್ನಿವೇಶಗಳನ್ನು, ತೆಗೆದುಕೊಂಡ ತೀರ್ಮಾನಗಳನ್ನು ದಾಖಲಿಸಿರುವುದರಿಂದ ಗತಿಸಿಹೋದ ಅನೇಕ ಘಟನೆಗಳ ಅಧಿಕೃತ ದಾಖಲೆಗಳಾಗಿರುತ್ತವೆ. ಆಕಾರಣಕ್ಕೆ ಈ ಕನ್ನಡ ಕಡತಗಳು ಹೆಚ್ಚು ಪ್ರಾಮುಖ್ಯತೆ ಪಡೆಯುತ್ತವೆ. ಆಧುನಿಕ ಪೂರ್ವಕಾಲದಲ್ಲಿ ಈ ಜಾತಿ–ಜನಾಂಗಗಳ ಸ್ಥಿತಿಗತಿ, ಸ್ಥಾನಮಾನ ಹೇಗಿತ್ತು ಎಂಬುದನ್ನು ಸಾಹಿತ್ಯಕ ಕೃತಿಗಳ ಮೂಲಕ ತಿಳಿದುಕೊಳ್ಳುವುದಕ್ಕಿಂತಲೂ ಈ ಅಧಿಕೃತ ದಾಖಲೆಗಳು ದಾಖಲಿಸಿರುವ ವಿಚಾರಗಳು ಹೆಚ್ಚು ನಂಬಲರ್ಹವಾದವುಳಾಗುತ್ತವೆ.

ಈಗಾಗಲೇ ಪ್ರಕಟಗೊಂಡಿರುವ ಕರ್ನಾಟಕದ ಅನೇಕ ಶ್ರೀ ಮಠಗಳ ಕನ್ನಡ ಕಡತಗಳು ಜಾತೀಯ ವಿಚಾರ ಕುರಿತಂತೆ ಅನೇಕ ಮಾಹಿತಿಗಳನ್ನು ಒಳಗೊಂಡಿದ್ದು, ವ್ಯಕ್ತಿ ಅಧ್ಯಯನ (ಕೇಸ್ ಸ್ಟಡಿ) ಮಾಡಲು ಅವಕಾಶವಾಗುತ್ತದೆ. (ವ್ಯಕ್ತಿ ಅಧ್ಯಯನ ಎಂದರೆ ಯಾವುದೊ ಒಂದು ಸಮುದಾಯ, ಸಂಸ್ಥೆ, ವ್ಯಕ್ತಿಯ ಕುರಿತು ನಡೆದ ಸತ್ಯಘಟನೆ ಸನ್ನಿವೇಶಗಳನ್ನು ಆಧರಿಸಿ ತೆಗೆದುಕೊಂಡ ತೀರ್ಮಾನ ಇತ್ಯಾದಿಗಳ ಹಿನ್ನಲೆಯಲ್ಲಿ ಅಧ್ಯಯನ ಮಾಡುವುದು.) ಶ್ರೀ ಮಠಗಳ ಕಡತಗಳು ಜಾತೀಯ ವಿಚಾರ ಕುರಿತಂತೆ ಒಂದು ಜನಾಂಗದ ಆಚಾರ–ವಿಚಾರಗಳು ಅವರ ನಡಾವಳಿಗಳು, ಹೆತ್ತ ಸೂತಕಗಳು, ಸಾವಿನ ಸೂತಕಗಳು, ಮದುವೆ ವಿಚಾರಗಳು, ಜನಿವಾರ ಹಾಕುವ ವಿಚಾರಗಳು, ಸಾಮಾಜಿಕ ಸ್ತಾನಮಾನ, ವಿವಾಹ–ಸಂಸರ್ಗ, ಹುಟ್ಟುವಕ್ಕಲ ಕ್ರಯಚಿಟ್ಟು, ಜಾಮೀನು ವಿಚಾರಗಳು, ಗೇಣಿವಪ್ಪ ಚೀಟಿ ಕರಾರು, ಗೇಣಿ ಕರಾರಿನ ಎದುರು ನುಡಿ. ದನಗಳ ಕ್ರಯಚೀಟಿ, ಜಾತ್ಯಂತರ ಹೆಣ್ಣನ್ನು ಲಗ್ನವಾದ ವಿಚಾರ ಮತ್ತು ಆ ಸಂಬಂಧಿತ ವ್ಯಾಜ್ಯಗಳು, ತೀರ್ಮಾನಗಳು ಇತ್ಯಾದಿ ವಿಚಾರಗಳು ಇಲ್ಲಿ ಕಂಡುಬರುತ್ತವೆ. ಪ್ರಸ್ತುತ ಲೇಖನದಲ್ಲಿ ಜಾತಿ ಸಂಬಂಧಿತ ಅಂತಹ ಕೆಲವು ದಾಖಲೆಗಳನ್ನು ಮಾತ್ರ ಪರಿಶೀಲಿಸಲಾಗಿದೆ.

ಮಠಗಳು ಮತ್ತು ಸ್ಥಳೀಯ ಜಾತಿ ಜನಾಂಗಗಳ ನಡುವಿನ ಸಂಬಂಧಗಳು

ಈ ಸಮಾಜದಲ್ಲಿ ಆಳವಾಗಿ ಬೇರೂರಿರುವ ಜಾತಿವ್ಯವಸ್ಥೆ, ಮೂಢನಂಬಿಕೆ, ಬಡವ–ಬಲ್ಲಿದನೆಂಬ ತಾರತಮ್ಯವನ್ನು ನಿರ್ಮೂಲನೆ ಮಾಡುವ ಗುರುತರವಾದ ಹೊಣೆ ಮಠಗಳದ್ದಾಗಿರುತ್ತದೆ. ವಿಶೇಷವಾಗಿ ವಿಜಯನಗರೋತ್ತರ ಕಾಲದಲ್ಲಿ ಜಾತಿ ಜನಾಂಗಗಳ ಅಸ್ತಿತ್ವಕ್ಕೆ ಸಂಬಂಧಿಸಿದ ಮಾಹಿತಿ ಹಾಗೂ ಧರ್ಮ ಮತ್ತು ಅನ್ಯ ಧರ್ಮದೊಂದಿಗಿನ ಸಂಬಂಧ ಮತಾಂತರಗೊಂಡಾಗ ಕುಟುಂಬಗಳು ಎದುರಿಸುವ ಸಂಕಷ್ಟಗಳು ಎಂತಹವು ಆಗಿನ ನ್ಯಾಯ ನಿರ್ಣಯ ಹೀಗೆ ಮುಂತಾದ ಅಂಶಗಳನ್ನು ಒಳಗೊಂಡ ಮಠಗಳಿಗೆ ಸಂಬಂಧಿಸಿದ ಕನ್ನಡ ಕಡತಗಳಲ್ಲಿನ ವಿಷಯ ನಮಗೆ ಬಹಳ ಮುಖ್ಯವಾಗಿರುತ್ತವೆ. ನಮ್ಮ ಭಾರತೀಯ ಸಮಾಜದ ಜಾತಿ ಜನಾಂಗಗಳ ಸ್ಥಳೀಯ ಸ್ಥಾನಮಾನವನ್ನು ಸಮಾಜದಲ್ಲಿ ಗುರುತಿಸಿಕೊಳ್ಳುವ ಮತ್ತು ಯಾವುದೆಲ್ಲ ಸವಲತ್ತುಗಳನ್ನು ಅವರು ಪಡೆಯಬಹುದೆಂಬುದರ ಕುರಿತು ನಿರ್ದೇಶನವನ್ನು ನೀಡುವ ಮತ್ತು ಅವರ ಸ್ಥಾನವನ್ನು

ನಿಗದಿಪಡಿಸುವ ಜವಾಬ್ದಾರಿ, ಅವರಿಗೆ ಸಿಗಬೇಕಾದ ಸಮಾಜದಲ್ಲಿನ ಸವಲತ್ತು ಗೌರವ, ಮಾನ್ಯತೆ ಇತ್ಯಾದಿಗಳು ಹಾಗೂ ಅವುಗಳನ್ನು ಪಡೆದುಕೊಳ್ಳುವ ಸಲುವಾಗಿ ಸಂಬಂಧಿಸಿದವರಿಂದ ಬರುವ ಅಹವಾಲುಗಳನ್ನು ಸ್ವೀಕರಿಸಿ ಅವುಗಳನ್ನು ಇತ್ಯರ್ಥ ಗೊಳಿಸುವ ಕೆಲಸ ಮಠಗಳದ್ದಾಗಿತ್ತು ಎಂಬುದು ಸ್ಥಳೀಯವಾಗಿ ಬರೆದಿಟ್ಟಿರುವಂತಹ ಕಡತಗಳ ಮಾಹಿತಿಗಳಿಂದ ತಿಳಿದುಬರುತ್ತದೆ.

ಪ್ರಸ್ತುತ ಸಂದರ್ಭದಲ್ಲಿಯೂ ಕೂಡ ನಮ್ಮ ಸಮಾಜದಲ್ಲಿ ಯಾವುದೇ ಒಂದು ವ್ಯಕ್ತಿಗೆ ತನ್ನದೇ ಆದ ಅಸ್ಮಿತೆ ಇಲ್ಲದೇ ಹೋದಾಗ ಅನಾಥ ಪ್ರಜ್ಞೆ ಕಾಡುವ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಹೇಗೆಂದರೆ ನಿನ್ನ ಜಾತಿ ಯಾವುದು?, ನಿನ್ನ ಜನಾಂಗ ಯಾವುದು?, ನಿನ್ನ ಕುಲ ಯಾವುದು?, ನೀನು ಯಾವ ಸಮುದಾಯಕ್ಕೆ ಸೇರಿದವನು? ಎಂಬುದರ ಮೇಲೆ ಅವನಿಗೆ ಒಂದು ಅಸ್ಮಿತೆಯ ಪ್ರಕ್ರಿಯೆ ಭಾರತದಂತಹ ಸಮಾಜದಲ್ಲಿ ನಡೆಯುತ್ತಿರುವುದನ್ನು ಕಾಣಬಹುದು. ಇಂತಹ ಸಮಯದಲ್ಲಿ ಮಠಮಾನ್ಯಗಳು ಜನಾಂಗದ ಸ್ಥಳೀಯವಾದ ಬದುಕಿನಲ್ಲಿ ಎದುರಾಗುವ ಶುಭ ಅಶುಭಗಳ ಸಂದರ್ಭದಲ್ಲಿ ನಿರ್ವಹಿಸುವ ಕಾರ್ಯ ಚಟುವಟಿಕೆಗಳನ್ನು ನಡೆಸುವುದು, ಸಮಾಜದಲ್ಲಿ ತನ್ನದೇ ಆದ ಸ್ಥಾನಮಾನ, ಗೌರವವನ್ನು ನಿಶ್ಚಿತವಾಗಿ ನಿರ್ಧರಿಸಿಕೊಳ್ಳುವ ಅಥವಾ ಗುರುತಿಸಿಕೊಳ್ಳುವಂತೆ ಮಾಡುವುದಾಗಿತ್ತು. ಇಂತಹ ವಿಚಾರಗಳನ್ನು ದಾಖಲೆಗಳ ಆಧಾರದ ಮೇಲೆ ವಿವಿಧ ಜಾತಿ ಜನಾಂಗದವರ ಬದುಕು, ಸಂಕಷ್ಟಗಳು, ಅವುಗಳಿಗೆ ಆ ಕಾಲದಲ್ಲಿ ಕಂಡುಕೊಳ್ಳುತ್ತಿದ್ದ ಪರಿಹಾರಗಳು ಏನು ಎಂಬುದನ್ನು ತಿಳಿದುಕೊಳ್ಳುವುದು ಮುಖ್ಯವಾಗುತ್ತದೆ.

ಕರ್ನಾಟಕದಲ್ಲಿ ಪ್ರಕಟಗೊಂಡಿರುವ ಅನೇಕ ಮಠಗಳ ಮೂಲ ಕಡತಗಳಲ್ಲಿ ಬರೆಯಲ್ಪಟ್ಟ ನಿರೂಪ, ಜಯರೇಖೆ, ಬಿನ್ನವತ್ತಳೆಗಳಲ್ಲಿ ಉಲ್ಲೇಖವಾಗಿರುವ ಜಾತಿ ಜನಾಂಗಗಳಿಗೆ ಸಂಬಂಧಿತ ದೂರು-ದುಮ್ಮಾನಗಳು, ವ್ಯಾಜ್ಯಗಳು, ಎರಡು ಬಣಗಳ ನಡುವೆ ನಡೆಯುವ ಹೋರಾಟಗಳು ಹಾಗೆಯೇ ಬೇರೆ-ಬೇರೆ ಆರ್ಥಿಕ ಕಾರಣಗಳಿಗೆ ಆದಂತಹ ಜಗಳಗಳು, ಸಾಮಾಜಿಕ ಸ್ಥಾನಮಾನಗಳಿಗೆ ಆದ ಜಗಳಗಳು, ಆಚಾರ ವಿಚಾರ ಸಂಬಂಧಿತ ವಿಚಾರಗಳು, ಸ್ತ್ರೀ-ಪುರುಷ ಸಂಬಂಧಗಳು, ಜಾತಿ ಜಾತಿಗಳ ನಡುವಿನ ವಿವಾಹ ಸಂಸರ್ಗ, ಅನ್ಯ ಜಾತಿಯ ಹೆಣ್ಣನ್ನು ತರುವ ವಿಚಾರ ಇಂತಹ ಅನೇಕ ಬೇರೆ-ಬೇರೆ ಜನಾಂಗಗಳ ನಡುವಿನ ತಕರಾರುಗಳನ್ನು ಮಠಗಳು ತೀರ್ಮಾನ ಮಾಡಿರುವುದು ಇಲ್ಲಿನ ದಾಖಲೆಗಳಲ್ಲಿವೆ. ಇಂತಹ ಕೆಲವು ಉದಾಹರಣೆಯನ್ನು ನೋಡಬಹುದು.

ಶ್ರೀ ಸ್ವರ್ಣವಲ್ಲಿ ಮಠದೊಂದಿಗೆ ಅನ್ಯಜಾತಿಯವರ ಸಂಬಂಧ

ಶ್ರೀ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನದ ಐತಿಹಾಸಿಕ ದಾಖಲೆಗಳು ಸಂಪುಟ ೦೧ರ ಅಧ್ಯಾಯ ೧೦ ಶ್ರೀ ಸರ್ವಜ್ಞೇಂದ್ರ ಸರಸ್ವತಿಗಳ ಕಾಲ (ಕ್ರಿ.ಶ. ೧೯೧೮-೧೯೯೦)ರಲ್ಲಿನ ಕಡತ ಸಂಖ್ಯೆ-೩೪೩ರಲ್ಲಿನ ಬಹಳ ಮುಖ್ಯ ವಿಚಾರ ಮುಂಬೈ ಪ್ರಾಂತ್ಯದ ವೆಟರ್ನರಿ ಇನ್ವೆಸ್ಟಿಗೇಶನ್ ಆಫೀಸರ್ ಆರ್.ಎನ್. ನಾಯ್ಕರು

ಮುಂಬಯಿಯಿಂದ ಗುರುಗಳಿಗೆ ಬರೆದ ಬಿನ್ನಹ ಪತ್ರ ಇದಾಗಿದೆ. ಮುಖ್ಯವಾಗಿ ಇಲ್ಲಿ ಶ್ರೀ ಮಠದ ಗುರುಗಳ ಮೇಲಿನ ಗೌರವ ಭಾವನೆ, ಹಾಗೂ ನಂಬಿಕೆಯನ್ನು ಗಮನಿಸಬಹುದಾಗಿದೆ. ಆರ್.ಎನ್. ನಾಯ್ಕ್ ಒಬ್ಬ ಸರಕಾರಿ ನೌಕರನಾಗಿದ್ದರು ಶ್ರೀಗಳ ದರುಷನಕ್ಕಾಗಿ ಹಂಬಲಿಸುವುದನ್ನು ಕಾಣಬಹುದು. ಶ್ರೀ ಮಠದ ಗುರುಗಳ ಬಳಿ ಮಾಡಿಕೊಂಡ ಬಿನ್ನಹದಲ್ಲಿ "ನಮ್ಮ ಸಮಾಜದ ಇತಿಹಾಸ ಸಂಶೋಧನೆಯನ್ನು ನಾನೀಗ ಸಾಧಾರಣ ಒಂದು ವರ್ಷದಿಂದ ಮಾಡುತ್ತಿದ್ದೇನೆ. ಅದರಲ್ಲಿ ತಿಳಿದುಬಂದ ಒಂದು ಸತ್ಯಸಂಗತಿ ಇಂತಿದೆ.- ಶೇರುಗಾರ ಜಾತಿಯವರು ಶ್ರೀಕಾರ (ಶಿರಿಕಾರ, ಗರಿಗಾರ) ಗೌಡ ಬ್ರಾಹ್ಮಣರಾಗಿರುತ್ತಾರೆ. ಅವರು ಸ್ಮಾರ್ಥರು, ಅದ್ವೈತಿಗಳು, ಪುರಾತನ ಕಾಲದಿಂದಲೂ ಕೂಡ ಷೋಡಸ ಸಂಸ್ಕಾರ ಯುಕ್ತರಾಗಿರುತ್ತಾರೆ. ಅವರ ಮುಖಚರ್ಯ, ಮೈಕಟ್ಟು ಶುದ್ಧ ಆರ್ಯಜನರದ್ದು ಇರುತ್ತದೆ. ಈ ವಿಚಾರವಾಗಿ ಹೊನ್ನಾವರದ ವಕೀಲರಿಗೆ ನಿಬಂಧದ ಉತ್ತರವೊಂದನ್ನು ನೀಡಿದ್ದು ತಾವು ಅದನ್ನು ತರಿಸಿಕೊಳ್ಳಬೇಕು" ಎಂಬ ಬೇಡಿಕೆಯಿದೆ. ಆ ಮೂಲಕ ತಮ್ಮ ಸಮುದಾಯಕ್ಕೆ ಉತ್ತಮ ಸ್ಥಾನಮಾನವನ್ನು ಕಲಿಸಿಕೊಡುವ ಬಗೆಗೆ ಅಪೇಕ್ಷೆ, ಜೊತೆಗೆ ಆ ವ್ಯಕ್ತಿಯ ಸಮಾಜದ ಆರ್ಥಿಕ ಸ್ಥಿತಿಯು ಕೆಟ್ಟು, ಜನ ಕಂಗೆಟ್ಟಿರುವ ಬಗ್ಗೆ ಚಿಂತನೆಯಿದೆ. ಮತ್ತು ತಮ್ಮ ಸಮಾಜದ ಉನ್ನತಿ ಬಗ್ಗೆ ಸರ್ವಬಗೆಯಿಂದಲೂ ಸಹಾಯ ಮಾಡಿ ರಕ್ಷಣೆ ಮಾಡಬೇಕೆಂದು ಮಠವನ್ನು ಭಿನ್ನವಿಸಿಕೊಳ್ಳಲಾಗಿದೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಚಾರವೇನೆಂದರೆ ಸ್ವತಂತ್ರ ಬರುವುದಕ್ಕೂ ನಾಲ್ಕು ವರ್ಷ ಮುಂಚಿನ ದಾಖಲೆ ಇದಾಗಿದ್ದು ಈ ಒಬ್ಬ ಸರಕಾರಿ ಅಧಿಕಾರಿಯು ಮಠದ ಗುರುಗಳನ್ನು ದೈವ ಸ್ವರೂಪಿಯಾಗಿ ಕಾಣುವುದರ ಜೊತೆಗೆ ಅವರ ಮೇಲಿನ ಗೌರವ ಭಾವನೆ ವ್ಯಕ್ತವಾಗುವುದನ್ನು ಕಾಣಬಹುದು. ಹಾಗೆಯೇ ಇಡೀ ಧರ್ಮರಕ್ಷಣೆಯ ಜವಾಬ್ದಾರಿಯನ್ನು ಮಠದ ಗುರುಗಳಿಗೆ ಬಿನ್ನವಿಸುವುದು. ಇದರಿಂದ ಒಂದು ಸಮಾಜದ ಆಧುನೀಕರಣದ ಸಂದರ್ಭದಲ್ಲಿ ವಿದ್ಯಾವಂತನಾದ ತಳಸಮುದಾಯದ ವ್ಯಕ್ತಿ ತನ್ನ ಜಾತಿಯು ಜನರನ್ನು ಅವರ ಬದುಕನ್ನು ಉತ್ತಮೀಕರಿಸಲು ಮಠವನ್ನು ಅವಲಂಬಿಸಿರುವುದು ಕಂಡರೆ ಮಠಗಳ ಪ್ರಾಶಸ್ತ್ಯ ಅವುಗಳ ಮೇಲಿನ ನಂಬಿಕೆ ಹೇಗಿತ್ತು ಎಂದು ಅರ್ಥವಾಗುತ್ತದೆ. ಹಾಗೂ ತನ್ನ ಸಮಾಜದ ಬಗೆಗಿನ ಬಹಳ ಮುಖ್ಯ ವಿಚಾರಗಳನ್ನು ಸಂಶೋಧನೆಯಿಂದ ತಿಳಿದುಕೊಳ್ಳುತ್ತಿರುವ ಪ್ರಯತ್ನವನ್ನು ಬಹುಶಃ ಜಾತಿಸಮುದಾಯದ ಅಧ್ಯಯನದ ಮೊದಲ ಪ್ರಯತ್ನಗಳಾಗಿ ನೋಡಬಹುದು.

ಜೀತದಾಳುಗಳ ಮಾರಾಟದ ಕರಾರು ಪತ್ರ / ಹುಟ್ಟು ವಕ್ಕಲ ಕರಾರು ಪತ್ರ / ಹುಟ್ಟು ವಕ್ಕಲ ಕ್ರಯಚಿಟ್ಟು

ಶ್ರೀ ಮಂಜುಗುಣಿ ಕ್ಷೇತ್ರ ಚಾರಿತ್ರಿಕ ದಾಖಲೆಗಳು ಸಂಪುಟ-೧ರ ಅಧ್ಯಾಯ ೪ ರಲ್ಲಿನ ಕಡತ ಸಂಖ್ಯೆ ೩೯ರಲ್ಲಿನ ಮಾಹಿತಿಯು ಕ್ರಿ.ಶ. ೧೮೩೬ರ ಕಂಪನಿ ಸರಕಾರದ ಅವಧಿಯದಾಗಿದೆ. ಜೀತಪದ್ಧತಿಗೆ ತಳಸಮುದಾಯಕ್ಕೆ ಸೇರಿದವರನ್ನು

ಬಳಸಿಕೊಳ್ಳುತ್ತಿದ್ದುದನ್ನು. ತಲೆತಲಾಂತರದಿಂದ ನಡೆದುಬರುತ್ತಿದ್ದ ಜೀತಪದ್ಧತಿಯ ಕರಾಳತೆಯನ್ನು ಇದರಲ್ಲಿ ಗಮನಿಸಬಹುದು. ಈ ಕಡತದಲ್ಲಿ "ಹೊಲೇರ ಜಾತಿಗೆ ಸೇರಿದ ಕಂನ್ಯಾ ಎಂಬುವನ ಹುಡುಗರಾದ (ಮಕ್ಕಳಾದ) ಮಲ್ಲ, ಮಾದ್ಯ, ಬಡಿಯಾ ಎಂಬ ಹುಡುಗರು ಈ ಮೂರೂ ಜನರನ್ನು ಗದ್ಯಾಣ ೯ ವರಹಕ್ಕೆ ತೆಗೆದುಕೊಂಡು ಅಂಣ್ಣೈ ಭಟರ್ರಿಗೆ (ಶ್ರೀ ಮಂಜುಗುಣಿ ದೇವಸ್ಥಾನದ ಅರ್ಚಕ) ತಿಂಮ್ಮೈ ಹೆಗಡೆಯವರು (ಶಿವಳಿ ಮಾಗಣಿ ಯಂಮಗುಂಡಿ) ಸದರಿ ಮೂರು ಹುಡುಗರನ್ನು ವಹಿಸಿಕೊಟ್ಟು ಸದರಿ ಜನರಿಗೆ ನೀವು ಮದುವೆ ಮುಂತಾದ್ದು ಮಾಡಿಸಿಕೊಂಡು ಸಂತಾನ ಪಾರಂಪರ್ಯವಾಗಿ ಈ ಹುಡುಗರ ಮತ್ತು ಇವರಿಗೆ ಹುಟ್ಟಿದ ಸಂತಾನದವರಿಗೆ ಸಹ ನಾನು ಮತ್ತು ನನ್ನ ಸಂತಾನದವರು ಕೇಳ ಕಾರಣವಿಲ್ಲ ಎಂದು ಬರೆಸಿಕೊಟ್ಟಂತಹ ಹುಟ್ಟು ವಕ್ಕಲ್ಲ ಕ್ರಯಚಿಟ್ಟು" ಎಂದು ಬರೆದಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಕೆಳ ಸಮುದಾಯಕ್ಕೆ ಸೇರಿದ ಜನಗಳನ್ನು ಸಮಾಜದಲ್ಲಿ ಎಷ್ಟು ಶೋಚನೀಯವಾಗಿ ಕಾಣಲಾಗುತ್ತಿತ್ತು ಮತ್ತು ಸಮಾಜದ ಚೌಕಟ್ಟಿನೊಳಗೆ ಅವರನ್ನು ಬಳಸಿಕೊಳ್ಳಲಾಗುತ್ತಿದ್ದ ಬಗೆ ನಮಗೆ ತಿಳಿಯುವುದಲ್ಲದೆ ಇಡೀ ಒಂದು ತಳ ಸಮುದಾಯದ ಕುಟುಂಬ ಮತ್ತು ಅವರ ಸಂತತಿ ಜೀತಪದ್ದತಿಗೆ ಅಡಿಯಾಳಾಗಿ ಇರಬೇಕಾಗಿತ್ತು ಎಂಬುದು ಈ ಕಡತದಿಂದ ತಿಳಿಯುತ್ತದೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಸಂಗತಿ ; ಖ್ಯಾತ ರಾಜನೀಕೋತ್ತರ ಚಿಂತಕ ಮಿಶೆಲ್ ಫುಕೋನ ಅಧಿಕಾರ ಮತ್ತು ಜ್ಞಾನದ ವ್ಯಾಖ್ಯಾನದಡಿ ಯಲ್ಲಿಯು ಸಹ ಗಮನಿಸಬಹುದಾಗಿದೆ. ಒಂದು ಸಮಾಜದ ಮೇಲ್ವರ್ಗಗಳು ಹೇಗೆ ತಮ್ಮ ಅಧಿಕಾರ ಮತ್ತು ಜ್ಞಾನದ ಮೂಲಕ ತಳ ಸಮುದಾಯವನ್ನು ತನ್ನ ಅಧೀನದಲ್ಲಿ ಇರಿಸಿಕೊಳ್ಳುತ್ತಿತ್ತು ಎಂಬುದಕ್ಕೆ ತಲೆತಲಾಂತರದ ಜೀತಪದ್ದತಿ ನಮಗೆ ಈ ಕಡತದ ಮುಖೇನ ತಿಳಿಯುತ್ತದೆ.

ಹಾಗೆಯೇ ಶ್ರೀ ಸ್ವರ್ಣವಲ್ಲಿ ಮಹಾ ಸಂಸ್ಥಾನದ ಐತಿಹಾಸಿಕ ದಾಖಲೆಗಳು ಸಂಪುಟ–೧ರ ಅಧ್ಯಾಯ ೫ ಶ್ರೀ ಗಂಗಾಧರೇಂದ್ರ ಸರಸ್ವತಿಯವರ ಕಾಲ (ಸು.ಕ್ರಿ.ಶ ೧೮೨೬–ಸು.ಕ್ರಿ.ಶ ೧೮೬೪) ದಲ್ಲಿನ ಕಡತ ಸಂಖ್ಯೆ–೧೭೮ರಲ್ಲಿ ಶ್ರೀ ಮಠದ ಗುರುಗಳಿಗೆ ಗೊಳಕ ಜಾತಿ, ಹೊನ್ನಹಳ್ಳಿ ಕೇರಿ, ಮಂಚಿಕೆರೆ ಶಿವಾ, ಭರ್ತನಹಳ್ಳಿ, ಬಳಕಲ್ಲಲ್ಲಿರುವ ನರಸು ಮುಂತಾದ ಜಾತಿ ಸಮಸ್ತರು ಬರಕೊಂಡ ಭಿನ್ನಹದಲ್ಲಿ "ನಮಗೆ ಗುರುಗಳು ಇಲ್ಲದಿರುವುದರಿಂದ ನಮ್ಮನ್ನು ನಿಮ್ಮ ಶಿಷ್ಯರನ್ನಾಗಿ ಮಾಡಿಕೊಳ್ಳಬೇಕು" ಎಂದು ಬಿನ್ನವಿಸಿಕೊಂಡಿರುವಂತದ್ದು.

ಇಲ್ಲಿ ನಾವು ಗಮನಿಸಬೇಕಾದ ಮುಖ್ಯ ಸಂಗತಿ ಈ ಮೇಲ್ಕಂಡ ಎಲ್ಲಾ ಜಾತಿ ಸಮಸ್ತರು ಸಹ ತಮ್ಮ ಜಾತಿ ಜನಾಂಗದಲ್ಲಿ ಸಮಾಜದಲ್ಲಿ ಒಂದು ಸ್ಥಾನಮಾನ ಸಿಗಬೇಕಾದರೆ ತಾವು ಯಾವುದಾದರೂ ಒಂದು ಮಠದ ಒಕ್ಕಲಾಗಿರಲೇಬೇಕೆಂಬ ಬಗೆಯ ಅನಿವಾರ್ಯತೆಯನ್ನು ಅನುಭವಿಸುವುದು ಮತ್ತು ಮಠಗಳಿಗೆ ಶರಣುಹೊಕ್ಕು ಒಕ್ಕಲಾಗುವುದರಿಂದ ಒಂದು ಬಗೆಯ ಅಸ್ಮಿತೆಯನ್ನು ಪಡೆಯಬಹುದೆಂಬ ವಿಶ್ವಾಸ ಮಠದ ಮೇಲಿನ ಆವರ ನಂಬಿಕೆ ಮತ್ತು ಗುರುಗಳ ಮೇಲಿನ ಗೌರವ ಕಂಡುಬರುತ್ತದೆ.

ಇತ್ತೀಚಿನ ದಿನಗಳಲ್ಲಿಯೂ ಸಹ ಇಂತಹ ಒಂದು ಭಾವದಿಂದಲೇ ಅನೇಕ ಸಮುದಾಯಗಳು ಒಂದಲ್ಲಾ ಒಂದು ಮಠದವರಿಗೆ ಶರಣು ಹೋಗುತ್ತಿರುವುದನ್ನು ಕಾಣಬಹುದಾಗಿದೆ. ಅದರಲ್ಲೂ ತಳ ಸಮುದಾಯಗಳು ಯಾವ ಮಠದವರು ತಾವು, ತಮಗೊಬ್ಬ ಗುರುಗಳು ಇಲ್ಲವೆಂಬ ಭಾವದಲ್ಲಿ ಒಂದು ಅನಾಥ ಪ್ರಜ್ಞೆಯನ್ನು, ಅಸುರಕ್ಷಿತ ಭಾವವನ್ನೂ ಅನುಭವಿಸುತ್ತಿರುವುದು ಅದನ್ನು ಗಮನಿಸಿದ ವಿವಿಧ ಧರ್ಮಗಳ ಗುರುಗಳು ಅಂತಹವರನ್ನು ಗುರುತಿಸಿ ತಮ್ಮ ಒಕ್ಕಲಾಗಿಸಿಕೊಳ್ಳುತ್ತಿರುವ ಪರಿಪಾಟ ಇತ್ತೀಚೆಗೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವುದನ್ನು ಇಂತಹ ಕಡತಗಳ ಹಿನ್ನೆಲೆಯಲ್ಲಿ ವಿವರಿಸಿಕೊಳ್ಳಲು ಸಾಧ್ಯವಾಗುತ್ತದೆ. ಈ ಲೇಖನದ ಪ್ರಾರಂಭದಲ್ಲಿಯೇ ಹೇಳಿದಂತೆ ಭಾರತದಂತಹ ಸಮಾಜ ವ್ಯವಸ್ಥೆಯಲ್ಲಿ ತನ್ನದೇ ಆದ ಒಂದು ಅಸ್ಮಿತೆಗಾಗಿ ಈ ಜನ ಮಠದ ಗುರುಗಳ ಮೇಲೆ ಅವಲಂಬಿತರಾಗಿರುವುದು, ಅಲ್ಲದೆ ಎಲ್ಲ ಧರ್ಮದ ಮಠಗಳು ಯಾವ ಜಾತಿ ಜನಾಂಗದವರಿಗೆ ಸೇರಿದವರಾಗಿರಲಿ ಅವರನ್ನು ತಮ್ಮ ಒಕ್ಕಲನ್ನಾಗಿಸಿಕೊಳ್ಳಿ ಎಂಬ ಮನವಿಯನ್ನು ಗಂಭೀರವಾಗಿ ನಿರ್ವಹಿಸುತ್ತಿದ್ದ ಬಗೆ ನಮಗೆ ಕುತೂಹಲವನ್ನುಂಟು ಮಾಡುವುದರಲ್ಲಿ ಅನುಮಾನವೇ ಇಲ್ಲ.

ಉಪಸಂಹಾರ

ಹೀಗೆ ಸಮಾಜದ ಎಲ್ಲಾ ಮಠಗಳೊಂದಿಗೆ ಎಲ್ಲಾ ಜಾತಿಜನಾಂಗಗಳ ಸಂಪರ್ಕ ಹೇಗಿತ್ತು ಎಂಬ ಮಹತ್ವದ ವಿಚಾರಗಳು ಕಡತಗಳಿಂದ ನಮಗೆ ಮನವರಿಕೆಯಾಗುತ್ತವೆ. ಏಕೆಂದರೆ ಮಠಗಳು ಯಾವುದೋ ಒಂದು ಜನಾಂಗ, ಜಾತಿಗಳ ಮಡಿ ಮೈಲಿಗೆ ಆಚಾರ ವಿಚಾರಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಮತ್ತು ಯಾವ ಜನಾಂಗದವರೇ ಆಗಲಿ ಧರ್ಮದವರೇ ಆಗಲೀ ಅವರೊಂದಿಗೆ ಉತ್ತಮ ಸಂಬಂಧಗಳನ್ನಿಟ್ಟುಕೊಳ್ಳಲು ಪ್ರಯತ್ನಿಸುತ್ತಿದ್ದವು, ಇಸ್ಲಾಂ ಧರ್ಮದ ಹಾಗೂ ಕ್ರಿಶ್ಚಿಯನ್ ಧರ್ಮದ ಪ್ರಭುತ್ವದೊಂದಿಗೂ ಉತ್ತಮ ರೀತಿಯಿಂದ ಸಂಬಂಧವನ್ನು ಹೊಂದಿದ್ದವು ಅಲ್ಲದೆ ಮಠದ ಭೂಮಿಗಳಲ್ಲಿ ಬೆಳೆಯುತ್ತಿದ್ದ ಬೆಳೆಗಳು, ಶ್ರೀಗಂಧ, ಮುಂತಾದವುಗಳ ವ್ಯಾಪಾರ ವಹಿವಾಟಿಗೆ ಮುಸಲ್ಮಾನ ಕಂಟ್ರಾಕ್ಟರ್‌ಗಳು ಸಹ ಬಂದು ಮಠಗಳೊಂದಿಗೆ ನಿರಂತರ ಒಳ್ಳೆಯ ಸಂಬಂಧವಿಟ್ಟು ಕೊಂಡದ್ದು ಸಹ ಕನ್ನಡ ಕಡತಗಳಿಂದ ವಿಧಿತವಾಗುತ್ತದೆ. ಈ ಹಿನ್ನೆಲೆಯಲ್ಲಿ ಮಠಗಳು ಕೇವಲ ಧಾರ್ಮಿಕ ಕೇಂದ್ರಗಳಾಗಿರದೇ ಅವು ಸಾಮಾಜಿಕ ಜವಾಬ್ದಾರಿಗಳನ್ನು ನಿರ್ವಹಿಸುವ ಕೇಂದ್ರಗಳಾಗಿದ್ದವೆಂದು ಹೇಳಬಹುದು. ಈ ಕಾರಣಕ್ಕೆ ಕಡತಗಳಲ್ಲಿನ ಮಾಹಿತಿಗಳು ಸಂಶೋಧಕರನ್ನು ತನ್ನತ್ತ ಸೆಳೆಯುತ್ತಿವೆ ಎಂದರೆ ತಪ್ಪಾಗಲಾದರು.

[ಮಾರ್ಗದರ್ಶನ ಮಾಡಿದ ಡಾ. ಎನ್ ಆರ್. ಲಲಿತಾಂಬರವರಿಗೆ ಕೃತಜ್ಞತೆಗಳು ಸಲ್ಲುತ್ತವೆ.]

ಪರಾಮರ್ಶನ ಗ್ರಂಥಗಳು

೧. ಶ್ರೀ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನದ ಐತಿಹಾಸಿಕ ದಾಖಲೆಗಳು ಸಂಪುಟ ೦೧. (ಸಂ) ಡಾ. ಎ.ಕೆ. ಶಾಸ್ತ್ರಿ. ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ.

೨. ಶ್ರೀ ಮಂಜುಗುಣಿ ಕ್ಷೇತ್ರ ಚಾರಿತ್ರಿಕ ದಾಖಲೆಗಳು ಸಂಪುಟ ೦೧. (ಸಂ) ಡಾ॥ ಎ.ಕೆ. ಶಾಸ್ತ್ರಿ. ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ.

■

'ರಕ್ತವದನಂ' ವಿಮರ್ಶೆ – ಪುನರಾವಲೋಕನ

◆

ಸೀತಾರಾಮ ಜಾಗೀರ್‌ದಾರ್

ಬಿ.ಎಂ.ಶ್ರೀ. ಪ್ರತಿಷ್ಠಾನದ ಪತ್ರಿಕೆ "ಕರ್ನಾಟಕ ಲೋಚನ" ಸಂಪುಟ : ೩೧, ಸಂಚಿಕೆ–೦೨, ಪು. ೪೯–೫೧ರಲ್ಲಿ ರನ್ನನ ಸಾಹಸಭೀಮ ವಿಜಯ ಕೃತಿಯ ಸಂಗ್ರಹ "ಗದಾಯುದ್ಧ ಸಂಗ್ರಹ"[೧] (ಸಂ. ದಿ. ಪ್ರೊ. ತೀ.ನಂ.ಶ್ರೀಕಂಠಯ್ಯ, ಪ್ರಕಾಶನ: ಕಾವ್ಯಾಲಯ) ಪುಸ್ತಕದ ಒಂದು ಪ್ರಸಿದ್ಧ ಕವಿತೆ ಹೀಗಿದೆ :

ಕುರುಭೂಭೃದ್ಬಲ [ತೂಲ ಕಾಲ] ಪವನಂ ಕೌರವ್ಯಗಂದೇಭ ಕೇ
ಸರಿ ದುಶ್ಶಾಸನರಕ್ತ ರಕ್ತವದನಂ ದುರ್ಯೋಧನೋರುಕ್ಷಮಾ
ಧರವಜ್ರಂ ಕುರುರಾಜರತ್ನಮುಕುಟೋತ್ಕೂಟಾಂಘ್ರಿ ಸಂಘಟ್ಟ ಸಂ
ಗರನೆಂದೆಂದಭಿವರ್ಣಿಪೆಂ ರಣಯಶಶ್ರೀರಾಮನಂ ಭೀಮನಂ ॥[೨]

ಇದನ್ನು ಕುರಿತಂತೆ ಶ್ರೀ ಎಸ್. ಬಿಳಿಗಿರಿವಾಸನ್ ಎಂಬವರು 'ಒಂದು ಅವಲೋಕನ' ಎಂಬ ವಿಮರ್ಶೆಯನ್ನು ನೀಡಿದ್ದಾರೆ, ಕುತೂಹಲದ ಸಂಗತಿ ಎಂದರೆ ದಿ. ಜೆ.ಪಿ. ರಾಜರತ್ನಂ ಹಾಗೂ ಶ್ರೀ ವುಂತಕಲ್ (ಗುಂತಕಲ್?) ಶ್ರೀನಿವಾಸರಾವ್ ಎಂಬವರ ಮಧ್ಯೆ ನಡೆದ ಸಂವಾದವನ್ನು ಬಳಸಿಕೊಂಡಿದ್ದಾರೆ. ಈ ಸಂವಾದ ಗಂಭೀರವಾಗಿ ಕುಳಿತಿದೆ–ಈಗ. ಏಕೆಂದರೆ ಇದು ನಮ್ಮ ಅನೇಕ ಹಿರಿಯರ ಮಾನವನ್ನು ತೆಗೆಯುತ್ತಿದೆ. ನನಗೆ ತಿಳಿದಂತೆ ದಿ. ಟಿ.ಎಸ್. ವೆಂಕಣ್ಣಯ್ಯನವರಾಗಲಿ ದಿ. ಎ.ಆರ್. ಕೃಷ್ಣಶಾಸ್ತ್ರಿಗಳಾಗಲಿ ಎಲ್ಲಿಯೂ ಈ ಪದ್ಯದ ಅರ್ಥವಿವರಣೆಯನ್ನು ಅವರ ಬರಹಗಳಲ್ಲಿ ನೀಡಿಲ್ಲ. ಅರ್ಥಾತ್ ಅವರ ಹೆಸರನ್ನು ಇಲ್ಲಿ ಎಳೆದು ತಂದಿರುವುದು ತಪ್ಪು.[೩] ಮೇಲಾಗಿ ಸತ್ತವರ ಬಗೆಗೆ ಏನನ್ನೂ ಹೇಳಬಾರದು. ಕೆಟ್ಟದ್ದನ್ನು.

ಪತ್ರಿಕೆಯ ಪು. ೫೦ರಲ್ಲಿ ಲೇಖಕರು ಪದ್ಯದ ವಿವರಣೆಯನ್ನು ಇನ್ನೊಬ್ಬರ ಮುಖಾಂತರ ತಮ್ಮ ಒಲವರವನ್ನು ಹೀಗೆ ಪ್ರಸ್ತುತಪಡಿಸಿದ್ದಾರೆ.

ಆಗ ರಾಯರು 'ಸಾರ್ ಬೇಸರ ಪಡಬೇಡಿ. ನನ್ನ ಸಂಶಯಕ್ಕೆ ಕಾರಣ ಹೇಳ್ತೀನಿ ದಯವಿಟ್ಟು ಕೇಳಿ' ಎಂದು ಮುಂದುವರೆಸುತ್ತಾ 'ಕುರುಭೂಭೃತ್‌ಚಲ ತೂಲಕೂಲಪವನಂ ಕೌರವ್ಯಗಂದೇಭ–ಕೇಸರಿ–ದುರ್ಯೋಧನೂರು ಕ್ಷಮಾಧರ–ವಜ್ರದಂಡಂ' ಹೀಗೆ ಹೋಲಿಕೆಯ ಸರಣಿ ಸಾಗುತ್ತದೆ.

"ಕೌರವನ ಬಲ ಒಂದು ಹಕ್ಕಿಯ ಗರಿ–ಭೀಮ ಕಾಲಪವನ ; ಕೌರವ ಕುಲದ ಕೀರ್ತಿ ಎಂಬುದು ಒಂದು ಆನೆ. ಅದಕ್ಕೆ ಭೀಮ ಸಿಂಹವಿದ್ದಂತೆ ; ದುರ್ಯೋಧನನ ಊರುಗಳು (ತೊಡೆಗಳು) ಬೆಟ್ಟಕ್ಕೆ ಸಮಾನವಾದರೆ–ಭೀಮ ವಜ್ರಾಯುಧವಿದ್ದಂತೆ–ಹೀಗೆ ಒಂದು ಅಬಲವಾದದ್ದು. ಅದಕ್ಕೆ ವಿರುದ್ಧವಾಗಿ ಮತ್ತೊಂದು ಪ್ರಬಲವಾದದ್ದು ಹೀಗೆ ರನ್ನ ಹೇಳಿಕೊಂಡೇ ಬಂದಿದ್ದಾನೆ. ಹಾಗೆಯೇ ದುಶ್ಶಾಸನನ ರಕ್ತಕ್ಕೆ ರಕ್ತವದನಂ ಎಂಬುದು ಅದಕ್ಕಿಂತಲೂ ಪ್ರಬಲವಾದ ವಿರೋಧವಾದ ಮತ್ತೇನೋ ಒಂದು ಇರಲೇಬೇಕಲ್ಲವೇ, ಅದನ್ನು ಬಿಟ್ಟು ಸುಮ್ಮನೆ 'ರಕ್ತವನ್ನು ಮುಖಕ್ಕೆ ಬಳಿದುಕೊಂಡಿದ್ದ' ಎಂದುಬಿಟ್ಟರೆ ಮೇಲೆ ಎಲ್ಲ ಕಡೆಯೂ ಬಂದಿರುವ ಜೋಡಣೆಯ ಸರಣಿ ಇಲ್ಲಿ ತಪ್ಪಿ ಹೋಗುವುದಿಲ್ಲವೇ ಎಂದರು."

ಆಗ ರಾಜರತ್ನಂ ಅವರಿಗೆ 'ಈ ಪೆಟ್ರೋಲ್ ಮಾರೋ ವ್ಯಕ್ತಿಗೆ ಹೊಳೆದ ಈ ಅನುಮಾನ ನಮ್ಮ ಗುರುಗಳಾದ ವೆಂಕಣ್ಣಯ್ಯ, ಬಿ.ಎಂ.ಶ್ರೀ., ಎ.ಆರ್. ಕೃಷ್ಣಶಾಸ್ತ್ರಿಗಳಿಗಾಗಲೀ ನನಗಾಗಲಿ ಏಕೆ ಹೊಳೀಲಿಲ್ಲ. ಈಚಿನ ಯಾರಿಗಾದರೂ ಈ ಯೋಚನೆ ಬರಲೇ ಇಲ್ಲವಲ್ಲ' ಎಂದು ನಿಟ್ಟುಸಿರು ಬಿಟ್ಟರು.

ಈ ವಿವರಣೆಯನ್ನು ಓದಿದ ಮೇಲೆ ನನಗೂ ಶ್ರೀ ರಾಜರತ್ನಂ ಅವರಂತೆ ನಿಟ್ಟುಸಿರನ್ನು ಬಿಡುವಂತಾಗಿದೆ. ಏಕೆಂದರೆ ಇಲ್ಲಿ ಒಂದಲ್ಲ ಹಲವು ತಪ್ಪುಗಳಿವೆ.

೧) ಕೌರವನ ಬಲ ಒಂದು ಹಕ್ಕಿಯ ಗರಿ–ಭೀಮಕಾಲಪವನ 'ಹಕ್ಕಿಯಗರಿ' ಎಂದು ಹೇಳುವುದಕ್ಕೆ ಇಲ್ಲಿ ಸ್ಥಾನವೇ–ಶಬ್ದವೇ–ಇಲ್ಲ. ಇಲ್ಲಿರುವುದು 'ಕುರುಭೂಭೃದ್ಬಲ ತೂಲ' ಎಂದರೆ ಕುರುಭೂಭೃದ್ಬಲ ಎಂಬ ಹತ್ತಿ (ಎಂದರೆ ಹತ್ತಿಯ ಅಥವಾ ಅರಳಿಯ ಹಂಜಿ/ಹಿಂಜಿ) ಹಿಂಜಿದ ತೊಳೆ ; ಯಾವುದು ಗಾಳಿಗೆ ಸಲೀಸಾಗಿ ಹಾರಿ ಹೋಗಬಲ್ಲದು. ಅಷ್ಟೇ ಅಲ್ಲ, ಇಲ್ಲಿ ಬೆಳ್ವೊಲದ ಮಡಿಲಲ್ಲಿನ ಮುಧೋಳದಲ್ಲಿ ಹುಟ್ಟಿ ಬೆಳೆದ ಅದೇ ಬೆಳ್ವೊಳದ (ಅತ್ತಿಮಬ್ಬೆಯ ರಾಜಧಾನಿ) ಸಿಂದೋಗಿ[೪]ಯಲ್ಲಿ ಅತ್ತಿಮಬ್ಬೆಯ ಆಶ್ರಯದಲ್ಲಿದ್ದ ರನ್ನ ಅನೇಕ ಹತ್ತಿಯ ಹೊಲಗಳನ್ನು ನೋಡಿ ಅಲ್ಲಿಗೆ ಗಿಡಗಂಟಿಗಳಿಗೆ, ಹಾರು ಬೀಜದ ಬಿಳಿ ಜೋಳದ ದಂಟುಗಳಿಗೆ ಗಾಳಿಗೆ ಹಾರಿ ಅಲ್ಲಲ್ಲಿ ಸಿಕ್ಕಿ ಹಾಕಿಕೊಂಡ ಹತ್ತಿಯ ತೊಳೆಗಳನ್ನು ಕಂಡು ಈ ಒಂದು ಸುಂದರ ಉಪಮೆಯನ್ನು ಕೊಟ್ಟಿರಬಹುದು. ಮೇಲಾಗಿ ಸಂಸ್ಕೃತ ಸಾಹಿತ್ಯದಲ್ಲಿ ಈ ಉಪಮೆ ಆಗಲೇ ಬಂದಾಗಿತ್ತು ಇವುಗಳನ್ನು ನೋಡಿದ ರನ್ನಕವಿ ತನ್ನ ಕಾವ್ಯದಲ್ಲಿ ಆ ಉಪಮಾಲಂಕಾರವನ್ನು ಬಳಸಿರಬಹುದು. ದಿ. ಪೂಜ್ಯ ತೀನಂಶ್ರೀ ಸರಿಯಾಗಿಯೇ ವಿವರಿಸಿದ್ದಾರೆ.[೫]

೨) ಕೌರವ ಕುಲದ ಕೀರ್ತಿ ಎಂಬುದು ಒಂದು ಆನೆ. ಅದಕ್ಕೆ ಭೀಮ ಸಿಂಹವಿದ್ದಂತೆ. ಪದ್ಯದಲ್ಲಿ ಇರುವುದು. 'ಕೌರವ್ಯಗಂದೇಭಕೇಸರಿ' ಎಂದರೆ 'ಕೌರವ' ಎಂಬ ಗಂಧೇಭಕ್ಕೆ (ಮದಭರಿತ) ಆನೆಗೆ ಭೀಮನು ಸಿಂಹದಂತಿದ್ದ ಕುರುಕುಲದಲ್ಲಿ ಹುಟ್ಟಿದ ವ್ಯಕ್ತಿಯನ್ನು ಆನೆ ಎಂದಿದ್ದಾನೆ. ಇದೊಂದು ರೂಪಕಾಲಂಕಾರ. ಇಲ್ಲಿ 'ಕೀರ್ತಿ' ಎಂಬ ಶಬ್ದಕ್ಕೆ ಅಸ್ತಿತ್ವ ಇಲ್ಲ.

೩) 'ದುಶ್ಯಾಸನರಕ್ತವದನಂ' 'ರಕ್ತವದನ' ಎಂದರೆ 'ರಕ್ತದಿಂದ ತೊಯ್ದ ಮುಖ' ಎಂದು ಆಬಾಲವೃದ್ಧರೆಲ್ಲರಿಗೂ ತಿಳಿದ ಅರ್ಥ. ಲೇಖನದ ಲೇಖಕರು ಪೆಟ್ರೋಲ್ ಬಂಕ್ ಮಾಲೀಕ ಶ್ರೀ ಶ್ರೀನಿವಾಸರಾವ್ ಎತ್ತಿದ ಸಂದೇಹದ–

ದುಶ್ಯಾಸನನ ರಕ್ತಕ್ಕಿಂತ ಪ್ರಬಲವಾದ ವಸ್ತು ಇರಬೇಕೆಲ್ಲವೇ ? ಬೆನ್ನು ಹತ್ತಿ "ಹಳೆಯದಾದ ಸಂಸ್ಕೃತ–ಸಂಸ್ಕೃತ–ಇಂಗ್ಲಿಷ್ ನಿಘಂಟುವಿನಲ್ಲಿ 'ರಕ್ತವದನ: ರಕ್ತಮುಖ; ಲೀಚ (ಜಿಗಣಿ=ಇಂಬಳು, ನೀರಲ್ಲೂ ಕಾಡಲ್ಲೂ ವಾಸಿಸುವ ರಕ್ತ ಹೀರುವ ಒಂದು ಜಾತಿ ಹುಳು)" ಇತ್ಯಾದಿ ಬರೆದು ಒಂದು ಹೊಸದಾದ ಅರ್ಥವನ್ನು ಧ್ವನಿಸಿದ್ದಾರೆ. ಶ್ರೀಯುತರು ನಿಘಂಟುವಿನ ಹೆಸರನ್ನು ಸೂಚಿಸಿದ್ದರೆ ಅದನ್ನು ನೋಡಿ ಅದರ ಬೆಳಕಿನಲ್ಲಿ ಈ ಅರ್ಥವನ್ನು ಒಪ್ಪಿಕೊಳ್ಳಬಹುದಿತ್ತು. ಆದರೆ ಎಲ್ಲಿ ಅಂತ ಅದನ್ನು ಹುಡುಕುವುದು? ನನ್ನ ಅಲ್ಪಮತಿಗೆ ಯಾವೊಂದು ಕೋಶದಲ್ಲಿ 'ರಕ್ತವದನ' ಎಂಬ ಒಂದು ಶಬ್ದ ಇದ್ದು ಅದಕ್ಕೇ 'ಜಿಗಣಿ' ಎಂಬ ಅರ್ಥವಿರುವ ದಾಖಲೆ/ನಮೂದು (Entry) ಇಲ್ಲ. ಮತ್ತೆ ಲೇಖಕರೇ ಕೊಟ್ಟ ದಿ. ಶಿವರಾಮ ಕಾರಂತರ "ಸಿರಿಗನ್ನಡ ಅರ್ಥಕೋಶ" ಗ್ರಂಥದಲ್ಲಿ 'ರಕ್ತವದನ' ಶಬ್ದವಿಲ್ಲ.[೬] ಅಲ್ಲಿರುವುದು "ರಕ್ತಪಾಯಿ–ರಕ್ತಪ, ನೆತ್ತರ ಹೀರುವ, ರಾಕ್ಷಸ, ತಿಗಣೆ". ಇದಕ್ಕೆ ಸಂಬಂಧಿಸಿದಂತೆ ಅಮರಕೋಶದಲ್ಲಿ ಕೆಳಗಿನ ಶ್ಲೋಕವಿದೆ.

'ರಕ್ತಪಾತು' ಜಲೂಕಾಯಾಂ [ಸ್ತ್ರೀಯಾಃ ಭೂಮ್ನಿ ಜಲೌಕಸಃ][೭]

ರಕ್ತಪಾ (>ರಕ್ತಪ) ಇದು 'ಪಾದಪ' (=ಮರ ಮೊದಲಾದ ಸಸ್ಯಜಾತಿ) ಇದ್ದಹಾಗೆ. ಇಲ್ಲಿ ನಮಗೆ ಭೀಮಸೇನ ದುಶ್ಯಾಸನ ರಕ್ತವನ್ನು ಹೇಗೆ ಕುಡಿದ ಎಂಬುದು ಬಹಳ ಮಹತ್ವದ ಸಂಗತಿ ಆಗುತ್ತದೆ. ಈ ದಿಶೆಯಲ್ಲಿ ರನ್ನನದೇ ಪದ್ಯಗಳು ನಮ್ಮ ಸಹಾಯಕ್ಕೆ ಬರುತ್ತದೆ.

೧. ಖಳದುಶ್ಯಾಸನ ವಕ್ಷ
ಸ್ಥಳೋಚ್ಚಲತ್ಕೃಷ್ಣ ರಕ್ತ ಜಲದಿಂ ಕೋಪಾ
ನಳನಂ ಮಟ್ಗಿಸದಿನ್ನುಂ
ಗಳಗಳಿತಸಕೋಪನಿರ್ಪ್ಪ ತೆಱದಿಂದಿರ್ದ್ದಯ್ ॥ (ಆ. ೧–೫೭)

೨. ಒಡವುಟ್ಟಿದರಂ ಕೊಂದವ
ರಡಗಂ ತಿಂದವರ ನೆತ್ತರಂ ಬಗಸೆರೆಯೊಳ್
ಕುಡಿಏೀ ನಿಸ್ತ್ರಿಂಶತೆಯಂ
ಹಿಡಿಂಬೆಯಂ ಪೊರ್ದ್ದಿ ಕಲ್ತನಾಗನೆ ಭೀಮಂ (ಆ: ೩–೨೮)

ಭೀಮಸೇನನು ದುಶ್ಯಾಸನನ ಎದೆಗೆ ಗುದ್ದಿದಾಗ ಅದು ಒಡೆದು ರಕ್ತನಾಳದಿಂದ ರಕ್ತ ಝುಲ್ಲೆಂದು ಮೇಲಕ್ಕೆ ಹಾರಿದಾಗ ಆ ರಕ್ತ ನೆಲಕ್ಕೆ ಬೀಳದಂತೆ ಬಗಸೆರೆ (ಬೊಗಸೆ) ಯಲ್ಲಿ ಹಿಡಿದು ಕುಡಿದ. ಆಗ ಸಹಜವಾಗಿ ಸ್ವಾಭಾವಿಕವಾಗಿ ರಕ್ತವು ಕುಡಿದವನ ತುಟಿಗಳಿಗೆ, ಮೀಸೆಗೆ, ಮತ್ತೆ ನಾಶಿಕಕ್ಕೆ (ಒಮ್ಮೊಮ್ಮೆ) ಹತ್ತುತ್ತದೆ. ಮೇಲಕ್ಕೆ ಚಿಮ್ಮಿದ ರಕ್ತವನ್ನು ಜಿಗಣೆಯ ಹಾಗೆ ಹೀರಲಿಕ್ಕೆ ಆಗುವುದಿಲ್ಲ, ಆದುದರಿಂದ 'ರಕ್ತವದನಂ' ಎಂದರೆ ರಕ್ತಸಿಕ್ತ ಮುಖವೇ ಹೊರತು ಶ್ರೀ ಬಿಳಿಗಿರಿ ವಾಸನ್ ಅವರು ಬರೆದಿರುವಂತೆ

ರಕ್ತ ಹೀರುವ ಜಿಗಣೆ ಅಲ್ಲ. ಅರ್ಥಾತ್ ಅವರ ವಿವರಣೆ ಸರಿಯೆಂದುದಲ್ಲ. Q.E.D. 'ರಕ್ತವದನಂ' = ರಕ್ತಹತ್ತಿದ ಮುಖ ಎಂದು ವಿವರಿಸಿದವರಾರೂ ತಪ್ಪುತಪ್ಪಾಗಿ ಹೇಳಿದೆವೆಂದು ತ್ರಿಕಾಲದಲ್ಲಿಯೂ ವಿಷಾದ ಪಡಬೇಕಿಲ್ಲ; ಏಕೆಂದರೆ ಇವೆಲ್ಲವೂ ಭೀಮಸೇನನಿಗೆ ಇರುವ ವಿಶೇಷಣಗಳು.

೪) MM ವಿಲಿಯಂ ಅವರ ಕೋಶದಲ್ಲಿ 'ರಕ್ತಮುಖ' ಇದಕ್ಕೆ 'ಒಂದು ಜಾತಿಯ ಮೀನು' ಮತ್ತೆ 'ಒಂದು ಬಗೆಯ ಕೋತಿ' ಎಂಬ ಅರ್ಥಗಳನ್ನು ಬರೆದಿದೆ.*

ಅಡಿಟಿಪ್ಪಣಿ

೧. ರನ್ನನ ಮಹಾಕಾವ್ಯ "ಸಾಹಸಭೀಮ ವಿಜಯಂ" ಕೃತಿಯನ್ನು ಆಧರಿಸಿ ದಿ. ಪ್ರೊ. ಬಿ.ಎಂ.ಶ್ರೀ. ಅವರು 'ಗದಾಯುದ್ಧ ನಾಟಕಂ' ಎಂಬ ನಾಟಕವನ್ನು ರಚಿಸಿ ಕೊಟ್ಟಿದ್ದಾರೆ. ಆ ಕಾವ್ಯವನ್ನೇ ಸಂಗ್ರಹಿಸಿ ಟಿಪ್ಪಣಿಗಳೊಂದಿಗೆ ಕಾವ್ಯಸಂಗ್ರಹವನ್ನು ದಿ. ಪ್ರೊ. ತೀ.ನಂ. ಶ್ರೀಕಂಠಯ್ಯನವರು ಪ್ರಕಟಿಸಿದ್ದಾರೆ. ಹೀಗೆ ಮಾಡುವಾಗ ಅನೇಕ ಪಾಠಗಳನ್ನು ಸರಿಪಡಿಸಿಕೊಟ್ಟಿದ್ದಾರೆ.

೨. ಮೂಲ ಕೃತಿಯಲ್ಲಿ ಪದ್ಯಪಾಠ ಕೆಟ್ಟಿದೆ ನೋಡಿ : ಸಾಹಸಭೀಮ ವಿಜಯಂ (ಸಂ: ಬಿ.ಎಸ್. ಸಣ್ಣಯ್ಯ ಮತ್ತು ರಾಮೇಗೌಡ) ಆ. ೧–೫೨, ಪು. ೧೧.

೩. ಯಾರು ಯಾರದೋ ಹೇಳಿಕೆಗಳನ್ನು ವಿಮರ್ಶೆಯಲ್ಲಿ ಅದೂ ಮರ್ಯಾದೆಯನ್ನು ತೆಗೆಯುವಂತಿದ್ದರೆ ತಳಹದಿಯನ್ನಾಗಿ ಮಾಡಬಾರದು–ಸತ್ತವರ ಬಗ್ಗೆ ಸದ್ವಚನಗಳನ್ನು ಬಿಟ್ಟು ಸೊಲ್ಲೆತ್ತಬಾರದು.

೪. (i) ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಸಂಪುಟ ೯೪, ಸಂಚಿಕೆ ೨, ಜನವರಿ–ಜೂನ್ ೨೦೧೬, ಪು. ೧೦೪–೦೫.

(ii) ಶಿವರಾತ್ರಿಯ ಶುಭದಿನದಂದು ಹತ್ತಿಯನ್ನು ಬಿಡಿಸಲು ಆರಂಭಿಸುತ್ತಾರೆ. ಆನಂತರ ಎರಡು ಮೂರು ಬಿಡಿಯಲ್ಲಿ ಸಂಪೂರ್ಣ ಬಿಡಿಸುತ್ತಾರೆ. ಪರಿಶೀಲಿಸಬೇಕೆನ್ನುವವರು.

೫. ರನ್ನಕವಿಯ "ಗದಾಯುದ್ಧ ಸಂಗ್ರಹಂ" ಪು. ೪–೧೩, ೭೯ (ವ್ಯಾಖ್ಯಾನ).

೬ ಸಿರಿಗನ್ನಡ ಅರ್ಥಕೋಶ, ಪು. ೪೫೦ (೧೯೪೯, ಇತ್ಯಾದಿ).

೭. ಅಮರಕೋಶ (ಸಂ. ಬಿ.ಎಲ್. ರೈಸ್, ಎನ್. ಬಾಲಸುಬ್ರಹ್ಮಣ್ಯ), ಮೈ.ವಿ.ವಿ. ಪ್ರಕಟಣೆ, ಪು. ೩೯–೨೭೯, ೧೯೭೦.

* ಈ ಲೇಖನವನ್ನು ಬರೆಯುವಾಗ ಸಹಾಯ ಮಾಡಿದ ಶ್ರೀಯುತ ಡಾ. ಪ್ರಸನ್ನಕುಮಾರ್ ಅವರಿಗೆ ಧನ್ಯವಾದಗಳು.

■

ವಿಜಯನಗರ ಕಾಲದ ಹರ್ತಿಕೋಟೆಯ ವೆಂಕಟರಮಣ ದೇವಾಲಯ

◆

ಜಗದೀಶ.ಡಿ.

ಚಿತ್ರದುರ್ಗ ಜಿಲ್ಲೆಯ ಪ್ರಮುಖ ಚಾರಿತ್ರಿಕ ಎಡೆಗಳಲ್ಲಿ ಹಿರಿಯೂರು ತಾಲೂಕಿನ ಹರ್ತಿಕೋಟೆಯು ಒಂದು. ಈ ಗ್ರಾಮವು ಬೆಂಗಳೂರು–ಬಳ್ಳಾರಿ ಹೆದ್ದಾರಿಯಲ್ಲಿ ಹಿರಿಯೂರು–ಚಳ್ಳಕೆರೆಗಳ ಮಧ್ಯೆ ಸಿಕ್ಕುವ ಹಿರಿಯೂರಿನಿಂದ ಸುಮಾರು ಹತ್ತು ಕಿಲೋಮಿಟರ್ ದೂರದಲ್ಲಿರುವ ಹರ್ತಿಕೋಟೆಯ ಗ್ರಾಮವು ತನ್ನ ಹಿಂದಿನ ಐತಿಹಾಸಿಕ ಮಹತ್ವದ ಸಂಕೇತವಾಗಿ ಇಂದಿಗೂ ಉಳಿದುಕೊಂಡು ಬಂದಿದೆ. ಹೆಸರೆ ಹೇಳುವಂತೆ, ಈ ಗ್ರಾಮವು ಒಂದು ಕಾಲದಲ್ಲಿ ಕೋಟೆಯಿಂದಾವೃತ್ತವಾಗಿದ್ದಿತ್ತು, ಇಂದು ಒಂದೆರಡು ಕಡೆ ಕೋಟೆಯ ತರ ಕಂಡುಬರುವುದನ್ನುಳಿದು ಕೋಟೆಯ ಇನ್ನೂ ಯಾವ ಅವಶೇಷವೂ ಇಲ್ಲಿ ಉಳಿದಿಲ್ಲ.[೧]

ಕ್ರಿ.ಶ. ೧೩೪೬–೧೫೬೫ವರೆಗೆ ಎರಡನೇ ದೇವರಾಯನ ಕಾಲದವರೆಗೂ ನಂತರ ಕೃಷ್ಣದೇವರಾಯನ ಕಾಲದಿಂದ ಅಳಿಯ ರಾಮರಾಯನ ಕಾಲದವರೆಗೂ ದೇವಾಲಯಗಳಿಗೆ ಸಂಬಂಧಿಸಿದ ಶಾಸನಗಳಿವೆ. ದೇವಾಲಯಗಳ ನಿರ್ಮಾಣ, ಬಿಂಬ ಪ್ರತಿಷ್ಠಾಪನೆ ದೇವಾಲಯಗಳ ವಿಸ್ತರಣೆ ಮತ್ತು ಜೀರ್ಣೋದ್ಧಾರ, ದೇವಾಲಯಕ್ಕೆ ನೀಡಿದ ದಾನಗಳು ಮುಂತಾದವುಗಳನ್ನು ತಿಳಿಸುತ್ತದೆ.

ಇದರಿಂದ ಹಿರಿಯೂರು ತಾಲೂಕಿನ ಹರ್ತಿಕೋಟೆಯ ಗ್ರಾಮದಲ್ಲಿ ವಿಜಯನಗರ ಕಾಲದ ದೇವಾಲಯ ಇದ್ದು ಅದರ ವಾಸ್ತು ಲಕ್ಷಣಗಳು ವಿಜಯನಗರ ಕಾಲವನ್ನೆ ಸೂಚಿಸುತ್ತದೆ.[೨] ಈ ಹಿನ್ನೆಲೆಯಲ್ಲಿ ಹಿರಿಯೂರು ತಾಲೂಕಿನ ಹರ್ತಿಕೋಟೆಯ ಗ್ರಾಮವು ವಿಜಯನಗರ ಕಾಲದ ವೆಂಕಟರಮಣ ದೇವಾಲಯದ ವಾಸ್ತು ಮತ್ತು ಮೂರ್ತಿ ಶಿಲ್ಪದ ಲಕ್ಷಣಗಳನ್ನು ಕುರಿತು ಈ ನಿಟ್ಟಿನಲ್ಲಿ ಹರ್ತಿಕೋಟೆ ಗ್ರಾಮದ ವೆಂಕಟರಮಣ ದೇವಾಲಯದ ವೈಶಿಷ್ಟ್ಯವನ್ನು ತಿಳಿಯಲು ಈ ಪ್ರಬಂಧದಲ್ಲಿ ಪ್ರಯತ್ನಿಸಲಾಗಿದೆ.



ವೆಂಕಟರಮಣ ದೇವಾಲಯದ ಪಾರ್ಶ್ವನೋಟ

ವೆಂಕಟರಮಣ ದೇವಾಲಯದ ವಾಸ್ತು

ಹರ್ತಿಕೋಟೆ ಗ್ರಾಮದ ಪೂರ್ವಕ್ಕೆ ವೈಷ್ಣವ ದೇವಾಲಯವಿದ್ದು, ದೇವಾಲಯದ ಗರ್ಭಗೃಹ, ಅಂತರಾಳ ಹೊಂದಿದ್ದು, ಉಳಿದ ನವರಂಗ ಮೊದಲಾದವು ಭಗ್ನವಾಗಿರುವುದನ್ನು ಕಾಣಬಹುದು. ಗರ್ಭಗೃಹದಲ್ಲಿ ಮೂರು ಅಡಿಗಳೆತ್ತರದ ವೆಂಕಟೇಶ್ವರ ಶಿಲ್ಪವನ್ನು ಪ್ರತಿಷ್ಠಾಪಿಸಿರುವರು, ಎರಡು ಎತ್ತರದ ಗರುಡಪೀಠದಲ್ಲಿ ಆಸೀನವಾಗಿರುವ ವೆಂಕಟೇಶ್ವರನು ಕೀರಿಟ ಮುಕುಟಧಾರಿಯಾಗಿದ್ದು ತನ್ನ ನಾಲ್ಕು ಕೈಗಳಲ್ಲಿ ಚಕ್ರ, ಶಂಖ, ಗದೆ, ಹಾಗೂ ವರದ ಮುದ್ರೆಗಳನ್ನು ಹಿಡಿದು ನಿಂತಿದ್ದಾನೆ. ಸಮಭಂಗಿಯಲ್ಲಿ ನಿಂತಿರುವ ವೆಂಕಟೇಶ್ವರನು ವಿವಿಧ ಆಭರಣಗಳಿಂದ ಅಲಂಕೃತನಾಗಿದ್ದು ಕೆಳಗೆ ಇಕ್ಕೆಲಗಳಲ್ಲಿ ಶ್ರೀದೇವಿ ಮತ್ತು ಭೂದೇವಿಯರನ್ನು ಕಾಣಬಹುದು. ದೇವಾಲಯದ ಗರ್ಭಗೃಹದ ಬಾಗಿಲುವಾಡವು ಸರಳ ಕೆತ್ತನೆಯನ್ನು ಒಳಗೊಂಡಿದೆ.[೩] ಲಲಾಟದಲ್ಲಿ ಪದ್ಮವನ್ನು ಕಡೆದಿರುವರು ಅಂತರಾಳದ ಬಾಗಿಲುವಾಡದಲ್ಲಿ ಸುಂದರ ಕೆತ್ತನೆಗಳಿದ್ದು, ಇಕ್ಕೆಲಗಳಲ್ಲಿ ದ್ವಾರಪಾಲಕರ ತಮ್ಮ ನಾಲ್ಕು ಕೈಗಳಲ್ಲಿ ಶಂಖ, ಚಕ್ರ, ಗದೆಗಳನ್ನು ಹಿಡಿದು ನಿಂತಿರುವರು, ಲಲಾಟದಲ್ಲಿ ಬಾಲಕೃಷ್ಣನ ಸುಂದರ ಹಾಗೂ ಅಳವಾಗಿ ಕಡೆದ ಉಬ್ಬು ಶಿಲ್ಪವಿದೆ. ಬಾಗಿಲುವಾಡದ ಇಕ್ಕೆಲಗಳಲ್ಲಿ ಹೂಬಳ್ಳಿ, ಸರಪಳಿ ಶಾಖೆಗಳಿವೆ. ದೇವಾಲಯದ ಗರ್ಭಗೃಹವು ದ್ರಾವಿಡ ಶೈಲಿಯಲ್ಲಿದೆ.

ಅಧಿಷ್ಠಾನ, ಭಿತ್ತಿ, ಕಪೊತ, ಹಾರ, ಶಿಖರ ಮತ್ತು ಕಳಸಗಳಿಂದ ಕೂಡಿದೆ. ಅಧಿಷ್ಠಾನವು ಉಪಾನ, ಜಗತಿ, ಕುಮುದ, ಕಂಠ ಕಪೋತಗಳಿಂದ ಕೂಡಿದೆ. ಶಿಖರವು ತ್ರಿತಲಗಳಲ್ಲಿ ನಿರ್ಮಾಣವಾಗಿದೆ. ಶಿಖರ ಭಾಗದಲ್ಲಿ ಸಿಂಹದ ಕೀರ್ತಿಮುಖದ ರಚನೆಗಳಿವೆ.[೪]

ಅಡಿ ಟಿಪ್ಪಣಿಗಳು

೧. ಲಕ್ಷ್ಮಣ್ ತೆಲಗಾವಿ (ಸಂ), ೧೯೮೭ ಹರತಿಸಿರಿ ವಾಲ್ಮೀಕಿ ಸಾಹಿತ್ಯ ಸಂಪದ ಹರ್ತಿಕೋಟೆ, ಪು.ಸಂ. ೫೦೦.

೨. ಗೋಪಾಲ್.ಆರ್ (ಸಂ), ೨೦೦೫ ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ಪು.ಸಂ. ೧೯೬.

೩. ಸೋಮಶೇಖರ್.ಎಸ್.ವೈ. ೨೦೧೭, ಕರ್ನಾಟಕ ದೇವಾಲಯ ಕೋಶ ಚಿತ್ರದುರ್ಗ ಜಿಲ್ಲೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು.ಸಂ. ೨೩೧.

೪. ಅದೇ ಪು.ಸಂ. ೨೩೨.

ಈ ಸಂಚಿಕೆಯ ಲೇಖಕರು

* ದಿ. ಕ.ವೆಂ. ರಾಜಗೋಪಾಲ್

* **ಡಾ. ಎಸ್.ಹೆಚ್. ಭುವನೇಶ್ವರ,** # ೪೫೬, ೪೪ನೇ ಕ್ರಾಸ್, ೮ನೇ ಬ್ಲಾಕ್, ಜಯನಗರ, ಬೆಂಗಳೂರು-೫೬೦೦೭೦. ದೂ: ೯೪೪೯೦೭೧೪೮೩

* **ಡಾ. ಎನ್.ಆರ್. ಲಲಿತಾಂಬ,** ಸಹ ಪ್ರಾಧ್ಯಾಪಕರು, ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನಾ ಕೇಂದ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು-೫೬೦೧೦೪. ದೂ: ೯೮೪೫೪೨೭೫೮೧

* **ಡಾ. ಆರ್. ಲಕ್ಷ್ಮೀನಾರಾಯಣ,** # ೧೨, ಶ್ರೀನಿಕೇತನ, ೨ನೆಯ ಕ್ರಾಸ್, ಶಿವಾನಂದ ನಗರ, ಮೂಡಲಪಾಳ್ಯ, ಬೆಂಗಳೂರು-೫೬೦೦೭೨. ದೂ: ೯೪೪೯೦೨೮೯೯೬

* **ಡಾ. ಪಿ.ವಿ. ನಾರಾಯಣ** 'ತಂಗಾಳಿ', # ೩೦, ಆರ್‌ಬಿಐ ಕಾಲೋನಿ, ಜಯನಗರ ಮೂರನೇ ಬ್ಲಾಕ್ ಪೂರ್ವ, ಬೆಂಗಳೂರು-೫೬೦೦೧೧.

* **ಕೆಳದಿ ಗುಂಡಾಜೋಯಿಸ್,** ಹಿರಿಯ ಹಸ್ತಪ್ರತಿ ಶಾಸ್ತ್ರಜ್ಞರು ಮತ್ತು ಸಂಯೋಜಕರು, ಕೆಳದಿ ಹಸ್ತಪ್ರತಿ ಸಂಪನ್ಮೂಲ ಕೇಂದ್ರ, ಕೆಳದಿ. ದೂ: ೯೪೪೮೮೩೯೭೩೯

* **ಸೀತಾರಾಂ ಜಾಗೀರ್‌ದಾರ್,** # ೪೦೬/ಬಿ ೧,' 'ಕಲ್ಪ', ೩ನೇ ಮೈನ್, ಕ್ರಾಸ್-೭. ಸರಸ್ವತೀಪುರಂ, ಮೈಸೂರು-೫೭೦೦೦೯. ದೂ. ೦೮೨೧-೨೫೪೬೨೭೩.

* **ಡಾ. ಕೆಳದಿ ವೆಂಕಟೇಶ್ ಜೋಯಿಸ್,** ಕೆಳದಿ-೫೭೭೪೦೧, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. ದೂರವಾಣಿ : ೯೪೪೮೮೩೯೭೩೯.

* **ಬಸವರಾಜ ಕೋಡಗುಂಟಿ,** ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಡಗುಂಚಿ, ಕಲಬುರಗಿ.

* **ಮಂಗಲಾ ಎಂ. ಗೌಡ,** ಸಂಶೋಧನಾ ವಿದ್ಯಾರ್ಥಿನಿ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕವಿವಿ, ಧಾರವಾಡ.

* **ಮೋಹನಕುಮಾರ್.ಕೆ.,** ಪಿಎಚ್‌ಡಿ ಸಂಶೋಧನಾ ವಿದ್ಯಾರ್ಥಿ, ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನಾ ಕೇಂದ್ರ, ವಿಜಯನಗರ, ಬೆಂಗಳೂರು-೫೬೦೧೦೪. ದೂ. +೯೧ ೮೦೯೫೯೯೬೪೫೧.

* **ಡಾ. ಸಿ. ನಾಗಭೂಷಣ,** ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ಬೆಂಗಳೂರು ವಿವಿ, ಸ್ನಾತಕೋತ್ತರ ಕೇಂದ್ರ, ಮಾಲೂರು ರಸ್ತೆ, ಮಂಗಸಂದ್ರ ಸಮೀಪ, ಬೆಗ್ಲಿಹೊಸಹಳ್ಳಿ ಅಂಚೆ, ಕೋಲಾರ ತಾ, ಜಿ. ೫೬೩೧೦೩.

* **ಪ್ರೊ. ಟಿ. ಯಲ್ಲಪ್ಪ,** ಕನ್ನಡ ಸಹ ಪ್ರಾಧ್ಯಾಪಕ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್.ಪುರ, ಬೆಂಗಳೂರು-೫೬. ದೂ. ೮೧೪೭೪೨೭೦೭೮, ೯೯೦೦೨೬೫೪೧೯.

* **ಜಗದೀಶ.ಡಿ.,** ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಬಿ.ಎಂ.ಶ್ರೀ. ಪ್ರತಿಷ್ಠಾನ

'ಕನ್ನಡದ ಕಣ್ವ' ಆಚಾರ್ಯ ಬಿ.ಎಂ.ಶ್ರೀಕಂಠಯ್ಯನವರು ಹೊಸಗನ್ನಡದ ಯುಗಪುರುಷರು: ಇಂತಹ ಆಚಾರ್ಯಪುರುಷರ ಹೆಸರಿನ ಈ ಸಂಸ್ಥೆ ಸೃಜನ ಮತ್ತು ಸಂಶೋಧನ ಎರಡೂ ಸಾಹಿತ್ಯ ಕ್ಷೇತ್ರಗಳಲ್ಲಿ ದುಡಿಯುತ್ತಿದೆ. ಒಂದು, ಪ್ರಾಚೀನ ಸಾಹಿತ್ಯದ ಪರಿಷ್ಕರಣ: ಇನ್ನೊಂದು, ಆಧುನಿಕ ಸಾಹಿತ್ಯದ ಪುರಸ್ಕರಣ. ಈ ಸಂಸ್ಥೆಯನ್ನು ೧೯೭೯ರಲ್ಲಿ ಪ್ರೊ. ಎಂ.ವಿ. ಸೀತಾರಾಮಯ್ಯನವರು ಸ್ಥಾಪಿಸಿದ್ದು, ಇದು ಯಶಸ್ವೀ ಮೂವತ್ತನಾಲ್ಕು ವರ್ಷಗಳನ್ನು ಪೂರೈಸಿ ೨೦೦೪ರಲ್ಲಿ ರಜತೋತ್ಸವವನ್ನು ಆಚರಿಸಿದೆ.

ಈಗಾಗಲೇ ಈ ಸಂಸ್ಥೆಯು ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದೆ. ಕರ್ನಾಟಕದಲ್ಲಿ ಸಂಶೋಧನೆ ಮತ್ತು ಪಾಂಡಿತ್ಯ ಸಂವರ್ಧನೆಗಳಿಗೆ ಮೀಸಲಾದ ಪ್ರತಿಷ್ಠಿತ ಸಂಶೋಧನಾ ಕೇಂದ್ರವಾಗಿದೆ. ಈವರೆಗೆ ಸುಮಾರು ೧೮೫ ಗ್ರಂಥಗಳನ್ನು ಹೊರತಂದಿದೆ. ಸಂಶೋಧನ ಕಾರ್ಯಕ್ಕೆ ಅನುಕೂಲವಾಗುವಂತೆ ಹದಿನೈದು ಸಾವಿರಕ್ಕೂ ಅಧಿಕ ಅಮೂಲ್ಯ ಗ್ರಂಥಗಳ ಆಕರಗ್ರಂಥಾಲಯವನ್ನೂ ಸುಮಾರು ಒಂದು ಸಾವಿರಕ್ಕೂ ಅಧಿಕ ಪ್ರಾಚೀನ ಓಲೆಗರಿ ಗ್ರಂಥಗಳ ಹಸ್ತಪ್ರತಿ ಭಂಡಾರವನ್ನೂ ಹೊಂದಿರುವ ಪ್ರತಿಷ್ಠಾನ, ಸದಸ್ಯರು, ಉದಾರ ದಾನಿಗಳು ಮತ್ತು ಅಭಿಮಾನಿಗಳಿಂದಲೇ ಬೆಳೆಯುತ್ತಿದೆ.

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿರುವ ಸ್ನಾತಕೋತ್ತರ ಸಂಶೋಧನ ಕೇಂದ್ರವಾಗಿರುವ ಪ್ರತಿಷ್ಠಾನದಲ್ಲಿ ಗಣ್ಯ ವಿದ್ವಾಂಸರ ಮಾರ್ಗದರ್ಶನದಲ್ಲಿ ಅನೇಕರು ಪಿಎಚ್.ಡಿ. ಪದವಿ ಮತ್ತು ಎಂ.ಫಿಲ್. ಪದವಿ ಪಡೆದಿರುತ್ತಾರೆ. ನುರಿತ ಮಾರ್ಗದರ್ಶಕರ ಸಹಕಾರದಿಂದ ಈ ಅಧ್ಯಯನ ಕೇಂದ್ರವನ್ನು ನಡೆಸಲಾಗುತ್ತಿದೆ.

ರಾಷ್ಟ್ರೀಯ ಹಸ್ತಪ್ರತಿ ಮಿಷನ್‌ನ ಮಾನ್ಯತೆಯ ಕೇಂದ್ರ

ರಾಷ್ಟ್ರೀಯ ಹಸ್ತಪ್ರತಿ ಮಿಷನ್‌ನಿಂದ ಮಾನ್ಯತೆ ಪಡೆದಿರುವ ಪ್ರತಿಷ್ಠಾನವು ರಾಷ್ಟ್ರದ ಪ್ರತಿಷ್ಠಿತ ಹಸ್ತಪ್ರತಿ ಅಧ್ಯಯನ ಕೇಂದ್ರವಾಗಿದ್ದು ಅಮೂಲ್ಯ ಓಲೆಗರಿ ಗ್ರಂಥಗಳು, ಕಾಗದಪತ್ರಗಳು, ನಮ್ಮ ತಲೆಮಾರಿನ ಸಾಹಿತಿ–ಗಣ್ಯರ ಪತ್ರಗಳು ಮತ್ತು ಹಸ್ತಪ್ರತಿಗಳನ್ನು ಸಂರಕ್ಷಿಸುತ್ತ ನಾಡಿನ ಆಸ್ತಿಯನ್ನು ಉಳಿಸಲು ಶ್ರಮಿಸುತ್ತಿರುವ ಸೇವಾಸಂಸ್ಥೆಯಾಗಿದೆ.

ಬಿ.ಎಂ.ಶ್ರೀ. ಕಲಾಭವನ

ಮೂರು ಮಹಡಿಗಳ ಭವ್ಯ ಬಿ.ಎಂ.ಶ್ರೀ. ಕಲಾಭವನವನ್ನು ಸಂಸದರ ನಿಧಿ ಮತ್ತು ದಾನಿಗಳ ನೆರವಿನಿಂದ ಕಟ್ಟಲಾಗಿದೆ. 'ಎಂ.ವಿ.ಸೀ. ಸಭಾಂಗಣ', ಗ್ರಂಥಾಲಯ, ವಸ್ತು–ಹಸ್ತಪ್ರತಿ ಸಂಗ್ರಹಾಲಯ, ಉಪನ್ಯಾಸ ಕೊಠಡಿಗಳು ನಿರ್ಮಾಣವಾಗಿವೆ.

ಚಟುವಟಿಕೆಗಳು

'ಕರ್ನಾಟಕ ಲೋಚನ' ವಿದ್ವತ್ ಪತ್ರಿಕೆ ಹಾಗೂ 'ಹೊಂಗನಸು' ವಾರ್ತಾಪತ್ರದ ಪ್ರಕಟಣೆ, ಸಹೃದಯ ಗೋಷ್ಠಿಯ ಆಯೋಜನೆ, ಹಸ್ತಪ್ರತಿ ಶಾಸ್ತ್ರ ಮತ್ತು ಹಸ್ತಪ್ರತಿ ಅಧ್ಯಯನ ತರಗತಿಗಳು, ಹಸ್ತಪ್ರತಿ ಸಮಾವೇಶ, 'ಸಿರಿಕಂಟ' ವಿದ್ಯಾರ್ಥಿಗೋಷ್ಠಿ, ಹಳಗನ್ನಡ ಕಾವ್ಯಾಭ್ಯಾಸ ಶಿಬಿರ ಮೊದಲಾದುವು ಪ್ರತಿಷ್ಠಾನದ ಮುಖ್ಯ ಚಟುವಟಿಕೆಗಳಾಗಿವೆ.